ತೀರ್ಥಹಳ್ಳಿ ತಾಲ್ಲೂಕು, ಶಿವಮೊಗ್ಗ ಡಿಸ್ಟ್ರಿಕ್ಟ್

ದ್ವಿತೀಯ ಮುದ್ರಣ 1000 ಪ್ರತಿಗಳು

ಮೈಸೂರು :
…ನಿವಾಸ ಪ್ರೆಸ್ಸಿನಲ್ಲಿ ಮುದ್ರಿಸಲ್ಪಟ್ಟಿತು.

1921

ಬೆಲೆ 1—4—0]   [Price 1—4—0

ಚಿತ್ತೂರು ಮಹೋದಯನ್ ಜೋಹರ್

ಅಥವಾ

ಪದ್ಮಿನಿ

ಭಾಷಾಂತರಕರ್ತ

ಕೆ. ಲಕ್ಷ್ಮೀನಾರಾಯಣಭಟ್ಟ,

ಹೆಡ್ಮಾಸ್ಟರ್

ಆರಗ R. A. V. ಸ್ಕೂಲ್

ತೀರ್ಥಹಳ್ಳಿ ತಾಲ್ಲೂಕು, ಶಿವಮೊಗ್ಗ ಡಿಸ್ಟ್ರಿಕ್ಟ್

ದ್ವಿತೀಯ ಮುದ್ರಣ 1000 ಕಾಪಿಗಳು

ಮೈಸೂರು

ಶ್ರೀನಿವಾಸ ಪ್ರೆಸ್ಸಿನಲ್ಲಿ ಮುದ್ರಿಸಲ್ಪಟ್ಟಿತು.

1920

ಬೆಲೆ 1—4—0 Price 1—4—0

Mysore,

PRINTED AT THE SRINIVASA PRESS,

1920

Testimonial.

Dr. M. R. SAMEY, M.D., D.P.H., (U.S.A.) M.R.S.I., (Lond.)

VIDYBHUSHANA, KAVIRATNA,
Ex-Health Officer and Supdt. of Vaccination.
Physician and Surgeon.

169, Basavangudi
Bangalore City
(S, India.)
NARAYANGANJ,
(August, 11-1919.)

PADMINI OF CHITTUR.

This is a historical novel written in Kanarese by Mr. R. Lakshminarayan Bhatta of Tirthahalli, The style is good, the theme commendable and the get up passable. The story of the "Famous Padmini" ought to be read by all who wish to dwelve deep into days of the Rajput chivalry. The author deserves encouragement for having placed this episode of chivalry within the access of Kanarese public.

Thirthahalli, }
11-8-1919. }

(Sd.) **M. R. Samy,**
Vidyabhushana.

ಯೋಗ್ಯತಾಪತ್ರಿಕೆಗಳು.

(1) ಕರ್ಣಾಟಕಸಾಹಿತ್ಯ ಪರಿಷತ್‌ಪತ್ರಿಕೆ ಬೆಂಗಳೂರು.

"ಈ ಪದ್ಮಿಯು ರಸಭರಿತವಾಗಿ ರಚಿತವಾಗಿದೆ, ಎಲ್ಲರೂ ಪ್ರೋತ್ಸಾಹಿಸಲು ಯೋಗ್ಯವಾಗಿದೆ."

(2) ತೀರ್ಥಹಳ್ಳಿ ಕಾನ್‌ಫರೆನ್ಸಿನಲ್ಲಿ ಹಜರತ್ ಡೆಪ್ಯೂಟಿಕಮೀಷನರ್ ಮ|| ರಾ|| ನಾರಾಯಣಐಯಂಗಾರ್ಯರು B A., LL B. ಯವರು.

ಈ ಪದ್ಮಿನಿಯು ರಸಯುಕ್ತವಾಗಿದೆ ಎಂದು ಬಹುಮಾನದೊಡನೆ ಸರ್ಟಿಫಿಕೇಟನ್ನು ದಯಪಾಲಿಸಿದ್ದಾರೆ.

(3) ಸಾಧ್ವಿ ಮೈಸೂರು (ತಾ|| 16-1-1920) ಪದ್ಮಿನಿಯು ಯುಕ್ತಿಯುಕ್ತವಾಗಿದೆ ಮನೋಹರವಾಗಿ ಬರೆಯಲ್ಪಟ್ಟಿದೆ ವಿದ್ಯಾಭ್ಯಾಸದ ಇಲಾಖೆಯವರ ಪ್ರೋತ್ಸಾಹಕ್ಕೆ ಅರ್ಹವಾಗಿದೆ. ಹೈ ಸ್ಕೂಲ್ ತರಗತಿಗಳಲ್ಲಿ ಪಾಠಪುಸ್ತಕವಾಗಿಯೂ ಇನಾಮಿನ ಪುಸ್ತಕವಾಗಿಯೂ ಮಾಡಲು ಅರ್ಹವಾಗಿದೆ.

(4) ಸಂಪದಭ್ಯುದಯ, ಪದ್ಮಿನಿಯು ಯುಕ್ತಯುಕ್ತವಾಗಿ ಮನೋಹರವಾಗಿದೆ.

TO

Rao Bahadur Rajakaryaprasakta

Sriman M. Shama Rao, M.A.,

Retired Inspector-General of Education
in Mysore

THIS WORK

IS

Most Respectfully Dedicated

(WITH KIND PERMISSION)

BY

THE AUTHOR

ಈ ಗ್ರಂಥವು

ಮೈಸೂರು ಸೀಮೆಯ ವಿದ್ಯಾಭ್ಯಾಸದ ಇಲಾಖೆಯ ಇನಸ್ಪೆಕ್ಟರ್ ಜನರಲ್ ಆಗಿದ್ದ

ರಾವ್ ಬಹದೂರ್ ರಾಜಕಾರ್ಯಪ್ರಸಕ್ತ

ಶ್ರೀಮಾನ್ ಯಂ. ಶಾಮರಾವ್, ಯಂ. ಎ.

ಇವರ ಸನ್ನಿಧಿಯಲ್ಲಿ

ಗ್ರಂಥಕರ್ತನಿಂದ

ಸಮರ್ಪಿತವಾಗಿದೆ.

ದ್ವಿತೀಯಮುದ್ರಣ ಪೀಠಿಕೆ.

ಪ್ರಥಮಮುದ್ರಣದ ಪುಸ್ತಕಗಳು ಮುಗಿದುಹೋದುದರಿಂದ ದ್ವಿತೀಯ ಮುದ್ರಣದಲ್ಲಿ ಮುದ್ರಣದೋಷಗಳನ್ನು ಸಾಧ್ಯವಾದಷ್ಟು ಸರಿಪಡಿಸಿದೆ, ಮತ್ತು ಪದ್ಮಿನಿ ವಿಷಯದಲ್ಲಿ ಬೇರೆ ಬೇರೆ ಟೀಕಾಪತ್ರಿಕೆಗಳನ್ನು ಸೇರಿಸಲ್ಪಟ್ಟಿದೆ. ...ಲ್ಲಿ ಪದ್ಯಗಳನ್ನು ಸೇರಿಸಲಾಗಿದೆ. ಗುಣಜ್ಞರಾದ ರಸಿಕವರ್ಯರು ಪರಿಶೀ... ಮುಂದೆಯೂ ಪ್ರೋತ್ಸಾಹಿಸುವರಾಗಿ ನಂಬಿ ನಿರೀಕ್ಷಿಸಿಕೊಂಡಿರುತ್ತೇನೆ.

ತಾ॥ 1-5-1920. } ಕೆ. ಲಕ್ಷ್ಮೀನಾರಾಯಣ ಭಟ್ಟ,
ಆರಗ. } ಭಾಷಾಂತರಕರ್ತ.

N. B. ನನ್ನ ಹೆಸರಿನ ಮುದ್ರೆಯಿಂದಂಕಿತವಾಗದ ಪುಸ್ತಕಗಳನ್ನು ಯಾರೂ ಕೊಳ್ಳಬಾರದು. ವಿಕ್ರಯಿಸಬಾರದು.

ಪ್ರಥಮಮುದ್ರಣ ಪೀಠಿಕೆ.

ಕರ್ನಾಟಕ ದೇಶಬಾಂಧವರಾದ ವಾಚಕರೇ ! ಇತಿಹಾಸಗಳನ್ನು ಓದುವದರಿಂದ ಅನೇಕವಿಧಗಳಾದ ನೀತಿಗಳೂ, ಚಾತುರ್ಯವೂ, ಪಾಪಪುಣ್ಯಾಭೀತಿಯೂ, ದೇಶಪರಾಭಿವೃದ್ಧಿಯೂ, ಸತ್ಕಾರ್ಯಗಳಲ್ಲಿ ಶ್ರದ್ಧೆಯೂ, ರಾಜಭಕ್ತಿಯೂ, ದೇಶಭಕ್ತಿಯೂ, ದೇಶಾಭಿಮಾನವೂ ಉಂಟಾಗುವವೆಂಬ ಸಂಗತಿಯು ವಾಚಕರಾದ ನಿಮಗೆ ತಿಳಿದೇ ಇರುವದಲ್ಲವೇ?

ನಮ್ಮ ಭರತಖಂಡದಲ್ಲಿ ಹಿಂದೆ ಆಳಿದ ರಾಜರುಗಳ ಚರಿತ್ರೆಯನ್ನು ತಿಳಿಯತಕ್ಕದು ಹಿಂದುಗಳಾದ ನಮಗೆ ಆದ್ಯಕರ್ತವ್ಯವಾಗಿದೆ.

ರಾಜಸ್ಥಾನದ ಇತಿಹಾಸವನ್ನು ಕನ್ನಡದಲ್ಲಿ ಯಾರೂ ವಿಶದವಾಗಿ ಬರೆದಿಲ್ಲ. ಮೊದಲು "ಮರಾಠಾಮಿತ್ರ" ಎಂಬ ಮಾಸಪತ್ರಿಕೆಯ ಎಡಿಟರರು, ಗುಜರಾತಿ ಭಾಷೆಯಲ್ಲಿರುವ ಚಿತ್ತೂರು ಇತಿಹಾಸವನ್ನು (ಪದ್ಮಿನಿ ರಾಣಿ ಚಿತ್ತೂರಿನ ಮೊದಲನೇ ಜೋಹರನ್ನು) ಮಹಾರಾಷ್ಟ್ರದಲ್ಲಿ ಬರೆದಿದ್ದಾರೆ. ಅದನ್ನು ಕನ್ನಡಿಸಲು ನನಗೆ ಅಜ್ಞೆಕೊಟ್ಟುದಕ್ಕಾಗಿ ಇವರಿಗೆ ನಾನು ಕೃತಜ್ಞನಾಗಿದ್ದೇನೆ. ನನಗೆ ಮಹಾರಾಷ್ಟ್ರಭಾಷೆಯ ಪರಿಚಯವು ಚೆನ್ನಾಗಿಲ್ಲದುದರಿಂದ ಈ ಭಾಷಾಂತರದಲ್ಲಿ ನ್ಯೂನತೆಯುಂಟಾಗಿದ್ದರೆ, ಗುಣಗ್ರಾಹಿಗಳಾದ ಪ್ರಾಜ್ಞರು ದಯಮಾಡಿ ಮನ್ನಿಸಬೇಕಾಗಿ ಬೇಡುತ್ತೇನೆ.

ವಿಧೇಯ,

ತೀರ್ಥಹಳ್ಳಿ ಕೆ. ಲಕ್ಷ್ಮೀನಾರಾಯಣಭಟ್ಟ.

ಶ್ರೀ ರಾಮ.

ಕಂದ|| ಜಯ ಜಯ ಗಣಪತಿ ಗಜಮುಖ |
ಜಯ ಜಯ ಸರಸ್ವತಿಯೆ ಜಯಪಯೋಯುಕ್ತವಿಪೆಂ ||
ಜಯ ಜಯ ಗಿರಿಜೆಯೆ ಶಂಕರ |
ಜಯ ಜಯ ಭವಹರನೆ ಭಜಕರಕ್ಷಕ ಸುಗುಣಾ ||೧||

ಮುಂಬೈಮರಾಟಮಿತ್ರದಿ |
ತುಂಬಿರುತಿಹ ಕಥೆಯ ನಾನು ಕನ್ನಡಿಸಿರ್ಪೆಂ ||
ಶಂಭುವಿನದಯೆಯೊಳಿದು ತಾಂ |
ಇಂಬಿನೊಳೋದುವರ ಚಿತ್ತಕೀವುದು ಮುದಮಂ ||೨||

ಚಿತ್ತೂರ್ಮ್ಮತ್ತಿಗೆಯೆನಿಪಾ |
ಉತ್ತಮರಾಜಪುತ್ರ ಶೌರ್ಯದ ಕಥೆಯಂ ||
ಚಿತ್ತರದೊಳೀಗಳೊರೆವೆಂ |
ಸತ್ಪ್ರಜ್ಞರು ನಿರುತ ಮೆಚ್ಚುತೋದಲಿದಯಿಂ ||೩||

ಇದನೋದುವರ್ಗೆ ನೀತಿಯು |
ಸೊದವಿಸುಗುಮರರ ಮುದದೆ ಜಗದೊಳಗಧಿಕಂ ||
ಇದರೊಳ್ದೋಷವನೆಣಿಸದೆ |
ಸದಯರುದಯದಿಂದ ನೋಡಲಾನಾಶಿಪುವೆಂ ||೪||

ವರಪರಿಧಾವಿಯೊಳಿದನಾಂ |
ಕರಮಾದರದಿಂದ ಬರೆದೆನೀಶನ್ನದಯದಿಂ ||
ಪರಿಪರಿದೋಷವನೆಣಿಸದೆ |
ಸರಸದೊಳೋದುವುದು ರಸಿಕರಾಗಿಹ ವಿಬುಧರ್ ||೫||

॥ ಶ್ರೀ ॥

ಚಿತ್ತೂರು ಮೊದಲನೆಯ ಜೋಹರ್ (ಪದ್ಮಿನಿ.)

ಪ್ರಥಮ ಖಣ್ಡಂ.

ಪ್ರಕರಣ 1.

ದೆಹಲಿಯು ಇತಿಹಾಸದಲ್ಲಿ ಪ್ರಸಿದ್ಧವಾದುದಾಗಿ ಬಹುಕಾಲದಿಂದಲೂ ಶ್ರೇಷ್ಠ ರಾಜಮನೆತನದ ಸಂಬಂಧವನ್ನು ತೋರಿಸುವುದಾಗಿದೆ. ಭರತಖಂಡದಲ್ಲಿ ಯಾವಯಾವ ವೀರರು ರಾಜ್ಯವಾಳಿದರೋ, ಅವರ ಸಂಬಂಧವು ಬಹ್ವಂಶಗಳಲ್ಲಿ ಈ ಪಟ್ಟಣಕ್ಕೇ ಸಂಬಂಧಿಸಿದ್ದಾಗಿದೆ. ಪುರಾಣಪ್ರಸಿದ್ಧರಾದ ಕೌರವಪಾಂಡವ ಯೋಧರು ಚಕ್ರವರ್ತಿ ಪದವಿಯನ್ನು ಹೊಂದಿ ದೆಹಲಿಯ ಸಿಂಹಾಸನವನ್ನೇ ಅಲಂಕರಿಸುತ್ತಿದ್ದರು. ಬಳಿಕ ಪೃಥ್ವೀರಾಜ ಚವ್ಹಾಣನು ಮಹಮದೀಯರ ಪ್ರವೇಶಕಾಲದಲ್ಲಿ ದೆಹಲಿಯ ಸಿಂಹಾಸನಾಲಂಕೃತನಾಗಿದ್ದನು. ಈ ಪಟ್ಟಣದ ಸಂಬಂಧವಾದ ಕಥೆಯು ತತ್ಕಾಲದಲ್ಲಾರಂಭಿಸಲ್ಪಡುವುದೂ. ಚಿತ್ತೂರಿನ ಮೊದಲನೆಯ ಮುತ್ತಿಗೆಯ ಕಾಲದಲ್ಲಿ ಅಂದರೆ ಕ್ರಿ. ಶ 1302 ರಲ್ಲಿ ದೆಹಲಿಯಲ್ಲಿ „ ಅಲ್ಲಾವುದೀನ್ ಖಿಲ್ಜಿ '' ಎಂಬ ರಾಜನಿದ್ದನು. ಇವನ ಸ್ವಭಾವವು ಎಷ್ಟು ಕ್ರೂರವಾಗಿತ್ತೆಂಬುದಕ್ಕೆ ಈ ಇತಿಹಾಸವು ಸಾಕ್ಷಿಯಾಗಿದೆ; ಅಂದರೆ, ಇದರ ಅನುಭವವು ವಾಚಕರಿಗೆ ಮುಂದೆ ಅವಗತವಾದೀತು! ಈಗ ನಾವು ದೆಹಲಿಯ ಅರಮನೆಯನ್ನು ಪ್ರವೇಶಿಸುವ! ಈ ರಾಜಗೃಹವು ವಿಸ್ತಾರವಾದ ಅನೇಕ ವಿಶಾಲ ಕೊಠಡಿಯುಳ್ಳದ್ದಾಗಿ ಇತ್ತು.

ಒಂದು ಭಾಗದಲ್ಲಿ ಸುಲ್ತಾನನ ರಾಣೀವಾಸವೂ ಅದರೆದುರಿನಲ್ಲಿ ದಾಸಿಯರ ವಾಸಗೃಹಗಳೂ, ದರ್ಶನೀಯ ಸ್ಥಳಗಳ ಮಧ್ಯದಲ್ಲಿ ಸುಲ್ತಾನನ ಶಯನಗೃಹವೂ, ಆಸ್ಥಾನಮಂಟಪವೂ ಶೋಭಿಸುತ್ತಿದ್ದುವು. ಆ ಅರಮನೆಯ ಮೇಲ್ಭಾಗದಲ್ಲಿ ಕುಳಿತು ದೆಹಲಿ ಪಟ್ಟಣವನ್ನು ನೋಡಿದರೆ, ಆ ನಗರದ ಚಿತ್ತಾಕರ್ಷಕ ಚಿತ್ರಗಳು ಗೋಚರಿಸುತ್ತಿದ್ದುವು. ಈ ರಾಜಗೃಹದ ಸುತ್ತಲೂ ಲಲಿತವಾದ ಉದ್ಯಾನವನಗಳು ರಚಿಸಲ್ಪಟ್ಟಿದ್ದುವು. ಅವುಗಳಲ್ಲಿ ನಾನಾವಿಧ ಫಲವೃಕ್ಷಗಳು ಫಲಿಸಿದ್ದುವು.

ಜಾಜಿ, ಕೇತಕಿ; ಗುಲಾಬಿ ಮಲ್ಲಿಗೆ ಮುಂತಾದ ಹೂವುಗಳ ಸುಗಂಧವು ಚಿತ್ತವನ್ನು ಆಕರ್ಷಿಸುತ್ತಿತ್ತು. ಶ್ರಾಂತನಾದ ಯಾವ ಪ್ರಾಣಿಯಾದರೂ ಅಲ್ಲಿಗೆ ಬಂದರೆ, ಅದರ ಶ್ರಮ ಪರಿಹಾರವಾಗುವ ರಮ್ಯಸ್ಥಾನವಾಗಿತ್ತು. ಈ ಉಪವನ ಮಧ್ಯದಲ್ಲಿ ಚತುಷ್ಕೋಣಾಕೃತಿಯಾದ ಒಂದು ಸರೋವರವಿತ್ತು. ಅದರ ಮಧ್ಯದಲ್ಲಿ ಗುಂಡಾದ ಗೋಪುರದಿಂದ ಅಲಂಕೃತವಾದ ಒಂದು ಸಣ್ಣ ಬಂಗಲೆಯಿತ್ತು. ಆಗ ಗ್ರೀಷ್ಮರ್ತುವಾದ್ದರಿಂದ ಆ ವಿಹಾರ ಭವನದ ಸುತ್ತಲೂ ಉಷ್ಣಪರಿಹಾರಕ್ಕಾಗಿ ಪರದೆಗಳನ್ನು ಬಿಟ್ಟಿದ್ದರು. ಇವುಗಳ ಸುತ್ತಲೂ ಆಗಾಗ್ಗೆ ನೀರೆರಚುತ್ತಿದ್ದುದರಿಂದ ಸುಗಂಧಪೂರಿತವಾದ ಮಂದಮಾರುತವು ಶೈತ್ಯವನ್ನು ಉಂಟುಮಾಡಿ ಅಲ್ಲಿ ಕುಳಿತವರ ಉಷ್ಣವನ್ನು ಪರಿಹರಿಸುತ್ತಿತ್ತು. ಮಧ್ಯಾಹ್ನ ಭೋಜನಾನಂತರ ವಿಶ್ರಾಂತಿಗಾಗಿ ನಿತ್ಯದಂತೆ ಅಲ್ಲಾವುದೀನನು ಆ ಗುಮಟಾಕಾರದ ಬಂಗಲೆಯನ್ನು ಪ್ರವೇಶಿಸಿ ಕುಳಿತುಕೊಂಡು; ಬಾಯಿಯಲ್ಲಿ ಬನಾರಸಿನ ಗುಡಿಗುಡಿಯನ್ನಿಟ್ಟುಕೊಂಡು ಸೇವಿಸುತ್ತಿದ್ದನು. ಕಿಂಕರರಿಬ್ಬರು ಮಖಮಲಿನ ಬೀಸಣಿಗೆಯಿಂದ ಗಾಳಿಯನ್ನು ಹಾಕುತ್ತಿದ್ದರು. ಉಭಯಪಾರ್ಶ್ವಗಳಲ್ಲಿಯೂ ಒಬ್ಬ ಖಾಜಿಯೂ, ಒಬ್ಬ ವಜೀರನೂ, ಒಬ್ಬ ದಳಪತಿಯೂ, ಒಬ್ಬ ರಾಜಪುತ್ರನೂ ಕುಳಿತಿದ್ದರು. ಸ್ವಲ್ಪ ಕಾಲಾನಂತರ ಆ ಹುಕ್ಕದ ನಾಳವನ್ನು ಬಿಟ್ಟು ಬಾದಶಹನು ಹೇಳಿದುದೇನೆಂದರೆ— ಈ ಹುಕ್ಕವು ಎಷ್ಟು ಮಹತ್ವವುಳ್ಳದ್ದಾಗಿದೆ?

ಕಂದ|| ಗುಡಿಗುಡಿಸೇವಿಪ ನರನಾ |
ನುಡಿಗಡದಾಸುಖವನಾವಬಣ್ಣಿಸಲಾರ್ಪಂ ||
ಕಡುಮಹಿಮೆಯಾಂತು ಜಗದೊಳು |
ಜಡಜೋದ್ಭವನೆಂತು ಸೃಜಿಸಿದನಹಹಾ ! || ೧ ||

'ನಸರತ್‌ಖಾನನೇ, ಕವಿಚಾತುರ್ಯ ಹೇಗಿದೆ?' ಎಂದನು.

ಆಗ ನಸರತ್‌ಖಾನನು, “ಪರಾಕು, ಒಡೆಯರೇ! ಕವಿಯು ನಿಜವಾಗಿ ರಸಿಕನು. ಪ್ರಪಂಚದಲ್ಲಿ ಪರಮೇಶ್ವರನಿಂದ ನಿರ್ಮಿತವಾದ ವಸ್ತುಗಳ ನಿಜವಾದ ಮರ್ಮವನ್ನು ತಿಳಿದು ಅದನ್ನು ಅನ್ಯರ ಮನಸ್ಸಿಗೆ ತಿಳಿಸತಕ್ಕವನೇ ಕವಿವರನಾಗಿದ್ದಾನೆ. ನಾವು ರಾತ್ರಿಯಲ್ಲಿ ಆವ ವಸ್ತುಗಳನ್ನು ಉಪಭೋಗಿಸಿ ಅನುಭವವನ್ನು ಪಡೆದಿರುವೆವೋ ಅದರ ಹತ್ತರಷ್ಟು ಅನುಭವವುಳ್ಳವನಾಗಿ ಕವಿಯು ಸಹಜವಾದ ಶಕ್ತಿಯಿಂದ ಕಾವ್ಯವನ್ನು ರಚಿಸುವನು.” ಎಂದನು. ಬಳಿಕ ಶಾಮಳದಾಸನೆಂಬ ಗಾಯಕನು ಸುಲ್ತಾನನ ಕುರಿತು, “ಸ್ವಾಮಿನ್! ಈಗ ನಸರತ್‌ಖಾನರು ಹೇಳಿದುದು ನಿಜವು. ಕವಿಯು ರಾಜ್ಯದ ಸ್ತಂಭಹುತಿವಾನೆ. ವೀರಲಕ್ಷ್ಮಿಯನ್ನುಂಟುಮಾಡುವವನಾಗಿದ್ದಾನೆ. ಮತ್ತು ಮಹಾ ಪುರುಷರ ಕೀರ್ತಿಯನ್ನು ಸ್ಥಿರಗೊಳಿಸುವವನಾಗಿದ್ದಾನೆಂಬುದರಲ್ಲಿ ಸಂಶಯವಿಲ್ಲ.' ಎಂದನು. ಆಗ ಸುಲ್ತಾನನು; “ಶಾಮಳದಾಸನೆ! ನೀನು ಹೇಳಿದುದು ನಿಜ. ಗಾಯನವಿದ್ಯೆಯು ಚಿತ್ತಕ್ಕೆ ಮೋಹಜನಕವಾದುದು. ಗಾಯನವನ್ನು ರಚಿಸಲು ಕವಿಯೇ ಕಾರಣನು. ಕವಿ

ಯಿಲ್ಲದಿದ್ದರೆ ಗಾಯನವಿದ್ಯೆಯ ಅಭಿರುಚಿಯು ಜನರಿಗೆ ತಗಲುತ್ತಿರಲಿಲ್ಲ. ಉತ್ತಮ ಗಾಯಕನಾದ ಕವಿಯು ಇದ್ದರೆ ಅವನ ಕೋಮಲಕಂಠದಿಂದ ರಾಗವು ಹೊರಟು ಏಕಾರವದಂತೆ ಚಿತ್ತಕ್ಕೆ ಮೋಹವನ್ನುಂಟುಮಾಡುವುದು. ಖಾಜೀ ಸಾಹೇಬರೇ ! ಇದು ನಿಜವಲ್ಲವೇ ?" ಎಂದು ಕೇಳಿದನು.

ಆಗ ಖಾಜಿಯು "ಸ್ವಾಮಿಾ ! ತಾವು ಹೇಳಿದುದು ಅಕ್ಷರಶಃ ನಿಜವು. ಗಾಯನ ವಿದ್ಯೆಯಿಂದ ಈಶ್ವರನನ್ನು ಪ್ರಸನ್ನನನ್ನಾಗಿ ಮಾಡಿಕೊಳ್ಳಬಹುದು. ಆದರೆ ಮನುಷ್ಯರದೇನ್ಗಿರದು ? ಇಂತಹ ಗಾಯನಕವಿಗೆ ಉತ್ಸಾದಕನಾದ ಆದಿ ಕವಿಗೆ ಈ ಕೀರ್ತಿಯು ಸಿಕ್ಕಬೇಕಾಗಿದೆ." ಎಂದನು. ಅಲಫ್ ಖಾನನು, "ಸ್ವಾಮಿಾ ! ಮನ್ನಿಸಿರಿ. ಕವಿಯು ವಸ್ತುಗಳನ್ನು ಸೂಕ್ಷ್ಮವಾಗಿ ನಿರೀಕ್ಷಿಸುವವನಾದರೂ ಆಗಾಗ ಅತಿಶಯೋಕ್ತಿಯನ್ನೂ ತೋರಿಸುವನು. ಒಂದು ವೃಕ್ಷವರ್ಣನೆಯಲ್ಲಿ ಅಸಂಭಾವ್ಯವಾಗಿ ಭಾವಿಸುವಂತೆ ವರ್ಣಿಸುತ್ತಾನೆ. ನಾವು ಆ ವೃಕ್ಷವನ್ನು ನೋಡಲು ಹೋದರೆ ನಗೆ ಬರುವುದು. ರಾಜಭವನ, ಪೂರ್ವಕಾಲದ ಪುರುಷ, ಒಬ್ಬಳು ಸುಂದರಸ್ತ್ರೀ-ಇವುಗಳ ವರ್ಣನೆಯಾದರೂ ಸಮಂಜಸವೇ ಎಂದು ನೋಡುವಲ್ಲಿ ಆ ವರ್ಣನೆಯು ಕಲ್ಪನೆ ಯೆಂದು ತಿಳಿಯದಿರದು. ಸ್ವಲ್ಪ ಹೇಳುವೆನು. ಶಾಮಳದಾಸರೇ ! ಮನ್ನಿಸಿ. ತಮಗೆ ವಿರುದ್ಧವಾಗಿ ಹೇಳಬೇಕಾಗಿ ಬಂದಿತು. ವಿದ್ವಾಂಸರು ರಾಜಪುತ್ರರ ವರ್ಣನೆಯ ಗ್ರಂಥಗಳಲ್ಲಿ ಎಷ್ಟೋ ಅತಿಶಯೋಕ್ತಿಗಳನ್ನು ತುಂಬಿಸಿದ್ದಾರೆ. ಸ್ತ್ರೀವರ್ಣನೆಯಾದರೋ ಹೇಳುವುದೇನು ? ಇಂಥಾ ವರ್ಣನೆಯ ಸ್ತ್ರೀಯನ್ನು ನಾವು ನೋಡಿಲ್ಲ ಶಾಮಳದಾಸರೇ ! ನಿಮ್ಮ ಕಾಮಶಾಸ್ತ್ರದಲ್ಲಿ ಸ್ತ್ರೀಯರ ನಾಲ್ಕು ಜಾತಿಗಳಿವೆಯೆಂದು ಬರೆಯಲ್ಪಟ್ಟಿದೆಯಷ್ಟೆ. ಅದು ನಿಜವೇ ?" ಎಂದು ನಗುನಗುತ್ತ ಹೇಳಿದನು. ಶಾಮಳದಾಸನು—"ಅದೆಲ್ಲವೂ ನಿಜ. ಅಲಫ್ ಖಾನ ಸಾಹೇಬರೇ ! ತಿಳಿಯಿತೇ ? ನಿಮಗೆ ಆ ಗಂಧವೇ ಇಲ್ಲ. ಸ್ತ್ರೀಜಾತಿಯನ್ನು ಹೇಗೆ ಗುರ್ತಿಸಬೇಕೆಂಬುದು ನಿಮಗೆ ಗೊತ್ತಿದೆಯೇ ? ಮಹಿಳೆಯರು ಬಿಳುಪಾಗಿದ್ದುದರಿಂದಲೇ ಸಂತೋಷಿಸುವಿರಿ. ಹಾಗಲ್ಲ. ಸುಲ್ತಾನರವರೇ ! ನಮ್ಮ ಜ್ಯೋತಿಷ ಶಾಸ್ತ್ರದಲ್ಲಿ ಪದ್ಮಿನಿ, ಹಸ್ತಿನಿ, ಶಂಖಿನಿ, ಚಿತ್ರಿಣಿ ಎಂದು ನಾಲ್ಕು ಜಾತಿಗಳು ಸ್ತ್ರೀಯರಲ್ಲಿ ವರ್ಣಿಸಲ್ಪಟ್ಟಿದೆ. ಇವುಗಳಲ್ಲಿ ಪದ್ಮಿನಿಯ ಜಾತಿಯ ಸಂಬಂಧದ ಕವಿವರ್ಣನೆಯನ್ನು ಕೇಳಿದಲ್ಲಿ ತಾವು ತಲೆದೂಗುವಿರಿ" ಎಂದನು. ಆಗ ಅಲ್ಲಾವುದ್ದೀನನು—"ಕವಿಯು ಏನೆಂದು ಹೇಳಿರುವನು" ಎನ್ನಲು, ಶಾಮಳದಾಸನು ಈ ಶ್ಲೋಕವನ್ನು ಹೇಳುವನು.

"ಭವತಿಕಮಲನೇತ್ರಾ ನಾಸಿಕಾಕ್ಷುದ್ರರಂಧ್ರಾ ಅವಿರಳಕುಚಯುಗ್ಮಾ
ದೀರ್ಘ ಕೇಶೀಕೃಶಾಂಗೀ ‖ ಮೃದುಚರಣ ಸುಶೀಲ ಗೀತನೃತ್ಯಾನು
ರಕ್ತಾ ಸಕಲ ತನುಸುವೇಷಾ ಪದ್ಮಿನೀ ಪದ್ಮಗಂಧಾ ‖ ೧ ‖

ಎಂದು 'ರತಿಮಂಜರಿ' ಎಂಬ ಗ್ರಂಥದಲ್ಲಿ ಪದ್ಮಿನಿಯ ಲಕ್ಷಣವು ಹೇಳಲ್ಪಟ್ಟಿದೆ.

ಇದರ ಭಾವಾರ್ಥವೇನೆಂದರೆ:—‘ ಯಾವಸ್ತ್ರೀಯ ನೇತ್ರವು ಕಮಲದಂ
ತೆಯೂ, ನಾಸಿಕರಂಧ್ರವು ಚಿಕ್ಕದಾಗಿಯೂ, ಸ್ತನಯುಗ್ಮವು ಪುಷ್ಟವಾಗಿ ಸಾಂ
ದ್ರವಾಗಿಯೂ, ಕೇಶರಾಶಿಯು ಉದ್ದವಾಗಿಯೂ, ಒತ್ತಾಗಿಯೂ, ನಡಿಗೆಯು
ಹಂಸಗತಿಯಂತಿರುವುದಾಗಿಯೂ, ನೃತ್ಯಗಾಯನಗಳಲ್ಲಿ ಉತ್ಸಾಹಿತಳಾಗಿಯೂ,
ಸರ್ವಾಂಗಸುಂದರಿಯಾಗಿಯೂ, ಗೌರವರ್ಣವುಳ್ಳವಳಾಗಿಯೂ, ಪದ್ಮಗಂಧವಾದ
ಶರೀರವುಳ್ಳವಳಾಗಿಯೂ. ಇರುವವಳೇ ಪದ್ಮಿನಿಯಾಗಿರುತ್ತಾಳೆ.’ ಎಂದು ವರ್ಣಿಸಿ
ಶಾಮಳನು ಸುಲ್ತಾನನ ಮುಖವಂ ನೋಡುತ್ತಿದ್ದನು.

ಆಗ ಸುಲ್ತಾನನು, “ಏನು ಇಷ್ಟು ಲಕ್ಷಣವೂ ಒಬ್ಬ ಪದ್ಮಿನಿಸ್ತ್ರೀಯಲ್ಲಿ
ರುತ್ತದೆಯೇ? ಶಾಮಳದಾಸನೇ! ಇದು ಅಸಂಭವ. ನಾನು ಬಾದಷಹನು.
ನನ್ನ ರಾಣಿವಾಸದಲ್ಲಿ ಸಾವಿರಾರುಜನ ಸ್ತ್ರೀಯರಿದ್ದಾರೆ. ಆದರೆ ಅವರಲ್ಲಿ ಈ
ಲಕ್ಷಣಗಳುಳ್ಳ ಸ್ತ್ರೀಯೊಬ್ಬಳೂ ಇಲ್ಲ. ಇದರಿಂದ ಕವಿವರ್ಣನೆಯು ಲಾಘವುಳ್ಳದ್ದ
ಲ್ಲದೆ ಎರಡನೆದೇನಿದೆ? ಎಂದು ತಿಳಿಯುವುದು. ಅಲಫ್‌ಖಾನ್! ನಿಜವಲ್ಲವೆ?”
ಎಂದು ಕೇಳಿದನು. ಆಗ ಅಲಫ್‌ಖಾನನು. “ಸುಲ್ತಾನರು ಹೇಳಿದುದುನಿಜ. ಇಂ
ತಹ ಸ್ತ್ರೀಯು ಇರುವುದು ಅಸಂಭವ. ಕವಿಯು ಸೂಕ್ಷ್ಮಬುದ್ಧಿಯಿಂದ ಕಲ್ಪನಾ
ಶಕ್ತಿಯನ್ನು ತೋರಿಸುವನು” ಎಂದು ಹೇಳಿದನು. ಈಮಾತನ್ನು ಕೇಳಿ ಶಾಮ
ಳದಾಸನಿಗೆ ಬಹು ದುಃಖವಾಯಿತು ಕವಿನಿಂದೆಯಂ ಕೇಳಿ ಸಹಿಸಲಾರದೆ ಕೋ
ಪದಿಂದ, “ಸ್ವಾಮಿ, ಸುಲ್ತಾನರೇ ತಪ್ಪನ್ನು ಮನ್ನಿಸಿ. ಈಗ ಅಲಫ್‌ಖಾನ್ ಹೇ
ಳಿದುದು ವಿರುದ್ಧವು. ಮೇಲಿನ ಲಕ್ಷಣಗಳುಳ್ಳ ಸ್ತ್ರೀಯರು ಶೋಧಿಸಿದಲ್ಲಿ ಅನೇ
ಕರು ಸಿಕ್ಕುವರು. ಯಾರಿಗೆ ಯಾವ ಸ್ತ್ರೀಯನ್ನು ಹೇಗೆ ಗುರ್ತಿಸಬೇಕೆಂಬುದು
ತಿಳಿಯುವುದಿಲ್ಲವೋ ಅಂಥವರಿಂದೇನು?” ಎಂದು ಹೇಳಿದನು. ಆಗ ಸುಲ್ತಾ
ನನು, ಕವಿಯುಕ್ತಿಯು ನಿಜವೆಂದು ನಿರ್ಧರಿಸಲು ಅಂಥಾ ಪದ್ಮಿನೀಜಾತಿಯ ಸ್ತ್ರೀ
ಯಿರುವ ನಿಜಸ್ಥಳವನ್ನು ತೋರಿಸುವೆಯಾ? ಹಾಗೆ ತೋರಿಸಿದರೆ ನಿಮ್ಮ ಕವಿಕ
ಲ್ಪನೆಯಲ್ಲಿ ವಿಶ್ವಾಸವುಂಟಾದೀತು” ಎಂದನು. ಆಗ ಶಾಮಳನು ಹೇಳಿದನು:-
“ನಾನು ಆಧಾರವಿಲ್ಲದೆ ಆ ವಿಷಯವನ್ನು ಹೇಳಲಿಲ್ಲ. ಮಹಾರಾಣಾ ಭೀಮಸಿಂ
ಗನ ರಾಣಿಯಾದ ಪದ್ಮಿನಿಯು ಹೆಸರಿಗೆ ತಕ್ಕಂತೆ ಪದ್ಮಿನಿಯು. ಆಕೆಯ ಸ್ವರೂ
ಪವರ್ಣನೆಯು ಮೇಲಿನ ಶ್ಲೋಕಾನುಸಾರವಾಗಿದೆ. ಆಕೆಯನ್ನು ವರ್ಣಿಸಲು
ನನಗೆ ಶಕ್ತಿಯಿಲ್ಲ. ಒಡೆಯರೇ! ನಾನಾಕೆಯನ್ನು ಒಂದುಸಾರಿ ದೂರದಲ್ಲಿ ನೋ
ಡಿದ್ದೆನು. ಆಕೆಯ ದರ್ಶನವು ನಮ್ಮಂತಹರಿಗೆ ದುರ್ಲಭವು. ಪರಾಕ್ರಮಶಾಲಿ
ಯಾದ ಭೀಮಸಿಂಹರಾಣಿಯ ಸೌಂದರ್ಯದ ಕೀರ್ತಿಲತೆಯು ಸರ್ವತ್ರ ಪ್ರಸರಿ
ಸಿದೆ. ಆಕೆಯ ರೂಪ, ಗುಣ, ಕೀರ್ತಿಗಳನ್ನು ಈವರೆಗೆ ಪ್ರಭುಗಳು ಕೇಳದಿರು
ವುದು ಆಶ್ಚರ್ಯವಾಗಿದೆ.” ಆಗ ಸುಲ್ತಾನನು ಶಾಮಳದಾಸನನ್ನು ನೋಡಿ “ಭೀ
ಮಸಿಂಗರಾಣಿಯು ಅಷ್ಟು ಸುಂದರಿಯೇ? ಹಾಗಿದ್ದಲ್ಲಿ ಅಂತಹ ರಮಣಿಯಿಂದ
ಐಶ್ವರ್ಯಸಂಪನ್ನನಾದ ಸುಲ್ತಾನನರಮನೆಯು ಅಲಂಕೃತವಾಗದೆ? ಆ ತುಚ್ಛರಾ

ಣನನ್ನು ವರಿಸುವುದಾಶ್ಚರ್ಯವು. ಆ ಸ್ತ್ರೀರತ್ನದ ತಾಯಿತಂದೆಗಳು ವಿವಾಹ ಸಂಬಂಧ ಘಟನೆಯಲ್ಲಿ ದೊಡ್ಡ ತಪ್ಪನ್ನು ಮಾಡಿರಬೇಕು; ಪದ್ಮಿನಿಯು ನನ್ನ ವೈಭವನ್ನು ನೋಡಿದ್ದಲ್ಲಿ ಆ ಕಂಗಾಲ ರಾಣನನ್ನು ವರಿಸಲು ಎಂದಿಗೂ ಒಪ್ಪುತ್ತಿರಲಿಲ್ಲವೆಂದು ಸಂಶಯುಂಟಾಗುತ್ತಿದೆ. ಆಕೆಯದೃಷ್ಟವು ಹ್ಯಾಗಿತ್ತೆಂದರೆ ಹಾಗೂ ತಿಳಿಯಲಾಗುವುದಿಲ್ಲ. ಈ ಸುಲ್ತಾನನ ಶರೀರ ಸಾಮರ್ಥ್ಯವು ಆಕೆಯದೃಷ್ಟವನ್ನು ತಿದ್ದಿಸಲು ಶಕ್ತವಾದದ್ದು. ಆ ಪದ್ಮಿನಿಯನ್ನು ನನ್ನಂತಃಪುರಕ್ಕೆ ತರಬೇಕೆಂಬಿಚ್ಛೆಯುಂಟಾದರೆ, ನಿಮಿಷಾರ್ಧದಲ್ಲಿ ತರಲು ಶಕ್ತನಾಗಿದ್ದೇನೆ" ಎಂದನು

ಹೀಗೆ ಜಲ್ಪಿಸುವುದನ್ನು ಕೇಳಿ ಶಾಮಳನು ಸ್ತಬ್ಧನಾದನು. ಪದ್ಮಿನಿಯ ವರ್ಣನೆಯನ್ನೇನೋ ಮಾಡಿದನು. ಸುಲ್ತಾನನ ಸ್ವಭಾವವು ಅವನಿಗೆ ತಿಳಿದಿತ್ತು. "ಸುಲ್ತಾನನಿಗೆ ಮನಸ್ಸು ಬಂದರೆ ನಿಜವಾಗಿ ಭಯಂಕರಕೃತ್ಯವನ್ನು ನಡೆಸುವನು. ಇವನಿಗೆ ಪದ್ಮಿನಿಯ ಪ್ರಾಪ್ತಿಯಲ್ಲಿಚ್ಛೆಯುಂಟಾಗಿದೆ: ಇದು ಕಾಲಕ್ರಮದಲ್ಲೂ ತಿರುಗುವುದಿಲ್ಲ. ಈಗ ಇದಕ್ಕೆ ಯಾವ ಉಪಾಯವಮಾಡಬೇಕು?" ಎಂದು ಆಲೋಚಿಸುತ್ತಿದ್ದನು. ಕ್ಷಣಮಾತ್ರ ಸರ್ವರೂ ಸ್ತಬ್ಧರಾದರು. ಯಾರೂ ಏನೂ ಹೇಳಲಿಲ್ಲ. ಬಳಿಕ ಸುಲ್ತಾನನು "ಶಾಮಳದಾಸನೇ! ನೀನಾ ಪದ್ಮಿನಿಯನ್ನು ನೋಡಿದಾಗ ಹೇಗಾಯಿತು?" ಎನ್ನಲು; ಶಾಮಳನು, "ಏನಾಗುವುದು? ರಾಜಪತ್ನಿಯಾದ್ದರಿಂದ ಮಾತೃಶ್ರೀಯಂತೆ ಭಾವಿಸಿದೆನು. ಆಕೆಯನ್ನು ಪಾಪಬುದ್ಧಿಯಿಂದ ಕಾಮುವಶವಾಗುವುದು ರಾಜಸ್ಥಾನವಾಸಿಗಳಿಗೆ ಯುಕ್ತವಲ್ಲ" ಎಂದನು. ಬಳಿಕ ಸುಲ್ತಾನನು, "ಅಯ್ಯಾ! ನಾನದನ್ನು ಕೇಳಲಿಲ್ಲ. ನಿನ್ನ ವಿಷಯ ನನಗೆ ತಿಳಿದಿದೆ. ಆದರೆ, ಆಕೆಯ ರೂಪವು ನಿನಗೆ ಹೇಗೆ ಕಾಣಿಸಿತು? ಇದನ್ನು ವಿಚಾರಿಸುವೆನು ಎಂದನು. ಈ ಕಪಟೋಕ್ತಿಯಂ ಕೇಳಿ ಶಾಮಳದಾನು "ಪ್ರಭುವೇ! ನಾನಾಕೆಯನ್ನು ನೋಡಿದಾಗ ನನಗೆ ಎಚ್ಚರವೇ ತಪ್ಪಿತು. ನಾನು ಪ್ರಕಾಶಮಾನವಾದ ಮುಖವನ್ನು ನೋಡಲೇ ಇಲ್ಲ. ಆದ್ದರಿಂದ ಆಕೆಯ ಸ್ವರೂಪವನ್ನು ಹೇಗೆ ವರ್ಣಿಸಲಿ?" ಎಂದು ಅಡ್ಡಗೋಡೆಯ ಮೇಲಿನ ದೀಪದಂತೆ ನುಡಿದನು. ಇದರಿಂದ ಸುಲ್ತಾನನು ಸಮಾಧಾನಪಡಲಿಲ್ಲ. "ಅಯ್ಯಾ! ಆಕೆಯ ವರ್ಣನೆಯನ್ನು ಯಾರಾದರೂ ಮಾಡಿರಬೇಕು ದೇಶದೇಶಗಳಲ್ಲಿ ಆಕೆಯ ವರ್ಣನೆಯು ಹರಡಿದೆ ಎಂದು ನೀನು ಹೇಳಿದೆಯಷ್ಟೆ. ಆಕೆಯ ಸೌಂದರ್ಯ ವಿಷಯದಲ್ಲಿ ಯಾವನಾದರೊಬ್ಬ ಕವಿಯು ಒಂದು ಗ್ರಂಥವನ್ನೇ ರಚಿಸಿರಬಹುದು. ಅದು ನೆನಪಿನಲ್ಲಿದ್ದರೆ ಹೇಳು ನೋಡೋಣ. ನನಗಾಕೆಯ ವಿಷಯದಲ್ಲಿ ಪಾಪಬುದ್ಧಿಯಿಲ್ಲ. ಆಕೆಯ ವರ್ಣನೆಯನ್ನು ಮಾತ್ರ ಕೇಳಬೇಕೆಂಬಾಶೆ ಇದೆ" ಎನ್ನಲು; ಆ ಗಾಯಕನು ಏನೂ ತೋರದೆ ಸ್ತಬ್ಧನಾದನು. "ನಾನುಪಜೀವಿಸಿದಿಗೆ ನಮ್ಮ ಜಾತಿಯ ನಾಶಕ್ಕೆ ನಾನೇ ಕಾರಣನಾಗುವೆನು; ವರ್ಣಿಸದಿದ್ದರೆ ಸುಲ್ತಾನನ-ರೋಷಕ್ಕೆ ಪಾತ್ರನಾಗುವೆನು. ಈಗ ಯಾವ ದಾರಿಯನ್ನು ಹಿಡಿಯಲಿ? ತಿಳಿಯುವುದಿಲ್ಲ" ಎಂದು ಸುಮ್ಮನಾಗಲು; ಇದನ್ನು ನೋಡಿ ಸುಲ್ತಾನನು, ಕಪಟಗಾಂಭೀರ್ಯವಂ ತೋ

ರಿಸಿ "ಗಾಯಕರತ್ನನೆ ! ಬೇಗ ವರ್ಣನೆಯನ್ನು ಹೇಳು. ನನ್ನ ಮನಸ್ಸಿನಲ್ಲಿ ಈ ವಿಷಯದಲ್ಲಿ ಕಪಟವಿಲ್ಲ; ಆದರೆ ಅಂತಹ ಸ್ತ್ರೀರತ್ನವನ್ನ ವಶ್ಯವಾಗಿ ನೋಡಬೇಕು. ಎಂಬ ಇಚ್ಛೆಯುಂಟಾಗಿದೆ." ಎಂದನು. ಆಗ ಆ ಗಾಯಕನು ನಿಸ್ಸಂಶಯನಾಗಿ "ಪ್ರಭುವೇ ! ಕವಿಗಳ ಕವನದಲ್ಲಿ ಎಲ್ಲವೂ ನೆನಪಿನಲ್ಲಿಲ್ಲವಾದರೂ ಒಬ್ಬ ಕವಿಯು ಈ ಕೆಳಗಿನ ಪದ್ಯವನ್ನು ಹೇಳಿರುವನು" ಎಂದು ಗಾನಮಾಡಲಾರಂಭಿಸಿದನು.

ರಾಗ—ಜಂಜೂಟಿ ‖ ಆದಿತಾಳ ‖

(ಇಂದುವದನೆ ಕುಂದರದನೆ ಎಂಬಂತೆ)

"ಧನ್ಯೆಧನ್ಯೆ ಭೀಮನೃಪನ ಪತ್ನಿ ಪದ್ಮಿನೀ |
ಧನ್ಯೆಧನ್ಯೆ ಯಾಕೆವೂನ್ಯೆ ಪದ್ಮಗಂಧಿನೀ ‖ಪಲ್ಲವಿ‖
ಕುಂದರದನೆ ಸುಂದರಾಂಗಿ ಮಂದಗಾಮಿನೀ |
ಅಂದದಿಂದ ಮಂದಹಾಸದಿಂದ ಶೋಭಿತೆ ‖೧‖
ನೀಲಕುಂತಳೆ ಲೋಲನೇತ್ರೆ ಸ್ತ್ರೀಲಲಾಮಳೂ |
ಬಾಲಹಂಸಗಮನೆ ಪುಳಕಜಾಲ ಪೂರಿತೆ | ‖೨‖
ಭೂಪಭೀಮ ಪತ್ನಿ ತಾನು ರೂಪಜಿತರತಿ |
ಚಾಪಲಾಕ್ಷಿ ಕೋಪರಹಿತೆ ಆ ಪತಿವ್ರತೆ" ‖೩‖

ಎಂದು ಗಾನ ಮುಗಿಸಿದ ಬಳಿಕ ಸುಲ್ತಾನನು ಈ ವರ್ಣನೆ ನಿಜವಾಗಿದ್ದಲ್ಲಿ ....ಎಂದು ಅರ್ಧೋಕ್ತಿಯು ಹೇಳಿ ವಿಚಾರಮಗ್ನನಾಗಿ ಇಂತಹ ಸುಂದರಿಯು ನನ್ನ ರಮನೆಯಲ್ಲಿಲ್ಲದಿರುವುದು ನಿಂದಾಸ್ಪದವಾಗಿದೆ. ಇಂತಹ ಸುಂದರಿಯನ್ನು ರಾಣಿವಾಸಕ್ಕೆ ಸೇರಿಸದೇ ಇರುವುದಿಲ್ಲ ಎಂದು ಯೋಚಿಸಿ ಎದ್ದು ರಾಣಿವಾಸಕ್ಕೆ ಹೋದನು.

ಪ್ರಕರಣ 2.

ಸತ್ಯಾಸತ್ಯಗಳನ್ನು ಕಾರ್ಯಪರಿಣಾಮದಲ್ಲಿ ಯೋಚಿಸು.

ಸಾಯಂಕಾಲದ ರಮಣೀಯತೆಯು ಚಿತ್ತಕ್ಕಾನಂದ ಕೊಡುವದಾಗಿದೆ. ಭಗವಂತನಾದ ಸೂರ್ಯನಾರಾಯಣನು ಘಳಿಗೆ ಅರ್ಧಘಳಿಗೆಯಲ್ಲಿ ಅಸ್ತಮಿಸುವವನಾಗಿದ್ದನು. ಗೋಪಾಲಕರು ತಮ್ಮ ಪಶುಗಳನ್ನು ಮೇಯಿಸಿಕೊಂಡು ಊರು ಸೇರುತ್ತಿರುವರು. ಯಮುನಾ ನದಿಗೆ ಬಂದ ಸ್ತ್ರೀಯರು ನೀರನ್ನು ತುಂಬಿಕೊಂಡು ರಾತ್ರೆ ನಾದಿನಿ ಯತ್ತಿಗೆಯರು ಸಿಟ್ಟಾಗುವರೆಂದು ಜಾಗ್ರತೆಯಾಗಿ ಸ್ವಗೃಹಾಭಿಮುಖರಾಗಿ ಬರುತ್ತಿದ್ದರು ದೆಹಲೀ ನಗರದ ಮಧ್ಯದಲ್ಲಿ ಕೆಲವರು ಯುವಕರು ನಾನಾವಿಧವಾದ

ಅತ್ತರು ಮುಂತಾದ ಸುಗಂಧದ್ರವ್ಯಗಳನ್ನು ಲೇಪಿಸಿಕೊಂಡು, ಅಡಿಕೆಲೆಯನ್ನು ಹಾಕಿಕೊಂಡು, ಬಾಯಿಯಲ್ಲಿ ತುಂಬಿಕೊಂಡು ಪಿಚಕಾರಿಯಂತೆ ಉಗುಳುತ್ತಾ, ಸ್ತ್ರೀಯರು ಸ್ನಾನಿಗೆ ಬರುವ ಸಮಯ ದಡದಲ್ಲಿ ತಿರುಗುತ್ತಾ, ಯುವತಿಯರ ಮುಖವನ್ನು ನೋಡುತ್ತಾ ಸಂಚರಿಸುತ್ತಿದ್ದರು. ಕೆಲವರು ಗೃಹಕಾರ್ಯವನ್ನು ಬಿಟ್ಟು ಪರಮಾತ್ಮನನ್ನು ಏಕಧ್ಯಾನದಿಂದ ಧ್ಯಾನಿಸುತ್ತಿದ್ದರು. ಈ ಸಮಯದಲ್ಲಿ ಒಬ್ಬ ಜಟಾಧಾರಿಯಾದ ಸಾಧುಪುರುಷನು ನದೀ ತೀರದಲ್ಲಿ ಬರುತ್ತಿದ್ದನು. ಈತನನ್ನು ನೋಡಿದರೆ ಅನಿತ್ಯವಾದ ಸಂಸಾರದ ಆಡಂಬರವಸ್ತುಗಳನ್ನು ಬಿಟ್ಟು ಪರಮಾತ್ಮಧ್ಯಾನಮಾಡಿ ಸ್ಥಿರವಾದ ಕೀರ್ತಿಯನ್ನು ದೊರಕಿಸಿಕೊಳ್ಳುವುದರಲ್ಲಿ ತತ್ಪರನಾದ ಸಾಧುಪುರುಷರ ಮಧ್ಯದಲ್ಲಿ ಗಣಿಸಬೇಕೆಂದು ತೋರುತ್ತಿತ್ತು. ಇವನು ಬಹು ದೂರ ನಡೆದು ಸೂರ್ಯನ ತೀಕ್ಷ್ಣಕಿರಣಗಳಿಂದ ಬಳಲಿ ಮುಖವು ಸ್ವಲ್ಪ ಕಪ್ಪಾಗಿದ್ದರೂ ಅವನ ಅಂಗಸೌಂದರ್ಯವು ಮುಚ್ಚಿರಲಿಲ್ಲ. ಈ ಸಾಧುವು ಆ ನದೀ ತೀರದ ಸ್ನಾನಘಟ್ಟಕ್ಕೆ ಬಂದು ಒಂದು ವಿಶಾಲವಾದ ಆಲದ ಮರದ ಬುಡದಲ್ಲಿ ತನ್ನ ಕೌಪೀನ, ಕಮಂಡಲ, ದಂಡ ಮುಂತಾದ ವಸ್ತುಗಳನ್ನಿಟ್ಟು, ನೀರನ್ನು ತರಲು ಪಾತ್ರೆಯು ತೆಗೆದುಕೊಂಡು ಬಂದು ನದಿಯಲ್ಲಿ ಸ್ನಾನಮಾಡಿ "ಸಚ್ಚಿದಾನಂದ ರೂಪಃ ಶಿವೋಽಹಂ ಶಿವೋಽಹಂ!" ಎಂಬ ಮಂತ್ರೋಚ್ಚಾರಣೆ ಮಾಡುತ್ತಿದ್ದನು ಸ್ನಾನವಾದ ಮೇಲೆ ಮಡಿ ಬಟ್ಟೆಯನ್ನುಟ್ಟು ಭಸ್ಮವನ್ನು ಲೇಪಿಸಿ, ಸ್ವಲ್ಪ ಫಲಹಾರ ಮಾಡಿ ಬಳಿಕ ಕೌಪೀನ ಮುಂತಾದ ವಸ್ತುಗಳೊಡನೆ ಇಳಿದುಕೊಳ್ಳುವ ಸ್ಥಳವನ್ನು ನಿರೀಕ್ಷಿಸುತ್ತಾ ಯಮುನಾತೀರದಲ್ಲ ಮರಗಳ ತೋಪಿನಲ್ಲಿ ಒಂದು ಸ್ಥಳವನ್ನು ನಿರ್ಧರಿಸಿದನು. ಕೂಡಲೆ ಬೇರೆಬೇರೆ ಗಿಡಗಳ ಕೊಂಬೆಗಳನ್ನು ತಂದು ಆ ಸ್ಥಳವಂ ಗುಡಿಸಿದವನಾಗಿ ಒಂದು ಪರ್ಣಶಾಲೆಯನ್ನು ನಿರ್ಮಿಸಿದನು. ಬಳಿಕ ಪರ್ಣಶಾಲೆಯಲ್ಲಿ ತನ್ನ ಪದಾರ್ಥಗಳೆಲ್ಲವನ್ನೂ ಕ್ರಮವಾಗಿರಿಸಿ, ಬಟ್ಟೆಯಗಂಟೊಂದನ್ನು ತೆಗೆದು, ವಿಶ್ವಾಸಪೂರ್ವಕವಾಗಿ ಮೇಲ್ಗಡೆ ಎಲೆಗಳ ಮರೆಯಲ್ಲಿಟ್ಟು. ಕೆಲವು ಕಾಷ್ಠಗಳಿಂದಲೂ, ಒಣಗಿದೆಲೆಗಳಿಂದಲೂ ಶಯ್ಯೆಯಂ ರಚಿಸಿ, ವ್ಯಾಘ್ರಚರ್ಮವನ್ನು ಹಾಸಿಕೊಂಡು ಆ ಸುಖಶಯ್ಯೆಯಲ್ಲಿ ಮಲಗಿದನು. "ಪರಮಾತ್ಮಸ್ವರೂಪವನ್ನು ಚಿಂತಿಸುವವರಿಗೆ ಈ ಪರ್ಣಶಾಲೆಯು ತುಚ್ಛವಾದೀತೇ! ವೇಷಧಾರಿಯಾದ ನನಗೆ ತುಚ್ಛವಾಗಿದೆ. ಆದ್ಯಂತರಹಿತನಾದ ಯಾವ ಪರಮಾತ್ಮನ ಕೌಶಲವು ಅಗಾಧವು! ಒಂದು ನಿಮಿಷದಲ್ಲಿ ಲಕ್ಷಕನನ್ನು ಭಿಕ್ಷುಕನನ್ನಾಗಿಯೂ, ಭಿಕ್ಷುಕನನ್ನು ಲಕ್ಷಕನನ್ನಾಗಿಯೂ ಮಾಡಲು ಅವನಿಚ್ಛೆಯೇ ಕಾರಣೀಭೂತವಾಗಿದೆ. ಈ ನರಜನ್ಮದಲ್ಲಿ ಹುಟ್ಟಿದುದಕ್ಕೆ ಕಾಶೀಯಾತ್ರೆ ಮಾಡಿದೆನು. ಗಂಗಾಸ್ನಾನದಿಂದ ದೇಹವಂ ಪಾವನಮಾಡಿಕೊಂಡು, ಶ್ರೀ ಕಾಶೀವಿಶ್ವೇಶ್ವರಸ್ವಾಮಿಯ ದರ್ಶನ ಮಾಡಿದೆನು. ಲಕ್ಷ್ಮಣಪುರಿಯಲ್ಲಿ ಗೋಮತೀ ನದಿಯಲ್ಲಿ ಸ್ನಾನಮಾಡಿದೆನು. ಈಗ ಈ ಯಮುನಾ ನದಿಯಲ್ಲಿ ಸ್ನಾನಮಾಡಿದೆನು. ನಾಳೆ ಆರ್ಯರ ಇಂದ್ರಪ್ರಸ್ಥ (ಡೆಹಲಿ) ವನ್ನು ನೋಡಿ ಸ್ವದೇಶಕ್ಕೆ ಹೊರಡುವೆನು."

“ಇಂದ್ರಪ್ರಸ್ಥ ಅಥವಾ ಹಸ್ತಿನಾವತಿಯೇ ಈ ದೇಹಲಿಯಲ್ಲವೆ? ಆಹಾ! ಈ ಸ್ಥಳದಲ್ಲಿ ಯುಧಿಷ್ಠಿರನಂತಹ ಸತ್ಯವಂತನೂ, ಪೃಥ್ವಿರಾಜನಂತಹ ವೀರನೂ ಜನಿಸಿ ತಮ್ಮ ಸತ್ಯನಿಷ್ಠತೆ, ಪ್ರಜಾಪಾಲನೆ, ನ್ಯಾಯವರ್ತನೆ ಪ್ರೀತಿಗಳಿಂದ ಪ್ರಜೆಗಳನ್ನು ಪುತ್ರರಂತೆ ರಕ್ಷಿಸಿ ದೆಹಲಿಯ ಸಿಂಹಾಸನವನ್ನಲಂಕರಿಸುತ್ತಿದ್ದರು. ಆ ಸಿಂಹಾಸನದಲ್ಲಿ ದಯಾನಿಧಿಗಳಾದ ರಾಜಪುತ್ರರಿಗೆ ಬದಲಾಗಿ ಈ ಯವನನು ವಿರಾಜಮಾನನಾಗಿರುವುದನ್ನು ನೋಡಿಯೂ ನಮ್ಮ ಕಣ್ಣುಗಳೇಕೆ ಒಡೆದು ಬೀಳವು? ನಾವು ಇದ್ದೂ ಇಲ್ಲದಂತಾಗಿದೆ. ಅಂತಃಕಲಹನೇ! ನೀನೇ ಧನ್ಯ! ನಿನ್ನ ಯೋಗ್ಯತೆಯು ಈ ಭವಸಾಗರ ಮಧ್ಯದಲ್ಲಿ ಶ್ರೇಷ್ಠವು. ನಿನ್ನ ದೆಸೆಯಿಂದಲೇ ನಾವು ಸರ್ವಸ್ವವನ್ನೂ ನಾಶಮಾಡಿಕೊಂಡು ಅನ್ಯರ ದಾಸಾನುದಾಸರಾಗಿರುತ್ತೇವೆ; ಸೇವಕರಾಗಿದ್ದೇವೆ! ಬಡತನದಲ್ಲಿ ಮುಳುಗಿದ್ದೇವೆ! ನಿನ್ನ ಪ್ರಭಾವ ವೆಷ್ಟುದೊಡ್ಡದು! ಜಯಚಂದನು ನಿನಗೆ ಸಹಾಯ ಮಾಡದಿದ್ದರೆ ನಿನ್ನ ಮಾಯೆಯು ಹೇಗೆ ನಡೆಯುತ್ತಿತ್ತು? ನೀನು ಈ ಯವನರನ್ನು ತಂದು ಪೃಥ್ವೀರಾಜಚವ್ಹಾಣನನ್ನು ಪರಾಜಯ ಹೊಂದಿಸಿ ಅವನ ಸಿಂಹಾಸನವನ್ನು ಈ ಯವನನು ಅಲಂಕರಿಸುವಂತೆ ಮಾಡಿರುತ್ತಿ!” ಎಂದು ಆ ಸಾಧುವು ಸಹಜೋಕ್ತಿಯನ್ನಾಡುತ್ತಿರಲು; ಒಂದು ನಿಮಿಷದಲ್ಲಿ ಆನಂದಯುಕ್ತನಾಗಿಯೂ, ಒಂದು ಬಾರಿ ಕೋಪಯುಕ್ತನಾಗಿಯೂ ಇದ್ದು ಕೆಲವು ಕಾಲ ರೋದಿಸಿದನು! ಈ ರೀತಿ ಮಧ್ಯಾಹ್ನದಿಂದ ರಾತ್ರಿಯವರೆಗೂ ದುಃಖಿಸುತ್ತಿದ್ದನು. ನಿದ್ರಾಂಗನೆಯು ಅವನೇನು ಮಾಡಿದರೂ ಅವನಲ್ಲಿ ಕೃಪೆಮಾಡಲಿಲ್ಲ. ಬಳಿಕ ಅವನು ಶಯ್ಯೆಯಿಂದೆದ್ದು ವೇಷಕ್ಕೆ ತಕ್ಕಂತೆ ಧೂಮಪಾನ ಮಾಡಲಾರಂಭಿಸಿದನು. ಚಿಲುಮೆಯಲ್ಲಿ ಹೊಗೆಸೊಪ್ಪನ್ನು ಹಾಕಿ ಬೆಂಕಿಯನ್ನು ಹೊತ್ತಿಸಿ ಸೇದಲಾರಂಭಿಸಿದನು. ‘ಹಾ! ಹಾ!’ ಎನ್ನುತ್ತಾ ಮೂರನೆಯ ಜಾವದಲ್ಲಿ ಶಯ್ಯೆಯಲ್ಲಿ ಮಲಗಿದನು. ಮನೋವಿಚಾರದಿಂದ ಈಗ ನಿದ್ರೆ ಹತ್ತಿತು. ಬೆಳಗಾಗಿ ಒಂದು ಜಾವವಾದರೂ ಏಳಲಿಲ್ಲ. ಬಳಿಕ ಸ್ನಾನಘಟ್ಟದಲ್ಲಿ ನೀರು ತುಂಬಲು ಬಂದ ಯುವತಿಯರ ಗದ್ದಲದಿಂದ ಅವನು ಎಚ್ಚರ ಹೊಂದಿದನು. ಒಡನೆಯೇ ಎದ್ದು ಸ್ನಾನಸಂಧ್ಯಾದಿ ಪ್ರಾತರ್ವಿಧಿಗಳನ್ನು ಮಾಡಿ, “ಚಿದಾನಂದರೂಪಃ ಶಿವೋಹಂ. ಶಿವೋಹಂ!” ಎಂದು ಜಪಿಸುತ್ತಾ ಧ್ಯಾನಸ್ಥನಾದನು. ಈ ಸಮಯದಲ್ಲಿ ಈತನ ನಡೆನುಡಿಗಳನ್ನು ನೋಡುತ್ತಾ ದೂರದಲ್ಲಿ ಒಬ್ಬ ವ್ಯಕ್ತಿಯು ನಿಂತಿದ್ದನು. ಈತನು, ಮುಸಲ್ಮಾನನಾಗಿದ್ದನು. ಅವನ ಉಡಿಗೆ ತೊಡಿಗೆಗಳು ಸಾಧಾರಣವಾಗಿದ್ದವು. ಈತನು ಪರ್ಣಶಾಲೆಯ ಹತ್ತಿರಕ್ಕೆ ಬಂದು ಸೂಕ್ಷ್ಮರೀತಿಯಿಂದ ಆ ಪರ್ಣಶಾಲೆಯಲ್ಲಿರುವ ವಸ್ತುಗಳನ್ನು ನಿರೀಕ್ಷಿಸುತ್ತಿದ್ದನು. ಆ ಸಾಧುವೂ ಆ ವ್ಯಕ್ತಿಯಾರಿರಬಹುದೆಂದು ನಿರೀಕ್ಷಿಸಿ, ಅನೇಕವೇಳೆ ಶೋಧಿಸುವುದಕ್ಕೆ ಯತ್ನಿಸಿದನು. ಸ್ವಲ್ಪ ಕಾಲದ ಬಳಿಕ–ಬಾಯಿಯಿಂದ ‘ಚಿದಾನಂದರೂಪಃ ಶಿವೋಹಂ. ಶಿವೋಹಂ’ ಎಂದು ಉಚ್ಚರಿಸುತ್ತಿದ್ದನು. ಬಳಿಕ ಈ ಯವನವ್ಯಕ್ತಿಯು ಆ ಸಾಧುವಿಗೆ ನಮಸ್ಕರಿಸಿದನು. ಆಗ

ಸಾಧುವು ನಾರಾಯಣ ನಾಮೋಚ್ಚಾರಣೆಯಿಂದ ಆಶೀರ್ವದಿಸಿ 'ವತ್ಸ ನೀನಾರು, ?' ಎನ್ನಲು ಅವನು—"ಸಾಧುವರ್ಯರೇ! ನಾನು ದೆಹಲಿಯಲ್ಲಿರುವ ಒಬ್ಬ ಬಡಮನುಷ್ಯನು. ತಾವು ನಿನ್ನೆಯದಿನ ಇಲ್ಲಿಗೆ ಬಂದಿರಬಹುದಲ್ಲವೆ? ಏಕೆಂದರೆ, ಈ ಸ್ಥಳದಲ್ಲಿ ನಿನ್ನೆ ಎರಡು ಜಾವದ ಹಿಂದೆ ಪರ್ಣಶಾಲೆ ಇರಲಿಲ್ಲ" ಎಂದನು. ಆಗ ಸಾಧುವು "ಅಹುದು, ನಾನು ನಿನ್ನೆ ಬಂದೆನು. ಇಲ್ಲಿನ ವಾಯುವು ಹಿತಕರವಾಗಿ ತಾಪಯುಕ್ತವಾದ ಮೇಧಸ್ಸಿಗೆ ತಂಪುಮಾಡುವಂತೆ ಕಂಡು ಬಂದುದರಿಂದ ಇಲ್ಲಿ ವಾಸಕ್ಕೆ ಪರ್ಣಶಾಲೆಯನ್ನು ರಚಿಸಿದೆನು" ಎಂದನು. ಆ ವ್ಯಕ್ತಿಯು, ಸ್ವಾಮಿಾ! ತಾವು ಯಾವಯಾವ ನಗರಗಳನ್ನು ಸಂದರ್ಶಿಸಿರುವಿರಿ.' ಎಂದು ವಿಚಾರಿಸಿದನು. 'ಆಹಾ! ನಮಗೇನು? ಈಶಭಜನೆಗೆ ಯೋಗ್ಯಸ್ಥಳವು ಸಿಕ್ಕಿದರೆ, ಅದೇ ನಮಗೆ ಇಳಿದುಕೊಳ್ಳುವ ಸ್ಥಳ; ಎಂದು ತಿಳಿಯಬೇಕು. ಮತ್ತು ರಾಜಸದನವಾದರೇನು, ಬಡವನ ಮನೆಯಾದರೇನು, ನಮಗೆಲ್ಲವೂ ಒಂದೇ ಆಗಿದೆ.' ಎಂದು ಸಾಧುವು ಹೇಳಲು, ಆ ವ್ಯಕ್ತಿಯು—"ಅದು ನಿಜ. ಸಂಸಾರದಿಂದ ಬಿಡುಗಡೆಯಾದ ಸಾಧುಸಮೂಹದ ಬಾಯಿಯಿಂದ ಇಂತಹ ಶಬ್ದವೇ ಹೊರಡತಕ್ಕದ್ದಲ್ಲವೆ? ಆದರೆ ಸಾಧುಗಳು ಒಂದು ಕಡೆ ನಿಲ್ಲಲಾರರಾದ್ದರಿಂದ ಬೇರೆಬೇರೆ ದೇಶಗಳ ರೀತಿ, ನಗರ, ದುರ್ಗಗಳ ಪರಿಚಿತಿಯೂ ಇರಬಹುದೆಂದು ತಮ್ಮನ್ನು ಈ ಪ್ರಶ್ನೆ ಮಾಡಿದೆನು. ಇಂತಹ ಕೋಟೆಗಳಾಗಲೀ, ನಗರಗಳಾಗಲೀ, ವಿದಿತವಾಗಿದ್ದರೆ ಹೇಳೋಣಾಗಲಿ; ನನಗದನ್ನು ಕೇಳಬೇಕೆಂಬಾಶೆಯಿದೆ." ಎಂದನು. ಆಗ ಸಾಧುವು—"ಅಪ್ಪಾ! ಯಾವ ದೃಷ್ಟಿಯಿಂದ ನಗರ ಅಥವಾ ಕೋಟೆಗಳನ್ನು ನೋಡಬೇಕೋ, ಆ ದೃಷ್ಟಿಯಿಂದದುಗೋಚರಿಸುವುದು. ನಮಗೇನು ಪ್ರಯೋಜನ? ನಾನು ಕಾಶಿ, ಪ್ರಯಾಗ, ಗಯಾ, ಲಖನೌ, ಚಿತ್ತೂರು ಎಂಬೀ ನಗರಕೋಟೆಗಳನ್ನು ಸಾಧುತ್ವದೃಷ್ಟಿಯಿಂದ ನೋಡಿದ್ದೇನೆ. ಭದ್ರತೆಯ ದೃಷ್ಟಿಯಿಂದ ನೋಡಲಿಲ್ಲ. ಏಕೆಂದರೆ, ಆ ವ್ಯವಸಾಯ ನಮ್ಮದಲ್ಲ" ಎಂದನು. ಈ ಮಾತಿನಿಂದಾತನು ತೃಪ್ತನಾಗದೆ ಈತನು ಮೇಲೆ ಮಾತ್ರ ಸಾಧುಪುರುಷನಂತಿದ್ದು ಗೂಢಪುರುಷನಾಗಿದ್ದಾನೆ ಎಂಬ ಭಾವನೆಯು ಆ ಸಾಧು ಕೊಟ್ಟ ವ್ಯತ್ಯಸ್ತವಾದ ಉತ್ತರವಾಕ್ಯಗಳಿಂದ ಉಂಟಾಯಿತು. ಆ ವ್ಯಂಗ್ಯಾರ್ಥದ ಗುಟ್ಟನ್ನು ಹೊರಗೆಡಹಲೇಬೇಕೆಂಬಿಚ್ಛೆಯಿಂದ ಆ ವ್ಯಕ್ತಿಯು "ಸ್ವಾಮಿಾ! ಹಾಗೆಯೇ ಆಗಲಿ ತಾವು ಚಿತ್ತೂರು ಕೋಟೆಯನ್ನು ನೋಡಿದೆವೆಂದಿರಷ್ಟೆ! ಸಾಧುತ್ವದೃಷ್ಟಿಯಿಂದ ನೋಡಿದರೂ, ಆ ಕೋಟೆಯ ಸಂಬಂಧದಲ್ಲಿ ಜನರು ಆಡುವ ಆಖ್ಯಾನವಾದರೂ ಕೇಳಿ ತಿಳಿದಿರುವಿರಲ್ಲವೆ?" ಎಂದನು.

ಇವನು ನನ್ನ ವ್ಯಂಗ್ಯವನ್ನು ಹೊರಗೆಡಹದೆ ಬಿಡನೆಂಬುದನ್ನು ತಿಳಿದು, ಅನುಕೂಲವಾಗಿ ಹೇಳಿ ಇವನೊಡನೆ ಸ್ನೇಹಬೆಳಸಿದರೆ ನನ್ನ ಉದ್ದೇಶಕ್ಕೆ ಸಹಾಯವಾದೀತು; ಮತ್ತು ಇಲ್ಲಿನ ವರ್ತಮಾನವನ್ನು ತಿಳಿಯಲು ಅನುಕೂಲಿಸುವುದೆಂದು ಯೋಚಿಸಿ, ಸಾಧುವು 'ಅಯ್ಯಾ! ಏನು? ಆ ಚಿತ್ತೂರು! ಆ ಚಿತ್ತೂರಿನ ಹೆಸರನ್ನೇ ನನ್ನೆದುರಿನಲ್ಲಿ ತೆಗೆಯಬೇಡ. ಯಾರಿಂದ ಅಲ್ಲಕಲ್ಲೋಲಕವಾದ

ಕಾರಣದಿಂದ .. ..' ಇಷ್ಟು ಅರ್ಧೋಕ್ತಿಯನ್ನಾಡಿ, ಸಂತಾಪತಪ್ತನಾಗಿ ನಾಲಿಗೆಯನ್ನು ಕಚ್ಚಿಕೊಂಡು ಸುಮ್ಮನಾದನು. ಚಿತ್ತೂರು ರಾಜಮನೆತನದ ಸಂಬಂಧವಾದ ಈ ಅರ್ಧೋಕ್ತಿಯನ್ನು ಕೇಳಿ ಆ ಯವನನಿಗತ್ಯಾನಂದವಾಗಿ, ಈ ಚಿತ್ತೂರಿನ ಸಂಗತಿ ತಿಳಿದು, ಅದರ ಸ್ವರೂಪವನ್ನು ಹೊರಪಡಿಸಲು ಸಮರ್ಥನಾದೆನೆಂದು ಊಹಿಸಿ, "ಸ್ವಾಮಿಾ! ನನಗೆ ತಮ್ಮ ಪರಿಚಯವು ಹೆಚ್ಚಾಗಿಲ್ಲದಿದ್ದರೂ, ನೀವು ದೇವಧ್ಯಾನದಿಂದಿರುವುದಕ್ಕಾಗಿ ನಿಜವಾಗಿ ಸನ್ಯಾಸವನ್ನು ಸ್ವೀಕರಿಸಿದಂತೆ ಕಾಣುವುದಿಲ್ಲ. ಆದ್ದರಿಂದ ತಮ್ಮಲ್ಲಿ ಪೂಜ್ಯಬುದ್ಧಿಯುಂಟಾಗಿದೆ: ನೀವು ಯಾರೇ ಆಗಿದ್ದರೂ ನಾನು ನಿಮ್ಮ ಗೂಢವನ್ನು ಬಹಿರಂಗಪಡಿಸುವುದಿಲ್ಲ. ನನ್ನಲ್ಲಿ ವಿಶ್ವಾಸವಿಡಬೇಕು ತಾವು ನುಡಿದ ಅರ್ಧೋಕ್ತಿಯಿಂದ ಮೇವಾಡದ ರಾಜನು ತಮಗಾವುದೋ ಕೇಡುಮಾಡಿದಂತೆ ತಿಳಿಯುತ್ತದೆ ಎಂದನು. ತನ್ನ ಅರ್ಧೋಕ್ತಿಯ ಪರಿಣಾಮವು ಇಷ್ಟು ಬೇಗ ಈ ವ್ಯಕ್ತಿಯಲ್ಲಿ ಆತುರವನ್ನು ಉಂಟುಮಾಡುವುದೆಂದು ತಿಳಿದಿರಲಿಲ್ಲವೆಂದು ದೂರಾಲೋಚನೆಯನ್ನು ಮಾಡಿ, ಆ ಸಾಧುವು ನಿಟ್ಟುಸಿರಿಟ್ಟು, 'ಅಯ್ಯಾ! ನಾನು ಮೂರ್ಖನಾದ್ದರಿಂದ ನನ್ನಿಂದ ಈ ಗುಟ್ಟು ಹೊರಬಿತ್ತು.' ಎಂದನು. 'ಓಹೋ! ಒಂದು ಕಾಲದಲ್ಲಿ ಚಿತ್ತೂರು ರಾಣನು ನಿಮಗೊಂದು ಸಾರಿ ಅಪಮಾನ ಮಾಡಿದ್ದಾನೆ. ಆದ್ದರಿಂದ ಅವನಿಗೆ ಪ್ರತೀಕಾರಮಾಡಲು ಈ ಸಮಯವುಂಟಾಗಬೇಕೆಂದು ಈಶ್ವರನು ನಿಮ್ಮ ಬಾಯಿಯಿಂದ ನಿಮ್ಮಂತರಂಗವನ್ನು ಹೊರಗೆಡಹಿದನೆಂದೇಕೆ ಹೇಳಬಾರದು? ಹೇಳಿರಿ. ನಾನು ಶಪಥಪೂರ್ವಕವಾಗಿ ಹೇಳುವೆನು. ನಿಮ್ಮ ಇಷ್ಟಾನುಸಾರವಾಗಿ ಸಹಾಯಮಾಡಲು ಸಿದ್ಧನಾಗಿದೇನೆ.' ಎಂದು ಆ ವ್ಯಕ್ತಿಯು ಹೇಳಿದನು. ಆಗ ಸಾಧುವು 'ವಿಮರ್ಶೆಮಾಡಿ, ನಿಮ್ಮಾಗ್ರಹವನ್ನು ನೋಡಿ ಎಲ್ಲವನ್ನೂ ಹೇಳಬೇಕೆಂಬಾಶೆಯಿದ್ದರೂ, ನೀವು ಪರಕೀಯ ಅಪರಿಚಿತರೆಂದು ಮನಸ್ಸು ಹಿಂಜರಿವುದು. ಆದರೂ ಚಿಂತೆಯಿಲ್ಲ. ನಿಮ್ಮ ವೇಷಭಾಷೆಗಳಿಂದ ನಿಮ್ಮಲ್ಲಿ ವಿಶ್ವಾಸವಿಡಲು ಅಡ್ಡಿಯಿಲ್ಲವೆಂದು ತಿಳಿಯುವುದು. ಏನೇ ಆಗಲಿ ಕೇಳಿರಿ; ನಾನು ಮೇವಾಡದ ದಳಪತಿಯು; ನನ್ನ ಹೆಸರು ಗುಲಾಬಸಿಂಹ; ನನ್ನ ಪರಾಕ್ರಮದ ವಿಷಯವು ನಿಮಗೆ ಶ್ರುತವಿರಬಹುದು. ಒಂದಾನೊಂದು ದಿನ ಲಕ್ಷ್ಮಣಸಿಂಗ, ಭೀಮಸಿಂಗರೆಂಬವರು ದರ್ಬಾರು ಮಾಡಿಕೊಂಡಿರುವಾಗ ಯವನರಮೇಲೆ ಕಾರ್ಯಭಾಗ ಮಾಡುವ ವಿಷಯದಲ್ಲಿ ಸಾಧ್ಯವೇ? ಅಸಾಧ್ಯವೇ? ಎಂದು ಚರ್ಚಿಸುತ್ತಿರಲು; ನಾನು ಯವನಾಧೀಶ್ವರನ ದೊಡ್ಡಸ್ತಿಕೆಯ ವಿಷಯದಲ್ಲಿ ವರ್ಣನೆ ಮಾಡಿದುದರಿಂದ, ಇಷ್ಟಕ್ಕೇ ರಾಣನು, ನಾನು ವರ್ಣಿಸಿದುದು ರಾಜಪುತ್ರರಿಗೆ ನಿಂದಾಸ್ಪದವಾದದ್ದೆಂದು ತಿಳಿದು 'ವಿಶ್ವಾಸಘಾತಕಿಯಾದ ದೇಶದ್ರೋಹಿ" ಎಂದು ನನ್ನನ್ನು ಗಡೀಪಾರು ಮಾಡಲು ಆಜ್ಞಾಪಿಸಿದನು. ನನ್ನ ತಲೆ ತಿರುಗಿತು. ನಾನು ರಾಣನಿಗೆದುರುತ್ತರ ಕೊಟ್ಟೆನು. ಸರದಾರರೆಲ್ಲರು ರಾಣನನ್ನು ಮರೆಹೊಕ್ಕು ತಪ್ಪನ್ನು ಮನ್ನಿಸಬೇಕೆಂದು ಬೇಡಿಕೊ!—ಎಂದರು. ನಾನು ಮಾತ್ರ ಒಪ್ಪಲಿಲ್ಲ. ಈ ಅಪಮಾನಕ್ಕೆ ಪ್ರತೀಕಾರಮಾಡುವೆನು. ರಾಜಪುತ್ರರ ವಂಶದಲ್ಲಿ ಹುಟ್ಟಿದು

ದಕ್ಕೆ ಸಾರ್ಥಕ್ಯತೋರಿಸುವೆನು' ಎಂದು ಪ್ರತಿಜ್ಞೆಮಾಡಿ ಆ ಸಭೆಯಿಂದ ಹೊರಟು ಇಲ್ಲಿಗೆ ಬಂದೆನು. ಆಗಿನ ರಾಣನ ಶಬ್ದವು ಶೂಲದಂತೆ ನನ್ನ ಸರ್ವಾಂಗವನ್ನೂ ಚುಚ್ಚುತ್ತಿದೆ. ನಾನು ಸತ್ಯವಚನವುಳ್ಳವನಾಗಿಯೂ, ಪಾಪಭೀರುವಾದ ರಾಜನಿಷ್ಠನಾಗಿಯೂ, ರಾಜಪುತ್ರನಾಗಿಯೂ ಆದ ಅಪಮಾನಸ್ಥಿತಿಯಲ್ಲಿ ಜೀವಿಸಿರುವುದಕ್ಕಿಂತ ಪ್ರತೀಕಾರಮಾಡಿಯೇ ಸಾಯುವುದು ಆನಂದವೆಂದು ತಿಳಿದಿದ್ದೇನೆ. ಎಂದು ಸಾಧುವು ಹೇಳಿದನು. ಆಗ ಆ ವ್ಯಕ್ತಿಯು ಚಿತ್ತೂರು ವರ್ತಮಾನವನ್ನು ತಿಳಿಯಲಪೇಕ್ಷೆಯಿಂದ 'ದಳಪತಿಗಳೇ, ನಿಮ್ಮ ಮಾತಿನಿಂದ ನಿಮಗೆ ಯಾವನಾದರೊಬ್ಬನ ಸಹಾಯಬೇಕೆಂಬಾಶೆಯಿದೆ' ಎಂದನು. 'ತಮ್ಮ ಇಷ್ಟವಾದ ಪ್ರತೀಕಾರಕೃತ್ಯಕ್ಕೆ ಸಹಾಯ ದೊರೆತರೆ, ತೊಂದರೆಯನ್ನು ನಿವಾರಿಸಿಕೊಳ್ಳುವಿರಲ್ಲವೆ? ನಮ್ಮ ಸುಲ್ತಾನರ ದೃಷ್ಟಿಯು ಆಕಡೆಗೆ ತಿರುಗಿದೆ; ಆದರೆ ನಿಶ್ಚಯವಾಗಿಲ್ಲ. ಆದಕ್ಕೆ ನಿಮ್ಮಂತವರ ಸಹಾಯದೊರೆತರೆ, ಒಂದುವೇಳೆ, ಎರಡು ಕಾರ್ಯವೂ ಪೂರ್ಣವಾದೀತು. ತಾವು ಸಹಾಯಮಾಡಲು ಒಪ್ಪುವಿರಾ?' ಎಂದನು. ಇದನ್ನು ಕೇಳಿ ಗುಲಾಬಸಿಂಗನ ಸ್ವಭಾವದಲ್ಲಿ ಪರಿವರ್ತನವುಂಟಾಯಿತು. ದೇಶದ್ರೋಹಿಯಾಗುವುದಕ್ಕೆ ಶಿಕ್ಷೆಯುಂಟಾಗುವಾಗ ಶುದ್ಧ ರಾಜಪುತ್ರರಸ್ವಭಾವದಲ್ಲಿ ಬದಲಾವಣೆಯಾಗುವದಿಲ್ಲವೆ? ತನ್ನ ಕಾರ್ಯಭಾರಕ್ಕೆ ತನ್ನ ಸ್ವಭಾವದ ಬದಲಾವಣೆಯು ಸಹಾಯವಾಗಲಾರದು. ನಾಶಕರವಾದೀತು." ಎಂದು ತಿಳಿದು, ತನ್ನ ಬದಲಾವಣೆಯನ್ನು ಆತನಿಗೆ ತೋರಿಸದೆ, 'ಸಹಾಯಮಾಡಲು ಸಿದ್ಧನಾಗಿಧೇನೆ ದೇಶದ್ರೋಹಿಯಾಗುವುದು ರಾಜಪುತ್ರರಿಗೆ ನ್ಯೂನತೆ ತರುವದಾದರೂ; ಚಿತ್ತೂರು ಅಸ್ಥಾನದಲ್ಲಾದ ಅಪಮಾನದಿಂದ ಆ ಚಿತ್ತೂರನ್ನು ಧ್ವಂಸಮಾಡಬೇಕಾಗಿಯೇ ಸಂಕಲ್ಪಿಸಿದ್ದೇನೆ' ಎಂದನು ಆ ವ್ಯಕ್ತಿಯು ಅತ್ಯಾನಂದದಿಂದ ದೆಹಲಿಯನ್ನು ನೋಡಲು, ಗುಲಾಬಸಿಂಗನಿಗೆ ಬಲಾತ್ಕರಿಸಿದನು. ಗುಲಾಬಸಿಂಗನು ಸ್ವಲ್ಪಕಾಲ ಯೋಚಿಸಿ, ಅವನೊಡನೆ ಹೋಗಲೊಪ್ಪಿದನು ಇವನು ಹೊರಡಲು ಸಿದ್ಧನಾಗಿರುವಾಗ ಮತ್ತೊಬ್ಬ ವ್ಯಕ್ತಿಯು ಸಮೀಪಕ್ಕೆ ಬಂದನು. ಆಗ ಮೊದಲನೆಯ ವ್ಯಕ್ತಿಯು ಗಾಂಭೀರ್ಯದಿಂದ ವಂದಿಸಿ, ಎರಡನೆಯ ವ್ಯಕ್ತಿಯ ಹತ್ತರ ಹೋದನು. ಇವನು ನಿಜವಾಗಿ ಗೌಡಬಂಗಾಳಿಯೇ! ಇವನ ಸ್ವಭಾವವನ್ನು ನೋಡಿದರೆ, ಹಾಗೆ ಕಾಣುವುದಿಲ್ಲವೆಂದು ಎರಡನೇ ವ್ಯಕ್ತಿಯು ಹೇಳುತ್ತಿರಲು, ಗುಲಾಬಸಿಂಗನು ಈತನಾರಿರಬಹುದೆಂದು ವಿಚಾರಮಾಡತೊಡಗಿದನು.

ಪ್ರಕರಣ 3.

ಹಿಂದೆ ಹೇಳಿದಂತೆ ಎರಡನೆಯ ವ್ಯಕ್ತಿಯು ಬಂದುದನ್ನು ನೋಡಿ ಗುಲಾಬಸಿಂಗನಿಗೆ ಆಶ್ಚರ್ಯವಾಯಿತು. ತನ್ನೊಡನೆ ಸಂಭಾಷಣೆ ಮಾಡಿದ ವ್ಯಕ್ತಿ ಯಾರು? ಈಗ ಬಂದ ಎರಡನೆಯವನಾರು? ಇವನೇಕೆ ಬಂದನು? ಇವನು ಬಂದೊಡನೆ ಮೊದಲನೆಯವನು ಗಾಂಭೀರ್ಯದಿಂದ ಏಕೆ ವಂದಿಸಿದನು? ಈಗ ಬಂದವನೊಡನೆ ಮಾತಾಡಿದ ಮೇಲೆ ಅವನ ಹತ್ತಿರಕ್ಕೆ ಹೋಗಿ ದೈನ್ಯದಿಂದೇಕೆ ನಿಂತನು? ಎರಡನೆಯವನು ದೊಡ್ಡ ಅಧಿಕಾರಿ ಇರಬಹುದು; ಎಂದು ಅನುಮಾನಿಸಿದನು. ಹೀಗೆ ಗುಲಾಬಸಿಂಗನು ಬಡಬಡಿಸಿ, ಇವನು ಯಾರಾದರೂ ಆಗಿರಲಿ. ನಾನು ಮೊದಲನೆಯವನೊಡನೆ ಹೇಳಿದಂತೆಯೇ ಈ ಆಗಂತುಕನಿಗೆ ಹೇಳಿದರೆ, ಇವನೂ ನಿಜವೆಂದು ತಿಳಿಯುವನು. ಇದು ಒಂದು ವಿಷಯದಲ್ಲಿ ಒಳ್ಳೆಯದಾಯಿತು. ಆದ್ದರಿಂದ ಈ ಇಬ್ಬರಿಗೂ ಸ್ವಲ್ಪವೂ ಸಂಶಯವುಂಟಾಗದಂತೆ ಮಾತಾಡಬೇಕು. ಆದರೆ, ನಾನು ಎಚ್ಚರಿಕೆಯಿಂದಿರಬೇಕು. ಇಲ್ಲದಿದ್ದರೆ ನನ್ನ ಸ್ವಭಾವದಿಂದ ನಾನು ಹೇಳುವುದು ಸುಳ್ಳೆಂದು ತೋರುವುದು. ಹಾಗಾದರೆ, ಎಲ್ಲವೂ ವ್ಯರ್ಥವಾಗುವುದು. ಮತ್ತು ನನ್ನಲ್ಲಿವರಿಗೆ ಸಂಶಯವುಂಟಾಗಬಹುದು. ಇರಲಿ. ದೆಹಲೀನಗರವನ್ನು ಸೂಕ್ಷ್ಮದೃಷ್ಟಿಯಿಂದ ನಿರೀಕ್ಷಿಸಲು ದೊಡ್ಡ ಸಮಯ ಸಿಕ್ಕಿದೆ. ಇದು ಸಣ್ಣಪುಟ್ಟ ಲಾಭವಲ್ಲ. ನಾನಿಲ್ಲಿಗೆ ಸಾಧುವೇಷದಿಂದ ಬಂದುದು ಒಳ್ಳೆಯದಾಯಿತು ಇದರಿಂದ ಯವನರು ಚಿತ್ತೂರಿನ ಮೇಲೆ ದಂಡಯಾತ್ರೆಮಾಡುವ ಗುಟ್ಟು ಸಕಾಲಕ್ಕೆ ತಿಳಿಯಿತು.

ಈಗ ಭವಿಷ್ಯವನ್ನು ಮಹಾರಾಣರಿಗೆ ಜಾಗ್ರತೆಯಾಗಿ ತಿಳಿಸಲೇಬೇಕು. ಈ ನೀಚರು ಯಾವಾಗ ಚಿತ್ತೂರಿಗೆ ದಂಡಯಾತ್ರೆ ಹೊರಡುವರೋ ತಿಳಿಯುವುದಿಲ್ಲ. ಆದ್ದರಿಂದ ಇಂದಿನಿಂದ ಜಾಗರೂಕನಾಗಿರುವುದೊಳ್ಳೆಯದು ಆದರೆ, ಇವರ ತಂತ್ರದಂತೆ ನಡೆಯಬೇಕು. ಎಂದೀರೀತಿಯಾಗಿ ಗುಲಾಬಸಿಂಗನು ಮನದಲ್ಲಿ ಯೋಚಿಸುತ್ತಿದ್ದನು. ಅಷ್ಟರಲ್ಲಿಯೇ ಆ ಇಬ್ಬರು ವ್ಯಕ್ತಿಗಳೂ ಅವನ ಹತ್ತಿರಕ್ಕೆ ಬಂದರು. ಎರಡನೆಯ ವ್ಯಕ್ತಿಯು ತನ್ನ ಶರೀರವನ್ನು ಕೃಷ್ಣವಸ್ತ್ರದಿಂದ ಮುಚ್ಚಿಕೊಂಡಿದ್ದನು. ನೋಡಲು ಮನೋಹರವಾಗಿಯೂ, ಅಧಿಕಾರಯುಕ್ತನಾಗಿಯೂ, ಕ್ರೂರನಾಗಿಯೂ, ಇದ್ದನು. ಅವನ ನೇತ್ರದಲ್ಲಿ ಒಂದು ಪ್ರಕಾರವಾದ ಭೀತಿಯನ್ನುಂಟುಮಾಡುವ ಚಿನ್ಹೆಯು ಕಾಣುತ್ತಿತ್ತು. ಈತನನ್ನು ನೋಡಿದರೆ, ಯಾವನೋ ಒಬ್ಬ ಸಕಲೈಶ್ವರ್ಯ ಸಂಪನ್ನನಾದವನಾಗಿರಬೇಕೆಂದು ತೋರುತ್ತಿತ್ತು. ಗುಲಾಬಸಿಂಗನಿಗೆ ಹತ್ತಿರ ಮೊದಲನೆಯ ವ್ಯಕ್ತಿಯು ಬಂದು, ಈ ಸುಲ್ತಾನರು ತನ್ನೊಡನೆ ಸಲುಗೆ ವಿಷಯದಲ್ಲಿ ಕೆಲವು ಮಾತನಾಡುವವರಾಗಿದ್ದಾರೆ.

ಇದಕ್ಕಾಗಿಯೇ ಅವರು ಇಲ್ಲಿಗೆ ದಯಮಾಡಿಸಿರುವರು ಎಂದನು. ಆಗ ಗುಲಾಬಸಿಂಗನು ಆ ಗಾಂತುಕನನ್ನು ಸುಲ್ತಾನನೆಂದು ತಿಳಿದನು. ಆಗ ಇವನು ಪರ್ಣಶಾಲೆಗೆ ಹೋಗಿ ಕುಳಿತುಕೊಳ್ಳುವುದಕ್ಕಾಗಿ ವ್ಯಾಘ್ರಚರ್ಮವನ್ನು ಹಾಸಿ, ಬಾದಷಹನಿಗೆ ನಮ್ರತೆಯಿಂದ ವಂದಿಸಿ, ಕುಳಿತುಕೊಳ್ಳಬೇಕೆಂದು ಬಿನ್ನವಿಸಿದನು. ಇವನ ವಿನಂತಿಯನ್ನು ಮಾನ್ಯಮಾಡಿ, ಬಾದಷಹನು—'ನೀವು ಬಂದು ಐದು ಜಾವ ಕೂಡ ಆಗಲಿಲ್ಲ. ಇಷ್ಟರಲ್ಲೇ ನಮ್ಮ ಗೂಢಚಾರರಧಿಕಾರಿಯಾದ ದಾವುದ್‌ಖಾನನು ನಿಮ್ಮ ಪರಿಚಯದಿಂದ ಯಾವ ಸಂಗತಿಯನ್ನು ದೊರಕಿಸಿದನೋ ಅದನ್ನು ಈಗ ನನಗೆ ಹೇಳಿದನು. ಈ ನನ್ನ ವೇಷವನ್ನು ನೋಡಿ ತಮಗಾಶ್ಚರ್ಯವಾದೀತು; ಆದರೆ ಇಂತಹ ವೇಷದಿಂದ ಈ ನಗರದಲ್ಲಿ ಜನರ ಸ್ಥಿತಿಯನ್ನರಿಯಲು ಆಗಾಗ್ಗೆ ಸಂಚರಿಸುತ್ತಿರುವೆನು. ಈ ದಿನ ಸ್ವಭಾವವಾಗಿ ಸಂಚರಿಸುತ್ತಿರುವಾಗ ಈಕಡೆ ಬಂದೆನು. ಈ ದಾವುದ್‌ಖಾನನು ದೃಗ್ಗೋಚರನಾದನು. ಆದ್ದರಿಂದ ಮುಂದೆ ಬಂದೆನು. ನನಗೆ ತಮ್ಮಂತವರ ಆವಶ್ಯಕತೆಯು ಬಹಳವಾಗಿತ್ತು. ಈ ವರೆಗೆ ನಾನು ದಕ್ಷಿಣಹಿಂದುಸ್ಥಾನ ಗುಜರಾತ್ ಮುಂತಾದ ಪ್ರದೇಶಗಳನ್ನು ಜಯಿಸಿರುವೆನು. ಆದರೆ ನಿಮ್ಮ ಚಿತ್ತೂರಿನ ಲಕ್ಷ್ಮಿಯನ್ನು ಗ್ರಹಿಸುವ ನನ್ನ ಇಷ್ಟ ಈ ವರೆಗೂ ಅಲ್ಲಿನಿಂದ ಪೂರ್ಣಮಾಡಲ್ಪಡಲಿಲ್ಲ. ಒಂದಾವೃತ್ತಿ ನನ್ನ ಚಿಕ್ಕಪ್ಪನೊಡನೆ ಪ್ರಯತ್ನಿಸಿದೆನು; ಆದರೆ ನಿಷ್ಫಲವಾಯಿತು. ಆಗ ಆದ ಪರಾಜಯದ ಶಲ್ಯವು ನನ್ನ ಮನಸ್ಸನ್ನು ಚುಚ್ಚುತ್ತಿರುವುದು. ಆವಾಗ ಒಂದುಬಾರಿ ಚಿತ್ತೂರಿಗೆ ಪ್ರತೀಕಾರ ಮಾಡುವೆನೆಂದು ಮನಸ್ಸು ಮಾಡಿದೆನು. ಆದರೆ, ಚಿತ್ತೂರು, ದುರ್ಗವು ಅತ್ಯಂತ ಭದ್ರವಾಗಿರುವುದರಿಂದ ನಿಜವಾಗಿ ಜಯವಾಗುವುದೆಂದು ಹೇಳಲಾಗುವುದಿಲ್ಲ. ಆದರೆ, ತಮ್ಮಂಥವರ ಸಹಾಯ ದೊರೆತರೆ, ಜಾಗ್ರತೆಯಾಗಿ ಜಯವಾಗುವುದು. ಆ ಚಿತ್ತೂರಿನ ಗುಪ್ತಮಾರ್ಗವು ಅಲ್ಲಿನ ಅನುಭವದಾರರಿಗೆ ತಿಳಿದಿರುವಷ್ಟು ನಮ್ಮಂತಹ ಹೊಸಬರಿಗೆ ತಿಳಿವ ಸಂಭವವಿಲ್ಲ. ಆದ್ದರಿಂದ ಸಹಾಯಾಪೇಕ್ಷೆಯು ನಮಗಿರುವದು. ತಮ್ಮ ಉಪಕಾರವನ್ನೆಂದಿಗೂ ಮರೆಯುವುದಿಲ್ಲ.' ಎಂದು ಬಾದಷಹನು ಹೇಳಿದನು. ಇದನ್ನು ಕೇಳಿ ಗುಲಾಬಸಿಂಗನು—'ಪರಾಕು! ಚಿತ್ತೂರು-ಚಿತ್ತೂರು—ಎಂದರೇನು ದೊಡ್ಡದು? ಆ ದುರ್ಗವನ್ನು ಹಸ್ತಗತಮಾಡಿಕೊಳ್ಳಲು ಬಹಳ ಆಯಾಸವಾಗುವುದೆಂದು ತಿಳಿವುದು ಶುದ್ಧ ಸುಳ್ಳಾಗಿದೆ. ನನಗೆ ಆ ದುರ್ಗದ ಅನುಭವವು ಚೆನ್ನಾಗಿದೆ. ಆದ್ದರಿಂದ ಆ ಕೋಟೆಯನ್ನು ಪ್ರಭುಗಳು ಭರಿತವಾಗಿ ವಶಪಡಿಸಿಕೊಳ್ಳಬಹುದು. ಆದರೆ ಚಿತ್ತೂರಿನ ಮೇಲೆ ಯಾವಾಗ ದಂಡಯಾತ್ರೆಮಾಡುವ ಆಲೋಚನೆಯಿದೆ?' ಎಂದನು. ಬಾದಷಹನು—'ಮೊದಲು ನನಗೆ ಈ ಆಲೋಚನೆ ಇರಲಿಲ್ಲ; ಆದರೆ ನಿನ್ನೆಯೇ ರಾಣಾಭೀಮಸಿಂಗನ ರಮಣಿಯಾದ ಪದ್ಮಿನಿಯ ವರ್ಣನೆಯನ್ನು ಆಸ್ಥಾನದಲ್ಲೊಬ್ಬನಿಂದ ಕೇಳಿ ನನ್ನ ಜೀವವು ತಳಮಳಿಸುವುದು. ನಾನೆಷ್ಟು ದೊಡ್ಡ ಬಾದಷಹನಾದರೂ ನನ್ನ ರಾಣಿವಾಸದಲ್ಲಿಂತಹ ಸ್ತ್ರೀಯೊಬ್ಬಳೂ ಇಲ್ಲ. ಅಂತಹ ರಮಣೀರತ್ನದಲ್ಲಿ ಆ ಕೋತಿಯು ಭೋಗಪಡುತ್ತಿರುವುದು ನನ್ನ ಮನಸ್ಸನ್ನು ಒಂದೇ ವಿಧವಾಗಿ ಕೊರೆಯು

ತ್ತಿರುವುದು. ನಾನು ಇದು ವರೆಗೂ ನೂರಾರು ಜನ ಸ್ತ್ರೀಯರನ್ನು ನೋಡಿದ್ದೇನೆ! ಆದರೆ, ನಿಮ್ಮ ನೀಚವಾದ ಮದನಕಳಾಶಾಸ್ತ್ರದಲ್ಲಿ ಯಾವ ಪದ್ಮಿನೀ ಜಾತಿಯ ಸ್ತ್ರೀಯ ವರ್ಣನೆ ಇರುವುದೋ, ಅದು ನನ್ನಾಸ್ಥಾನದಲ್ಲಿ ನಿನ್ನೆ ತಿಳಿಯಬಂತು ಅದನ್ನು ಕೇಳಿ ನನ್ನ ಸ್ಥಿತಿಯು ಚಮತ್ಕಾರವುಳ್ಳದ್ದಾಗಿರುವುದು. ಯಾವಾಗ ಆ ಸುಂದರಾಂಗಿಯನ್ನು ತರುವೆನೆಂದು ಅತ್ಯಂತ ಯೋಚನೆಯುಳ್ಳವನಾಗಿದೇನೆ.' ಎಂದನು. ಇದನ್ನು ಕೇಳಿ, ಗುಲಾಬಸಿಂಗನಿಗೆ ನಖಶಿಖಪರ್ಯಂತಕ್ಕೂ ಬೆಂಕಿಬಿದ್ದಂತಾಯಿತು. ಈ 'ದುಷ್ಟಕಾಳಸರ್ಪವು ಯಾವಾಗ ನನ್ನೆದುರಿನಿಂದ ಕರಿಯ ಮೋರೆಯನ್ನು ತೆಗೆದುಕೊಂಡು ಹೋಗುವುದೋ?' ಎಂದು ಯೋಚಿಸುತ್ತಿದ್ದನು. ರಾಜಸ್ಥಾನಕ್ಕೆ ಭೂಷಣಪ್ರದಳಾದ ಸಾಧ್ವಿಯ ವಿಷಯದಲ್ಲಿ ಈ ಅಧಮಾಧಮನು ಈ ಪಾಪಬುದ್ಧಿಯನ್ನು ಹಿಡಿದು, ಆ ಯುವತಿಯನ್ನುದ್ದೇಶಿಸಿ ಅಮಂಗಳ ಶಬ್ದವನ್ನು ನನ್ನೆದುರಿನಲ್ಲಿ ಉಚ್ಚರಿಸುವುದೂ, ಮತ್ತು ಅವಳನ್ನು ದೊರಕಿಸಿಕೊಳ್ಳುವ ವಿಷಯದಲ್ಲಿ ನನ್ನನ್ನೇ ಮುಂದೆಮಾಡಿಕೊಂಡು ಹೋಗುವುದಕ್ಕೆ ನನ್ನನ್ನು ಕೇಳುವುದೂ,-ಇದಕ್ಕಿಂತಲೂ ಹೆಚ್ಚಾದ ದುರ್ಭಾಗ್ಯವಾವುದಿದೆ? ಎಂದು ಗುಲಾಬಸಿಂಗನು ಬಹು ದುಃಖಿಸಿದನು. ಆದರೆ, ತನ್ನ ಕೋಪವನ್ನು ಹೊರಗೆಡಹದೆ ನಗುತ್ತಾ, 'ಚಕ್ರವರ್ತಿಯೇ! ಚಿತ್ತೂರನ್ನು ಸ್ವಾಧೀನಮಾಡಿಕೊಂಡ ವಿನಹಾ ಪದ್ಮಿನಿಯು ಹಸ್ತಗತಳಾಗುವುದಂತಿರಲಿ. ದರ್ಶನ ಕೂಡಾ ಅಸಾಧ್ಯವು. ಈಚೆಗೆ ಆ ದುರ್ಗವು ಅಭದ್ರವಾಗಿದ್ದುದರಿಂದ ಅದರ ಕೆಲಸ ಸ್ವಲ್ಪ ಹೆಚ್ಚು ಕಡಿಮೆಯೂ ನಡೆಯಲಾರಂಭವಾಗಿದೆ. ಆದ್ದರಿಂದ ಸ್ವಲ್ಪ ಮಟ್ಟಿಗೆ ಅನುಭವವು ಕಮ್ಮಿಯಾಗಿದೆ ನಾನು ಮೊದಲು ನೋಡಿದ ಗುಪ್ತಮಾರ್ಗವನ್ನು ಪುನಃ ನಿರೀಕ್ಷಿಸಿದಹೊರತು, ಈ ಕಾರ್ಯದಲ್ಲಿ ಪ್ರವೇಶಿಸುವುದು ಯುಕ್ತವಲ್ಲ' ವೆನದನು. ಈ ಮಾತುಕೇಳಿ, ಹಣದಾಶೆಯಿಂದ ಈತನು ಉದಾಸೀನವಾಗಿದ್ದಾನೆಂದೂಹಿಸಿ, 'ಈ ವರ್ಷಾಕಾಲದ ಅನಂತರ ಚಿತ್ತೂರು ಮೇಲೆ ದಂಡಯಾತ್ರೆ ಗೈಯಬೇಕೆಂಬ ವಿಚಾರವಿದೆ. ಆದರೆ, ಪದ್ಮಿನಿಯನ್ನು ಹಸ್ತಗತಮಾಡಿಕೊಳ್ಳಬೇಕೆಂಬುದೇ ಮುಖ್ಯೋದ್ದೇಶವಾಗಿದೆ. ಇದುವಿನಹಾ ಎರಡನೆಯ ಕಾರಣವಾವದೂ ಇಲ್ಲ. ತಾವು ಈ ಕಾರ್ಯದಲ್ಲಿ ಸಹಾಯ ಮಾಡಿದರೆ, ನಾನು ತಮಗೆ ಯೋಗ್ಯವಾದ ಪಾರಿತೋಷಕವನ್ನು ಕೊಡುವೆನು. ಮತ್ತು ಚಿತ್ತೂರನ್ನು ನಿಮ್ಮ ಸ್ವಾಧೀನಮಾಡಿ, ನಿಮ್ಮ ಹೆಸರಿಂದ ಅಲ್ಲಿನ ಅಧಿಕಾರವು ನಡೆಯುವಂತೆ ಮಾಡುವೆನು.' ಎಂದು ಚಕ್ರವರ್ತಿಯು ಹೇಳಿದನು. ಪ್ರಿಯವಾಚಕ ಮಹಾಶಯರೇ! ಲೋಭವೆಂಬುದು ವಿಲಕ್ಷಣವಲ್ಲವೆ? ಈ ಲೋಭದಿಂದಲೇ ಸಮಾಜದ, ದೇಶದ, ರಾಷ್ಟ್ರದ, ನಷ್ಟವು ಉಂಟಾಗಿದೆ. ಈ ಲೋಭದ ಬಲೆಯಲ್ಲಿ ಯಾವನಾದರೂ ಸಿಕ್ಕಿದರೆ, ಅದರಿಂದ ಮುಕ್ತನಾಗುವದು ಕಠಿಣವು! ಈ ಅಸ್ತ್ರವು ಎಷ್ಟು ಜಾಜ್ವಲ್ಯಮಾನವು! ಇದರಸ್ಪರ್ಶದಿಂದಲೇ ದೃಢಾಂಗನ ಶರೀರವೂ ಲಾಘವವಾಗುವದು. ಆದರೆ ಗುಲಾಬಸಿಂಗನಲ್ಲಿ ಇದರಿಂದ ಸ್ವಲ್ಪವೂ ಬದಲಾವಣೆಯುಂಟಾಗಲಿಲ್ಲ. " ಪಾದಷಹರೆ! ನಾನು ಚಿತ್ತೂರನ್ನು ಭಸ್ಮೀಭೂ

ತವಾಗಿ ಮಾಡಲು ಮಾಡಿರುವ ಪ್ರತಿಜ್ಞೆಯನ್ನು ಮಾನ, ಧನ, ಕೀರ್ತಿ, ರಾಜ್ಯಗಳನ್ನು ದೊರಕಿಸಬೇಕೆಂಬಾಶೆಯಿಂದ ಮಾಡಲಿಲ್ಲ. ಈಶಕೃಪೆಯಿಂದಾವಸ್ತುವಿನ ತೆಯೂ ನನಗಿಲ್ಲ. ನಾನು ರಾಣನಿಗೆ ಆದ ಅಪಜಯವನ್ನು ಮಾತ್ರ ನೋಡಲಪೇಕ್ಷಿಸುವೆನು. ಇದೇ ನನ್ನ ಕೊನೆಯಗುರಿಯಾಗಿದೆ. ‘ಈ ಇಷ್ಟನೆರವೇರಿಸಿದಲ್ಲಿ ನಾನು ಆನಂದದಿಂದ ಕಾಶಿಕ್ಷೇತ್ರದಲ್ಲಿದ್ದು ನನ್ನಾಯುಶ್ಶೇಷದ ಕಾಲವನ್ನು ಈಶಾರಾಧನೆಯಲ್ಲಿ ಕಳೆಯುವೆನು’ ಎಂದನು. ಇದನ್ನು ಕೇಳಿ ಸುಲ್ತಾನನಿಗೆ ಹರ್ಷಲತೆಯು ಪ್ರಸರಿಸಿತು. ತನ್ನಿಷ್ಟವು ನಿಶ್ಚಯವಾಗಿ ಫಲಿಸೀತೆಂದು ತಿಳಿದನು. ಆನಂದಸಾಗರದಲ್ಲಿ ಮಗ್ನನಾದನು. ಬಾದಷಹನು ಹರ್ಷಾತಿರೇಕದಿಂದ ಈ ವಿಷಯದಲ್ಲಿ ನಾನು ತಮಗೆ ಬಹು ಕೃತಜ್ಞನಾಗಿದೇನೆಂದನು. ‘ಈಗ ತಾವು ಐಶ್ವರ್ಯಸಂಪನ್ನವಾದ ಈ ನಗರವನ್ನು ಸಂದರ್ಶಿಸಿದ ಬಳಿಕ ಮುಂದಿನಕಾರ್ಯ ಪ್ರಯತ್ನಮಾಡಬೇಕು’ ಎಂದು ಹೇಳಲು, ಗುಲಾಬಸಿಂಗನು–‘ಸ್ವಾಮಿಾ! ಇದು ನನ್ನ ಮೇಲಿನ ತಮ್ಮ ಮಹದನುಗ್ರಹವಾಗಿದೆ’ಎಂದು ನಮ್ರತೆಯಿಂದ ಹೇಳಿದನು. ಸುಲ್ತಾನನು-ದಾವುದ್ ಖಾನನನ್ನು ಕುರಿತು,-‘ನೀನಿವರಿಗೆ ಈ ನಗರದ ದರ್ಶನೀಯಸ್ಥಳಗಳನ್ನು ತೋರಿಸು; ನಾಳೆ ಆಸ್ಥಾನಕ್ಕೆ ಕರೆದುಕೊಂಡುಬಾ; ಬಳಿಕ ಮುಂದಿನಾಲೋಚನೆ ಮಾಡುವ!’ ಎಂದು ಹೇಳಿ, ಪದ್ಮಿನಿಯ ಸುಖಸ್ವಪ್ನದಲ್ಲಿ ತೇಲುತ್ತಾ ತನ್ನರಮನೆಗೆ ಹೊರಟುಹೋದನು.

ಪ್ರಕರಣ 4.

ಭಾಮಿನಿ|| ಸುಲಭವಾಗಿ ಯಮಕರವದನದ |
ಲಲಿತಮಣಿಯನು ತರಲುಬಹುದಾ |
ಜಲಧಿಯೊಳು ಸುರತರುವ ಪಡೆಯಲುಬಹುದು ಮಥನದಲಿ ||
ಮಲಗಿದುರಗನಧರಿಸಿ ದೇಹದಿ |
ಚಲದಿ ಧರಿಸಲುಬಹುದು ಮೂರ್ಖರ |
ಮಲಿನಹೃದಯವ ಹಿಡಿಯಲಾಗದು ಆವಕಾಲದೊಳು ||೧||

ಚಿತ್ತೂರಿನ ಮೇಲೆ ದಂಡೆತ್ತಿ ಹೋಗಬೇಕೆ, ಬೇಡವೆ? ಎಂಬ ವಿಚಾರದಲ್ಲಿ ಅಲ್ಲಾವುದೀನನು ಬಿದ್ದು ಬಹ್ವಂಶಗಳಲ್ಲಿ ನಿರಾಕರಿಸಿಕೊಳ್ಳುತ್ತಿದ್ದನು. ಗುಲಾಬಸಿಂಗನನ್ನು ಕಾಣುವ ಮೊದಲು ಶಂಕಿತನಾಗಿದ್ದವನು ಆಗ ಅವನೊಡನೆ ಮಾತಾಡಿದ ಮೇಲೆ, ಯುದ್ಧಮಾಡಲು ಕೃತಕ ಕಾರಣವು ಉಪಸ್ಥಿತವಾಗಿ, ನಿಶ್ಚಿತವಾಯಿತು. ಅಲ್ಲಾವುದೀನನು ತಾನು ರಾಜನಾದರೂ, ತನ್ನ ದಳಪತಿಗಳನ್ನೂ, ಪ್ರಜೆಗಳನ್ನೂ, ಸೇನೆಯನ್ನೂ, ಕೇಳಿ; ಅನುಮತಿ ಪಡೆಯಬೇಕಾ

ಗಿತ್ತು. ಆದರೆ, ಅಧರ್ಮಾಚರಣೆಗಾಗಿ ಯುದ್ಧಮಾಡಲು, ಯಾರೂ ಒಪ್ಪುವುದಿಲ್ಲವೆಂದು ಅವನು ಬಳಿದಿದ್ದನು. ಆ ಕಾಲದಲ್ಲಿ ಶಿಶೋದಯದ ರಾಜಪುತ್ರರ ಪರಾಕ್ರಮದಿಂದ ಯವನರ ಸೇನೆಗೆ ಪರಾಜಯವಾಗುವುದೆಂದು ತಿಳಿದಿದ್ದನು. ಆಗ ರಾಜಪುತ್ರರ ಶೌರ್ಯವು ಅಬಾಧಿತವಾಗಿ ಸ್ಥಿರವಾಗಿದ್ದಿತು. ಎಲ್ಲ ರಾಜಪುತ್ರಸಂಸ್ಥಾನಗಳಲ್ಲೂ—ಅದರಲ್ಲಿಯೂ ಮೇವಾಡ ಪ್ರಾಂತದಲ್ಲಿ ರಾಜ್ಯಭಾರಮಾಡುವ ಶಿಶೋದಯವಂಶವು ಶ್ರೇಷ್ಠವೆಂದು ತಿಳಿದಿದ್ದರಿಂದ, ರಾಜಪುತ್ರರೆಲ್ಲರೂ ಚಿತ್ತೂರಿಗೆ ಅಧೀನರಾಗಿ; ಸಮಯದಲ್ಲಿ ಸಹಾಯಮಾಡುವುದಕ್ಕೆ ಓಡಿಬರುವರಾಗಿದ್ದರ. ಇದೆಲ್ಲವೂ ರಾಜನೀತಿನಿಪುಣನಾದ ಅಲ್ಲಾವುದೀನನಿಗೆ ತಿಳಿದಿತ್ತು. ದಳಪತಿಗಳ ಮತ್ತು ಪ್ರಜೆಗಳ ಮನಸ್ಸು ಹೇಗೆ ವಶವಾದೀತೆಂಬುದು ಅವನಿಗೆ ಅವಗತವಾಗಿತ್ತು. ಮಾರನೆಯ ದಿನ ತನ್ನ ಮಂತ್ರಿಮಂಡಲಿಯ ಅನುಮತಿಯನ್ನು ತೆಗೆದುಕೊಳ್ಳುವುದಕ್ಕಾಗಿ ಸಭೆ ಸೇರಿಸಿದನು ಈ ಆಸ್ಥಾನವು ರಾಜ ಮಂದಿರದಲ್ಲಿ ಸೇರಿತು. ಆಗ ನಸರತ್ ಖಾನ್, ಆಲಫ್ ಖಾನ್, ಮಾಲಿಕಾಫರ್, ಖುಸ್ರೂ ಇತ್ಯಾದಿ ದೊಡ್ಡ ದೊಡ್ಡ ಸೇನಾಧಿಕಾರಿಗಳು ಸೇರಿದ್ದರು ಈ ಸಭೆಯು ಸಾಯಂಕಾಲ ಸೇರಿತ್ತು. ಪಾದಷಹನು ಬರುವ ಸೂಚನೆಯು ಸೇವಕರಿಂದ ತಿಳಿಯಲು, ಎಲ್ಲ ಸೈನ್ಯಾಧೀಶರೂ ತಮ್ಮ ತಮ್ಮ ಪೀಠಗಳಿಂದೆದ್ದರು. ಪಾದಷಹನು ಬಂದೊಡನೆಯೇ, ಸರ್ವರೂ ತ್ರಿವಾರವಂದಿಸಿ; ಸಿಂಹಾಸನವನ್ನಲಂಕರಿಸಿದ ಮೇಲೆ, ತಮ್ಮ ತಮ್ಮ ಪೀಠಗಳಲ್ಲಿ ಕುಳಿತರು. ಸುಲ್ತಾನನು ಸರ್ವರನ್ನೂ ಕುರಿತು—"ನನ್ನ ರಾಜ್ಯಾಧಾರಸ್ತಂಭದಂತಿರುವ ವೀರಪುರುಷರಿರಾ! ಈ ದಿನ ಒಂದು ಮಹಾಕಾರ್ಯಕ್ಕಾಗಿ ಆಸ್ಥಾನವು ಸೇರಿರುವುದು. ಏನೆಂದರೆ:—ಚಿತ್ತೂರು ರಾಜನು ನಮ್ಮ ಸಾರ್ವಭೌಮಪದವಿಯನ್ನೊಪ್ಪದೆ, ನಮ್ಮನ್ನು ತಿರಸ್ಕರಿಸುವುದೂ, ಮಹಮದನ ಪವಿತ್ರಮತಧರ್ಮವನ್ನು ಅನುಸರಿಸದಿರುವುದೂ, ನಮ್ಮನ್ನು ಮ್ಲೇಂಛರೆಂಬ ಕೆಟ್ಟ ಹೆಸರಿನಿಂದ ಸಂಬೋಧಿಸುವುದೂ, ನಿಮಗೆ ಗೊತ್ತಿದೆಯಷ್ಟೆ! ಇದು ನಮ್ಮ ಪವಿತ್ರಧರ್ಮಕ್ಕೆಷ್ಟು ಅವಮಾನಕರವು! ಈ ಅವಮಾನವನ್ನು ಸಹಿಸುವದು ತಮಗೆ ಯೋಗ್ಯವೆಂದು ತಿಳಿಯುವುದೇ? ಮಹಮದನಿಂದ ಕೊಡಲ್ಪಟ್ಟ ಯಾವ ಶಕ್ತಿಯು ಅವಮಾನವನ್ನು ಸಹಿಸುವದಕ್ಕಾಗಿದೆ? ಇಲ್ಲ, ಇಂತಹ 'ಕಾಫರ' ಜಾತಿಯ ನಾಯಿಯಂತೆ ಬಗುಳುವ ಬಾಯನ್ನು ಬಂಧಿಸಿ; ನಮ್ಮ ಪವಿತ್ರಧರ್ಮದ ಅಭಿವೃದ್ಧಿಗಾಗಿ ಕೊಡಲ್ಪಟ್ಟಿರುವದು. ಆದ್ದರಿಂದ ಚಿತ್ತೂರಿನ ಮೇಲೆ ದಂಡೆತ್ತಿ ಹೋಗಬೇಕೆಂದು ನಾನು ನಿಶ್ಚೈಸಿರುವೆನು. ಮುಳ್ಳುಗಿಡಗಳನ್ನು ಹುಟ್ಟಿದೊಡನೆಯೇ ಕಿತ್ತುಹಾಕುವುದೊಳ್ಳೆಯದು.—ಇಲ್ಲದಿದ್ದರೆ, ಅದು ಕೊನೆಗೆ ಘಾತಕವಾಗುವುದು. ಆದುದರಿಂದ ಹಗೆಗಳನ್ನು ಹೆಚ್ಚಾಗಿ ತಲೆಯನ್ನೆತ್ತಗೊಡಿಸದೆ, ಸಕಾಲದಲ್ಲಿ ಸ್ತಂಭಿಸುವುದು ನಿಜವಾದ ರಾಜನೀತಿಯಾಗಿದೆ. ಈ ಕಾಲದಲ್ಲಿ ಸುಮ್ಮನೆ ಕೂತುಕೊಂಡರೆ, ನಾವು ಅವರಿಗೆ ಹೆದರುವೆನೆಂದು ನಿಸ್ಸಂಶಯವಾಗಿ ತಿಳಿದು; ತಲೆಯನ್ನೆತ್ತುತಿರುವರು. ಆದ ಕಾರಣ, ಈಗ ಚಿತ್ತೂರಿನ ಮೇಲೆ ದಂಡೆತ್ತಿ ಹೋಗುವುದರಿಂದ ನಿಸ್ಸಂಶಯವಾಗಿ ಜಯವೇ ಆಗುವುದು. ಆ ಮೇಲೆ ರಾಣನಾದ ಭೀಮಸಿಂಗನ ಪತ್ನಿ ಪದ್ಮಿನಿ

ಯನ್ನು ತಂದು ನನ್ನ ರಾಣಿವಾಸದಲ್ಲಿಡುವುದಾಗಿ ನಿಶ್ಚಯವಮಾಡಿರುವೆನು. ಹೀಗಾದರೆ, ಮೇವಾಡದ ಅಭಿಮಾನಿಗಳಾದ ರಾಜಪುತ್ರರಿಗೆ ನಾಸಿಕಛೇದನೆಯಾದಂತಾಗುವುದು. ಇವರಿಗೆ ತಮ್ಮ ಸ್ತ್ರೀಯರ ಪಾತಿವ್ರತ್ಯದ ಅಭಿಮಾನವು ಬಹಳವಾಗಿದೆ. ಈ ಅಭಿಮಾನವು ಇಳಿದುಹೋಗುವದು.

ದೇವಗಿರಿ, ಗುಜರಾತ್ ಮುಂತಾದ ಸ್ಥಳಗಳಲ್ಲಿ ನಮಗೆ ದೊಡ್ಡ ವಿಜಯಗಳಾಗಿವೆ, ಇಷ್ಟೇ ಅಲ್ಲ! ನಾನು ಎಲ್ಲರ ಸಹಾಯದಿಂದ ಗುಜರಾತು ರಾಜನಾದ ಕರ್ಣರಾಜನ ಕಾಂತೆ ಕಮಲದೇವಿಯನ್ನು ತಂದು ನನ್ನ ರಾಣೀವಾಸದಲ್ಲಿ ರಾಣಿಯನ್ನಾಗಿ ಮಾಡಿದ್ದೇನೆ; ಹೀಗಿರಲಾಗಿ ಚಿತ್ತೂರಿನಲ್ಲಿ ಅಪಜಯವಾಗುವುದೆಂದು ಹೆದರುವುದೇಕೆ? ಮೇವಾಡದ ರಾಜಪುತ್ರರನ್ನು, ‹ ಹಾ! ಹಾ! ' ಕಾರಗೊಳಿಸಿ, ಪರಾಜಮ ಹೊಂದಿಸುವ! ಹೀಗೆ ಮಾಡುವುದಕ್ಕೆ ತಮ್ಮೆಲ್ಲರ ಅನುಮತಿ ಬೇಕು; ಆದ್ದರಿಂದ ತಮ್ಮ ವಿಚಾರ ತಿಳಿಸಬೇಕು. " ಎಂದು ಪಾದಷಹನು ಹೇಳಿದನು,

ಆಗ ಅಲಫ್‌ಖಾನನು, ಸುಲ್ತಾನನನ್ನು ಕುರಿತು,—« ಸ್ವಾಮಿ! ಚಿತ್ತೂರಿನ ಮೇಲೆ ದಂಡೆತ್ತಲು ತಾವು ತೋರಿಸಿರುವ ಕಾರಣವು ಯೋಗ್ಯವಾಗಿದೆ. ನಮ್ಮ ಮತ್ರಧರ್ಮವನ್ನಭಿವೃದ್ಧಿ ಪಡಿಸುವುದು ನಮ್ಮ ಕರ್ತವ್ಯವು. ಆದರೆ ತಮಗೆ ಗುಜರಾತಿನಲ್ಲಿ ದೊರೆತಂತೆ ಚಿತ್ತೂರಿನಲ್ಲಿ ವಿಜಯವಾಗುವುದು ಸಂಶಯಾಸ್ಪದವಾದದ್ದು. ಗುಜರಾತಿನಲ್ಲಿ ಮಾಧವನೆಂಬ ಮಂತ್ರಿಯು ದೊರೆತು, ಕುಲಾಂಗಾರಕನಾಗಿ ದೇಶದ್ರೋಹ ಸಹಾಯವನ್ನು ಹೇಗೆ ಮಾಡಿದನೋ, ಅದರಂತೆಯೇ ಚಿತ್ತೂರಿನಲ್ಲಿ ಆಗುವುದು ಶಕ್ಯವಲ್ಲ. ಮೇವಾಡದ ರಾಜಪುತ್ರರು ಸಿಂಹದಂತಿದ್ದಾರೆ. ಶರೀರದಲ್ಲಿ ಒಂದು ಬಿಂದುರಕ್ತವಿರುವವರೆಗೂ ಯುದ್ಧಮಾಡುವರು; ಪರಾಜಿತರಾಗಿ ಹಿಂದೆ ಬೀಳರು. ಆದ್ದರಿಂದ ಬಹು ದೂರಾಲೋಚನೆಮಾಡಿ ದಂಡೆತ್ತಿ ಹೋಗಬೇಕು. ಇಲ್ಲದಿದ್ದರೆ ಕೊನೆಗೆ ನಮಗೇ ಅತ್ಯಂತ ಸಂಕಟ ಬಂದೊದಗುವುದು. " ಎಂದು ವಯೋವೃದ್ಧನೂ, ಸ್ವಾಮಿನಿಷ್ಠನೂ, ಆದ ಅವನು ಹೇಳಿದನು.

« ಅಲಫ್‌ಖಾನನೇ! ನೀನು ಹೇಳಿದುದು ನಿಜ. ಸಾಗರಕ್ಕೆ ಸಮಾನವಾದ ನಮ್ಮ ಸೇನೆಯಲ್ಲಿ? ರಾಜಪುತ್ರಹಿಡಿಸೇನೆಯಲ್ಲಿ? ಅವರು ಹೀಗೆ ಎಷ್ಟು ದಿನ ನಮ್ಮ ಮುಂದೆ ನಿಲ್ಲಲು ಶಕ್ತರಾದಾರು? ಹಿಂದೆ ಅಲ್ಲಿ ಅಪಜಯವಾದುದಕ್ಕೆ ಬೇರೆ ಕಾರಣವಿತ್ತು. ಈ ಕಾಲವು ನಮಗೆ ಪೂರ್ಣಾನುಕೂಲವುಳ್ಳದ್ದು. ಮೇವಾಡದಲ್ಲಿ ಮಾಧವನಂತಹ ದೇಶದ್ರೋಹಿಯು ಸಿಕ್ಕುವದು ಕಠಿಣವೆಂಬುದು ನಿಮ್ಮ ತಪ್ಪಾಗಿದೆ. ಏಕೆಂದರೆ :—‹ ಊರಿದ್ದಲ್ಲಿ ಹೊಲೆಗೇರಿ ' ಇದ್ದೇ ಇರುತ್ತದೆ. ಮೇವಾಡದ ಒಬ್ಬ ದೇಶದ್ರೋಹಿಯು ನಮಗನುಕೂಲನಾಗಿದ್ದಾನೆ. ತಿಳಿಯಿತೇ? " ಎಂದು ಪಾದಷಹನು ಅಲಫ್‌ಖಾನನ ವಾದವನ್ನು ಖಂಡಿಸಿ ಸ್ವಪಕ್ಷವನ್ನು ಸಮರ್ಥಿಸಿದನು.

ನುಸರತ್‌ಖಾನ್ :—ಜೀಯಾ! ಅಂತಹ ದೇಶದ್ರೋಹಿ ಯಾರು?

ಸುಲ್ತಾನ್ :—ಯಮುನಾತೀರದಲ್ಲಿ ನಿನ್ನೆ ಬಂದಿಳಿದಿದ್ದ ಸಾಧುವು!

ಮಲಿಕಾಫರ್ :—ಮೇವಾಡದ ದೇಶದ್ರೋಹಿಯು ಆದ ಸಾಧುವೇ?

ಖುಸ್ರು :—ಅಹುದು. ನಿನ್ನೆ ಸನ್ಯಾಸಿಗಳ ವಸ್ತ್ರದಿಂದ ಕೂಡಿ, ಭಯಂಭೇದ ವುಳ್ಳವನಾಗಿ ದೃಷ್ಟಿಗೆ ಬಿದ್ದವನೆ?

ಸುಲ್ತಾನ್:—ಅವನು ಸಾಧುವಲ್ಲ. ಚಿತ್ತೂರು ಆಸ್ಥಾನದ ಒಬ್ಬ ರಾಜ ದಳ ಪತಿಯು; ಇದು ನಿಶ್ಚಯ. ಆದರೆ, ಕ್ಷುಲ್ಲಕಾಪರಾಧಕ್ಕಾಗಿ ಅಲ್ಲಿನ ರಾಣನು ಅವನಿಗೆ ಅವಮಾನ ಮಾಡಿದನಂತೆ! ಇದಕ್ಕಾಗಿ ರಾಣನಿಗೆ ಪ್ರತೀಕಾರ ಮಾಡಲು ಪ್ರತಿಜ್ಞೆ ಮಾಡಿದ್ದಾನೆ. ಚಿತ್ತೂರು ಭಸ್ಮವಾದ್ದನ್ನು ನೋಡಬೇಕೆಂಬುದೇ ಅವನ ಕೊನೆಯ ಇಷ್ಟಾರ್ಥವಾಗಿದೆ. ಆದ್ದರಿಂದಾತನು ನಮಗೆ ಸಹಾಯ ಮಾಡಲಾರನೇ?

ಸರ್ವರೂ :—ನಿಶ್ಚಯವಾಗಿ ಸಹಾಯ ಮಾಡುವರು. ಜೀಯ್ಯಾ! ತಮಗೆ ಈ ಕುಟಿಲ ಸಾಧುವಿನ ವರ್ತಮಾನವು ಹೇಗೆ ತಿಳಿಯಿತು?

ಬಾದಷಹ:—ಗೂಢಚಾರರು ಈ ನಗರದಲ್ಲಿ ಸಂಚರಿಸುವುದು ತಮಗೆ ತಿಳಿದಿದೆಯಷ್ಟೆ! ಇವರಲ್ಲಿ ದಾವುದ್‌ಖಾನನು ಈ ಸಾಧುವನ್ನು ನೋಡಿದನು. ಪೂರ್ಣವಾಗಿ ಅನುಕೂಲ ಮಾಡಿಕೊಂಡನು. ಈಗ ಆ ಸಾಧುವನ್ನು ಮುಂದಿನ ಕಾರ್ಯಾಲೋಚನೆಗಾಗಿ ಚಿತ್ತೂರಿಗೆ ಕಳುಹಿಸಬೇಕಾಗಿದೆ. ಇಷ್ಟರಲ್ಲೇ ದಾವುದ್‌ಖಾನನು ಸಾಧುವಿನೊಡನೆ ಬರಬಹುದು.

ನುಸರತ್‌ಖಾನ್ :—ಜೀಯ್ಯಾ! ಪ್ರಭುಗಳೇ! ತಮ್ಮ ಬುದ್ಧಿ ಚಾತುರ್ಯವು ಸ್ತೋತ್ರಾರ್ಹವಾದುದು. ತಮ್ಮಾಜ್ಞೆಯಂತೆ ಪಾದಸೇವಕನಾದ ನಾನು ಹಗೆಯೊಡನೆ ಕಾದಲು ಹೊರಡುವುದಕ್ಕೆ ಏಕಪಾದದಲ್ಲಿ ಸಿದ್ಧನಾಗಿದ್ದೇನೆ.

ಸುಲ್ತಾನ್ : – ಯಾವಾಗ ದಂಡನ್ನು ಹೊರಡಿಸಬೇಕು?

ಅಲಫ್‌ಖಾನ್ :—ಪ್ರಭುವರ್ಯರೇ! ಈಗ ದಂಡೆತ್ತಿ ಹೋಗುವುದು ಉಪಯೋಗವಿಲ್ಲ. ಮಳೆಗಾಲ ಸಮೀಪಿಸುತ್ತಿದೆ. ಈಗ ದಂಡೆತ್ತಿ ಹೋದರೆ, ಮೇವಾಡದಲ್ಲಿ ಪೂರ್ಣವರ್ಷಾಕಾಲವಾಗಿದೆ. ಶತ್ರುವಿನೊಡನೆ ಕಾದಲು ಪ್ರಯಾಸವು. ಇದಕ್ಕಾಗಿ ವರ್ಷಾಕಾಲವು ಮುಗಿದಮೇಲೆ ತಾವು ವಿಜಯಯಾತ್ರೆಗೆ ಹೊರಡಬಹುದು. ಇದರ ಮೇಲೆ, ತಾವಂದರವರ ಇಷ್ಟ! ನಾನು ನನ್ನ ಅಭಿಪ್ರಾಯವನ್ನು ಹೇಳಿದೆನು. ಅಲಫ್‌ಖಾನನ ಮಾತನ್ನು ಎಲ್ಲರೂ ಅನುಮೋದಿಸಿದರು. ಆದರೆ, ಅಲ್ಲಾವುದೀನನು ಚಿತ್ತೂರಿಗೆ ವಿಜಯಯಾತ್ರೆಗೆ ಹೊರಡಲು ಆತುರವುಳ್ಳವನಾಗಿದ್ದನು. ಆದರೂ, ಸರ್ವರ ಅಭಿಪ್ರಾಯಗಳಿಗೆ ಸಮ್ಮತಿಕೊಡುವ ಭಾಗ ಬಂತು.

ಅಲ್ಲಾವುದೀನ್ :—ತಮ್ಮೆಲ್ಲರ ಅನುಮತಿಯಂತೆ ವರ್ಷಾಕಾಲವು ಕಳೆದ ಬಳಿಕ ದಂಡೆತ್ತಿ ಹೋಗಲು ಅಭ್ಯಂತರವಿಲ್ಲ. ಆದರೆ, ಈಗಿನಿಂದ ಗುಟ್ಟಾಗಿ ಸಿದ್ಧಪಡಿಸಿಕೊಳ್ಳಬೇಕಾಗಿದೆ. ಮಳೆಗಾಲ ಕಳೆದ ಅನಂತರ ಒಂದು ನಿಮಿಷ

ವನ್ನೂ ವ್ಯರ್ಥವಾಗಿ ಕಳೆಯಬಾರದು. ಇದನ್ನೆಲ್ಲರೂ ನೆನಪಿನಲ್ಲಿಡಬೇಕು

ಅಲಫ್‌ಖಾನ್ :—ತಮ್ಮ ಪ್ಪಣೆಯಂತೆ ದಂಡೆತ್ತಿ ಹೋಗುವುದಕ್ಕೆ ಪೂರ್ವವೇ ಎಲ್ಲವನ್ನೂ ಸಿದ್ಧಪಡಿಸಿಕೊಂಡಿರಬೇಕು.

ಇಷ್ಟರಲ್ಲೇ ಸೇವಕನೂ, ಸಾಧುಪುರುಷನೂ ಬಂದಿರುವುದನ್ನು ಅರಿಕೆ ಮಾಡಿದನು. ಒಳಗೆ ಬರಲು ಅಪ್ಪಣೆಯಾದಮೇಲೆ ದಾವುದ್‌ಖಾನನೊಡನೆ ಸಾಧುವು ಆ ಸ್ಥಾನಕ್ಕೆ ಬಂದು, ಪಾದಷಹನಿಗೆ ವಂದಿಸಿದನು ಪಾದಷಹನು ಸಾಧುಪುರುಷನಿಗೆ ಕುಳಿತುಕೊಳ್ಳಬೇಕೆಂದು ಹೇಳಿದನು. ಆಗ ಸುಲ್ತಾನನು ಸಾಧುವನ್ನು ಕುರಿತು, „ಅಯ್ಯಾ! ಈ ಕಾಲದಲ್ಲಿ ನಿಮ್ಮ ಆಗಮನವನ್ನು ನಿರೀಕ್ಷಿಸುತ್ತಿದ್ದೆವು. ನೀವು ನಿನ್ನೆ ನನ್ನೊಡನೆ ಸಂಭಾಷಿಸಿದಂತೆ ಕಾರ್ಯವನ್ನು ಮಾಡಲು ಸಿದ್ಧರಾಗಿರುವಿರಾ?" ಎಂದು ಕೇಳಲು; ಸಾಧುವು—„ಪ್ರಭುಗಳೇ! ಇನ್ನು ವಿಚಾರಿಸುವುದೇನು? ರೋಗಿಗೆ ರುಚಿಸುವ ಔಷಧಿಯನ್ನು ಕೊಡುವ ವೈದ್ಯನು ದೊರೆತರೆ, ಔಷಧವನ್ನು ಸ್ವೀಕರಿಸನೆ? ನಿಜವಾಗಿ ಈಶ್ವರನೇ ತಮ್ಮ ದರ್ಶನವನ್ನು ಕೊಟ್ಟನು. ರಾಣನಿಗೆ ಪ್ರತೀಕಾರಮಾಡಲು ಈ ಸುವರ್ಣದಂತಹ ಸಂಧಿಯು ದೊರೆತಿರುವುದನ್ನು ವ್ಯರ್ಥಮಾಡಲು ನಾನು ಮೂರ್ಖನಲ್ಲ." ಎಂದು ಗುಲಾಬಸಿಂಗನು ಧೈರ್ಯದಿಂದ ಹೇಳಿದನು

ಆಗ ಅಲಫ್‌ಖಾನನು ಗುಲಾಬಸಿಂಗನಿಗೆ, „ಅಯ್ಯಾ! ಚಿತ್ತೂರು ದುರ್ಗದ ಭದ್ರತೆ ಹೇಗಿದೆ? ಇದನ್ನು ನಿಜವಾಗಿ ಹೇಳಬೇಕು." ಎಂದು ಕೇಳಿದನು.

ಗುಲಾಬಸಿಂಗನು ಅಲಫ್‌ಖಾನನನ್ನು ಕುರಿತು:—„ಚೆನ್ನಾಗಿದೆ. ಪ್ರಥಮತಃ ನಾನು ಹೇಳತಕ್ಕದ್ದೇನೆಂದರೆ,—„ಹಿಂದುಸ್ಥಾನದಲ್ಲೆಲ್ಲಾ ಚಿತ್ತೂರು ದುರ್ಗದಂತಹ ಭದ್ರವಾದ ದುರ್ಗವಾವುದೂ ಇಲ್ಲ. ಇದರ ಭದ್ರತೆಯಿಂದ ದುರ್ಗವೆಂದರೆ, ಅದೇ ದುರ್ಗ! ಆ ಚಿತ್ತೂರುದುರ್ಗ!" ಎಂಬಗಾದೆ ಇದೆ. ಆದರೆ, ತಾವು ಎದುರೆದುರಿಗೆ ನಿಂತು ಧರ್ಮ ಯುದ್ಧಮಾಡಿದರೆ, ನಿಮಗೆ ವಿಜಯವುಂಟಾಗದು. ನನಗಾದುರ್ಗದ ಗುಪ್ತಮಾರ್ಗವು ಗೊತ್ತಿದೆ; ಆ ಮಾರ್ಗದಿಂದ ತಮ್ಮ ಸೇನೆಯನ್ನು ತೆಗೆದುಕೊಂಡು ಹೋದೆನೆಂದರೆ ವಿಜಯವೇ ಆಗುವುದು. ನನಗೆ ಈಗ ಒಂದು ಉತ್ತಮಾಶ್ವವು ಬೇಕಾಗಿದೆ." ಎಂದನು.

ಬಳಿಕ ಬಾದಷಹನ ಆಜ್ಞೆಯಂತೆ ಒಂದು ಸುವರ್ಣನಾಣ್ಯಗಳಿಂದ ತುಂಬಿದ ಚೀಲವನ್ನೂ, ಉತ್ತಮಾಶ್ವ ಒಂದನ್ನೂ ತಂದುಕೊಡಲು, ಗುಲಾಬಸಿಂಗನು ಅದರ ಮೇಲೆ ಕುಳಿತು; ಬಾದಷಹನನ್ನು ವಂದಿಸಿ; ಚಿತ್ತೂರಿಗೆ ಪ್ರಯಾಣಮಾಡಿದನು. ಬಳಿಕ ಸಭೆಯು ಮುಕ್ತಾಯವಾಯಿತು. ಆ ಮೇಲೆ ಗುಲಾಬಸಿಂಗನು ತನ್ನ ಪರ್ಣಶಾಲೆಯಲ್ಲಿ ಮುಚ್ಚಿರಿಸಿದ ಗಂಟನ್ನು ತೆಗೆದುಕೊಂಡು ಕೌಪೀನ ಮೊದಲಾದ ಸಾಧುವೇಷವನ್ನು ತ್ಯಜಿಸಿ; ವೀರರಿಗುಚಿತವಾದ ವಸ್ತ್ರಧಾರಣೆಮಾಡಿ; ಶಸ್ತ್ರಾಸ್ತ್ರಗಳನ್ನು ಧರಿಸಿ, ಕುದುರೆಯಮೇಲೆ ಕುಳಿತನು. ಮತ್ತೊಂದುಬಾರಿ ದೆಹಲಿಯ ಕಡೆಗೆ ನೋಡಿ ಕುಚ್ಚತೆಯಿಂದ:—

"ಹೇ, ಪರದಾರಲಂಪಟ! ಪರಧನಾಪಹಾರಕ! ವಿಶ್ವಾಸಘಾತಕಿ ಹಿಂಸೆದಾಯಕನಾದ ಅಲ್ಲಾವುದೀನನೆ! ನಿಜವಾದ ಕ್ಷತ್ರಿಯ ವೀರನಾದ ಶುದ್ಧ ರಾಜಪುತ್ರನು ತನ್ನ ಮಾತೃಭೂಮಿಗೆ ಘಾತಕಿಯಾಗುವನೆಂದು ತಿಳಿದೆಯಾ? ಆಕಾಶವು ಕುಸಿದುಬೀಳಲಿ! ವಸುಂಧರೆಯು ಕಂಪಾಯಮಾನವಾಗಲಿ! ಸಾಗರವು ತನ್ನ ಮರ್ಯಾದೆಯನ್ನು ಉಲ್ಲಂಘಿಸಲಿ! ಸೂರ್ಯಚಂದ್ರರು ವ್ಯತ್ಯಾಸವಾದ ಗತಿಯನ್ನು ಹೊಂದಲಿ! ಮೇರುವು ತಲೆಕೆಳಗಾಗಲಿ! ಇಷ್ಟಾದರೂ ಶುದ್ಧ ಕ್ಷತ್ರಿಯವೀರನು ಎಂದಿಗೂ ಸ್ವದೇಶದ್ರೋಹಿಯಾಗನು. ಕ್ಷತ್ರಿಯಯೋಧನು ಕ್ಷಣಿಕಸುಖಕ್ಕಾಗಿ ತನ್ನ ಸ್ವಾಮಿಗೆ ವಿಶ್ವಾಸಘಾತಮಾಡುವನೆಂದು ತಿಳಿದಿಯಾ? ಇದು ನಿನ್ನ ಕೇವಲ ಭ್ರಮೆಯೇ ಸರಿ! ಸಕಲ ಜಗತ್ತಿನ ರಾಜ್ಯವನ್ನು ಕೊಟ್ಟರೂ, ನಿಜವಾದ ರಾಜಪುತ್ರನೆಂದಿಗೂ, ಸ್ವಾಮಿಭಕ್ತಿಯಿಂದ ಚಲಿಸನು. ಇದನ್ನು ಚೆನ್ನಾಗಿ ತಿಳಿ. ಪಾಪಿಷ್ಠನೇ! ನಿನ್ನ ದುರಿತಘಟವು ಪರಿಪೂರ್ಣವಾಗಿದೆ! ಸರ್ವಜಗದ್ವಂದ್ಯಳಾಗಿ ಸಾಧ್ವಿಯಾದ ಪದ್ಮಿನಿಯ ವಿಷಯದಲ್ಲಿ ಪಾಪಬುದ್ಧಿಯನ್ನು ಯೋಜನೆಮಾಡಿ ಮೃತ್ಯುವಿಗೆ ಪಾತ್ರನಾಗುವಿ! ಅಧಮಾಧಮನೇ! ಈಶ್ವರನು ನಿನಗಾಗಿ ಬೇರೆ ನರಕವನ್ನು ಸೃಜಿಸಬೇಕಾಗಿದೆ! ಪರಸ್ತ್ರೀಯರಲ್ಲಿ ಕಣ್ಣಿಟ್ಟ ರಾವಣ, ವಾಲಿ, ಕೀಚಕ ಮುಂತಾದವರ ಪರಿಣಾಮವೇನಾಯಿತೆಂದು ನಿನಗೆ ತಿಳಿಯದೆಂದು ತೋರುವುದು. ಅದು ನಿನಗೆ ತಿಳಿದಿದ್ದರೂ ತಿಳಿಯದಂತೆಯೇ ಸರಿ! ರಾಜಪುತ್ರರು ನಿನ್ನ ರಕ್ತದಿಂದ ಮೇವಾಡ ಭೂಮಿಗೆ ಸ್ನಾನಮಾಡಿಸುವರು ಪರಸ್ತ್ರೀಯರ ಅಭಿಲಾಷೆಯ ಫಲವು ಹೇಗಿದೆಯೆಂಬುದನ್ನು ಅನುಭವಕ್ಕೆ ತಂದು ಕೊಡುವರು" ಎಂದು ಹೇಳಿಕೊಳ್ಳುತ್ತ ಆ ಕ್ಷತ್ರಿಯವೀರನು ಕುದುರೆಯನ್ನು ವೇಗವಾಗಿ ಓಡಿಸಿ ಕಣ್ಮರೆಯಾದನು.

ಪ್ರಕರಣ 5.

ಶರಷ|| ಹಸಿದಿಹತೋಳವು |
ಪಶುಗಳ ಹಿಂಸಿಸಿ |
ಉಸಿಕನೆ ತಿನ್ನುತಲಿರುವಂತೆ||
ಮುಸಲನು ಅಲ್ಲನು
ಎಸಗುತ ಹಿಂಸೆಯ
ರಸೆಯೊಳು ತಿರುಗುತಲಿರುತಿಹನು||

ನಮ್ಮ ಈ ಕಥೆಯನ್ನು ತಿಳಿಯುವುದಕ್ಕೆ ಅಲ್ಲಾವುದೀನನ ಸಂಕ್ಷೇಪ ಚರಿತ್ರೆಯು ಆವಶ್ಯಕವಾದುದರಿಂದ ಅದನ್ನು ಇಲ್ಲಿ ತಿಳಿಸುವೆವು. ಏನೆಂದರೆ:—ಗುಲಾಮೀ ವಂಶದಲ್ಲಿ ಕೊನೆಯವನಾದ, ದುರಾಚಾರಿಯೂ, ಸ್ವಾಭಿ

ಚಾರಿಯೂ ಇದ್ದ 'ಮುಯಿಜುದ್ದೀನ್ ಕೈಕೋಬಾದ್' ಎಂಬವನನ್ನು ಜಲಾಲುದ್ದೀನ್ ಖಿಲ್ಜಿಯು ಕೊಂದು, ದೆಹಲಿಯ ಸಿಂಹಾಸನವನ್ನು ಹತ್ತಿದ್ದನು. ಇವನು ಅಫ್ಘಾನಿಸ್ಥಾನದಿಂದ ಬಂದನು. ಆಗ ಇವನ ವಯಸ್ಸು ಎಪ್ಪತ್ತು ವರ್ಷಗಳಾಗಿದ್ದವು. ಇವನ ಸ್ವಭಾವವು ಸರಳವಾಗಿಯೂ ಶಾಂತವಾಗಿಯೂ ದಯಾಯುಕ್ತವಾಗಿಯೂ ಇತ್ತು. ಇವನ ಅಣ್ಣನ ಮಗನೇ ಚತುರನಾಯಕನಾದ ಅಲ್ಲಾವುದ್ದೀನನು. ಇವನತಂದೆಯು ಇವನ ಚಿಕ್ಕ ವಯಸ್ಸಿನಲ್ಲಿ ಸಾಯಲು, ಜಲಾಲುದ್ದೀನನು ಇವನನ್ನು ಸಾಕಿ ದೊಡ್ಡ ಯೋಗ್ಯತೆಗೆ ಏರಿಸಿದನು. ಸನ್ 1294 ರಲ್ಲಿ ಅಲ್ಲಾವುದ್ದೀನನು 8000 ಕುದುರೆ ಸವಾರರೊಡನೆ ದಕ್ಷಿಣದೇಶದ ದೇವಗಿರಿ ರಾಜನಮೇಲೆ ದಂಡೆತ್ತಿ ಹೋಗಿ ಅಗಣಿತವಾದ ಧನವನ್ನು ತಂದನು. ಇದೇ ಮುಸಲ್ಮಾನರ ಪ್ರಥಮ ಪ್ರವೇಶವಾಗಿದೆ. ಹೀಗೆ ಸಿಕ್ಕಿದ ಧನಮದದಿಂದ, ರಾಜ್ಯಲೋಭವಶನಾಗಿ, ದೆಹಲಿಗೆ ಬಂದೊಡನೆಯೇ ಚಿಕ್ಕಪ್ಪನಾದ ಜಲಾಲುದ್ದೀನನನ್ನು ವಧಿಸಿದನು. ಅಲ್ಲಾವುದ್ದೀನನ ಈ ಕೃತ್ಯವು ದೂಷಣಾಸ್ಪದವಲ್ಲವೆಂದು ಯಾರು ತಾನೇ ಹೇಳುವರು? ಸಿಂಹಾಸನವನ್ನು ಹತ್ತಿದಮೇಲೆ ಜಲಾಲುದ್ದೀನನ ಇಬ್ಬರು ಮಕ್ಕಳನ್ನು ಕೊಲ್ಲಿಸಿದನು. ಗುಜರಾತಿಗೆ ದಂಡೆತ್ತಿ ಹೋಗಿ ಆ ದೇಶವನ್ನು ದಿಲ್ಲಿಯ ರಾಜ್ಯಕ್ಕೆ ಸೇರಿಸಿದನು. ಈ ಯುದ್ಧದಲ್ಲಿ ಲೂಟಿಯಲ್ಲಿ ಸಿಕ್ಕಿದ ದ್ರವ್ಯಗಳಲ್ಲಿ ಕೆಲವನ್ನು ಕೇಳುವುದಕ್ಕಾಗಿ ಸೇನೆಯವರು ದಂಗೆ ಎದ್ದರು. ಈ ಗಲಭೆಯಲ್ಲಿ ಅನೇಕರು ಮಡಿದರು. ಉಳಿದವರನ್ನು ಅವರ ಮಕ್ಕಳು ಮರಿಗಳೊಡನೆ ಕೊಲ್ಲಿಸಿ, ಅವರ ಹೆಂಡರನ್ನು ಅನ್ಯರ ಸ್ವಾಧೀನಮಾಡಿದನು. ಇವನ ಕಾಲದಲ್ಲಿ ಅನೇಕಸಾರಿ ಮೊಗಲಾಯರು ದಂಡೆತ್ತಿ ಬಂದು ತೊಂದರೆ ಕೊಟ್ಟರೂ, ಅಲ್ಲಾವುದ್ದೀನನಿಂದ ಪರಾಜಯ ಹೊಂದಿ ಹಿಂತಿರುಗಿದರು. ಈ ಮೊಗಲಾಯರ ಕಡೆಯ ಜನರನ್ನು ಆನೆಯ ಕಾಲಿಗೆ ಕಟ್ಟಿ ತುಳಿಸಿದನು. ಹೀಗೆ 9000 ಮೊಗಲಾಯಿ ಸೇನೆಯನ್ನು ಕೊಲ್ಲಿಸಿದನೆಂದು ಹೇಳುವರು. ಮೀರ್ ಮುಹಮ್ಮದ್ ಷಹನೆಂಬ ಅಲ್ಲಾವುದ್ದೀನನ ಸರದಾರನೊಬ್ಬನು ದೆಹಲಿಯಿಂದ ಓಡಿಹೋಗಿ ರಣಥಂಬೋರೆಂಬ ಸಂಸ್ಥಾನದ ಚವ್ಹಾಣರಾಜನನ್ನು ಮರೆಹೊಕ್ಕನು. ಇವನನ್ನು ತನ್ನ ಸ್ವಾಧೀನಪಡಿಸಬೇಕೆಂದು ಅಲ್ಲಾವುದ್ದೀನನು ಕೇಳಲು, ಆ ರಾಜನು ಶರಣಾಗತನನ್ನು ಬಿಡಲು ಇಷ್ಟಪಡಲಿಲ್ಲ. ಇದರಿಂದ ಸಿಟ್ಟಾಗಿ ಸುಲ್ತಾನನು ರಣಥಂಬೋರಿಗೆ ದಂಡೆತ್ತಿ ಹೋದನು. ಆ ರಾಜನು ಪರಾಕ್ರಮದಿಂದ ಕಾದಿ, ಅಪಾರವಾದ ಯವನಸೇನೆಯ ಮುಂದೆ ತನ್ನ ಕೈ ನಡೆಯದೆ ಯುದ್ಧದಲ್ಲಿ ಸಂಹೃತನಾದನು. ಆತನ ರಾಣಿವಾಸದವರು ಹಗೆಗಳಿಗೆ ಸಿಗದೆ ಜೋಹರನ್ನನುಸರಿಸಿ ಅಗ್ನಿಪ್ರವೇಶಮಾಡಿದರು. ಉಳಿದ ರಾಜಪುತ್ರ ಬಾಲಕರನ್ನು ಅಲ್ಲಾವುದ್ದೀನನು ಕೊಲ್ಲಿಸಿದನು. ಮೀರಮುಹಮ್ಮದನೂ ಯುದ್ಧದಲ್ಲಿ ಸತ್ತನು. ಈಗ ಪದ್ಮಿನಿಯ ವರ್ಣನೆಯನ್ನು ಕೇಳಿ ವಿಷಯವಾಸನೆಯಿಂದ ಅಗ್ನಿಯಲ್ಲಿ ಕಾಲನ್ನಿಡಲು ಉದ್ಯುಕ್ತನಾದನು. ಇದನ್ನೆಲ್ಲವನ್ನು ಕೇಳಿದರೆ, ವಾಚಕವೃಂದಕ್ಕೆ ಇವನ ಸ್ವಭಾವವು ವಿದಿತವಾಗದಿರದು. ಅಲ್ಲಾವುದ್ದೀನನು ನಿರಕ್ಷರಕುಕ್ಷಿಯು. ಓದಲು ಬರೆಯಲು ಬಾರದಿದ್ದರೂ ತನ್ನಂತಹ ವಿದ್ವಾಂಸರು ಯಾರೂ ಇಲ್ಲವೆಂದು ತಿಳಿದಿದ್ದನು. ಪ್ರಪಂಚವನ್ನೆಲ್ಲಾ ಜಯಿಸಿ, ಚಕ್ರವರ್ತಿ

ಯೆನ್ನಿಸಿಕೊಳ್ಳಬೇಕೆಂದಿಚ್ಛಿಸುತ್ತಿದ್ದನು. ತಾನೇ ಬೇರೊಂದು ಮತವನ್ನು ಸ್ಥಾಪಿಸುವವನಾಗಿದ್ದನು. ಇವನ ಕಾಲದಲ್ಲಿ ಜನರು ತಮ್ಮ ಮನೆಯಲ್ಲಿ ನಡೆಯುವ ವಿವಾಹ ಮುಂತಾದ ಕಾರ್ಯಗಳಿಗೆ ತಮ್ಮ ಇಷ್ಟಮಿತ್ರ ಬಾಂಧವರಲ್ಲಿ ನಾಲ್ಕೈದು ಜನರನ್ನು ಕರೆಯಬೇಕಾದರೂ ಸುಲ್ತಾನನ ಅಪ್ಪಣೆಪಡೆದು ಕರೆಯಬೇಕಾಗಿತ್ತು. ಕಂದಾಯವನ್ನು ಬಹಳವಾಗಿ ಹೆಚ್ಚಿಸಿದನು. ಅಂದರೆ ಉತ್ಪತ್ತಿಯಲ್ಲರ್ಧವನ್ನು ತೆಗೆದುಕೊಳ್ಳುತ್ತಿದ್ದನು. ನಾಯಿ, ಎತ್ತು, ಮುಂತಾದ ಪ್ರಾಣಿಗಳ ರಕ್ಷಣೆಗೆ ಕೂಡಾ ಜನರಿಗೆ ಒಂದುಕಾಸೂ ಉಳಿಯುತಿರಲಿಲ್ಲ. ಗೊತ್ತಾದ ಸಂಖ್ಯೆಗಿಂತ ಹೆಚ್ಚಾಗಿ ಹಸು, ಎತ್ತು ಕುರಿ ಮುಂತಾದ ಪ್ರಾಣಿಗಳನ್ನಿಟ್ಟುಕೊಳ್ಳಲು ಜನರಿಗಪ್ಪಣೆಯಿರಲಿಲ್ಲ. ಅವನಿಚ್ಛೆಯಂತೆ ನ್ಯಾಯನಿಬಂಧನೆ ಇತ್ತೆಂದು ಹೇಳಿದರೆ ಸಾಕಾಗಿದೆ. ಒಂದುವೇಳೆ ಸೈನ್ಯದ ಖರ್ಚನ್ನು ಕಡಮೆ ಮಾಡಬೇಕೆಂದು ಮನಸ್ಸುಹುಟ್ಟಲು, ಕೂಡಲೆ ಕಡಮೆಮಾಡಿದನು. ಪೂರ್ವದಲ್ಲಿ ಒಂದು ರೂಪಾಯಿಗೆ ದೊರೆಯುತ್ತಿದ್ದುದನ್ನು ಎಂಟಾಣೆಗೆ ಮಾರಬೇಕೆಂದು ಕಾನೂನುಮಾಡಿದನು. ಇವನಲ್ಲಿ 75000 ಸೇನೆ ಇತ್ತು ಈ ಸೈನಿಕರಿಗೆ ಕುದುರೆಗಳನ್ನು ಸರ್ಕಾರದಿಂದಲೇ ಕೊಡಿಸಿದ್ದನು. ವರ್ಷಕ್ಕೆ 234 ಲಕ್ಷ ರೂಪಾಯಿಗಳು ಇವನ ರಾಜ್ಯದಲ್ಲಿ ಉತ್ಪತ್ತಿಯಾಗುತ್ತಿದ್ದವು. ಈತನು 'ಎರಡನೆಯ ಸಿಕಂದರ' ನೆಂಬ ಹೇಳಿಸಿಕೊಳ್ಳುತ್ತ, ಆ ಕಾಲದ ನಾಣ್ಯಗಳಲ್ಲಿ 'ಸಿಕಂದರ್' ಎಂಬದಾಗಿ ಅಚ್ಚುಹಾಕಿಸಿದನು. ನಿಜವಾಗಿ ನೋಡಿದರೆ, ಈತನೊಬ್ಬ ಸಿಂಹಸದೃಶನಾದ ಬಾದಷಹನೆಂದು ಹೇಳಬಹುದು. ಇವನು ಅನೇಕರ ಇನಾಮು, ಜಹಗೀರಿ, ಸ್ವಕೀಯವಾದ ಅನೇಕ ತರಹೆಯ ಜಮೀನುಗಳನ್ನು ಜಪ್ತಿಮಾಡಿಸಿ; ಸರ್ಕಾರಕ್ಕೆ ಸೇರಿಸಿಕೊಂಡನು. ಕೆಲವರಿಗೆ ಅನ್ನಕ್ಕೆ ಕೂಡಾ ಗತಿಯಿಲ್ಲದಂತೆ ಮಾಡಿದನು. ಇಷ್ಟಾದರೂ ಒಬ್ಬನೂ ಈ ವಿಷಯದಲ್ಲೊಂದು ಮಾತನ್ನೂ ಆಡುತ್ತಿರಲಿಲ್ಲ; ಏಕೆಂದರೆ, ಇವನು ವೇಷಾಂತರದಿಂದ ತಿರುಗುತ್ತಿದ್ದನು. ತನಗೆ ವಿರುದ್ಧವಾಗಿ ಮಾತಾಡುತ್ತಿದ್ದರೆ, ಒಂದು ಘಂಟೆಯೊಳಗಾಗಿ ಕಾರಾಗೃಹಕ್ಕೆ ಸೇರಿಸುತ್ತಿದ್ದನು. ಚಿಕ್ಕವರೂ ದೊಡ್ಡವರೂ, ಎಲ್ಲರೂ ಸುಲ್ತಾನನಿಗೆ ಹೆದರಿ ನಡೆಯುತ್ತಿದ್ದರು. ಅಲ್ಲಾವುದೀನನು ಅನಹಿಲಪುರ, ಅವಂತಿ ಮಂದೋರ್ ದೇವಗಿರಿ ಮುಂತಾದ ರಾಜ್ಯಗಳನ್ನು ವಶಪಡಿಸಿಕೊಂಡು, ಸೋಳಂಖಿ, ಪರಿವಾರ, ಯಾದವ, ಟಾಕ ಮುಂತಾದ ಕ್ಷತ್ರಿಯ ಕುಲಗಳನ್ನು ಧ್ವಂಸ ಮಾಡಿದನು. ಜಯಿಸಲ್ಮೀರ್, ಗಾಗ್ರೋನ್, ಬುಂದಿ ಸಂಸ್ಥಾನಗಳನ್ನು ತೆಗೆದುಕೊಂಡು ಕ್ಷತ್ರಿಯರನ್ನು ನಾಶಮಾಡಿದನು. ಆದರೆ ಮಾರ್ವಾಡ, ಕಚ್ ದೇಶಗಳ ರಾಜರು ಮಾತ್ರ ಸಾಧಾರಣಸ್ಥಿತಿಯಲ್ಲಿದ್ದರು. ಆದರೂ ಸುಲ್ತಾನನು ಅವರಹಿಂದೆಯೇ ಇದ್ದನು. ದುಷ್ಟರಿಗೆ, ಅವರ ದುಷ್ಕಾರ್ಯಗಳ ಫಲವು ದೊರೆಯಬೇಕೆಂಬುದು ಸೃಷ್ಟಿಕರ್ತನ ನಿಯಮವಾಗಿದೆಯಾದರೂ, ಈ ನಿಯಮವು ಅಲ್ಲಾವುದೀನನಿಗೆ ಸಧ್ಯಕ್ಕೆ ಸಂಬಂಧಿಸುತ್ತಿರಲಿಲ್ಲ. ಹೃದಯದ್ರಾವಕವಾದ ದುಷ್ಕರ್ಮಗಳನ್ನು ಮಾಡಿದರೂ ಯತ್ಕಿಂಚಿತ್ ಶಿಕ್ಷೆಯೂ ಆಗದಿರುವುದು ಅಗಾಧವಾದ ಈಶ್ವರನ ಲೀಲೆಯನ್ನಬೇಕಲ್ಲವೆ? ಈ ಸುಲ್ತಾನನ ಚರಿತ್ರೆಯನ್ನು ಇಷ್ಟು ತಿಳಿದ ಬಳಿಕ ಶಿಶೂದಯ ಮನೆತನದ ಇತಿ

ಹಾಸದ ಕಡೆಗೆ ಗಮನಕೊಡುವುದು ಅವಶ್ಯವಾಗಿದೆ.

ಅಲ್ಲಾವುದೀನನು ಸಿಂಹಾಸನವನ್ನು ಹತ್ತಿದಾಗಲೇ, ಚಿತ್ತೂರಿನಲ್ಲಿ ಲಕ್ಷ್ಮಣಸಿಂಹನು ರಾಜನಾಗಿದ್ದನು. ಇವನನ್ನು ಲಖಮಸಿಂಗನೆಂತಲೂ ಹೇಳುವರು. ಇವನು ಸನ್ 1275 ರಲ್ಲಿ ರಾಜನಾದನು. ಚಿತ್ತೂರಿನಲ್ಲಿ ಆಗ ಕಲಾಕೌಶಲ್ಯವು ಉತ್ಕೃಷ್ಟ ಸ್ಥಿತಿಯಲ್ಲಿತ್ತು. ಅಲ್ಲಾವುದೀನನು ದುಷ್ಕಾರ್ಯಗಳಲ್ಲಿ ಹೇಗೆ ಪ್ರಸಿದ್ಧನಾಗಿದ್ದನೋ ಲಕ್ಷ್ಮಣಸಿಂಹನು ಹಾಗೆಯೇ ಪ್ರಜಾವಾತ್ಸಲ್ಯ, ಧರ್ಮನಿಷ್ಠೆ, ನೀತಿ, ದಯಾಶೀಲತೆ ಇತ್ಯಾದಿ ಸುಗುಣಗಳಿಂದ ಪ್ರಖ್ಯಾತನಾಗಿದ್ದನು. ಈ ಲಕ್ಷ್ಮಣಸಿಂಹನಿಗೆ ಅತಿ ಬಾಲ್ಯ ವಯಸ್ಸಾದ್ದರಿಂದ ಅವನ ಚಿಕ್ಕಪ್ಪನಾದ ಭೀಮಸಿಂಹನು ರಾಜ್ಯಭಾರವನ್ನು ನೋಡುತ್ತಿದ್ದನು. ಈ ಭೀಮಸಿಂಹನು ರಾಜನಿಷ್ಠತೆ, ರಾಜಕಾರ್ಯ ಕುಶಲತೆ, ಕೃತಜ್ಞತೆಗಳುಳ್ಳ ಶೂರನಾಗಿದ್ದನು. ತನ್ನ ಮಗನ ಹಿತವೇ ತನ್ನದೆಂದು ತಿಳಿದು ತನ್ನ ಪುತ್ರನ ವೈಭವವನ್ನು ಅಭಿವೃದ್ಧಿಪಡಿಸಲು, ಅವಿಶ್ರಾಂತಶ್ರಮ ಪಡುತಿದ್ದನು. ರಾಜ್ಯಭಾರವು ಕೈಸೇರಿದರೆ, ಸ್ವಪ್ರಯೋಜನವನ್ನು ನೋಡಿಕೊಳ್ಳದಂತಹನಾಗಿದ್ದನು. ಇವನು ಸಾಧುವೂ ಅಕುಟಿಲಿಯೂ ಆಗಿ ಇದ್ದನು. ಕಥಾನಾಯಕಳಾದ ಪದ್ಮಿನಿಯು ಭೀಮಸಿಂಹನ ಧರ್ಮಪತ್ನಿಯು. ಈಕೆಯು ಸಿಂಹಳದ್ವೀಪದ ರಾಜನಾದ ಹಮೀರಸಿಂಹನ ಮಗಳು. ಈಕೆಯ ನಾಮವೇ ಈಕೆಯ ಲಾವಣ್ಯವನ್ನು ತಿಳಿಸಲು ಶಕ್ತಿಯುಳ್ಳದಾಗಿದೆ. ಸ್ತ್ರೀಸಮುದಾಯದಲ್ಲೆಲ್ಲಾ ಅತ್ಯಂತ ಸುಂದರಿಯಾಗಿರುವುದರಿಂದ ಪದ್ಮಿನಿ ಎಂಬ ಹೆಸರು ಅನ್ವರ್ಥವಾಗಿ ಶೋಭಿಸುತ್ತಿರುವುದು. ಪದ್ಮಿನೀ ಜಾತಿಯ ಸ್ತ್ರೀವರ್ಗದಲ್ಲಿ ಲಾವಣ್ಯರತ್ನವಾಗಿರುವಳು. ಈಕೆಯ ಬಾಹ್ಯಾಂಗವು ಹೇಗೆ ಪವಿತ್ರವೋ ಹಾಗೆಯೇ ಅಂತರಂಗವೂ ಪವಿತ್ರವಾಗಿದೆ! ಈ ರಮಣೀರತ್ನದ ಕಾಲವು ಕಳೆದು ಅನೇಕ ವರ್ಷಗಳಾದರೂ ಈಗಲೂ ವಂದಿಮಾಗಧಾದಿಗಳು ಆಕೆಯ ಲಾವಣ್ಯ, ನಿಸ್ಸೀಮ ಪತಿವ್ರತಾಧರ್ಮದ ವರ್ಣನೆಯನ್ನು ಉಲ್ಲಾಸಯುಕ್ತವಾಗಿ ವರ್ಣಿಸುತ್ತಿರುವರು. ಈಕೆಯ ಪಾತಿವ್ರತ್ಯವೇ ನಮ್ಮ ಪ್ರಸ್ತುತ ಕಥಾನಕದ ಮುಖ್ಯಾಂಗವಾಗಿದೆ. ಮನುಷ್ಯ ಮಾತ್ರರಿಗೆ ಆಗಾಗ ಒದಗುವ ಸಂಕಟಗಳನ್ನು ತನ್ನಲ್ಲಿರುವ ಪ್ರಶಂಸನೀಯವಾದ ಸದ್ಗುಣದಿಂದ ಸಹಿಸುವುದು ಸಹಜವಾಗಿರುವಂತೆ ಈ ಪದ್ಮಿನಿಯ ಗುಣವೂ ಸಹಜವಾಗಿತ್ತು. 'ಭಾರ್ಯಾರೂಪವತೀಶತ್ರುಃ' ಎಂಬ ಗಾಧೆಯು ಅಕ್ಷರಶಃ ನಿಜವೆಂಬ ದೃಷ್ಟಾಂತವು ದೃಷ್ಟಿಗೋಚರವಾಗುವುದು. ನಮ್ಮ ಕಥೆಯ ಸಂಬಂಧದಲ್ಲಿ ಬಂದಿರುವ ಇಬ್ಬರು ವೀರಪುಂಗವರ ವೃತ್ತವನ್ನು ಇಲ್ಲಿ ಕೊಡುವುದು ಅವಶ್ಯವಾಗಿದೆ, ಅವರು ಯಾರೆಂದರೆ:—ಗೋರಾಸಿಂಹ, ಬಾದಲಸಿಂಹ! ಇವರಬ್ಬರೂ ಪದ್ಮಿನಿಯ ಸಹೋದರರು. ಇವರು ಪದ್ಮಿನಿಗೆ ಶ್ವಶುರ ಗೃಹದಲ್ಲಿ ಆಕೆಯ ಮನಸ್ಸಿಗೆ ಉದ್ವೇಗವಾಗಬಾರದೆಂದು ಚಿತ್ತೂರಿಗೆ ಬಂದಿದ್ದರು. ಇವರು ಮುಂದೆ ನಡೆವ ಯುದ್ಧಗಳಲ್ಲಿ ಶೌರ್ಯೋತ್ಪಾದಕ ಕೃತ್ಯಗಳನ್ನು ಮಾಡುವರೆಂಬುದು ಗೊತ್ತಾಗುವುದು.

ಪ್ರಕರಣ 6.

ಕಂದ || ದೇಶದ ಹಿತವನು ಗೈಯದೆ |
ಆಶೆಯೊಳಿರುತಿರ್ಪನರನಜನ್ಮಂ ವ್ಯರ್ಥಂ ||
ಈಶನಕರುಣೆಯೊಳೆಂದುಂ |
ವಾಸವಗೈಯುತ್ತ ಹಿತವನೆಸಗಲಿವೇಳ್ಕುಂ ||

ವರ್ಷ ಋತುವು ಪ್ರಾರಂಭವಾಗಿ ಎರಡು ತಿಂಗಳಾದುವು. ಮಳೆಗಾಲವಾದ್ದರಿಂದ ಪರ್ವತಶ್ರೇಣಿಯಿಂದ ಯುಕ್ತವಾದ ಮೇವಾಡದ ಭೂಮಿಯು ಅತ್ಯಂತ ರಮಣೀಯವಾಗಿ ಕಾಣುತಿತ್ತು. ಗ್ರೀಷ್ಮರ್ತುವಿನ ಸೂರ್ಯನ ತೀಕ್ಷ್ಣಕಿರಣಗಳಿಂದ ಶುಷ್ಕವಾದ ವೃಕ್ಷಗಳು ಅಮೃತವಾದ ವರ್ಷಾಕಾಲದಿಂದ ನೂತನ ಜೀವನಧಾರಣ ಮಾಡಿದ್ದುವು. ಇದರಿಂದ ಮೇವಾಡರಾಜ್ಯಕ್ಕೆ ಸೃಷ್ಟಿಸೌಂದರ್ಯದ ಕಾಂತಿಯು ಬಂದಿತ್ತು. ಶ್ರಾವಣಮಾಸ ಬಂತು. ಆದ್ದರಿಂದ ಚಿತ್ತೂರು ರಾಣನಾದ ಲಕ್ಷ್ಮಣಸಿಂಹನು ತನ್ನ ಚಿಕ್ಕಪ್ಪನಾದ ಭೀಮಸಿಂಹ, ದೊಡ್ಡದೊಡ್ಡ ಸೇನಾಪತಿಗಳು, ಸ್ತ್ರೀಯರ ಸಮೂಹಗಳಿಂದ ಕೂಡಿ ಶ್ರೀ ಏಕಲಿಂಗೇಶ್ವರನ ಪೂಜೆಗಾಗಿ ದೇವಾಲಯಕ್ಕೆ ಬಂದು ಸೇರಿ ಅಲ್ಲಿ ಗುಡಾರವನ್ನು ಹೊಡೆಯಿಸಿದನು. ಈ ದೇವಾಲಯವು ರಾಜಧಾನಿಯಿಂದ ಹತ್ತು ಹನ್ನೆರಡು ಮೈಲಿಗಳ ದೂರದಲ್ಲಿತ್ತು. ಈ ಸ್ಥಳವನ್ನು 'ನಾಗೇಂದ್ರ' ಎಂದು ಕರೆಯುವರು. ಇದು ರಾಜಪುತ್ರರಿಗೆ ಪರಮ ಪೂಜ್ಯ ದೇವರು. ರಾಣನಿಗೆ ಈ ದೇವರಲ್ಲಿ ಭಕ್ತಿ ಎಷ್ಟರಮಟ್ಟಿಗಿತ್ತೆಂದರೆ:—ಈ ದೇವರೇ ರಾಜ್ಯದ ದಿವಾನನೆಂದು ತಿಳಿದಿದ್ದನು. ಇವನ ಭಕ್ತಿಯು ಅತಿಶಯವಾದದ್ದು. ಈ ದಿನ ಶ್ರಾವಣ ಸೋಮವಾರವಾದ್ದರಿಂದ ರಾಣನು ಭಕ್ತಿಯಿಂದಲೂ ಶುದ್ಧಾಂತಃಕರಣದಿಂದಲೂ ಸ್ವಸಾಮಂತ ನರಪತಿಗಳೊಡನೆ ಪೂಜಿಸಿದನು. ಸ್ತ್ರೀಯರೂ ಪೂಜಿಸಿದರು. ಬಳಿಕ ದೇವಾಲಯದ ಇದಿರು ಮಂಟಪದಲ್ಲಿ ಸ್ವಕೀಯವಾದ ದರ್ಬಾರು ಮಾಡಿದನು; ಮಧ್ಯಭಾಗದಲ್ಲಿ ರಾಣನು ಉಚ್ಚಾಸನದಲ್ಲಿ ಸುಖಾಸೀನನಾದನು.

ಬಲಗಡೆಯಲ್ಲಿ ಭೀಮಸಿಂಹನೂ, ಗೋರಾಸಿಂಹನೂ, ಬಾದಲಸಿಂಹನೂ, ಎಡಗಡೆಯಲ್ಲಿ ಸರ್ವಸಾಮಂತಮಾಂಡಲಿಕಸರದಾರರೂ ತಮ್ಮ ತಮ್ಮ ಆಸನಗಳಲ್ಲಿ ಕುಳಿತರು. ಆಗ ಸಭಿಕರನ್ನು ಕುರಿತು ಗಂಭೀರತೆಯಿಂದ ರಾಣನು ಹೇಳಿದುದೇನೆಂದರೆ—"ಕ್ಷತ್ರಿಯ ಕುಲೋತ್ತಂಸರಾಗಿಯೂ, ರಣಧುರಂಧರರಾಗಿಯೂ ಇರುವ ವೀರರಿರಾ! ಶ್ರೀ ಏಕಲಿಂಗಸ್ವಾಮಿಯ ಕೃಪೆಯಿಂದ ಶಿಶೋದಯವಂಶದ ಮೂಲಪುರುಷನಾದ ಬಾಪ್ಪಾರಾವಳನೆಂಬುವನು ಚಿತ್ತೂರು ರಾಜ್ಯವನ್ನು ಸ್ಥಾಪಿಸಿದನು. ಅವನ ಕೃಪೆಯಿಂದ ಚಿತ್ತೂರಿನಲ್ಲಿ ಕ್ಷತ್ರಿಯರ ಅಧಿಕಾರವು ಈವರೆಗೂ ನಿಂತಿದೆ. ಶ್ರೀ ಏಕಲಿಂಗಸ್ವಾಮಿಯನ್ನು ಶುದ್ಧಮನಸಿನಿಂದ ಉಪಾಸಿಸ

ಬೇಕಾದದ್ದು ನಮಗೆ ಆದ್ಯಕರ್ತವ್ಯವಾಗಿದೆ. ನಿಜವಾಗಿ ಏಕಲಿಂಗಸ್ವಾಮಿಯು ಮೇವಾಡಕ್ಕೆ ಚಂದ್ರನಾಗಿದ್ದಾನೆ; ಕ್ಷತ್ರಿಯ ಕುಲೋದ್ಧಾರಕನಾಗಿದ್ದಾನೆ. ಕ್ಷತ್ರಿಯ ಕುಲದೀಪಕರು ಈ ಸ್ವಾಮಿಯನ್ನು ಸ್ತುತಿಸುವುದು ಧರ್ಮವಾಗಿದೆ. ರಾಜಕವಿಯಾದ ಶಂಕರನೇ! ಸ್ತುತಿಗಾರಂಭಿಸು. 'ಏಕಲಿಂಗಸ್ವಾಮಿಗೆ ಜಯವಾಗಲಿ!' ಎಂದು ಕ್ಷತ್ರಿಯ ವೀರರೆಲ್ಲರೂ ಕೂಗಿದರು. ರಾಜಕವಿಯು ಸತಾರವಾದ್ಯವನ್ನು ಬಾರಿಸುತ್ತಾ ಸ್ತುತಿಗೆ ಪ್ರಾರಂಭಿಸಿದನು.

"ನಾರಾಚ ವೃ|| ಭೂತಸಂಘನಾಯಕಂ ವಿಶಾಲಶಾಂತಿದಾಯಕಂ |
ಶೂಲಟಂಕಪಾಶದಂಡ ಮಣಿಮಾದಿಕಾರಣಂ ||
ದೃಷ್ಟಿಪಾತನಷ್ಟಪಾಪ ಜಾಲಮುಗ್ರಶಾಸನಂ |
ಶೋಕಕೋಪ ಮೋಹತಾಪ ಭೂತನಾಶನಂಭಜೆ ||"

ಎಂದು ಸ್ತುತಿಸಿದಮೇಲೆ 'ಓನ್ನಮಶ್ಶಿವಾಯ' ಎಂದು ಮೂರಾವೃತ್ತಿ ಕೂಗಿದರು. ಅನಂತರ ಮತ್ತೊಬ್ಬ ಕವಿಯು ಗಾನಕ್ಕಾರಂಭಿಸಿದನು:—

ಕಂದ|| "ಜಯಜಯ ಶುಭಕರ ಶಂಕರ |
ಜಯಜಯ ಗಿರಿಜೇಶ ಇಂದುಜಾನನ ದೇವಾ ||
ಜಯಜಯ ನಂದಿಯವಾಹನ |
ಜಯಜಯ ಭಜಕಾಳಿ ಪಾಲ ಸನ್ನುತಶೀಲಾ ||"

ಪುನಃ 'ಓನ್ನಮಶ್ಶಿವಾಯ' ಎಂದು ಮೂರು ಸಾರಿ ಘೋಷಿಸಿದರು. ಸಂಗೀತ ಸಮಾಪ್ತಿಯಾಯಿತು. ಈ ರೀತಿಯಾಗಿ ಸಭಾಮಂಟಪದಲ್ಲಿ ಆನಂದವು ಮೂರ್ತೀಭವಿಸಿತ್ತು! ಇಷ್ಟರಲ್ಲಿ ಪ್ರತೀಹಾರಿಯು ಬಂದು; 'ಮೇವಾಡರಾಜ್ಯದ ಕುಲತಿಲಕರಾದ ಲಕ್ಷ್ಮಣಸಿಂಹರವರಿಗೆ ಜಯವಾಗಲಿ! ಚಿತ್ತೂರಿನಲ್ಲಿ ಪ್ರಸಿದ್ಧ ಶೂರರಾದ ಗುಲಾಬಸಿಂಗರು ಅನೇಕ ದಿನಗಳು ಈ ನಗರವನ್ನು ಬಿಟ್ಟು ಹೋಗಿದ್ದವರು, ಈಗ ಏಕಾಏಕಿ ಈ ಮಂಟಪದ ಹೊರಭಾಗದಲ್ಲಿ ತಮ್ಮ ದರ್ಶನಾಭಿಲಾಷಿಗಳಾಗಿ ನಿಂತಿರುವರು.' ಎಂದು ವಿಜ್ಞಾಪಿಸಿದನು.

"ಗುಲಾಬಸಿಂಹನು ಬಂದನೇ? ಮಜಭಾಪು! ಪೂರ್ಣಾನಂದವಾಯಿತು. ಆದರಪೂರ್ವಕವಾಗಿ ಕರೆದುಕೊಂಡು ಬಾ." ಎಂದು ರಾಣನು ಆಜ್ಞಾಪಿಸಿದನು.

ಆಗ ಪ್ರತಿಹಾರಿಯು ನಮಸ್ಕರಿಸಿ; ಹೊರಗೆ ಹೋಗಿ ಗುಲಾಬಸಿಂಹನನ್ನು ಒಳಕ್ಕೆ ಕಳುಹಿಸಿದನು

ಗುಲಾಬಸಿಂಹನು ಕ್ಷತ್ರಿಯರಿಗುಚಿತವಾದ ಉಡುಪುಗಳನ್ನು ಧರಿಸಿದ್ದನು. ಅವನಿಗೆ ಮೂವತ್ತು ವರ್ಷಗಳು ವಯಸ್ಸಾಗಿತ್ತು. ಇವನು ಸುಂದರನಾದರೂ ಪ್ರವಾಸದಿಂದ ಕೃಶನಾಗಿದ್ದನು. ಆತನು ಒಳಗೆ ಬಂದು ಮಹಾರಾಣನಿಗೂ, ಮುಖ್ಯ ಸೇನಾಪತಿಗಳಿಗೂ ವಂದಿಸಿ ರಾಣನಾಜ್ಞೆಯಂತೆ ಪೀಠದಲ್ಲಿ ಕುಳಿತನು.

ರಾಣನು; ಆತನ ಕುಶಲವಂ ಕೇಳಿ, "ಅಯ್ಯಾ ! ಗುಲಾಬಸಿಂಹನೇ ಅತಿಶಯ ಸಮಾಚಾರಂಗಳೇನು ? ನಿನ್ನ ಸಮಾಚಾರ ತಿಳಿಯದೆ ಬಹು ಚಿಂತೆಯುಂಟಾಗಿತ್ತು" ಎಂದನು.

ಗುಲಾಬಸಿಂಹನು, 'ಮಹಾರಾಣರವರೇ ! ನಾನು ಮಹತ್ತಾದ ವರ್ತಮಾನವನ್ನು ತಂದಿರುವೆನು. ಏಕಾಂತದಲ್ಲಿ ಅರಿಕೆಮಾಡುವೆನು.' ಎಂದನು

ಆಗ ರಾಣನು, 'ಒಳ್ಳೇದು ; ನೀನು ಸ್ನಾನಸಂಧ್ಯಾದಿಗಳನ್ನು ತೀರಿಸಿಕೊಂಡು ಸ್ವಲ್ಪ ವಿಶ್ರಾಂತಿಹೊಂದಿ ಬಳಿಕ ಸುಖವಾಗಿ ಕುಳಿತು ಅದನ್ನು ಹೇಳಬಹುದು' ಎಂದನು.

ಗುಲಾಬಸಿಂಹನು ಅಪ್ಪಣೆಹೊಂದಿ ಸ್ನಾನಸಂಧ್ಯಾದಿಗಳಿಗಾಗಿ ಹೊರಟನು. ಮಹಾರಾಣನು ಸರ್ವರಿಗೂ ಸುಗಂಧಮಾಲ್ಯ ತಾಂಬೂಲಾದಿಗಳನ್ನು ಕೊಡಿಸಿ, ಸಭೆಯನ್ನು ಮುಕ್ತಾಯಮಾಡಿದನು ಭೀಮಸಿಂಹ, ಬಾದಲಸಿಂಹರಿಗೆ ಗುಲಾಬಸಿಂಹನನ್ನು ಕರೆತರುವಂತೆ ಗೂಢಸಂಜ್ಞೆಯಿಂದ ತಿಳಿಸಿ ; ತನ್ನ ಡೇರೆಯ ಕಡೆಗೆ ಹೊರಟುಹೋದನು.

ಪ್ರಕರಣ 7.

ಮಧ್ಯ ರಾತ್ರಿಯ ಸಮಯದಲ್ಲಿ ರಾಣನು-ಭೀಮಸಿಂಹ-ಬಾದಲಸಿಂಹ ಗೋರಾಸಿಂಹನೊಡನೆ ಕುಳಿತು ಗುಲಾಬಸಿಂಹನ ಮಾರ್ಗಪ್ರತೀಕ್ಷೆ ಮಾಡುತ್ತಿದ್ದನು. ಅಷ್ಟರಲ್ಲಿ ಗುಲಾಬಸಿಂಹನು ಬಂದು ; ಆಜ್ಞಾನುಸಾರ ಆಸನದಲ್ಲಿ ಕುಳಿತನು.

ರಾಣ :—ಗುಲಾಬಸಿಂಹನೆ ! ಭೋಜನವಾದಮೇಲೆ ಒಂದು ಘಳಿಗೆಯಾದರೂ ವಿಶ್ರಾಂತಿ ಹೊಂದಿದೆಯಾ ?

ಗುಲಾಬಸಿಂಹ :—ಮಹಾರಾಣರವರೇ ! ಬಹು ದಿನಗಳಿಂದ ತಪ್ಪಿದ ನಮ್ಮ ಪ್ರಿಯ ಜನ್ಮ ಭೂಮಿಯ ದರ್ಶನದಿಂದಲೇ ನನ್ನ ಶ್ರಮ ಪರಿಹಾರವಾಗಿದೆ. ಭೋಜನವಾದಮೇಲೆ ಆನಂದವೆಷ್ಟು ಆಗಿರಬೇಡ ?

ರಾಣ :—ಒಳ್ಳೆಯದು ! ನೀನು ತಂದ ಮಹತ್ತಾದ ಸಮಾಚಾರವಾವುದು ? ಅದನ್ನು ಕೇಳಲು ಉತ್ಸುಕರಾಗಿದ್ದೇವೆ.

ಗುಲಾಬಸಿಂಹ:—ಮಹಾರಾಣರವರೇ ! ನಾನೊಬ್ಬನೇ ಕಾಶೀಯಾತ್ರೆಗೆ ಹೋಗಿದ್ದುದು ತಮಗೆ ವಿದಿತವಿರಬಹುದು. ಹೋಗುವಾಗ ವಿಶೇಷ ಸಮಾಚಾರಗಳಾವವೂ ದೊರಕಲಿಲ್ಲ. ನಾನು ನಿರ್ವಿಘ್ನದಿಂದ ಶ್ರೀ ಕಾಶೀಕ್ಷೇತ್ರಕ್ಕೆ ಹೋಗಿ ಸೇರಿದೆನು. ಗಂಗಾಸ್ನಾನಮಾಡಿ ಶ್ರೀ ವಿಶ್ವೇಶ್ವರ ಸ್ವಾಮಿಯನ್ನು ಸಂದರ್ಶಿಸಿದೆನು. ಬ್ರಾಹ್ಮಣರಿಗೆ ದಾನಗಳನ್ನು ಕೊಟ್ಟು ಭೋಜನ ಮಾಡಿಸಿದೆನು. ಕೆಲವು ದಿನಗಳು ಅಲ್ಲಿದ್ದು ಬಳಿಕ ಲಕ್ನೋ (ಲಕ್ಷ್ಮಣಪುರಿ)

ವನ್ನು ನೋಡಲಾಸೆಯಿಂದ ಅಲ್ಲಿಗೆ ಹೋಗಿ ಗೋಮತೀ ನದಿಯಲ್ಲಿ ಸ್ನಾನಮಾಡಿದೆನು. ಅಲ್ಲಿ ನನ್ನ ಅಶ್ವವು ಯಾವುದೋ ಒಂದು ರೋಗದಿಂದ ಸತ್ತಿತು. ನನ್ನಲ್ಲಿ ಹಣವಿದ್ದರೂ ಬೇರೆ ಕುದುರೆಯನ್ನು ತೆಗೆದುಕೊಳ್ಳದೆ, ಪಾದಚಾರಿಯಾಗಿ ದೆಹಲಿಗೆ ಹೋಗಿ ಸೇರಿದೆನು. ಆದರೆ, ಅಲ್ಲಿಗೆ ಸಾಧುವೇಷದಿಂದ ಹೋದೆನು. ಇದಕ್ಕೆ ಕಾರಣವೇನೆಂದರೆ,—ಅಲ್ಲಿನ ರಾಜನಾದ ಅಲ್ಲಾವುದೀನನು ರಾಜಪುತ್ರರಿಗೆ ಶುದ್ಧ ಶತ್ರುವಾಗಿದ್ದಾನೆ. ಆದ್ದರಿಂದ ನಮಗೆ ಸಂಕಟಪ್ರಾಪ್ತವಾಗಬಹುದೆಂದೂಹಿಸಿದೆನು. ನಾನು ಅಲ್ಲಿಗೆ ಹೋದ ಒಡನೆಯೇ, ಅಲ್ಲಾವುದೀನನ ಗೂಢಚರನೊಬ್ಬನನ್ನು ಕಂಡೆನು. ಅವನಲ್ಲಿ ಸ್ನೇಹಬಳೆಸಿ, ಅನೇಕ ಸಂಗತಿಗಳನ್ನು ತಿಳಿದೆನು. ನಾನು ಮೇವಾಡ ದೇಶದ ರಾಜನಲ್ಲಿ ಒಬ್ಬ ದಳಪತಿಯೆಂದೂ, ಒಂದು ಕ್ಷುಲ್ಲಕಾಪರಾಧಕ್ಕಾಗಿ ರಾಣನು ನನಗೆ ಅವಮಾನಮಾಡಿ ದೇಶತ್ಯಾಗ ಮಾಡಿಸಿದನೆಂದೂ, ಆದ್ದರಿಂದ ರಾಣನಿಗೆ ಪ್ರತೀಕಾರಮಾಡಿದ ವಿನಹಾ ಈ ಸಾಧುವೇಷವನ್ನು ಬಿಡುವುದಿಲ್ಲವೆಂದು ಶಪಥಮಾಡಿರುವೆನೆಂದೂ, ಹೇಳಿ; ನನ್ನಲ್ಲಿ ಪೂರ್ಣ ವಿಶ್ವಾಸವುಂಟಾಗುವಂತೆ ಮಾಡಿಕೊಂಡೆನು. ಅವನಿಗಾ ಸಂಗತಿಯು ನಿಜವಾಗಿ ಕಂಡು ಅದನ್ನು ಪಾದಷಹನಿಗೆ ಹೇಳಿದನು. ಆತನಿಗೂ ನನ್ನಲ್ಲಿ ನಂಬಿಕೆಯುಂಟಾಯಿತು. ಅವನು ನನಗೊಂದು ವಿಷಯವನ್ನು ಹೇಳಿದನು :—ಅವನು ದರ್ಬಾರಿನಲ್ಲಿರುವಾಗ ಪದ್ಮಿನಿ, ಹಸ್ತಿನಿ, ಶಂಖಿನಿ, ಚಿತ್ರಿಣಿ ಎಂಬ ಸ್ತ್ರೀಜಾತಿಗಳ ವರ್ಣನೆಯನ್ನು ಹಿಂದೂ ಸಭಾಸದನೊಬ್ಬನಿಂದ ಕೇಳಿದನು. ಆ ಸಭಿಕನು ದೃಷ್ಟಾಂತಕ್ಕಾಗಿ ಚಿತ್ತೂರಿನಲ್ಲಿ ಭೀಮಸಿಂಹರ ಪತ್ನಿಯಾದ 'ಪದ್ಮಿನಿ' ಎಂಬ ಸ್ತ್ರೀಯು ಪದ್ಮಿನಿಜಾತಿಯವಳಾಗಿರುತ್ತಾಳೆಂದು ಹೇಳಿದುದನ್ನು ಕೇಳಿ, ಅಲ್ಲಾವುದೀನನು ಚಿತ್ತೂರಿಗೆ ದಂಡೆತ್ತಿಬಂದು, ಶ್ರೇಷ್ಠಳಾದ ಪದ್ಮಿನಿಯನ್ನು ಹರಣಮಾಡಿಕೊಂಡು ಹೋಗಬೇಕೆಂದು ದೃಢನಿಶ್ಚಯಮಾಡಿದ್ದಾನೆ! ಇದೆಲ್ಲವನ್ನೂ ಅವನ ಬಾಯಿಯಿಂದಲೇ ಕೇಳಿದೆನು. ಅವನಿಗೆ ನಾನು ಸಹಾಯಮಾಡಿದರೆ, ಚಿತ್ತೂರನ್ನು ನನ್ನ ಸ್ವಾಧೀನಮಾಡುವದಾಗಿಯೂ ಹೇಳಿದನು. ಆಗ ನನಗೆ ರಾಜ್ಯ, ಧನಗಳ ಆಶೆಯಿಲ್ಲವೆಂದೂ, ರಾಣನಿಗೆ ಪ್ರತಿಯಾಗಿ ಅಪಕಾರ ಮಾಡಬೇಕಾದುದೊಂದೇ ನನ್ನಾಶೆಯೆಂದೂ, ಅವನಿಗೆ ಹೇಳಿದೆನು. ಈಗ ಚಿತ್ತೂರು ಕೋಟೆಯಲ್ಲಿ ಕೆಲವು ಭಾಗಗಳು ಕಾಮಗಾರಿಯಲ್ಲಿ ಹೆಚ್ಚು ಕಡಿಮೆ ಮಾಡಿಸಿದ್ದಾರೆ. ಅದನ್ನು ನಾನು ನೋಡಿ ಬರುವೆನೆಂದು ಹೇಳಿ, ಅವನಪ್ಪಣೆಯನ್ನು ಕೇಳಿದೆನು, ಅವನು ಚಿನ್ನದ ಮೊಹರುಗಳ ಚೀಲವನ್ನೂ, ಒಂದು ಕುದುರೆಯನ್ನೂ ಕೊಟ್ಟು, ಸಂಗತಿಗಳನ್ನು ತಿಳಿದುಕೊಂಡು ಜಾಗ್ರತೆ ಬರಬೇಕೆಂದು ಹೇಳಿಕಳುಹಿಸಿದನು. ಅವನ ಮಾತನ್ನು ಅಂಗೀಕರಿಸಿದೆನು. ಆ ದಿಹಲಿ ನಗರವನ್ನು ಸೂಕ್ಷ್ಮದೃಷ್ಟಿಯಿಂದ ಚೆನ್ನಾಗಿ ನೋಡಿದೆನು. ಹಿಂದೆ ಇದ್ದ ಪೃಥ್ವೀರಾಜನ 'ರಾಯಪಿತೋರೆ' ಎಂ

ಬರಮನೆಯನ್ನು ನೋಡಿದಾಗ ನನಗೆ ರೋಮಾಂಚವಾಯಿತು! ಆರ್ಯರ ವೈಭವವು ನಾಶವಾದದ್ದು ನನ್ನ ಸ್ಮೃತಿಪಥಕ್ಕೆ ಬಂತು. ದೆಹಲಿಯಿಂದ ಹೊರಟವನು ಮಾರ್ಗದಲ್ಲಿ ಜ್ವರದಿಂದ ಪೀಡಿತನಾಗಿ ಒಂದು ಗ್ರಾಮ ದಲ್ಲಿ ಕೆಲವು ದಿನಗಳಿದ್ದು ಇಲ್ಲಿಗೆ ಈಗ ಬಂದೆನು. ಆದ್ದರಿಂದ ಸ್ವಲ್ಪ ಸಾವಕಾಶವಾಯಿತು. ಅಲ್ಲಾವುದೀನನು ಚಿತ್ತೂರು ಮೇಲೆ ದಂಡಯಾ ತ್ರೆಗೆ ಬರುವ ಗುಟ್ಟಾದ ಸಂಗತಿಯನ್ನು ತ್ವರ್ಯದಿಂದ ವಿಜ್ಞಾಪಿಸಲು ತಪ್ಪಿದೆನು. ಆದರೆ,ಯುದ್ಧಕ್ಕೆ ಸಿದ್ಧಮಾಡಿಕೊಳ್ಳ ು ಬಹು ದಿನಗಳ ಅವ ಧಿಯಿದೆ. ನಾನು ಶ್ರೀ ಏಕಲಿಂಗಸ್ವಾಮಿಯ ದಯೆಯಿಂದ ಈ ಸಂಗತಿ ಯನ್ನು ಸನ್ನಿಧಾನದಲ್ಲಿ ತಿಳಿಸಿದುದರಿಂದ ಸಂತೋಷವಾಯಿತು; ಈಗಿನಿಂ ದ ಸಿದ್ಧಪಡಿಸಿಕೊಳ್ಳುವುದೊಳ್ಳೆಯದು. ಇಷ್ಟುದಿನ ತಾವು ವಿಶ್ರಾಂತಿ ಹೊಂದಿ ಸಮಾಧಾನದಿಂದ್ದಿರಿ. ಈಗ ಅದಕ್ಕೆ ಭಂಗವುಂಟಾಗುವ ಕಾಲ ಒದಗಿದೆ; ಕ್ಷತ್ರಿಯರ ದೇಹದ ರಕ್ತಶಕ್ತಿಯನ್ನು ತೋರಿಸುವದಕ್ಕೆ ಸಮೀ ಚೀನ ಸಮಯವು ಒದಗಿದೆ; ಈಗ ತಾವು ಶೌರ್ಯದಿಂದ ಪ್ರಪಂಚದ ನೇತ್ರವನ್ನು ಪ್ರಕಾಶಪಡಿಸಬೇಕು. ನಮ್ಮ ಮಾತೃಶ್ರೀಯವರಾದ ಪದ್ಮಿನಿ ರಾಣಿಯವರ ವಿಷಯದಲ್ಲಿ ಯಾವ ನರಾಧಮನ ಪಾಪಮಯದೃಷ್ಟಿಯು ಬಿದ್ದಿದೆಯೋ, ಆತನ ನೇತ್ರಕ್ಕೆ ಕಾದಕಬ್ಬಿಣದ ಸಲಾಕೆಯನ್ನು ಚುಚ್ಚಿ ಅಂಧನನ್ನಾಗಿ ಮಾಡಬೇಕು. ಸ್ವಾಮಿ! ಯಾವ ಸಮಯದಲ್ಲಿ ನಾನು ದೆಹಲಿಯಿಂದ ಹೊರಟೆನೋ ಆಗ, "ಪ್ರಾಣಹೋದರೂ ಚಿಂತೆಯಿಲ್ಲ; ಪವಿತ್ರವಾದ ಚಿತ್ತೂರನ್ನೂ, ಮಾತೃಶ್ರೀ ಪದ್ಮಿನಿಯನ್ನೂ ರಕ್ಷಿಸುವೆನು. ಯುದ್ಧರಂಗದಲ್ಲಿ ಸಿಂಹದಂತೆ ಪರಾಕ್ರಮವನ್ನು ತೋರಿಸಿ, ಶಿಖಾನಷ್ಟ ರನ್ನು ಸಂಹರಿಸುವೆನು." ಎಂದು ಪ್ರತಿಜ್ಞೆಮಾಡಿರುವೆನು.

ಎಂದು ಹೇಳುತ್ತಿದ್ದ ಗುಲಾಬಸಿಂಹನ ನೇತ್ರಗಳು ಕೆಂಡದಂತೆ ಕೆಂಪಾದವು. ಬೆಂಕಿಯ ಕಿಡಿಗಳು ಕೆಳಗೆ ಬೀಳುವುವೋ, ಎಂಬಂತೆ ಕಾಣುತ್ತಿತ್ತು. ಈ ಮಾತು ಗಳನ್ನು ಕೇಳಿ ಸರ್ವರೂ ಸ್ತಬ್ಧರಾದರು. ಸರ್ವರಿಗೂ ಕ್ರೋಧವುಂಟಾಗಿರುವಂತೆ ತೋರಿತು.

ಭೀಮಸಿಂಗನು ಸಿಂಹದಂತೆ ಘರ್ಜಿಸಿ ಹೇಳಿದುದೇನೆಂದರೆ:—ನಮಗಾದ ಅವನತಿಯು ಗುಜರಾತಿನಲ್ಲಿ ಗೃಹಭೇದಿಯಾಗಿದ್ದ ಕುಲಾಂಗಾರನಾದ ರಾಜಪು ತ್ರಪ್ರಧಾನನ ದೋಷವಾಗಿದೆ. ಯಾವ ಇಂದ್ರಪ್ರಸ್ಥದಲ್ಲಿ ಪಾಂಡವರೂ, ಪೃಥ್ವಿ ರಾಜನೂ ವಾಸಿಸುತ್ತಿದ್ದರೋ, ಅಲ್ಲಿ ಈಗ ಕಾಲದ ವಕ್ರಗತಿಯಿಂದ ಮ್ಲೇಂಛ ರೂಪಿಗಳಾದ ನರಿಗಳ ಕರ್ಣ ಕಠೋರಧ್ವನಿ ಕೇಳಿ ಬರುತ್ತಿದೆ. ಆ ನರಿಯೇ ಈಗ ಸಿಂಹಕ್ಕಾಹಾರವಾಗಿ ಒಲ್ಲಂತೆ ಶಪಥಮಾಡಿದೆ ನಂದನ ವನದಂತಹ ಆರ್ಯ ಭೂಮಿಯು ಈಗ ಸ್ಮಶಾನದಂತೆ ಕಾಣುತಿದೆ. ಯಾವ ವೀರಭೂಮಿಯು ಅನೇಕ ವೀರರತ್ನಗಳನ್ನು ಪ್ರಸವಿಸಿತೋ, ಆ ಭೂಮಿಯು ಈಗ ಬಂಜೆಯಾಗಿದೆ. ಆರ್ಯಾ ವರ್ತದ ಯೋಗ್ಯತೆ, ಸಭ್ಯತೆ, ವೀರ್ಯ, ಸತ್ಯ, ದೃಢ, ಉದಾರಗಳೂ, ಧನ, ಶಕ್ತಿ,

ಉದ್ಯೋಗ, ವಿದ್ಯೆಗಳೂ ಲೋಪವಾಗುತ್ತಿವೆ. ಎಲೈ ದೇಶದ್ರೋಹಿ ಜಯಚಂದನೇ! ಷಂಡನೇ! ನೀನು ಹುಟ್ಟಿದಿದರಿಂದ, ಭಾರತಭೂಮಿಗೆ ನಷ್ಟವಾಗುತ್ತಿರ್ತೇ? ನೀನು ಹುಟ್ಟಿದೊಡನೆಯೇ ತಟ್ಟನೇಕೆ ಸಾಯಲಿಲ್ಲ? ಕುಲಕಲಂಕ! ಯವನರಿಗೆ ಸಹಾಯ ಮಾಡುವುದಕ್ಕೆ ಪ್ರತಿಯಾಗಿ ಆತ್ಮಹತ್ಯಮಾಡಿಕೊಂಡೇಕೆ ಸಾಯಲಿಲ್ಲ? ಮಹಾಪಾಪಿಷ್ಠ! ನಿನ್ನ ದುಷ್ಕರ್ಮ ಫಲವನ್ನು ನಾವು ಅನುಭವಿಸಬೇಕಾಗಿದೆ. ಪರಮೇಶ್ವರಾ! ಇಂಥಾ ದುಷ್ಟರಿಗೇಕೆ ಶಿಕ್ಷೆ ಮಾಡುವುದಿಲ್ಲ? ದೇವೇಂದ್ರನೇ, ಇಂತಹ ದುಷ್ಟರನ್ನೇಕೆ ವಜ್ರಾಯುಧದಿಂದ ಪ್ರಹರಿಸಲಿಲ್ಲ? ಗಗನವು ಏಕೆ ಸಿಡಿದು ಬೀಳಲಿಲ್ಲ? ಅಗ್ನಿಯೇಕೆ ಇಂತಹ ಕುಲಾಂಗಾರನನ್ನು ಭಸ್ಮಮಾಡಲಿಲ್ಲ? ಆಹಾ! ಇದು ಹೇಗಾದೀತು? ಅದೃಷ್ಟವಿರುವಾಗ, ಹೇಗೆ ನಡೆವುದು? ಚಿಂತೆಯಿಲ್ಲ. ಪ್ರಾಣವು ಹೋಗಲಿ, ಅಥವಾ ಇರಲಿ; ಯವನನ ಮುಂದೆ ನಾನೆಂದಿಗೂ ತಲೆಯನ್ನು ತಗ್ಗಿಸುವುದಿಲ್ಲ. ಜಯವುಂಟಾದರೆ ಕೀರ್ತಿಯೂ, ಮೃತ್ಯುವುಂಟಾದರೆ ಸ್ವರ್ಗವೂ ನಿಶ್ಚಿತವಾಗಿಯೇ ಇದೆ!"

ಲಕ್ಷ್ಮಣಸಿಂಹ:—ಪಿತೃವ್ಯನೇ! ಏಕೆ ನಿರಾಶೆಪಡುವೆ? ರಾಜಪುತ್ರರ ಹಣೆಯಲ್ಲಿ ಯುದ್ಧವೇ ಬರೆದಿದೆ. ಏನಾಗಬೇಕೆಂದಿದೆಯೋ ಅದಾಗುವದು. ಈಶ್ವರೇಚ್ಛೆಯಿದ್ದಂತಾಗುವದು. ನಾವು ಮನುಷ್ಯರಾದುದರಿಂದ ಅವನ ಇಚ್ಛೆಯ ಮುಂದೇನು ಮಾಡಲಾದೀತು? ದೊಡ್ಡ ಆಪತ್ತು ಬಂದರೂ, ಮೇವಾಡದ ರಾಣನೆಂದಿಗೂ ತನ್ನ ಪುತ್ರನಾದ ಶಿಶೋದಯ ಮನೆತನಕ್ಕೆ ಕಲಂಕವನ್ನುಂಟುಮಾಡುವುದಿಲ್ಲ. ನಿಷ್ಕಳಂಕ ಕೀರ್ತಿಯಿಂದ ರಣಯಜ್ಞದಲ್ಲಿ ಸ್ವಪ್ರಾಣಾಹುತಿಯನ್ನು ಕೊಡುವುದು ನಿಜವಾದ ಕ್ಷತ್ರಿಯ ಧರ್ಮವಾಗಿದೆ. "ಯತೋಧರ್ಮಃ ಸ್ತತೋಜಯಃ" ಎಂಬ ತತ್ವವನ್ನೆಂದಿಗೂ ಮರೆಯದಿರುವುದು ಶ್ರೇಯಸ್ಕರವಾದುದು. ನನ್ನ ವಿಚಾರವೇನೆಂದರೆ:— 'ನಾವು ಒಂದು ಕ್ಷಣವೂ ಸಾವಕಾಶಮಾಡದೆ, ಈಗಿನಿಂದ ಯುದ್ಧಕ್ಕೆ ಸಿದ್ಧಪಡಿಸಿಕೊಳ್ಳಬೇಕು. ಶ್ರೀ ಏಕಲಿಂಗಸ್ವಾಮಿಯ ಕೃಪೆಯಿಂದ ನಮಗೆ ವಿಜಯವಾದೀತು.'

ಗೋರಸಿಂಹ:—ನನಗೂ ಹೀಗೆಯೇ ತಿಳಿಯುವುದು.

ಬಾದಲಸಿಂಹ:—ನಾನೂ ಇಷ್ಟೇ ಹೇಳುತ್ತೇನೆ.

ಗುಲಾಬಸಿಂಹ:—ನನಗೂ ಈ ಮಾತೇ ಒಪ್ಪಿಗೆಯಾಗಿದೆ.

ಭೀಮಸಿಂಹ:—ನಿಮ್ಮೆಲ್ಲರ ಇಚ್ಛೆಯೇ ನನ್ನದು.

ಲಕ್ಷ್ಮಣಸಿಂಹ:—ಪಿತೃವ್ಯನೇ! ಹೀಗೇಕೆ ಹೇಳುವಿ? ಇದು ತಮ್ಮ ಇಚ್ಛೆಯಾಗಿದೆ. ನಾನು ತಮ್ಮಾಜ್ಞಾಧಾರಕನಾದ ಬಾಲಕನಾಗಿದ್ದೇನೆ.

ಭೀಮಸಿಂಹ:—ಮಹಾರಾಣನೇ, ಮತ್ತು ಅನ್ಯಬಾಂಧವರೇ! ಪ್ರೌಢಾವಸ್ಥೆಯ ದೆಸೆಯಿಂದ ನನ್ನ ತನುಶಕ್ತಿಯು ಲೋಪವಾಗಿರಬಹುದೆಂದು ನಾನು ನಿರಾಶೆಯುಳ್ಳುದಾಗ್ರವನ್ನು ತೆಗೆಯಲಿಲ್ಲ. ನನ್ನ ಬಾಹುಶಕ್ತಿಯು ಸ್ಥಿರವಾಗಿದೆ.

ನಾನೊಬ್ಬನೇ ಸಾವಿರ ಯವನರನ್ನು ರಣರಂಗದಲ್ಲಿ ಕೆಡಹುವೆನು. ತಿಳಿಯಿರಿ, ಆದರೆ ನನ್ನ ಸ್ತ್ರೀ, ಮೇವಾಡದೇಶ, ಆಪ್ತಬಾಂಧವರು, ಇವರ ಮೇಲೆ ಭಯಂಕರವಾದ ಸಂಕಟ ಬಂದಿರುವುದಕ್ಕಾಗಿ ಚಿಂತಿಸುವೆನು.

ಮಹಾರಾಣಾ :– ಚಿತ್ರವ್ಯನರಾ! ನನ್ನನ್ನು ಬಾಲ್ಯದಿಂದ ಲಾಲಿಸಿಪಾಲಿಸಿ ದೊಡ್ಡವನನ್ನಾಗಿ ಮಾಡಿದಿರಿ. ಈ ಉಪಕಾರಕ್ಕೆ ಯಾವಾಗಲೂ ಪ್ರತ್ಯುಪಕಾರ ಮಾಡಲಾರೆ! ಬೇಗ ಬರುವ ಶುಭಸಮಯದಲ್ಲಿ ಈ ಋಣದಿಂದ ಸ್ವಲ್ಪವಾದರೂ ಮುಕ್ತನಾಗುವ ಸಂಧಿಯು ಈಶಕೃಪೆಯಿಂದ ಬಂದಿದೆ. ಭೀಮಸಿಂಗನ ನೇತ್ರದಿಂದ ಪ್ರೇಮಾಶ್ರುವು ಸುರಿಯತೊಡಗಿತು. ವಾತ್ಸಲ್ಯದಿಂದ ಮಹಾರಾಣನನ್ನಾಲಿಂಗಿಸಿ, ಬಳಿಕ ಬಹಳ ರಾತ್ರಿಯಾದ್ದರಿಂದ ಸರ್ವರೂ ವಿಶ್ರಾಂತಿಗಾಗಿ ತಮ್ಮ ಸ್ಥಳಗಳಿಗೆ ಹೊರಟುಹೋದರು.

ಪ್ರಕರಣ 8

ಕಂದ|| ಜಲಜದಿ ನಳಿನುಖವೊಂದುತೆ |
ಮಲೆಯೊತಲಿರುತಿರ್ಕೆ ಮರರೆ ನಿರುತಂ ನಲವಿಂ ||
ಜಲಜಕೆ ಕೊಮೇ ನೆಲೆಯುಲೇ |
ಜಲಜಾಳಿಗೆ ಗತಿಯದಾರು ನಳಿನದಳಾಕ್ಷೀ || ೧

ಹಿಂದಣ ಪ್ರಕರಣದಲ್ಲಿ ಹೇಳಿದಂತೆ ಗುಲಾಬಸಿಂಗನು ಪುನಃ ತನ್ನ ಮನೆಗೆ ಬಂದನು. ಅಲ್ಲಿ ರಮಣಿಯೊಬ್ಬಳು ಅಲಂಕೃತವಾದ ಕೊಠಡಿಯಲ್ಲಿ ಯಾರ ಆಗಮನವನ್ನೋ ನಿರೀಕ್ಷಿಸುತ್ತಾ ಉತ್ಸಾಹದಿಂದ ಎಚ್ಚರವುಳ್ಳವಳಾಗಿ ಕುಳಿತಿದ್ದಳು. ಅವಳ ಸೌಂದರ್ಯವು ಅವರ್ಣನೀಯ! ಅವಳ ಮನೋಹರವಾದ ಮುಖ ಕಮಲದಲ್ಲಿ ಆಗಾಗ್ಗೆ ಚಿಂತೆಯ ಚಿಹ್ನೆಯು ಗೋಚರಿಸುತ್ತಿತ್ತು; ಇದಕ್ಕೇನುಕಾರಣವಿರಬಹುದು? ಕಾಮದೇವನು ಅಧಿಕಾರವನ್ನು ತೋರಿಸುತ್ತಿರಬಹುದೇ? ಹಾಗೂ ಇರಬಹುದು. ಎಲೆ, ಕಾಮದೇವನೇ! ಇಂತಹ ಅಬಲೆಯಲ್ಲಿ ನಿನ್ನಧಿಕಾರವನ್ನು ತೋರಿಸಿ, ನಿನ್ನ ಬಾಣವರ್ಷವನ್ನು ಕರೆಯುವ ಮೊದಲೆ ಸ್ವಲ್ಪ ವಿಚಾರಮಾಡು; ಏಕೆಂದರೆ:—ಈ ಅಬಲಾಮಣಿಯು ನಿನ್ನ ಅಸಹ್ಯವಾದ ಆಘಾತವನ್ನು ಸಹಿಸಲು ಶಕ್ತಳಲ್ಲ. ಸ್ವಲ್ಪ ಹೊತ್ತಿನಮೇಲೆ ಯಾರ ಹೆಜ್ಜೆಯ ಶಬ್ದವೋ ಕೇಳಬಂತು. ಆ ಗಂತುಕರು ಯಾರೆಂದು ತಿಳಿದು ಹರ್ಷಿಯಾಗಿ, ಲಜ್ಜೆಯಿಂದಲೂ ನಿದ್ರೆಯ ನೆವದಿಂದಲೂ ಮಂಚದಲ್ಲಿ ಮಲಗಿದಳು. ಇಷ್ಟರಲ್ಲೇ, ಗುಲಾಬಸಿಂಗನು, ಬಂದು ಆ ರಮಣಿಗೆ ನಿದ್ರೆ ಹತ್ತಿರುವುದನ್ನು ನೋಡಿ ಆಶ್ಚರ್ಯಪಟ್ಟನು. ಏಕೆಂದರೆ, ತಾನು ಬರುವಾಗ ಇವಳು ತನ್ನಾಗಮನ ನಿರೀಕ್ಷೆಯಿಂದ ಕುಳಿತಿರುವುದನ್ನು ನೋಡಿದ್ದನು. ಅವನು ಸ್ವಲ್ಪ

ವಿನೋದ ನೋಡಬೇಕೆಂದು ಬಯಸಿ, ಆಕೆಯ ಹತ್ತಿರ ಬಂದು ಆಕೆಯ ಗುಲಾಬಿಯಂತಿರುವ ಮುಖವನ್ನು ಮುತ್ತಿಟ್ಟನು. ಆ ಸರಸಿಯಾದ ರಮಣಿಯು ಹೃದಯದ ಗೂಢಭಾವದಿಂದ ಕಣ್ದೆರೆಯಲಿಲ್ಲ. ಆ ನೇತ್ರಗಳು ತಾವೇ ತೆರೆದವು "ಪ್ರಾಣನಾಥರ ಆಗಮನವಾಯಿತೇ ?" ಎಂದು ಅವನನ್ನಾಲಿಂಗಿಸಿದಳು. ಈ ಗಾಢಪ್ರೇಮಪ್ರದರ್ಶನವಾದ ಮೇಲೆ ಸಂಭಾಷಿಸಿದರು

ಗುಲಾಬಸಿಂಹ :—ಪ್ರಿಯೆ ! ನಿನ್ನ ಮುಖವೇಕೆ ಮ್ಲಾನವಾಗಿರುವುದು ?

ರಮಣಿ :—ನಾಥನೇ ! ಇದನ್ನು ವಿಚಾರಿಸುವುದೇಕೆ ? ಸೂರ್ಯದರ್ಶನವಿಲ್ಲದೆ, ಕಮಲಿನಿಯ ಮುಖವು ಮ್ಲಾನವಾಗುವುದು ಸಹಜವಲ್ಲವೇ ?

ಗುಲಾಬಸಿಂಹ :—ಅದು ನಿಜ. ಸೂರ್ಯದರ್ಶನವಾದರೆ, ಕಮಲಿನಿಯ ಮುಖವು ಪ್ರಫುಲ್ಲವಾಗಬೇಕು ; ಆದರೆ, ಅದರ ಅಭಾವವೇ ಕಾಣುತ್ತದೆ.

ರಮಣಿ :—(ನಕ್ಕು) ಸೂರ್ಯದರ್ಶನವು ಬಹು ದಿನಗಳು ಆಗದ್ದರಿಂದ ಮಲಿನವಾದ ಮುಖವು ಸೂರ್ಯೋದಯವಾದನಂತರ ಕಾಲಾನುಸಾರದಿಂದ ಮೆಲ್ಲಮೆಲ್ಲಗೆ ಪ್ರಫುಲ್ಲಿತವಾಗುತ್ತದೆ. ರಾತ್ರಿಯ ಅಂಧಕಾರವು ಹೋಗುವುದಕ್ಕೆ ಸೂರ್ಯಕಿರಣವು ಕ್ರಮವಾಗಿ ಬೀಳಬೇಕು.

ಗುಲಾಬಸಿಂಹ :—ಭಾಪು ! ಭಾಪು ! ಬಹುದಿನಗಳು ಪ್ರವಾಸಮಾಡಿದೆನೆಂದು ಈ ವಕ್ರೋಕ್ತಿಯನ್ನು ಹೇಳುವೆಯಲ್ಲವೇ ? ಆದರೆ, ಇದು ನಿರುಪಾಯವಾದದ್ದು. ಯಾವಕಾರಣದಿಂದ ನಿನ್ನ ವಿಯೋಗದುಃಖವು ಸಹಿಸಲ್ಪಟ್ಟಿತೋ, ಅದನ್ನು ನೀನು ತಿಳಿದರೆ, ನನ್ನಲ್ಲಂತಹ ದೋಷವನ್ನಾರೋಪಿಸುವದಿಲ್ಲವೆಂದು ನಾನುಬಲ್ಲೆನು.

ಪತ್ನಿ :—ಪ್ರಾಣವಲ್ಲಭ ! ಪ್ರವಾಸದಲ್ಲಿ ನಾನಾವಿಧದ ಜನಗಳ ಸಹವಾಸದಿಂದಲೂ, ವಿವಿಧವಸ್ತುಗಳ ದರ್ಶನದಿಂದಲೂ, ಪ್ರೇಕ್ಷಣಸ್ಥಳಗಳ ದರ್ಶನದಿಂದಲೂ, ಮನಸ್ಸಿಗೆ ಸಮಾಧಾನವಾಗಿ ದಿವಸಗಳು ಆನಂದದಿಂದ ಕಳೆದು ಹೋಗುವವು ಆದರೆ. ನನಗೆ ಹಾಗೆಯೇ ? ಯಾವ ಅಬಲೆಯರಿಗೆ ಪತಿಯೇ ಜೀವನಸರ್ವಸ್ವವೋ ಆ ಅಬಲೆಯರಿಗೆ ಪತಿವಿನಾ ಗತಿಯಿಲ್ಲ. ಅಬಲೆಯ ಜೀವನವು ಎಷ್ಟು ಕಷ್ಟದಲ್ಲಿ ಬಿದ್ದಿರಬಹುದು. ಅದರ ಕಲ್ಪನೆಯು ಪುರುಷರಾದ ನಿಮಗಿರುವುದೇ ? ಎಲ್ಲಿ ಇದ್ದೀತು ? ಪ್ರಸೂತಿವೇದನೆಯನ್ನು ಪ್ರಸವಿಸಿದ ಸ್ತ್ರೀಯೇ ಬಲ್ಲಳು ! ಬಹು ದಿನಗಳ ಮೇಲೆ ಪತಿದರ್ಶನವಾದರೆ, ನಮ್ಮಂತಹ ಸ್ತ್ರೀಯರಿಗೆ ಆಗುವ ಆನಂದವನ್ನು ವರ್ಣಿಸಲು ಯಾರು ಶಕ್ತರು ? ಅದು ಹೋಗಲಿ ; ಬಿಡಿರಿ, ಈಗ ನೀವು ಯಾವಕಾರಣವನ್ನು ಹೇಳುವಿರಿ ? ಕೇಳಲು ಇಚ್ಛಿಸುತ್ತೇನೆ.

ಗುಲಾಬಸಿಂಹನು :—"ಸ್ತ್ರೀಯು ಪುರುಷನ ಸಹಧರ್ಮಿಣಿಯಾಗಿದ್ದಾಳೆ. ದಾನಾದಿ ಧರ್ಮಕೃತ್ಯಗಳಲ್ಲಿ ಪತ್ನಿಯನುಮತಿಯು ವಿಸತು ಶಾಸ್ತ್ರಪದ್ಧತಿಯುಂಟಾಗುವುದಿಲ್ಲ. ಆದರೆ, ಈ ಸರ್ವಸಾಧಾರಣವಾದ ಕಥೆಯನ್ನು ಗುಟ್ಟಾಗಿಡಲು

ಪ್ರಯೋಜನವಿಲ್ಲ." ಎಂದು ತನ್ನ ಅದ್ಯಂತ ಪ್ರವಾಸವೃತ್ತಾಂತವನ್ನೆಲ್ಲಾ ಹೇಳಿದನು.

ಗುಲಾಬಸಿಂಹನು ಹೇಗೆಹೇಗೆ ತನ್ನ ವೃತ್ತಾಂತವನ್ನು ಹೇಳತೊಡಗಿದನೋ, ಹಾಗೆ ಹಾಗೆಯೇ ಕಮಲಿನಿಯ ಮುಖದಲ್ಲಿ ಪ್ರಫುಲ್ಲತೆಯು ಕಾಣಬಂತು ಅಲ್ಲಾವುದೀನನು ದಂಡಯಾತ್ರೆ ಮಾಡುವುದನ್ನೂ ಪದ್ಮಿನಿಯ ಆಸಕ್ತಿಯನ್ನೂ, ಕೇಳಿದೊಡನೆ, ಆ ವೀರಪತ್ನಿಯ ಮುಖದಲ್ಲಿ ತಿರಸ್ಕಾರ ಚಿನ್ಹೆಯು ಕಾಣಬಂತು. ಆಕೆಯ ಮುಖವು ಕೆಂಪಾಯಿತು, ಆಕೆಯು 'ಖಡ್ಗಧಾರಿಣಿಯಾದ ಅಸುರಮರ್ದಿನಿಯೋ ? ಮಹಾಕಾಳಿಯೋ ? ಚಂಡಿಯೋ ? ಎಂಬಂತೆ ಕಾಣಿಸಿತು. ಗುಲಾಬಸಿಂಹನು ಮಾತನ್ನು ಮುಗಿಸಿದನಂತರ, ಕಮಲನಿಯು ಹೀಗೆ ಹೇಳತೊಡಗಿದಳು :—

"ನಾಥನೇ ! ತಾವು ಸ್ವಾಮಿಸೇವೆಮಾಡಿ ಕ್ಷತ್ರಿಯ ಕುಲಕೀರ್ತಿಯನ್ನು ಸ್ಥಿರವಾಗಿಟ್ಟಿರುವಿರಿ ; ಇದಕ್ಕಾಗಿ ಎಷ್ಟು ಧನ್ಯವಾದವನ್ನು ಹೇಳಿದರೂ ಸ್ವಲ್ಪವೇ ! ಮಾತೃಭೂಮಿಯ ಕಲ್ಯಾಣಕ್ಕಾಗಿ ಬಲಿಗೊಡುವುದಕ್ಕೂ ಹೋಗುವ ಪ್ರಸಂಗಬಂದರೂ ಅಡ್ಡಿಯಿಲ್ಲ. ತಾವು ನಿತ್ಯವೂ ಹೀಗೆಯೇ ರಾಜಭಕ್ತಿ ದೇಶಭಕ್ತಿಗಳನ್ನು ಅಂತಃಕರಣದಲ್ಲಿ ರಕ್ಷಿಸುತ್ತಿರಬೇಕೆಂಬುದಿಷ್ಟೇ ದಾಸಿಯಾದ ನನ್ನ ವಿನಂತಿಯಾಗಿದೆ."

ಗುಲಾಬಸಿಂಹನು :—"ವೀರಪತ್ನಿಯೇ ! ನೀನೇ ಧನ್ಯೆ ! ಈ ನಿನ್ನ ವಾಕ್ಯವು ವೀರಪತ್ನಿಗೆ ಸಹಜವು. ಇದನ್ನು ಕೇಳಿ ನನಗೆ ಅಪರಿಮಿತ ಸಂತೋಷವಾಗಿದೆ. ಇದನ್ನು ನಾನು ವರ್ಣಿಸಲಾರೆನು." ಎಂದು ಹೇಳಿ ; ಪ್ರೇಮದಿಂದ ಕಮಲಿನಿಯ ಮುಖವನ್ನು ಚುಂಬಿಸಿದನು.

"ಪ್ರಾಣನಾಥ ! ಈಶ್ವರನು ಯವನರಿಗೆ ಸಾರಾಸಾರ ವಿವೇಚನಶಕ್ತಿಯನ್ನು ಕೊಟ್ಟಿದ್ದಾನೆಯೋ, ಇಲ್ಲವೇ, ಎಂದು ನಾನು ವಿಚಾರಮಾಡುತ್ತಿದ್ದೇನೆ. ರಣಥಂಬೋರಿನ ದಂಡಯಾತ್ರೆಯಲ್ಲಿ ಅಲ್ಲಾವುದೀನನಿಗಾದ ಪರಾಜಯವು ತಿಳಿದಿದ್ದರೂ, ಮೇವಾಡದಮೇಲೆ ದಂಡೆತ್ತಿಬರುವುದು ಅವಿಚಾರತನವಲ್ಲವೇ ? ಅಲ್ಲಾವುದೀನ ಸರದಾರನಿಗೆ ಹಮೀರಚವ್ಹಾಣನು ಆಶ್ರಯಕೊಟ್ಟದ್ದರಿಂದ ಯುದ್ಧಾರಂಭವಾಗಿ, ರಾಜ್ಯದ ಸಂಹಾರವಾಯಿತು. ಸ್ತ್ರೀಯರು ಜೋಹರನ್ನು ಅನುಸರಿಸಿದರು. ಬಳಿಕ ಹಮೀರನು ಮೃತನಾದನು. ಶರಣಾಗತನನ್ನು ರಕ್ಷಿಸಿದನು. ಹೀಗೆ ರಾಜಪುತ್ರರು ತಮ್ಮ ಸ್ತ್ರೀಯರನ್ನೂ, ತಾಯಿ ತಂಗಿಯರನ್ನೂ ಯವನರವಶಕ್ಕೆ ಕೊಟ್ಟಾರೆ? ಸುಲ್ತಾನನು ಹಾಗೆ ತಿಳಿದಿದ್ದರೆ ಅವನು ಶುದ್ಧ ಗೂಳಿಯೇ ಸರಿ. ಇದರಿಂದ ಹುಚ್ಚರಿಗೆ ಕವಡೆಯಷ್ಟೂ ಬುದ್ಧಿಯಿಲ್ಲವೆಂದು ಕಾಣಬರುತ್ತೆ. ಪ್ರಾಣನಾಥ ! ಈ ದುಷ್ಟನನ್ನು ಗೆದ್ದು ಯಾವಾಗ ಹಿಂತಿರುಗಿ ಬರುವಿರೋ ಆಗ ನಾನು ತಮ್ಮ ಮೇಲೆ ಮುತ್ತುಗಳನ್ನೆರಚುವೆನು." ಎಂದು ಕಮಲಿನಿಯು ವೀರಪತ್ನಿಗುಚಿತವಾದ ವಾಕ್ಯವನ್ನಾಡಿದಳು.

ಗುಲಾಬಸಿಂಗ:—ನಿನ್ನ ಕೋರಿಕೆಯನ್ನು ಶ್ರೀ ಏಕಲಿಂಗಸ್ವಾಮಿಯು ಪೂರ್ಣಮಾಡಲಿ! ಕಾಲಾಂತರದಲ್ಲಿ ಸರ್ವವೂ ಆಗುವುದು. ಅಂತಹ ಕಾಲಬಂದರೆ ಶೌರ್ಯವು ಸರ್ವರಿಗೂ ಕಲ್ಪನೆಯಾಗುವುದು. ಆದರೆ ಈಗ ವಿಶ್ರಾಂತಿಹೊಂದುವುದು ಯೋಗ್ಯವಾಗಿದೆ.

ಕಮಲಿನಿ:—ಗೆಳೆಯನೇ! ನಿಜ. ಮಾತಾಡುವುದರಲ್ಲಿ ಹೊತ್ತಾದುದು ತಿಳಿಯಲಿಲ್ಲ. ನೀವು ನಿದ್ರೆಮಾಡಿರಿ! ನಾನು ಚರಣಸೇವೆ ಮಾಡುವೆನು.

ಸುಶೀಲೆಯಾದ ಪತ್ನಿಯು ದೊರಕಿದುದರಿಂದಲೂ, ಅವಳ ಪ್ರೇಮವಾಕ್ಯವನ್ನು ಕೇಳಿದುದರಿಂದಲೂ ಧನ್ಯವಾದವನ್ನು ಪಡೆದುದರಿಂದಲೂ, ಅವಳಿಂದ ನಿದ್ರೆಯು ಗುಲಾಬಸಿಂಹನನ್ನಾವರಿಸಿತು.

ಬಳಿಕ ಕಮಲಿನಿಯು ನಿದ್ರಿಸಿದಳು. ಈ ದಂಪತಿಗಳು ನಿದ್ರೆಯ ಸುಖವನ್ನನುಭವಿಸುತ್ತಿದ್ದಾರೆ. ವಾಚಕರೆ! ನೀವು ಅವರ ಪೂರ್ಣ ಪರಿಚಯವನ್ನು ತೆಗೆದುಕೊಳ್ಳಿ. ಆ ರಮಣಿಯ ಹೆಸರು ‘ಕಮಲಿನಿ’ ಎಂದು ತಿಳಿಯಿರಿ. ಈ ಕಮಲಿನಿಯು ರಾಣಾ ಲಕ್ಷ್ಮಣಸಿಂಹನ ಮುಖ್ಯಸೇನಾಪತಿಯ ಪುತ್ರಿಯು; ಈಕೆಯ ತಾಯಿತಂದೆಗಳು ಚಿಕ್ಕಂದಿನಲ್ಲಿ ಕಾಲವಾದರು. ಆದ್ದರಿಂದ ಮಹಾರಾಣನೇ ಪರಿಪಾಲಿಸುತ್ತಿದ್ದನು. ಗುಲಾಬಸಿಂಗನ ತಂದೆಯು ಈ ಮೇವಾಡದ ಮಹಾರಾಜನ ಸಹೋದರಿಯ ಪುತ್ರನು; ಅವನು ರಾಣನ ಆಶ್ರಮದಲ್ಲಿ ಸ್ವಾಮಿನಿಷ್ಟನಾಗಿದ್ದನು. ಇವನು ಶೌರ್ಯದಿಂದ ಯುದ್ಧಮಾಡುವಾಗ ಸ್ವರ್ಗಸ್ಥನಾದನು. ಆತನ ಪುತ್ರಿಯು ಕ್ಷಾತ್ರಧರ್ಮಾನುಸಾರವಾಗಿ ಸಹಗಮನಮಾಡಿದಳು ಆಗ ಅವನಿಗೆ ಗುಲಾಬಸಿಂಗನೇ ಮುಂತಾದ ಮೂವರು ಮಕ್ಕಳಿದ್ದರು. ಪ್ರೇತಯಾತ್ರೆಯಿಂದ ಹಿಂದಿರುಗಿ ಬರುವಾಗ ಇಬ್ಬರು ಮಕ್ಕಳು ಅದೃಶ್ಯರಾದರು ರಾಣನು ಬಹಳವಾಗಿ ಹುಡುಕಿಸಿದನು; ಆದರೂ ಸಿಕ್ಕಲಿಲ್ಲ. ಗುಲಾಬಸಿಂಗನು ನಿರಾಧಾರನಾದ್ದರಿಂದ ರಾಣನು ಅರಮನೆಯಲ್ಲಿ ಅವನನ್ನು ಇಟ್ಟುಕೊಂಡನು. ಅಲ್ಲಿ ಕಮಲಿನಿಯೂ ಗುಲಾಬಸಿಂಗನೂ ಬೆಳೆದು ದೊಡ್ಡವರಾದರು. ಅವಳ ಲಾವಣ್ಯವನ್ನು ನೋಡಿ ಗುಲಾಬಸಿಂಗನಿಗೆ ಪ್ರೇಮವುಂಟಾಯಿತು. ಅದನ್ನವನು ಯಾರಿಗೂ ತೋರಿಸಲಿಲ್ಲ. ಗುಲಾಬಸಿಂಗನು ತನ್ನಂತಹ ಬಡಸೇನಾಪತಿಯ ಸುತೆಯನ್ನು ವಿವಾಹಮಾಡಿಕೊಳ್ಳುವುದಸಂಭವವೆಂದು ತಿಳಿದಿದ್ದಳು. ಆದರೆ ಈಕೆಯ ರೂಪಸದ್ಗುಣಗಳನ್ನು ನೋಡಿದುದರಿಂದ ಅವರಿಬ್ಬರಲ್ಲೂ ಪ್ರೇಮಸಂಯೋಗವಾಯಿತು. ರಾಣನು ಇದನ್ನು ತಿಳಿದು ಈಕೆಯನ್ನು ಗುಲಾಬಸಿಂಗನಿಗೆ ಮದುವೆಮಾಡಿಕೊಟ್ಟನು. ಅವನನ್ನು ತಂದೆಯಧಿಕಾರದಲ್ಲಿ ಸ್ಥಿರಪಡಿಸಿದನು. ಸ್ವಲ್ಪಕಾಲದಲ್ಲೇ ಇವನು ತನ್ನ ಸದ್ಗುಣಗಳಿಂದ ಚಿಕ್ಕಂದಿನಿಂದ ಲೋಕಪ್ರಿಯನಾದನು.

ಆರ್ಯಸ್ತ್ರೀಯರ ಯೋಗ್ಯತೆಯು ದೊಡ್ಡದೆಂದು ತಿಳಿದಿದೆ. ಯಾವನಾದರೂ, ಸ್ತ್ರೀಯರ ಮರ್ಯಾದೆಯನ್ನು ಲಂಘಿಸಿದರೆ, ರಾಜಪುತ್ರರ ಕ್ರೋಧಕ್ಕೆ ಪಾರವೇ

ಇರುತಿರಲಿಲ್ಲ. ಅಂತಹವರನ್ನೆಂದಿಗೂ ಮನ್ನಿಸುತ್ತಿರಲಿಲ್ಲ. ರಾಜಪುತ್ರರು ಯುದ್ಧ ರಂಗದಲ್ಲಿ ಬಹುಳವಾಗಿ ಸ್ತ್ರೀಯರ ವಿಷಯದಿಂದಲೇ ಯುದ್ಧಮಾಡುತ್ತಿದಾರೆ.

ಕೆಲವು ಸ್ಥಳಗಳಲ್ಲಿ ಹೀಗೆ ಹೇಳಿದೆ:—

ಆಪದರ್ಥೇ ಧನಂ ರಕ್ಷೇತ್ ದಾರಾನ್ ರಕ್ಷೇತ್ ಧನೈರಪಿ |
ಆತ್ಮಾನಂ ಸತತಂ ರಕ್ಷೇತ್ ದಾರೈರಪಿ ಧನೈರಪಿ || ೧ ||

ವಿಪತ್ಕಾಲಕ್ಕಾಗಿ ಧನವನ್ನು ರಕ್ಷಿಸಬೇಕು; ಧನವನ್ನಾದರೂ ಕೊಟ್ಟು ಸ್ತ್ರೀಯರನ್ನು ರಕ್ಷಿಸಬೇಕು. ತನಗೆ ನಾಶಕಾಲ ಒದಗಿದಾಗ ಸ್ತ್ರೀಯರನ್ನೂ ಧನವನ್ನೂ ಒಲಾಗಿ ಕೊಟ್ಟು ಸ್ವರಕ್ಷಣೆ ಮಾಡಿಕೊಳ್ಳಬೇಕು.

ಆಪದರ್ಥೇಧನಂ ರಕ್ಷೇ ದಾತ್ಮಾನಂಚಧನೈರಪಿ |
ಸ್ತ್ರೀವರ್ಗಂ ಸತತಂ ರಕ್ಷೇ ದಾತ್ಮನಚ ಧನೈರಪಿ || ೨ ||

ಕಷ್ಟಕಾಲಕ್ಕಾಗಿ ಧನವನ್ನು ರಕ್ಷಿಸಬೇಕು; ಮತ್ತು ಧನವನ್ನಾದರೂ ಕೊಟ್ಟು ತನ್ನನ್ನು ರಕ್ಷಿಸಿಕೊಳ್ಳಬೇಕು. ಆದರೆ, ಸ್ತ್ರೀಯರ ಪ್ರತಿಷ್ಠೆಯೂ ಮರ್ಯಾದೆಯೂ ನಾಶವಾಗುವಕಾಲ ಬಂದರೆ, ಧನವನ್ನೂ ಪ್ರಾಣವನ್ನೂ ಕೊಟ್ಟು ಸ್ತ್ರೀಯರನ್ನು ರಕ್ಷಿಸಬೇಕು. ಸ್ತ್ರೀಯರ ಮಾನರಕ್ಷಣೆಗಾಗಿ ಪ್ರಾಣಕೊಡುವ ಪ್ರಸಂಗಬಂದರೂ ಆನಂದದಿಂದ ಅದನ್ನು ಕೊಡಬೇಕು.

ಈ ರಾಜಪುತ್ರರ ನೀತಿಗನುಸಾರವಾಗಿ ಒಂದು ಕಾಲದಲ್ಲಿ ಯೂರೋಪಿನ ವೀರರ ನೀತಿಯೂ ಪ್ರಶಂಸನೀಯವಾಗಿತ್ತು. ಈ ವಿಷಯದಲ್ಲಿ ಆಂಗ್ಲೇಯರಾದ ಟೆನಿಸನ್ ಎಂಬ ಕವಿಯು ವರ್ಣಿಸಿರುವನು. *

---

* To reverence the King, as if we were
Their conscience, and their conscience as their King,
To ride abroad redressing human wrongs
To speak no slander, no nor listen to it,
To honour his own word as if his god's
To lead sweet lives in purest chastity
To love one maiden only, cleave to her,
And worship her by year of noble deed,
Until they won her; for indeed I know
Of no more subtle master under heaven
Than is the maiden passion for a maid
Not only to keep down the base in man
But teach high thoughts and amiable words
And courtliness, and the desire of fame
And love of truth and all that makes a man.

—*Guinevere.*

ರಾಜಪುತ್ರರು ಚಿಂತಾಕ್ರಾಂತರಾಗಿದ್ದರು. ಭಾರತ ರಮಣೀರತ್ನವಾದ ಪದ್ಮಿನಿಯನ್ನು ರಕ್ಷಿಸುವ ಕಾರ್ಯಭಾರವು ಈಗ ರಾಜಪುತ್ರರಿಗೆ ಬಂದಿರುತ್ತದೆ. ಈ ದಿನ ರಾತ್ರಿಯು ಸರ್ವರಿಗೂ ಬಹು ಕಷ್ಟದಿಂದ ಕಳೆಯಿತು. ಭವಿಷ್ಯತ್ಕಾಲವನ್ನು ಕುರಿತು ನಾನಾವಿಧ ಯೋಚನಾತರಂಗಗಳು ಪ್ರತಿಯೊಬ್ಬರ ಹೃದಯದಲ್ಲಿ ಬರಲಾರಂಭಿಸಿದವು. ಪ್ರಾತಃಕಾಲ ಶ್ರೀ ಏಕಲಿಂಗಸ್ವಾಮಿಯ ದೇವಾಲಯದಲ್ಲಿ ನಗಾರಿಯನ್ನು ಬಾರಿಸಲು ರಾಜಪುತ್ರರೆಲ್ಲರೂ ಎದ್ದು ಸ್ನಾನಸಂಧ್ಯಾದಿಗಳನ್ನು ಪೂರೈಸಿಕೊಂಡು; ದೇವಾಲಯಕ್ಕೆ ಬಂದು ಶ್ರೀ ಏಕಲಿಂಗಸ್ವಾಮಿಯನ್ನು ಶುದ್ಧ ಮನದಿಂದ ಪ್ರಾರ್ಥಿಸಿದರು. ಬಳಿಕ ತಮ್ಮ ತಮ್ಮ ಕಾರ್ಯಗಳಿಗಾರಂಭಿಸಿದರು. ಇಷ್ಟರಲ್ಲೇ ಒಬ್ಬ ಕುದುರೆಯ ಸವಾರನು ತ್ವರೆಯಿಂದ ಕುದುರೆಯನ್ನೋಡಿಸುತ್ತಾ ಬಂದು ರಾಜಮಂದಿರದಲ್ಲಿ ರಾಜನಿಗೆ ಮೂರಾವರ್ತಿ ವಂದಿಸಿ, “ಮಹಾರಾಜರವರೇ! ಅಲ್ಲಾವುದಿನ್ ಬಾದಷಹನು ತನ್ನ ಅಪಾರ ಸೇನೆಯೊಡನೆ ಮೇವಾಡದ ಎಲ್ಲೆ ಕಟ್ಟಿನ ಸಮೀಪದಲ್ಲಿ ಬಂದಿಳಿದಿರುವನು. ದೇಶದೊಳಕ್ಕೆ ಪ್ರವೇಶಿಸಬಹುದು. ಈ ವರ್ತಮಾನವನ್ನು ತಿಳಿಸಬೇಕೆಂದು ನನ್ನ ಪ್ರಾಣವನ್ನು ಲಕ್ಷಿಸದೆ, ದಾರಿಯಲ್ಲಿ ಕ್ಷಣವಾದರೂ ವಿಶ್ರಾಂತಿಗೊಳ್ಳದೆ ಹೊರಟುಬಂದಿದೇನೆ. ಈಗ ಏನು ಆಜ್ಞೆಯಾಗುವುದೋ?” ಎಂದನು. ‘ದೂತನೇ! ಮಹಭಾಪು!’ ಎಂದು ಮಹಾರಾಜನು ತನ್ನ ಕೈಯಲ್ಲಿದ್ದ ಸುವರ್ಣದ ಬಳೆಯನ್ನು ದೂತನ ಕಯ್ಗೆ ಕೊಟ್ಟು ನೀನು ಶತ್ರುಗಳ ಸ್ವಭಾವವನ್ನು ಅರಿಯುತ್ತೀರೆಂದು ಹೇಳಿದನು. ಬಳಿಕ ಮಹಾರಾಜನು, ಗುಲಾಬಸಿಂಗನನ್ನು ಕುರಿತು,—‘ಅಲ್ಲಾವುದೀನನು ವರ್ಷಾಕಾಲ ಕಳೆದಮೇಲೆ, ದಂಡೆತ್ತಿಬರುವನೆಂದು ಹೇಳಿದೆಯಲ್ಲ? ಈತನು ಈಗ ಏಕೆ ಬಂದನು?’ ಎಂದನು. ಆಗ ಗುಲಾಬಸಿಂಗನು ‘ಸ್ವಾಮಿಾ! ಅವನಿಗೆ ನನ್ನಲ್ಲಿ ಸಂಶಯವುಂಟಾಗಿದ್ದುದೇ ಕಾರಣವೆಂದು ತೋರುತ್ತದೆ.’ ಎಂದನು. ಬಳಿಕ ಯಾರೂ ಏನನ್ನೂ ಹೇಳಲಿಲ್ಲ. ಯುದ್ಧಕ್ಕೆ ಸಿದ್ಧಪಡಿಸಿಕೊಂಡರು.

ಪ್ರಕರಣ 9.

ಭಾಮಿನಿ॥ ರಾಜಪುತ್ರ ಮುಮುಕ್ಷುರ್ವಾದರು ।
ಆಜಿಯಲಿ ಹಿಂದಿರುಗಿ ಮುಖವಂ।
ಸೋಜಿಗದಿ ತೋರಿಸಲು ಕೀರ್ತಿಯು ದೊರೆಯದೆಂದೆನುತ॥

ಸುಲ್ತಾನನು ಚಿತ್ತೂರಿಗೆ ನಾಲ್ಕು ಮೈಲಿ ದೂರದಲ್ಲಿ ಒಂದಿಳಿದು ಗುಡಾರವನ್ನು ಹಾಕಿಸಿಕೊಂಡಿದ್ದನು. ಮೇವಾಡದ ರಾಜನು ಅಲ್ಪಾವಕಾಶದಲ್ಲಿ ಯುದ್ಧಕ್ಕೆ ಸಿದ್ಧನಾಗಿರುವುದನ್ನು ದೂತಮುಖದಿಂದ ತಿಳಿದ ಅಲ್ಲಾವುದೀನನು ಆಶ್ಚರ್ಯಪಟ್ಟನು. ಕೂಡಲೆ ರಾಜಪುತ್ರರು ಅನ್ನಸಾಮಗ್ರಿಗಳನ್ನೂ

ಶಸ್ತ್ರಾಸ್ತ್ರಗಳನ್ನೂ, ಮದ್ದು ಗುಂಡುಗಳನ್ನೂ, ಸಿದ್ಧಪಡಿಸಿಕೊಂಡರು; ಸಾಮಂತರಾಜರ ಮತ್ತು ಮಿತ್ರರಾಜರ ಸಹಾಯವನ್ನು ಕೇಳಿದನು. ಆ ರಾಜರುಗಳು ಸ್ವಸೈನ್ಯದೊಡನೆ ಚಿತ್ತೂರಿಗೆ ಬಂದು ಸೇರಿದರು. ರಾಜಪುತ್ರರಲ್ಲಿ ಒಂದನುಕರಣಾ ಶಕ್ತಿಯಿತ್ತು; ಏನೆಂದರೆ:—ತಮ್ಮಲ್ಲಿ ಅಂತಃಕಲಹವಿದ್ದರೂ ಪರರಾಜರ ಬಾಧೆಯುಂಟಾದಾಗ ಏಕೀಭವಿಸುತ್ತಿದ್ದರು; ತಮ್ಮ ದ್ವೇಷಭಾವವನ್ನು ಆಗ ತೋರಿಸುತ್ತಿರಲಿಲ್ಲ. ಇದು ಅಲಂಕಾರವಲ್ಲವೆಂದು ಯಾರು ಹೇಳುವರು? ಇವರ ಕೃತ್ಯಗಳ ವರ್ಣನೆಯು ಭಾರತೇತಿಹಾಸಗಳಲ್ಲಿ ಸುವರ್ಣಾಕ್ಷರಗಳಿಂದ ಬರೆಯಲ್ಪಟ್ಟಿವೆ. ಆ ಕಾಲದ ರಾಜಪುತ್ರರು ಕೀರ್ತಿಗೋಸುಗ ಮೃತರಾಗುತ್ತಿದ್ದರು. ಯಾವನಾದರೊಬ್ಬ ರಾಜಪುತ್ರನು ವಿಪದ್ಗ್ರಸ್ತನಾದ ರಾಜನಿಗೆ ಸಹಾಯಮಾಡದಿದ್ದರೆ, ಅವನನ್ನು ವಂದಿ ಮಾಗಧಾದಿಗಳು ನಿಂದಿಸುತ್ತಿದ್ದರು. ಇದರಿಂದ ಅವರಿಗೆ ತಮ್ಮ ಮುಖವನ್ನು ತೋರಿಸಲು ನಾಚುತ್ತಿದ್ದರು. ಈ ಮೇವಾಡದ ಮಹಾರಾಜನು ಸ್ವಲ್ಪ ಕಾಲದಲ್ಲಿ ಯುದ್ಧಕ್ಕೆ ಸಿದ್ಧನಾಗಿದ್ದುದನ್ನೂ, ನೆರೆಹೊರೆಯ ರಾಜರುಗಳು ಸಹಾಯಾರ್ಥವಾಗಿ ಬಂದದ್ದನ್ನೂ, ಅಲ್ಲಾವುದೀನನು ನೋಡಿ, ಕೂಡಲೆ ಚಿತ್ತೂರನ್ನು ಮುತ್ತಬೇಕೆಂದಾಜ್ಞಾಪಿಸಿ; ಒಂದು ಉಪಾಯವನ್ನಾಲೋಚಿಸಿ, ಒಬ್ಬ ದೂತನನ್ನು ಮೇವಾಡದ ರಾಜನ ಹತ್ತಿರಕ್ಕೆ ಕಳುಹಿಸಿದನ. ದೆಹಲಿಯ ಚಕ್ರವರ್ತಿಯಾದ ಅಲ್ಲಾವುದೀನನು ಸೈನ್ಯಸಹಿತನಾಗಿ ಬಂದಿರುವುದನ್ನು ರಾಜನಾದ ಲಕ್ಷ್ಮಣಸಿಂಹನು ತನ್ನ ದಳಪತಿಗಳೊಡನೆ ಯುದ್ಧವಿಷಯವಾಗಿ ದಿವರಾತ್ರಿಯಲ್ಲೂ ಚರ್ಚಿಸುತ್ತಿದ್ದನು. ಈ ದಿನವು 'ಭವತಿ, ನಭವತಿ.' ಎಂದು ಚರ್ಚಿಸುತ್ತಿರುವಷ್ಟರಲ್ಲಿ ಅಲ್ಲಾವುದೀನನ ದೂತನು ಬಂದನು. ಮಹಾರಾಜನಪ್ಪಣೆಯಿಂದ ಈ ದೂತನು ಒಳಗೆ ಬಂದು ಮಹಾರಾಜನಿಗೆ ನಮಸ್ಕರಿಸಿ; ಒಬ್ಬ ಸೇನಾನಾಯಕನ ಹಸ್ತದಲ್ಲಿ ಒಂದು ಪತ್ರವನ್ನು ಕೊಟ್ಟನು ಆ ಸೇನಾಪತಿಯು ಮಹಾರಾಜನಿಗೊಪ್ಪಿಸಿದನು. ಮಹಾರಾಜನು ಗುಲಾಬಸಿಂಹನಿಗೆ ಕೊಟ್ಟು ಓದಲಾಜ್ಞಾಪಿಸಿದನು. ಅವನು ಈ ಪರಿ ಓದಿದನು.

"ಮೇವಾಡಾಧೀಶರಾದ ಮಹಾರಾಣಾ ಶ್ರೀ ಲಕ್ಷ್ಮಣಸಿಂಹರಿಗೆ. ನಾವು ಚಿತ್ತೂರಿಗೆ ಮುತ್ತಿಗೆ ಹಾಕಲು ಬಂದಿರುವ ವೃತ್ತವನ್ನು ನಿಮಗೆ ಮೊದಲೇ ತಿಳಿಸಬೇಕೆಂದು ಈ ಪತ್ರವನ್ನು ಈಗ ಮುದ್ದಾಂ ಕಳುಹಿಸಿರುವೆವು. ನಾವು ಇಸ್ಲಾಮಿ ಮತದವರು. ನಮ್ಮ ಧರ್ಮದಂತೆ ನಮ್ಮ ಸಾರ್ವಭೌಮಪದವಿಯನ್ನೂ, ನಮ್ಮ ಮತವನ್ನೂ ಒಪ್ಪದವರಮೇಲೆ, ಯುದ್ಧಮಾಡಿ ಅವರನ್ನು ಒಪ್ಪುವಂತೆ ಮಾಡುವುದಕ್ಕಾಗಿ ಚಿತ್ತೂರನ್ನು ಮುತ್ತಿಗೆ ಹಾಕಲು ಬಂದಿರುವೆವು. ಒಳ್ಳೆಯ ಮಾತಿನಿಂದ ನಮ್ಮ ಮತವನ್ನನುಸರಿಸಿ ಅಂಗೀಕರಿಸಿರಿ. ಅದಕ್ಕೊಪ್ಪದಿದ್ದರೆ, ನಮ್ಮ ಚಕ್ರವರ್ತಿತ್ವವನ್ನೊಪ್ಪಿಕೊಂಡು ಪ್ರತಿವರ್ಷವೂ ಕಪ್ಪಗಾಣಿಕೆ ಕೊಡಲು ಒಪ್ಪಿಗೆ ಕೊಡಿರಿ. ಈ ಎರಡಕ್ಕೂ ಒಪ್ಪಿಗೆಯಿಲ್ಲದಿದ್ದರೆ, ಯುದ್ಧಕ್ಕೆ ಸಿದ್ಧರಾಗಿರಿ. ಅಂದರೆ, ಪೃಥ್ವಿಯನ್ನೇ ಕಂಪಾಯಮಾನಪಡಿಸುವ ಯೋಧರಾದ ನಮ್ಮ ಅಭಿಮಾನದ

ಫಲವು ಹೇಗಿರುವುದೆಂಬುವುದು ನಿಮ್ಮ ಲಕ್ಷ್ಯಕ್ಕೆ ಬರುವುದು. ಈ ಪತ್ರಕ್ಕೆ,–'ಯುದ್ಧ' ಅಥವಾ,' ಶಾಂತಿ' ಈ ಎರಡರಲ್ಲಿ ಒಂದುತ್ತರವನ್ನು ಕಳುಹಿಸಬೇಕು.

ಬಾದಶಹಾ ಅಲ್ಲಾವುದೀನ್ ಖಿಲ್ಜಿ,''

ಸಿಕಂದರಾ-ಶಹೆನಶಾಹೀ-ದಿಲ್ಲಿ,

ಈ ಪತ್ರವನ್ನೋದಿದೊಡನೆ ಸಭೆಯಲ್ಲಿ ಪರಸ್ಪರ ಹಾಸ್ಯಧ್ವನಿಯು ಕೇಳಿಸಿತು. ಬಳಿಕ ರಾಜಪುತ್ರವೀರರಲ್ಲಿ ಹಾಸ್ಯಧ್ವನಿಗೆ ಬದಲಾಗಿ ಕ್ರೋಧಚಿಹ್ನೆಯು ಮುಖದಲ್ಲಿ ಗೋಚರಿಸಿತು. ಮಹಾರಾಣನು ಪತ್ರವನ್ನು ನೋಡಿ ಚೂರು ಚೂರುಮಾಡಿ ಹಾಕಿದನು. ಭೀಮಸಿಂಗನಿಗೆ ಪತ್ರಕ್ಕೆ ಉತ್ತರವನ್ನು ಕೊಡುವಂತೆ ಸಂಕೇತಮಾಡಿದನು.

ಭೀಮಸಿಂಗನು ಭೀಮಗರ್ಜನೆಮಾಡಿ "ಎಲೈ ದೂತನೇ! ನೀನು ನಿನ್ನ ಧಣಿಗೆ ಹೋಗಿ ಹೇಳಬೇಕಾದುದೇನೆಂದರೆ:—ನನ್ನ ಪೂಜ್ಯನಾದ ಪಿತೃವ್ಯನನ್ನು ರಾಜ್ಯಲೋಭದಿಂದ ಕೊಂದುಹಾಕಿದರೂ ಸರಿ; ಧಾರ್ಮಿಕಾಗ್ರೇಸರತ್ವವನ್ನು ಬೊಗಳಿಕೊಳ್ಳುವ ನೀನು ರಾಜಪುತ್ರರಿಗೆ ಶೌರ್ಯೋತ್ಪಾದಕ ವಾಕ್ಯಗಳನ್ನು ಬರೆಯುತ್ತೀಯೆ! ಆರ್ಯರ ಕೀರ್ತಿಯು ನಮ್ಮ ಪವಿತ್ರವಾದ ಆರ್ಯಧರ್ಮದ ಪ್ರಭಾವದಿಂದ ಈವರೆಗೆ ನಿಷ್ಕಳಂಕವಾಗಿದೆ. ಮುಂದೆಯೂ ಆರ್ಯಧರ್ಮದ ಕೀರ್ತಿಯನ್ನು ರಕ್ಷಿಸಿಕೊಳ್ಳುತ್ತೇವೆ ಮೇವಾಡವಾಸಿಯಾದ ಕ್ಷತ್ರಿಯನು ತನ್ನ ಆರ್ಯಧರ್ಮವನ್ನು ಬಿಟ್ಟು, ಯವನಧರ್ಮವನ್ನು ಸ್ವೀಕರಿಸುವನೆಂಬ ಕಲ್ಪನೆಯಾದರೂ ಅಲ್ಲಾವುದೀನನಿಗೆ ಹೇಗೆ ಉಂಟಾಯಿತೋ ದೇವರೇ ಬಲ್ಲನು! ಹೋಗು ರಾಜಸ್ಥಾನವಾಸಿಗಳಾದ ಕ್ಷತ್ರಿಯವೀರರು ತಮ್ಮ ಪವಿತ್ರ ಧರ್ಮವನ್ನು ಬಿಡುವುದಕ್ಕೂ, ನಿನ್ನ ಮಾಂಡಲಿಕತ್ವವನ್ನೊಪ್ಪುವುದಕ್ಕೂ ಸಿದ್ಧರಾಗಿಲ್ಲ. ಎಲ್ಲಿಯವರೆಗೆ ಈ ನಮ್ಮ ದೇಶದಲ್ಲಿ ನಿಜವಾಲಿದ ಕ್ಷತ್ರಿಯ ರಕ್ತವು ಆಡುತಿರುವುದೋ, ಅಲ್ಲಿಯವರೆಗೆ ಸಾವಿರಸಾರಿಯಾದರೂ, ನಿಮ್ಮ ಸಾಕು ಸಾಕೆನ್ನಿಸುವದಕ್ಕೆ ಸಿದ್ಧರಾಗಿರುತ್ತೇವೆ. ಹೋಗಿ ಹೇಳು.'' ಎಂದನು.

ಇದನ್ನು ಕೇಳಿದ ದೂತನು ಹೋಗುತ್ತಿರಲು ಅವನನ್ನು ಕುರಿತು ರಾಣನು, 'ನಿಲ್ಲು ನಿಲ್ಲು; ನಾನು ಸ್ವಲ್ಪ ಹೇಳತಕ್ಕದ್ದಿದೆ. ಬಾದಶಹನಿಗೆ ನಾನು ಹೇಳಿದೆನೆಂದು ಹೇಳುವುದೇನೆಂದರೆ:—" ನಿನ್ನ ದೌರ್ಭಾಗ್ಯವು ನಿನ್ನನ್ನಿಲ್ಲಿಗೆ ಕರೆತಂದಿದೆ. ಮೇವಾಡದ ಶಿಶೋದಿಯ ಕುಲದ ರಾಜಪುತ್ರರನ್ನು ಪರಾಜಯಹೊಂದಿಸಲು ಇಚ್ಛೆಸಿರುವುದು ನಿದ್ರಿತವಾದ ಸಿಂಹವನ್ನು ಎಚ್ಚರಪಡಿಸಿದಂತಾಯಿತು. ಮೇವಾಡದ ರಾಜಪುತ್ರರು ಮೂರ್ತಿಮತ್ತಾದ ಅಗ್ನಿಯಂತಿದ್ದಾರೆ. ನಿನ್ನನ್ನು ಭಸ್ಮಮಾಡಿ ಹಾಕುವರು. ತಿಳಿಯಿತೋ? ಹೇಗೆಯೇ ಹೇಳು.'' ಎಂದನು. ಆ ದೂತನು ಈ ರಾಜಪುತ್ರರ ವಿಲಕ್ಷಣ ತೇಜಸ್ಸನ್ನು ನೋಡಿ, ಬಹಳವಾಗಿ ಹೆದರಿದನು. ಅವನಿಗೆ ಜೀವಭೀತಿಯುಂಟಾಯಿತು. ಆದರೆ, ಸತ್ಯವಚನಿಗಳಾದ ರಾಜ

ಪುತ್ರರಿಗೆ ಹೆದರಬೇಕಾಗಿರಲಿಲ್ಲ; ಅವನನ್ನು ರಾಜಪುತ್ರರು ದುರ್ಗದ ಹೊರಕ್ಕೆ ಕಳುಹಿಸಿದರು. ಅವನು ಅಲ್ಲನನ್ನು ನೆನೆಯುತ್ತಾ ತನ್ನ ಗುಡಾರಕ್ಕೆ ಹೋದನು. ಬಳಿಕ ದುರ್ಗದ್ವಾರವನ್ನು ಬಂಧಿಸುವಂತಾಜ್ಞಾಪಿಸಿ; ರಾಣನು ಭೀಮಸಿಂಗನನ್ನು ನೋಡಿ, "ಪಿತೃವ್ಯನೇ! ಹಗೆಯೊಡನೆ ಆವ ಬಗೆಯಿಂದ ಕಾದಬೇಕು?" ಎಂಬುದು ನಿಮಗೆ ಚೆನ್ನಾಗಿ ಅವಗತವಾಗಿದೆ. ತಮಗೆ ತೋರಿದಂತೆ ಕಾರ್ಯಕ್ಕೆ ಯತ್ನಿಸಬೇಕು. ತಮ್ಮಂತಹ ಹಿರಿಯರಿರುವಾಗ ನನಗಾವ ಚಿಂತೆಯು? "ಗುಲಾಬಸಿಂಗನೇ! ನಿನ್ನ ಗೂಢಚಾರನ ಕಾರ್ಯವನ್ನು ನೋಡಬೇಕೆಂದಿಚ್ಛಿಸುವೆನು" ಎಂದನು.

ಪ್ರಕರಣ 10.

ಭಾದ್ರಪದ ಮಾಸದ ದಿವಸ. ಗುಲಾಬಸಿಂಗನು ಸಭಾಗೃಹದಿಂದ ಬಂದು ವಿಶ್ರಾಂತಿ ಸುಖವನ್ನು ಘಳಿಗೆಕಾಲ ಮಾತ್ರ ಹೊಂದಬೇಕೆಂದು ಹಾಸಿಗೆಯಲ್ಲಿ ಮಲಗಿದನು. ಆದರೆ, ವಿಚಾರಪ್ರಮಣೆಯಿಂದ ಅವನಿಗೆ ಬಹಳಕಾಲ ನಿದ್ರೆಹತ್ತಲಿಲ್ಲ. 'ಮಹಾರಾಣನಿಗಾವರೀತಿ ಸಹಾಯಮಾಡಲಿ? ಯವನರ ಪಾಳಯದಿಂದ ವರ್ತಮಾನವನ್ನು ಹೇಗೆ ತರಲಿ? ಯಾವ ವೇಷದಿಂದ ಹೋದರೆ ಕಾರ್ಯವು ಸುಲಲಿತವಾಗಿ ಸಾಗುವುದು?' ಎಂದು ವಿಚಾರಮಾಡುತ್ತಿದ್ದನು. ಇಷ್ಟರಲ್ಲೆ ಕಣ್ಣುಹತ್ತಿತು. ಏಕಾಏಕಿ ಬೆಚ್ಚಿಬಿದ್ದು ಎಚ್ಚರವಾದನು. 'ಅರೇ! ಅರೇ!' ಎಂಬ ಶಬ್ದವು ಕೇಳಿಬಂತು. ಕೂಡಲೆ, ಕಮಲಿನಿಯು ಓಡಾಡುತ್ತಾ ಬಂದು, 'ನಾಥನೇ! ಏನಿದು' ಎಂದು ಕೇಳಿದಳು. 'ಪ್ರಿಯಳೇ! ಏನೂ ಇಲ್ಲ. ನೀನು ಹೀಗೆ ಗಾಬರಿಪಡಬೇಡ.' ಎಂದು ಗುಲಾಬಸಿಂಗನು ಹೇಳಿದನು.

ಕಮಲಿನಿ—ಆದರೆ, ತಮ್ಮ ಮುಖದಿಂದ 'ಅರೇರೆ' ಎಂಬ ಶಬ್ದವು ಹೊರಟದ್ದಕ್ಕೆ ಕಾರಣವೇನು? ಸ್ವಪ್ನವು ಬಿದ್ದಿತೇ?

ಗುಲಾಬಸಿಂಗ—ಒಂದು ಸ್ವಪ್ನ ಬಿತ್ತು. ಅದರಿಂದಲೇ; 'ಅರೆ ಅರೆ' ಎಂಬ ಶಬ್ದವು ಹೊರಟಿತು.

ಕಮಲಿನಿ—ನಾಥನೇ! ನನಗಾ ಸ್ವಪ್ನವನ್ನು ಹೇಳಬಾರದೇ?

ಗುಲಾಬಸಿಂಗ—ಹೇಳದೇ ಏನು? ಈಗ ಶತ್ರುಸೇನೆಯು ಬಂದಿದೆ. ಆ ಸಂಬಂಧವನ್ನು ವಿಚಾರಮಾಡುತ್ತಿರುವಾಗ ನಿದ್ರೆಹತ್ತಿತು; ಭಯಂಕರ ಸ್ವಪ್ನ ಬಿತ್ತು. ನಾನು ಕಾಡಿನಲ್ಲಿ ಹೋಗುತ್ತಿರುವಾಗ ಒಂದು ಮನೋಹರವಾದ ಸುವಾಸನೆಯುಳ್ಳ ಪುಷ್ಪವು ದಾರಿಯಲ್ಲಿ ಬಿದ್ದಿರಲು ಅದನ್ನು ತೆಗೆದು

ಕೊಂಡೆನು; ಕಯ್ಯಲ್ಲಿ ತೆಗೆದುಕೊಂಡೊಡನೆ ತಪ್ತವಾದ ಮಸ್ತಕವು ತಂಪಾಯಿತು. ಮನಸ್ಸು ಪ್ರಫುಲ್ಲಿತವಾಗಿ ಸಮಾಧಾನವಾಯಿತು. ದೇವೇಂದ್ರನ ಉದ್ಯಾನವನದ 'ಒಂದು ಸುಗಂಧಕುಸುಮದ ವಾಸನೆ ಯನ್ನು ಆಘ್ರಾಣಿಸುತ್ತಿರುವಂತೆ ತೋರಿತು. ಅದು ಕೋಮಲವಾ ಗಿದ್ದುದರಿಂದ ನನ್ನ ಉಗುರು ತಗಲಿದೊಡನೆಯೆ ಅದರೆಸಳು ಹರಿದು ಕೆಳಗೆ ಬಿತ್ತು. ಕೂಡಲೆ ನನಗೆ ಬಹು ದುಃಖವಾಯಿತು ಆ ಹೂವನ್ನು ಜೋಪಾನವಾಗಿಡಬೇಕೆಂದು ಆಲೋಚಿಸಿ, ನಾನು ಹೃದಯದಲ್ಲಿಟ್ಟು ಕೊಂಡೆನು. ಇಷ್ಟರಲ್ಲೇ, ನನ್ನ ಕಿವಿಯಲ್ಲಿ ಒಂದು ಶಬ್ದವು ಕೇಳಿಸಿತು. ತರುಣನೇ! ಈ ಪುಷ್ಪವು ನೀನು ಹೃದಯದಲ್ಲಿ ಧರಿಸಲು ಯೋಗ್ಯವಾ ದ್ದಲ್ಲ. ಇದನ್ನು ಹೊಂದಿದವನು ಬೇರೊಬ್ಬನಿದ್ದಾನೆಂದು ಗೂಢವ್ಯಕ್ತಿ ಯೊಬ್ಬನು ಹೇಳಿದನು, ಈ ಶಬ್ದವನ್ನು ಕೇಳಿದೊಡನೆಯೇ, ನಾನು ನಿರಾ ಶನಾಗಿ ; ಗುಪ್ತವ್ಯಕ್ತಿಯನ್ನು ಕುರಿತು ‹ ಏನು ? ಈ ಹೂವನ್ನು ಹೃದ ಯದಲ್ಲಿ ಧರಿಸಲು ಯೋಗ್ಯತೆಯಿಲ್ಲವೇ ? ' ಎಂದೆನು. ‹ ಛೀ ! ಪ್ರತ್ಯಕ್ಷ ಯಮರಾಜನೇ ಬಂದರೂ ಅವನಿಗೆ ನಾನು ಈ ಪುಷ್ಪವಂಕೊಡ.ವುದಿಲ್ಲ. ಇದು ನನ್ನದೇ ಸರಿ. ' ಎಂದೆನು. ಪುನಃ ‹ ಯುವಕನೇ ! ನೀನು ನಿರಾಶ ನಾಗುವುದು ನನಗೂ ಇಷ್ಟವಿಲ್ಲ. ಆದರೇನು ? ನೀನು ಸತ್ಯ ಮಾರ್ಗವ ನ್ನವಲಂಬಿಸೆಂದು ಹೇಳುವುದೇ ನನ್ನ ಕರ್ತವ್ಯವು. ನೀನು ಬಲಾತ್ಕಾರ ದಿಂದ ಈ ಪುಷ್ಪವನ್ನು ಹೃದಯದಲ್ಲಿ ಧರಿಸಿಕೊಂಡರೆ, ಮುಂದೆ ಭಯಂಕ ರವಾದ ಅನರ್ಥವು ಆಗುವುದು. ನಿನ್ನ ನಡತೆಗೆ ಸ್ಥಿರವಾದ ಕಲಂಕ ಉಂ ಟಾಗುವದು. ನಿನ್ನ ಕೀರ್ತಿಯು ಲಯವಾಗುವದು. ' ಎಂದನು. ನಾನಿ ದನ್ನು ಕೇಳಿ ನನ್ನಲ್ಲಿಯೇ—‹ ಪ್ರಭುವೇ ! ಹಾಗಾದರೆ ನನಗೇಕೆ ಆ ಪುಷ್ಪ ವನ್ನು ದೃಷ್ಟಿಗೆ ಬೀಳಿಸಿದೆ ? ' ಎಂದೆನು. ಆಗ ಆ ದಿವ್ಯ ವಿಭೂತಿಯು ಎದುರಿಗೆ ಬಂದು, ‹ ತರುಣನೆ ! ಧೈರ್ಯಹೊಂದು. ಈ ಪುಷ್ಪವು ನಿನಗೆ ಯಾವಾಗಲಾದರೂ ಸಿಕ್ಕುವುದು. ' ಎಂದು ಹೇಳುವಷ್ಟರಲ್ಲಿಯೇ ಆ ಪುಷ್ಪವು ನನ್ನ ಕೈಯಿಂದ ಅದೃಶ್ಯವಾಯಿತು, ಆಗ ‹ ಅರೇರೆ ? ' ಎಂಬ ಶಬ್ದವು ನನ್ನ ಮುಖದಿಂದ ಹೊರಟಿತು ; ನನಗೆಚ್ಚರವಾಯಿತು.

ಕಮಲಿನಿ :—ಒಳ್ಳೇದು ! ಈ ಸ್ವಪ್ನಾರ್ಥವೇನು ?

ಗುಲಾಬಸಿಂಗ :—ಈ ಸ್ವಪ್ನವು ನಿಜವಾಗಿ ಭವಿಷ್ಯತ್ಸೂಚನೆಯಾಗಿದೆ. ಏನಾ ದರೂ ಪ್ರಿಯಸ್ವಾಮಿ ಸೇವೆಯಲ್ಲಿ ಮೃತನಾದರೂ ಆನಂದವೆಂದು ತಿಳಿ ಯುವೆನು. ಇದೇ ಸೇವಕರ ಕರ್ತವ್ಯವು.

ಕಮಲಿನಿ :—ನಿಜ. ರಾಜಪುತ್ರವೀರರು ಈವರೆಗೆ ಇದನ್ನು ಕಲಿತಿರುತ್ತಾರೆ. ಪತಿಯ ಹಿಂದೆ ತನ್ನ ದೇಹವನ್ನು ಬಿಸುಮಾಡಬೇಕೆಂಬುದನ್ನು ರಾಜಪುತ್ರ ಸ್ತ್ರೀಯರಿಗೆ ಕಲಿಸಬೇಕಾಗಿಲ್ಲ. ಆದರೆ, ಪ್ರಾಣನಾಥನೆ ! ಈ ಸ್ವಪ್ನದಿಂದ

ತಮ್ಮ ಮನಸ್ಸಿಗೆ ದುಃಖವೂ ಅಶುಭವೂ ಘಟಿಸುವುದೆಂದು ನನಗೆ ತಿಳಿಯುವುದು

ಗುಲಾಭಸಿಂಗ:—ಅಹುದು ನನಗೂ ಹಾಗೆಯೇ ತೋರುವುದು. ಏನಾದರೂ ಆಗಲಿ! ಸತ್ಯವನ್ನು ನೆನೆದು ನಮ್ಮ ಉದ್ಯೋಗವನ್ನು ಮಾಡಬೇಕು.

ಕಮಲಿನಿ:—ಶಾಸ್ತ್ರಜ್ಞರನ್ನು ಕರೆಯಿಸಿ ಸ್ವಪ್ನಾರ್ಥವನ್ನು ತಿಳಿದು, ಶಾಂತಿ ಮುಂತಾದುವುಗಳನ್ನು ಮಾಡಿಸಿದರೊಳ್ಳೆಯದು.

ಗುಲಾಬಸಿಂಗ:—ನೀನು ಹುಚ್ಚಿ. ಇಂತಹ ಶಾಂತಿಕರ್ಮಗಳಿಂದ ಪ್ರಾಚೀನಕರ್ಮವನ್ನು ತಿರುಗಿಸಬಹುದಾದರೆ, ಯಾರಿಗೂ ದುಃಖವುಂಟಾಗುತ್ತಿರಲಿಲ್ಲ. ಭೋಕ್ತೃತ್ವವನ್ನು ಭೋಗಿಸಲೇಬೇಕು, ಇದರಿಂದಾವ ಅಪಾಯವೂ ಇಲ್ಲ

ಕಮಲಿನಿ:—ಆದರೆ, ನನ್ನ ಚಿತ್ತಕ್ಕೆ ವ್ಯಸನವುಂಟಾಗಿದೆ.

ಗುಲಾಬಸಿಂಗ:—ಇದನ್ನು ನೋಡು. ಮನುಷ್ಯಮಾತ್ರದವರು ಸುಖದಲ್ಲೇ ಇರಬೇಕೆಂದಿಚ್ಛಿಸಬಾರದು; ಏಕೆಂದರೆ,—ಸೃಷ್ಟಿನಿಯಮದಂತೆ ಸುಖ ದುಃಖಗಳು ಪರಂಪರೆಯಿಂದುಂಟಾಗುವವು. ಅದನ್ನಡ್ಡಿಮಾಡಲು ಮಾನವರಿಗೆ ಸಾಮರ್ಥ್ಯವಿಲ್ಲ ಈಶ್ವರನಲ್ಲಿ ಭಕ್ತಿಯಿಟ್ಟು ಸುಮ್ಮನಿರುವುದೊಳ್ಳೆಯದು. ಏನಾಗಬೇಕೋ ಅದು ಎಂದಿಗೂ ಆಗದಿರದು. ಆದ್ದರಿಂದ ಮನಸ್ಸಿನಲ್ಲಿ ಏಕೆ ದುಃಖಿಸಬೇಕು.

ಕಮಲಿನಿ:—ಹೆಂಗಸಾದ ನಾನು ತಮ್ಮ ಮುಂದೇನು ಹೆಚ್ಚಾಗಿ ಹೇಳಲಿ?

ಗುಲಾಬಸಿಂಗ:—ಪ್ರಿಯೆ, ಹಾಗಲ್ಲ; ಹೀಗೆ ದುಃಖಿಸಬಾರದು; ಸ್ವಪ್ನಗಳಲ್ಲಿ ನಾನಾವಿಧಗಳಿವೆ. ಒಂದೊಂದುಕಾಲದಲ್ಲಿ ಸರ್ವದಾ ಮನೆಯಲ್ಲಿ ಯೋಚಿಸುತ್ತಿದ್ದ ವಿಷಯಗಳೇ ರಾತ್ರಿ ಸ್ವಪ್ನದಲ್ಲಿ ಕಾಣುವುವು. ಅದರಲ್ಲಿ ಕಲ್ಪನಾರಂಗವು ಜನರಿಗೆ ಪುಷ್ಟೀಕನನಲು ನಿತ್ಯವೂ ಅಶುಭವನ್ನು ಸೂಚಿಸುತ್ತವೆ. ಸ್ವಪ್ನಗಳೆಲ್ಲಾ ನಿಜವೆಂದು ಹೇಳಲಾಗುವದಿಲ್ಲ; ಕೆಲವು ನಿಜವಾಗುತ್ತವೆ; ಆದರೂ ಬಹುಶಃ ವಿಚಾರತರಂಗಳಿಂದಲೇ ಸ್ವಪ್ನಗಳು ಬೀಳುವುವು. ಆಗ ಇಂತಹ ಸ್ವಪ್ನವೆಂದರೆ, ಕಲ್ಪಿತವೆಂದು ಮನದಲ್ಲಿ ನಿರ್ಧರಿಸಿ ಸುಮ್ಮನಿರುವುದೊಳ್ಳೆಯದು. ಬಹಳ ಹೊತ್ತಾಯಿತು. ಮಹಾರಾಜನಾಜ್ಞೆಯಂತೆ ಹೋಗಬೇಕು. ಎಂದನು.

ಪ್ರಾತಃಕಾಲವಾಯಿತು. ಜನರು ತಮ್ಮ ತಮ್ಮ ಉದ್ಯೋಗಗಳಲ್ಲಿ ತತ್ಪರರಾದರು. ಗುಲಾಬಸಿಂಗನು ಪ್ರಾತರ್ವಿಧಿಗಳನ್ನು ತೀರಿಸಿ, ಭೋಜನಮಾಡಿ ಸ್ವಲ್ಪ ವಿಶ್ರಾಂತಿ ಹೊಂದಿ, ಒಳಿಕ ರಂಭ್ಯಾಕಾಲದಲ್ಲಿ ರಣಸಿಂಗನೆಂಬ ಗೆಳೆಯನೊಡನೆ ಸ್ವಲ್ಪ ಉಪಹಾರ ಸಾಹಿತ್ಯಗಳನ್ನೂ, ಎರಡು ಯವಸರ ಉಡುಪುಗಳನ್ನೂ, ಶಸ್ತ್ರಾಸ್ತ್ರಗಳನ್ನೂ ಧರಿಸಿ; ದುರ್ಗವನ್ನು ದಾಟಿ, ಒಂದರಣ್ಯಮಾರ್ಗವಾಗಿ ಹೋ

ಗುತ್ತಿರುವಾಗ ಮಹಾರಾಣರ ಕಾರ್ಯದಲ್ಲಿ ಹೇಗೆ ಸಿದ್ಧಿ ಹೊಂದಬೇಕೆಂದು ಗುಲಾಬಸಿಂಹನು ಆಲೋಚಿಸಲಾರಂಭಿಸಿದನು. ಆಗ ಅವನಿಗೆ ಸ್ವಪ್ನದ ನೆನಪಾಯಿತು. ಮನದಲ್ಲಿ ಅವನು ವಿಚಾರವಮಾಡತೊಡಗಿದನು :—"ಮನದಲ್ಲಿ ಯಾವ ವಸ್ತುಗಳನ್ನು ಚಿಂತಿಸುತ್ತಿರುವೆವೋ ಆ ವಸ್ತುಗಳೇ ಸ್ವಪ್ನದಲ್ಲಿ ಗೋಚರಿಸುವುದೆನ್ನುತ್ತಾರೆ. ಆದರೆ ನನ್ನ ವಿಚಾರ ರಹಸ್ಯಕ್ಕೆ ಈ ಸ್ವಪ್ನವು ಬೇರೆಯಾಗಿದೆ. ಇದಕ್ಕೆ ಭವಿಷ್ಯತ್ಸೂಚನೆಯೆಂದು ತಿಳಿದರೂ, ಅದರರ್ಥವನ್ನೇನೆಂದು ತಿಳಿಯಬೇಕು? ಸ್ವಪ್ನದಲ್ಲಿ ಕಂಡ ಪುಷ್ಪದ ಕೋಮಲತೆಯೂ, ಸೌಂದರ್ಯವೂ ಸುವಾಸನೆಯೂ ನನಗೆ ಮೋಹವನ್ನುಂಟುಮಾಡಿವೆ. ಆದರೆ, ಆ ಪುಷ್ಪವು ನನಗೆ ಪ್ರಾಪ್ತವಾಗಲಿಲ್ಲ. ಇದರರ್ಥವೇನಿರಬೇಕು? ನಾನು ಯಾವ ಕೆಲಸಕ್ಕಾಗಿ ಈಗ ಈ ದುರ್ಗವನ್ನ ಬಿಟ್ಟು ಹೋಗುತ್ತಿರುವೆನೋ, ಆ ಕಾರ್ಯವು ನಿಷ್ಫಲವಾಗುವುದೇ,? ಸ್ವಪ್ನಾರ್ಥವೇನಿರಬಹುದು? ಸ್ವಪ್ನದಲ್ಲಿ ಕಂಡ ವ್ಯಕ್ತಿಯು ಇನ್ನು ಸೌಶೀಲ್ಯತೆಗೆ ಕಳಂಕವಾಗುವುದೆಂದು ಹೇಳಿದುದೇಕೆ?" ಇತ್ಯಾದಿ ವಿಚಾರಗಳಿಂದ ಗುಲಾಬಸಿಂಗನು ಮಗ್ನನಾಗಿದ್ದನು. ಆಗ, ಅವನಿಗೆ ಎಚ್ಚರಿಕೆಕೂಡಾ ಇರಲಿಲ್ಲ. ರಾತ್ರಿಯಾಯಿತು. ಆದಿನ ಶುಕ್ಲಪಕ್ಷದ ದ್ವಾದಶಿಯಾಗಿತ್ತು. ಆದ್ದರಿಂದ ಜಾಗ್ರತೆ ಚಂದ್ರೋದಯವಾಯಿತು. ಅವರಿಬ್ಬರೂ ಪ್ರಯಾಣ ಮಾಡುತ್ತಿದ್ದರು. ಚಿತ್ತೂರಿನಿಂದ ಮೂರುಮೈಲಿದೂರ ನಡೆದು ಬಂದಿದ್ದರು. ಆಗ ಅಲ್ಲಾವುದೀನನ ಗುಡಾರದ ದೀಪವು ಸ್ವಲ್ಪಮಟ್ಟಿಗೆ ಕಾಣುತ್ತಿತ್ತು. ಜಾಗರೂಕರಾಗಿ ನಡೆಯಲಾರಂಭಿಸಿದರು; ಸ್ವಲ್ಪ ದೂರ ಮುಂದೆ ಹೋದರು. ಮನುಷ್ಯರ ಹೆಜ್ಜೆಯ ಶಬ್ದವು ಕೇಳಬಂತು. ಯಾವಪಾರ್ಶ್ವದಲ್ಲಿ ಶಬ್ದವನ್ನು ಕೇಳಿದರೋ, ಆ ಕಡೆಗೆ ಇಬ್ಬರೂ ತಿರುಗಿದರು. ಹದಿನಾರು ವರ್ಷದ ಬಾಲನೊಬ್ಬನು ಹೊಲದಲ್ಲಿ ಬಿದ್ದಿದ್ದನು. ಅವನ ಶರೀರವು ಶುಷ್ಕವಾಗಿ ಬಟ್ಟೆಯು ಹರಿದುಹೋಗಿತ್ತು. ಅವನು ಎರಡು ಕಣ್ಣುಗಳನ್ನೂ ಮುಖದ ಮೇಲಿಟ್ಟು ರೋದಿಸುತ್ತಿದ್ದನು ಇದನ್ನು ನೋಡಿ ಗುಲಾಬಸಿಂಹನಿಗೆ ದಯೆಯುಂಟಾಗಿ; ಅವನ ಹತ್ತಿರ ಹೋಗಿ; ಅವನ ಕಯ್ಗಳನ್ನು ಪಕ್ಕದಲ್ಲಿರಿಸಿ; ಮುಖವನ್ನು ನೋಡಿದನು. ಆತನ ಉದರವು ಒತ್ತಿಹೋಗಿತ್ತು. ಆದ್ದರಿಂದ ಹಸಿವಿನಿಂದ ವ್ಯಾಕುಲನಾಗಿದ್ದಾನೆಂದು ಅನುಮಾನಿಸಿದನು. ಬಹಳ ಹೊತ್ತು ಅತ್ತುದರಿಂದ ನಿಶ್ಶಕ್ತನಾಗಿದ್ದನು. ಸಮೀಪದ ಪರ್ವತ ಝರಿಯಿಂದ ನೀರನ್ನು ತರುವಂತೆ ರಣಸಿಂಗನನ್ನು ಕಳುಹಿಸಲು, ಅವನು ನೀರನ್ನು ತಂದನು. ಅವನ್ನವನ ಬಾಯಿಗೆ ಹಾಕಿದನು. ಆಗ ಅವನಿಗೆ ಸ್ವಲ್ಪ ಜ್ಞಾನವುಂಟಾಯಿತು. ಕಣ್ದೆರೆದು ಅತ್ತಿತ್ತ ನೋಡಿದನು. ಆಗ ಗುಲಾಬಸಿಂಗನಿಗಾನಂದವಾಯಿತು. ತನ್ನಲ್ಲಿರುವ ಸ್ವಲ್ಪ ಆಹಾರನ್ನು ಅವನಿಗೆ ತಿನ್ನಿಸಿ ಸ್ವಲ್ಪ ನೀರನ್ನು ಕುಡಿಸಿದನು. ಆಹಾರವು ಉದರಗತವಾಗಲು, ಅವನಿಗೆ ಎದ್ದು ಕೂತುಕೊಳ್ಳುವ ಶಕ್ತಿಯುಂಟಾಯಿತು. ಎದ್ದು ಕುಳಿತನು. ಇಂತಹ ರಾತ್ರಿಯ ಕಾಲದಲ್ಲಿ ಈ ಹುಡುಗನು ಇಲ್ಲಿ ಬಿದ್ದಿದ್ದನ್ನು ನೋಡಿ ಗುಲಾಬಸಿಂಗನಿಗಾಶ್ಚರ್ಯವಾಯಿತು;

ಅವನು ವಿಚಾರಿಸಿದನು. ಅತನು ದೀನಮುದ್ರೆಯಿಂದ "ಸ್ವಾಮಿಾ! ನನ್ನ ಜೀವವನ್ನು ಹೇಗೆ ಬದುಕಿಸಿದಿರೋ ಹಾಗೆಯೇ ನನ್ನ ಜನ್ಮದಾತೆಯಾದ ಜನನಿಯನ್ನು ಬದುಕಿಸಿದರೆ, ಬಹು ಉಪಕಾರವಾಗುವುದು. ನಮ್ಮ ಗುಡಿಸಲು ಇಲ್ಲಿಗೆ ಹತ್ತಿರದಲ್ಲಿದೆ. ನನ್ನ ಜನನಿಯು ಕೆಲವು ದಿನಗಳಿಂದ ಉಪವಾಸವಾಗಿದ್ದಾಳೆ." ಎನ್ನಲು ಗುಲಾಬಸಿಂಗನು—"ನಿನ್ನ ತಾಯಿಯ ಹತ್ತಿರಕ್ಕೆ ಕರೆದುಕೊಂಡು ಹೋಗಲೊ" ಎಂದನು. ಬಳಿಕ ಮೂವರೂ ಆ ಗುಡಿಸಲನ್ನು ತಲ್ಪಿದರು. ಅಲ್ಲಿ ಕತ್ತ[illegible]ಾಗಿತ್ತು. ಆಗ ರಣಸಿಂಗನು ಚಕ್ಕಮುಕ್ಕಿಯಿಂದ ಬೆಂಕಿಯನ್ನು ಹತ್ತಿಸಿದನು. ಬೆಳಕಾಯಿತು. ಆ ಹುಡುಗನಂತೆ ಅವನ ತಾಯಿಯ ಅವಸ್ಥೆಯೂ ಆಗಿತ್ತು. ಆಗ ಗುಲಾಬಸಿಂಹನು ಆ ಬಾಲನನ್ನು ನೀರು ತರುವುದಕ್ಕೆ ಕಳುಹಿಸಿದನು. ಆಗ ಒಂದು ಜಾವವಾಗಿತ್ತು. ಆಕಾಶದಲ್ಲಿ ಮೋಡವಿಲ್ಲದ್ದರಿಂದ ಚಂದ್ರನೂ, ನಕ್ಷತ್ರಗಳೂ ಹೊಳೆಯುತ್ತಿದ್ದುವು. ಸ್ವಲ್ಪ ಕಾಲದಮೇಲೆ ಆ ಹುಡುಗನು ನೀರನ್ನು ತರಲು ತನ್ನಲ್ಲಿದ್ದ ಆಹಾರವನ್ನು ಆ ಹುಡುಗನಿಗೆ ಕೊಟ್ಟನು. ಅವನು ತಾಯಿಗೆ ತಿನ್ನಿಸಿದನು. ಸ್ವಲ್ಪ ಆಹಾರವು ಉದರಗತವಾಗಲು ಆಕೆಗೆ ಜ್ಞಾನ ಬಂತು. ಆ ಗುಡಿಸಲ ಹತ್ತಿರದಲ್ಲೇ ಸುಲತ್ತಾನನ ಗುಡಾರವಿತ್ತು. ಗುಲಾಬಸಿಂಗನು ಏನನ್ನೋ ಆಲೋಚಿಸಿ, ತನ್ನ ಕಠಾರಿಯನ್ನೂ, ಧನುರ್ಬಾಣಗಳನ್ನೂ ಧರಿಸಿ; ಆ ಗುಡಿಸಲಿನಿಂದ ಹೊರಟನು ಆಗ ಆ ಹುಡುಗನನ್ನು ಕುರಿತು, "ಎಲೈ, ಬಾಲಕ! ನಾನು ಬೇಗ ಬಂದು ನಿನಗೆ ಬೇಕಾದುದನ್ನು ಸಿದ್ಧಪಡಿಸುವೆನು." ಎಂದು ಹೇಳಿ ರಣಸಿಂಗನೊಡನೆ ಹೊರಟು ಗಿಡದ ತೋಪಿನಲ್ಲಿ ಹೋಗುತ್ತಿದ್ದನು, ಸ್ವಲ್ಪದೂರ ಹೋಗುತ್ತಿರುವಾಗ, ನೆಲದಲ್ಲಿ ಬಿದ್ದಿದ್ದ ಒಣಗಿದೆಲೆಗಳಮೇಲೆ ಸಳಸಳ ಎಂಬ ಶಬ್ದವು ಕೇಳಬಂತು. ಆಗ ಗುಲಾಬಸಿಂಗನು ಆ ಶಬ್ದ ಕೇಳಬಂದ ಕಡೆಗೆ, ಒಂದು ಬಾಣವನ್ನು ಬಿಟ್ಟನು. ಕೂಡಲೇ ಒಂದು ಕೋಮಲ ಸ್ವರೂಪವಾದ ರೋದನವು ಕೇಳಿಸಿತು. ಗುಲಾಬಸಿಂಗನು ಇದನ್ನು ಕೇಳಿ ಸ್ತಬ್ಧನಾಗಿ ನಿಂತನು.

ಪ್ರಕರಣ 11.

ಆರ್ತಸ್ವರವು ಹೃದಯಭೇದಕವಾಗಿರಲು ಗುಲಾಬಸಿಂಗನ ಹೃದಯವು ಕಂಪಿಸಿತು. ಬಾಣಬಿಟ್ಟ ಕಡೆಗೆ ಓಡುತ್ತ ಹೋದನು. ಆ ಸ್ಥಳದಲ್ಲಿ ಸೌಂದರ್ಯಶಾಲಿಯಾದ ಸುಕುಮಾರ ಬಾಲಕನೊಬ್ಬನು ತನ್ನ ಬಾಣಬಂದ ಗಾಯಹೊಂದಿ ಬಿದ್ದಿರುವುದು ದೃಗ್ಗೋಚರವಾಯಿತು. ಆ ಬಾಲಕನಿಗೆ 16-17 ವಯಸ್ಸು ಆಗಿರಬಹುದು. ಆ ಬಾಲಕನು ಸಾಧಾರಣವಾದ ಉಡುಪುಗಳಿಂದ ಶೋಭಿತನಾಗಿದ್ದನು. ಗುಲಾಬಸಿಂಗನು ಬಿಟ್ಟಬಾಣವು ಎಡಗೈಯಲ್ಲಿ ನಟ್ಟು, ಎಚ್ಚರತಪ್ಪಿತ್ತು, ಆ ಗಾಯವುಳ್ಳ ಬಾಲಕನನ್ನು ನೋಡಿ, ಅವನಿಗೆ ಪಶ್ಚಾ

ತ್ತಾನಾಯಿತು. ಅವನು ಹತ್ತಿರಹೋಗಿ ಅವನ ಕೈಯಲ್ಲಿ ನಟ್ಟ ಬಾಣವನ್ನು ಕಿತ್ತನು. ಬಳಿಕ ಹತ್ತಿರದಲ್ಲಿದ್ದ ಕೆಲವು ಗಿಡಮೂಲಿಕೆಗಳನ್ನು ತಂದು; ಪಟ್ಟು ಹಾಕಿ; ಬಟ್ಟೆಯಿಂದ ಕಟ್ಟಿದನು. ಗಾಯದಿಂದ ಬಹಳ ರಕ್ತಸ್ರಾವವಾದ್ದರಿಂದ ಆ ಹುಡುಗನಿಗೆ ನಿಶ್ಶಕ್ತಿಯಾಗಿತ್ತು. ಆಗ ಗುಲಾಬಸಿಂಗನು ಅವನ ತಲೆಯ ರುಮಾಲನ್ನು ತೆಗೆದನು. ಆ ಹುಡುಗನ ಕೇಶಕಲಾಪವನ್ನು ನೋಡಿ ವಿಸ್ಮಯಪಟ್ಟನು. ವಿಚಾರಮಾಡಿ ತಲೆಯಮೇಲೂ ಮುಖದಮೇಲೂ ತನ್ನ ಚೀಲದಲ್ಲಿದ್ದ ನೀರನ್ನು ಎರಚಿದನು. ಆದರೂ ಆ ಹುಡುಗನಿಗೆ ಪ್ರಜ್ಞೆಬರಲಿಲ್ಲ. ಗುಲಾಬಸಿಂಗನು ಗಾಬರಿಯಾಗಿ ಅವನೆದೆಯಮೇಲೆ ಕಯ್ಯಿಟ್ಟನು. ಆದರೆ, ಯಾರು ಬಲ್ಲರು? ಕೂಡಲೆ ಅವನು ಹೆದರಿ; ಹಿಂದೆ ಸರಿದು ಆಶ್ಚರ್ಯಚಕಿತನಾಗಿ ತನ್ನಷ್ಟಕ್ಕೇ ‘ಶಿವ ಶಿವ! ಈ ಸುಕುಮಾರಿಯಾದ ಬಾಲೆಯ ಪ್ರಾಣಘಾತಮಾಡಿದೆನಲ್ಲ!’ ಎಂದುಕೊಂಡನು.

ಪ್ರಿಯ ವಾಚಕವೃಂದ! ಯಾವನನ್ನು ಯುವಕನೆಂದು ತಿಳಿದಿದ್ದನೋ, ಅವನು ಯುವಕನಲ್ಲ; ಪುರುಷವೇಷಧಾರಿಣಿಯಾದ ಸ್ತ್ರೀ! ಇದನ್ನು ನೋಡಿದೊಡನೆಯೇ, ಅವನಿಗೆ ಎಷ್ಟಾಶ್ಚರ್ಯವಾಯಿತೋ, ಅಷ್ಟು ದುಃಖವೂ ಆಯಿತು. ಗುಲಾಬಸಿಂಗನು ಆಕೆಯ ಹತ್ತಿರಹೋಗಿ ಕುಳಿತನು. ಸ್ವಲ್ಪಕಾಲದಮೇಲೆ, ಅವಳಿಗೆ ಚಲನೆಯುಂಟಾಯಿತು. ರಣಸಿಂಗನ ಸಹಾಯದಿಂದ ಆ ಗುಡಿಸಲಿಗೆ ತೆಗೆದುಕೊಂಡು ಹೊರಟನು. ದಾರಿಯಲ್ಲಿ ಗುಲಾಬಸಿಂಗನು ಅನೇಕ ವಿಚಾರಮಾಡುತ್ತ ಕಳೆದ ರಾತ್ರಿಯಲ್ಲಾದ ಸ್ವಪ್ನವನ್ನೂ, ಈಗ ಉಂಟಾದ ಬಗೆಯನ್ನೂ ಮನದಲ್ಲಿ ತುಲನೆಮಾಡತೊಡಗಿದನು:—“ಸ್ವಪ್ನದಲ್ಲಿ ಸಿಕ್ಕಿದ ಪುಷ್ಪವೇ ಈ ಸುಂದರ ಬಾಲೆಯಾಗಿದ್ದಾಳೆಯಲ್ಲವೇ? ಆ ಪುಷ್ಪದ ಸೌಂದರ್ಯವನ್ನೂ, ಸುವಾಸನೆಯನ್ನೂ, ಕೋಮಲತೆಯನ್ನೂ ನೋಡಿ ಮೋಹಿತನಾದೆನು; ಅದರಂತೆ, ಈ ಸುಂದರಿಯ ಅನುಪಮ ಸೌಂದರ್ಯವನ್ನೂ ನೋಡಿ ಮೋಹಜನಕವಾಗದೇ?” ಎಂದು ತನ್ನಲ್ಲಿ ಹೇಳಿಕೊಳ್ಳುತ್ತಿದ್ದನು. “ಇಲ್ಲ. ನನ್ನ ಮನದಲ್ಲಿ ಮೋಹೋತ್ಪನ್ನವಾಗುವುದಿಲ್ಲ.” ಎನ್ನುತ್ತ ರಣಸಿಂಗನೊಡನೆ ಆಕೆಯನ್ನು ತೆಗೆದುಕೊಂಡು ಆ ಗುಡಿಸಲಿಗೆ ಹೋದನು. ಅಲ್ಲಿ ತಾಯಿಮಕ್ಕಳಿಬ್ಬರೂ ಮಾತಾಡುತ್ತಾ ಕುಳಿತಿದ್ದರು, ಗುಲಾಬಸಿಂಗನು ಇಷ್ಟು ಬೇಗ ಬಂದುದನ್ನು ನೋಡಿ, ಗುಡಿಸಲಿನಲ್ಲಿದ್ದ ಹುಡುಗನು ಓಡಿಬಂದು ಬಾಗಿಲಲ್ಲಿ ನಿಂತನು. ಗುಲಾಬಸಿಂಗನು ತಂದಿರುವ ಪುರುಷವೇಷದ ಸ್ತ್ರೀಯನ್ನು ನೋಡಿ; ವಿಸ್ಮಯಪಟ್ಟು ‘ಇವನಾರು?’ ಎಂದು ಕೇಳಿದನು.

ಗುಲಾಬಸಿಂಹ:—ಮೊದಲು ಗುಡಿಸಲಲ್ಲಿ ಮಂಚದಮೇಲೆ ಕಂಬಳಿಯನ್ನು ಹಾಸು;

ನಿನ್ನ ಹೆಸರೇನು?

ಹುಡುಗ:—“ನನ್ನ ಹೆಸರು-ವಿಶ್ವಾಸ”

ಹೀಗೆ ನಮ್ರತೆಯಿಂದ ಉತ್ತರಕೊಟ್ಟು ಒಳಕ್ಕೆಹೋಗಿ ಹಾಸಿಗೆಯನ್ನು ಹಾಕಿದನು.

ಬಳಿಕ ಗುಲಾಬಸಿಂಗನು ಆಕೆಯನ್ನಲ್ಲಿ ಮಲಗಿಸಿದನು. ಆಕೆಗೆ ಶ್ವಾಸವುಂಟಾಯಿತು; ಕಣ್ತೆರೆಯಲಿಲ್ಲ,

ಮಧ್ಯರಾತ್ರಿಯಾಯಿತು. ನೀಲವರ್ಣವಾದ ಆಕಾಶದಲ್ಲಿ ಚಂದ್ರನು ಮಧ್ಯವರ್ತಿಯಾಗಿ ವಿರಾಜಿಸುತ್ತ ಸುಹಾಸ್ಯವದನದಿಂದ ಈ ಲೋಕವನ್ನು ನೋಡುತ್ತಿದ್ದನು. ರಮ್ಯವಾದ ವನವೂ, ಬೆಳದಿಂಗಳುಳ್ಳ ರಾತ್ರಿಯೂ, ಆ ಗುಡಿಸಲಿನ ಪಾರ್ಶ್ವಪ್ರದೇಶಗಳೂ ಮನೋಹರವಾಗಿ ಕಾಣಿಸುತ್ತಿದ್ದುವು.

ಗುಲಾಬಸಿಂಹ:—ವಿಶ್ವಾಸನೇ! ಇಲ್ಲಿಂದ ಗ್ರಾಮವೆಷ್ಟು ದೂರದಲ್ಲಿದೆ?

ವಿಶ್ವಾಸ:—‘ಅರ್ಧ ಅಥವಾ ಒಂದು ತಾಸಿನ ದಾರಿಯಿದೆ.

ಗುಲಾಬಸಿಂಗನು :— ‘ಹಾಗಾದರೆ ಈ ಹಣವನ್ನು ತೆಗೆದುಕೋ! ಮೂವರಿಗೆ ಒಂದು ತಿಂಗಳಿಗಾಗುವಷ್ಟು ಧಾನ್ಯವನ್ನೂ ಇತರ ವಸ್ತುಗಳನ್ನು ತೆಗೆದುಕೊಂಡು ಬಾ!’ ಎಂದು ಹೇಳಿ ಕೆಲವು ರೂಪಾಯಿಗಳನ್ನು ಕೊಟ್ಟನು.

ವಿಶ್ವಾಸನು ಅದನ್ನು ತೆಗೆದುಕೊಂಡು ತನ್ನ ತಾಯಿಯೊಡನೆ ಧಾನ್ಯ ವಿಕ್ರಯಕ್ಕೆ ಹೊರಟುಹೋದನು. ರಣಸಿಂಗನನ್ನು ಅಲ್ಲಿ ಕುಳ್ಳಿರಿಸಿ, ಗುಲಾಬಸಿಂಗನು ಗುಡಿಸಲಿನಿಂದ ಹೊರಟು ಅತ್ತಿತ್ತ ತಿರುಗಲಾರಂಭಿಸಿದನು. ತಿರುಗುತ್ತಾ ತನ್ನಲ್ಲಿಯೇ—‘ರಾತ್ರಿ ಬಿದ್ದ ಸ್ವಪ್ನಕ್ಕೂ ಈಗ ನಡೆದ ರೀತಿಗೂ ಎಷ್ಟು ಸಾಮ್ಯವಿದೆ? ಸ್ವಪ್ನದಲ್ಲಿ ನನ್ನ ನಖಸ್ಪರ್ಶದಿಂದ ಸುಂದರ ಪುಷ್ಪದಳವು ಕಿತ್ತುಬಿತ್ತು. ಈ ದಿನ ಈ ಸುಂದರಿಯಾದ ಬಾಲೆಯ ಕಯ್ಗೆ ನನ್ನ ಬಾಣವು ತಗಲಿ ಗಾಯವಾಯಿತು! ಅಹಹಾ! ಎಷ್ಟು ಸಾಮ್ಯ ತೋರಿತು: ಯಾವ ಯಾವ ರೀತಿಯಾಗಿ ಆ ಸುಂದರ ಕುಸುಮದ ಪ್ರಾಪ್ತಿಯು ನನಗಿಲ್ಲವೋ, ಅದರಂತೆಯೇ ಈ ಸುಂದರಿಯ ಪ್ರಾಪ್ತಿಯು ನನ್ನ ದೃಷ್ಟದಲ್ಲಿಲ್ಲವಲ್ಲ! ಆ ಕುಸುಮವು ಎರಡನೆಯವರದು ಹೇಗೋ ಈ ಸ್ತ್ರೀಯೂ ಎರಡನೆಯವಳಲ್ಲವೇ? ಯಾವ ಕುಸುಮವು ಅನ್ಯದಾಗಿ ಉಪಯೋಗವಿಲ್ಲವಾಯಿತೋ, ಹಾಗೆಯೇ, ಈ ಸುಂದರಿಯೂ ಎರಡನೆಯವರ ಭೋಗ್ಯವಸ್ತುವಾಗಿರಬಹುದೇ?’ ಹೀಗೆಂದು ಯೋಚಿಸುತ್ತ, ಕೊನೆಗೆ ವಿಚಾರತರಂಗದಿಂದೆಚ್ಚರಹೊಂದಿ; ಆ ಸ್ತ್ರೀಯು ಇಷ್ಟು ಹೊತ್ತಿಗೆಚ್ಚರವಾಗಿರಬಹುದೆಂದೂ ಹಿಸಿ ಗುಡಿಸಲಿಗೆ ಬಂದನು; ಅವನ ಊಹೆಯಂತೆ ಆಗಿತ್ತು. ಆ ಸ್ತ್ರೀಯು ಎಚ್ಚರವಾಗಿದ್ದು ಕೂತಿದ್ದಳು. ಗುಲಾಬಸಿಂಗನನ್ನು ನೋಡಿ, ಮನದಲ್ಲಿ ಭೀತಳಾಗಿ ಲಜ್ಜೆಯಿಂದ ತನ್ನ ಮುಖವನ್ನು ತಗ್ಗಿಸಿದಳು. ಇದನ್ನು ನೋಡಿ, ಗುಲಾಬಸಿಂಗನು :—“ನಿಮ್ಮನ್ನಿಲ್ಲಿಗೆ ತಂದುದನ್ನು ನೋಡಿ, ನಿಮಗಾಶ್ಚರ್ಯವೂ ಕ್ರೋಧವೂ ಉಂಟಾಗಿರಬಹುದು; ಆದರೆ, ನಾವು ನಿಮ್ಮನ್ನು ಕೆಟ್ಟ ಅಭಿಪ್ರಾಯದಿಂದ ತರಲಿಲ್ಲ. ಕಾರಣಾಂತರದಿಂದ ತಂದೆವು, ಈ ಸ್ಥಳದಲ್ಲಿ ನಿಮ್ಮ ಮಾನಮರ್ಯಾದೆಗಳೂ ಅಧಿಕಾರವೂ ವ್ಯತ್ಯಾಸಹೊಂದುದು. ಇಲ್ಲಿ ಯಾವ ದುಃಖವೂ ಉಂಟಾ

ಗುಲಾಬಸಿಂಗನ ಪರಿಚಯವನ್ನು ಮಾಡಲ್ಪಟ್ಟಿರುವುದು. ಇಲ್ಲಿರಲು ನಿಮಗಿಷ್ಟವಿಲ್ಲದಿದ್ದರೆ, ನೀವು ಹೇಳುವ ಸ್ಥಳಕ್ಕೆ ಕರೆದುಕೊಂಡು ಹೋಗಿ ಬಿಡಲು ಸಿದ್ಧರಾಗಿರುತ್ತೇವೆ." ಎಂದನು.

ಇದನ್ನು ಕೇಳಿ ಆ ಸ್ತ್ರೀಯು ಮುಖವನ್ನು ತಗ್ಗಿಸಿದಳು. ಮನದಲ್ಲಿ, ಲಜ್ಜೆ ಆನಂದ, ದುಃಖಾಶ್ಚರ್ಯಗಳಿಂದ ಕೂಡಿದವಳಾದಳು, ಆಕೆಯೊಂದುಬಾರ ಕುತ್ತಿಗೆಯನ್ನು ಮೇಲಕ್ಕೆತ್ತಿ ಗುಲಾಬಸಿಂಗನ ಮುಖದಕಡೆಗೆ ನೋಡಿದಳು. ಅವನ ಶೌರ್ಯವನ್ನು ಪ್ರಕಾಶಿಸುವ ಮುಖಮುದ್ರೆಯನ್ನೂ ಮಾತಾಡುವ ಶೈಲಿಯನ್ನೂ ನೋಡಿ, ಅವಳಿಗೆ ಆನಂದದಿಂದ ರೋಮಾಂಚವಾಯಿತು.

ಆಕೆಯು 'ನೀವು ಯಾರು? ನನ್ನಲ್ಲಿಗೇಕೆ ತಂದಿರಿ?' ಎಂದು ಮಧುರ ವಾಣಿಯಿಂದ ಕೇಳಿದಳು.

ಗುಲಾಬಸಿಂಗನು, "ನೀವು ನಿಮ್ಮ ಕೈಯನ್ನು ನೋಡಿಕೊಂಡರೆ, ಇಲ್ಲಿಗೆ ಬಂದ ಕಾರಣವು ತಿಳಿಯುವುದು. ನಾನು ನಿಮಗೆ ದುಃಖವನ್ನುಂಟುಮಾಡಿದ ಅಧಮಾಧಮನಾದ ದುರ್ದೈವಿಯಾಗಿದ್ದೇನೆಂದು ಹೇಳಿದರೆ ಸಾಕಾಗಿದೆ." ಎಂದು ಖಿನ್ನತೆಯಿಂದ ಹೇಳಿದನು.

ಗುಲಾಬಸಿಂಗನು ಹೇಳಿದ ಕೊನೆಯಮಾತು ಆಕೆಯಮನಸ್ಸಿಗೆ ಚಮತ್ಕಾರವಾಗಿ ತೋರಿತು. ಆಕೆಯು ಕರುಣಸ್ವರದಿಂದ ಹೇಳಿದುದೇನೆಂದರೆ:—"ತಾವು ಹೇಗೆ ದುರ್ದೈವಿಯೆಂದು ಹೇಳಿದಿರೋ. ನಾನೂ ಹಾಗೆಯೇ ದುರ್ದೈವಿಯಾಗಿದ್ದೇನೆ; ನನ್ನ ದುರ್ಭಾಗ್ಯಕ್ಕೆ ಮಿತಿಯೇ ಇಲ್ಲವೆಂದು ಹೇಳುವೆನು." ಅನ್ನಲು ಆಕೆಯನೇತ್ರದಿಂದ ಅಶ್ರುಪ್ರವಾಹವು ಹರಿಯಲಾರಂಭಿಸಿತು. ಇದನ್ನು ನೋಡಿ ಗುಲಾಬಸಿಂಗನಿಗೆ ಪಶ್ಚಾತ್ತಾಪವಾಯಿತು.

ಅವನು ಆಕೆಯನ್ನು ಕುರಿತು—"ನನ್ನ ಕೃತ್ಯದಿಂದ ತಮಗೆ ಗಾಯವಾಯಿತು; ಆದರೂ, ಅದನ್ನು ಮನಕ್ಕೆ ತರದೆ ನಿಮ್ಮ ವೃತ್ತಾಂತವನ್ನು ಹೇಳುವಿರಾ? ನಿಮ್ಮ ದುಃಖ ಪರಿಹಾರಕ್ಕಾಗಿ ಶಕ್ತಿಯಿದ್ದಷ್ಟು ಪ್ರಯತ್ನಿಸುವೆನು." ಎಂದನು

ಆಗ ಆಕೆಯು—"ಛೀ! ಛೀ: ಅಷ್ಟು ಸೂಕ್ಷ್ಮವಾಗಿ ಹೇಳಬೇಡಿ' ನೀವು ನನ್ನೊಡನೆ ಸಂಭಾಷಿಸುತ್ತಿರುವ ಈ ಪ್ರೇಮಯುಕ್ತವಾದಂತಹ ಭಾಷಣೆಯನ್ನು ಈ ಜನ್ಮದಲ್ಲಿ ನಾನೊಂದು ಬಾರಿಯೂ ಕೇಳಿಲ್ಲ; ನನ್ನ ದುಃಖವು ಯಾರಿಂದಲೂ ಪರಿಹಾರವಾಗದು." ಎಂದಳು.

ಆಕೆಯು ಕಂಠದಿಂದ ಯಾವ ಮಾತೂ ಹೊರಡಲಿಲ್ಲ. ಕಣ್ಣಿನಲ್ಲಿ ನೀರು ತುಂಬಿತು. ಆಗ ಗುಲಾಬಸಿಂಗನನ್ನು ವಿಚಾರಿಸುವುದಕ್ಕಾಗಿ ತನ್ನ ಕೈಯನ್ನೆತ್ತಲು ಪ್ರಯತ್ನಿಸಿದಳು; ಆದರೆ ವ್ಯರ್ಥವಾಯಿತು. ಕಯ್ಯನ್ನೆತ್ತಲಾಗಲಿಲ್ಲ; ಕೈಯಿಂದ ರಕ್ತಸ್ರಾವವಾಗಲಾರಂಭಿಸಿತು: ಆದನ್ನು ನೋಡಿ ಆಕೆಯು ಗಾಬರಿಯಿಂದ "ಅಯ್ಯಾ! ಇದೇನು?" ಎಂದು ಕೇಳಿದಳು.

ಆಗ ಗುಲಾಬಸಿಂಗನು ಗಾಬರಿಯಾಗಬೇಡಿರೆಂದು ಆಕೆಯ ಗಾಯುವುಳ್ಳ ಕಯ್ಯನ್ನು ಎತ್ತಿ ತನ್ನ ಕೈಯಲ್ಲಿ ಹಿಡಿದು; “ನಿಮ್ಮ ಕಯ್ಗೆ ಗಾಯವಾಗಿದೆ. ಕಯ್ಯನ್ನೆತ್ತಿದ್ದರಿಂದ ಗಾಯದಿಂದ ರಕ್ತ ಹರಿಯುತ್ತಿದೆ; ನಿಲ್ಲಿರಿ; ನಾನು ಗಟ್ಟಿ ನಾನು ಗಟ್ಟಿಯಾಗಿ ಕಟ್ಟುತ್ತೇನೆ.” ಎಂದು ಹೇಳಿ; ಗಾಯಕ್ಕೆ ಬಟ್ಟೆಯನ್ನು ಸುತ್ತಿದನು.

ತನ್ನ ಕಯ್ಗೆ ಹೇಗೆ ಯಾವಾಗ ಗಾಯವಾಯಿತೆಂಬುದು ಆಕೆಗೆ ತಿಳಿದಿರ ಲಿಲ್ಲ. ಆಕೆಯು ನನ್ನ ಕೈಗೆ ಹೇಗೆ ಯಾವಾಗ ಗಾಯವಾಯಿತೆಂದು ಕೇಳಿದಳು.

ಗುಲಾಬಸಿಂಗ:—ತಮ್ಮ ಕೈಗೆ ನನ್ನ ಬಾಣದಿಂದ ಪೆಟ್ಟಾಗಿದೆ.

ಯುವತಿ:—ನಾನೆಲ್ಲಿದ್ದೆನು ?

ಗುಲಾಬಸಿಂಗ:—ಈ ಕಾಡಿನ ಮರಗಳ ಮಧ್ಯದಲ್ಲಿದ್ದಿರಿ; ರಾತ್ರಿಯಾದ್ದರಿಂದ ನಾನು ನೋಡಲಿಲ್ಲ. ಸಳಸಳವೆಂದು ಶಬ್ದವಾಗಲು ಘಾತಕ ಮೃಗವೆಂದು ತಿಳಿದು ಬಾಣವನ್ನು ಬಿಟ್ಟೆನು; ಅದು ತಮಗೆ ತಗಲಿತು. ಹೃದಯಭೇದ ಕವಾದ ರೋದನವು ಕೇಳಿಸಿತು. ನಾನು ಓಡುತ್ತ ನಿಮ್ಮ ಬಳಿಗೆ ಬಂದೆನು.

ಈ ಮಾತನ್ನು ಕೇಳಿ, ಆಕೆಗೆ ಆಗ ಆ ಸಂಕಟದ ವೃತ್ತಾಂತವು ನೆನಪಿಗೆ ಬಂತು. ಆಕೆಯು, “ನಿಜ; ಈಗ ನೆನಪಾಯಿತು; ನಾನಾ ಕಾಡಿನಲ್ಲಿದ್ದೆನು.” ಎಂದಳು.

ಗುಲಾಬಸಿಂಗ:—ಅಂತಹ ನಿಶಿಯಲ್ಲಿ ನೀವೇಕೆ ಆ ಕಾಡಿಗೆ ಬಂದಿರಿ ?

ಯುವತಿ:—ನನ್ನ ದುರ್ಭಾಗ್ಯದಿಂದ. ಎಂದು ದುಃಖದಿಂದ ನಿಟ್ಟುಸಿರುಬಿಟ್ಟಳು.

ಗುಲಾಬಸಿಂಗ:—ನನ್ನ ಪ್ರಶ್ನೆಯಿಂದ ತಮ್ಮಂತರಂಗಕ್ಕೆ ಪೀಡೆಯುಂಟಾಗುವುದಾ ದರೆ, ನಾನು ವಿಚಾರಿಸುವುದಿಲ್ಲ.

ಯುವತಿ:—ಇಲ್ಲ; ಇಷ್ಟು ವಿಶ್ವಾಸದಿಂದ ತಮ್ಮ ವಿನಹ ವಿಚಾರಿಸುವರು ಮತ್ತಾರು ? ತಾವು ನನ್ನಲ್ಲಿ ಶುದ್ಧವಾದ ಮತ್ತು ಪವಿತ್ರವಾದ ಆಚರಣೆ ಯನ್ನಿಟ್ಟಿರುವಿರಿ. ಇದರಿಂದ ನಾನು ತಮ್ಮಲ್ಲಿ ಕೃತಜ್ಞಳಾಗಿದ್ದೇನೆ. ಈ ತಮ್ಮ ಋಣದಿಂದ ಹೇಗೆ ಮುಕ್ತಳಾಗುವೆನೆಂಬ ಯೋಚನೆಯಲ್ಲಿದ್ದೇನೆ. ನನ್ನ ಮನದಲ್ಲಿ ಚಮತ್ಕಾರಿಕ ಭಾವನೆಯುಂಟಾಗಿದೆ. ಇದನ್ನು ತೋರಿ ಸಲು ನನಗೆ ಶಕ್ತಿಯಿಲ್ಲ.

ಹೀಗೆಂದು ಹೇಳುತ್ತಿರುವಾಗ ಅವಳಿಗೆ ಲಜ್ಜೆಯಿಂದ ಮುಖವು ಕೆಂಪಾ ಯಿತು; ಸ್ವರಮಂದವಾಯಿತು. ಆಕೆಯ ಅವಸ್ಥೆಯನ್ನು ನೋಡಿ; ಈಕೆಗೆ ಯಾವು ದೋ ಒಂದು ಭಾವನೆಯುಂಟಾಗಿವೆ; ಎಂದು ಗುಲಾಬಸಿಂಗನು ತಿಳಿದನು.

ಆ ಯುವತಿಯು ಪುನಃ ಹೇಳತೊಡಗಿದಳು. “ನನ್ನ ಕನ್ಯಕಥೆಯನ್ನು ಕೇಳಲು ತಮಗೆ ಇಷ್ಟವಿದೆಯೆ ? ಹೇಳಿರಿ.”

ಗುಲಾಬಸಿಂಗ:—ನಿಮ್ಮ ಮನಕ್ಕೆ ದುಃಖವುಂಟಾಗುವದಾದರೆ, ನನಗೆ ಕೇಳಲಿಷ್ಟವಿಲ್ಲ.

ಯುವತಿ:—ನನಗೆ ದುಃಖವು ಕಡಮೆಯಾಗುವುದೆಂದು ತಿಳಿಯುವುದಿಲ್ಲ ತಮ್ಮಂತಹ ಹಿತೇಚ್ಛುಗಳಾದ ವೀರಪುರುಷರಿಗೆ ಹೇಳಲು ಅಡ್ಡಿಯಿಲ್ಲ

ಗುಲಾಬಸಿಂಗ:—ಹಾಗಾದರೆ, ಆ ದುಃಖವೃತ್ತಾಂತವನ್ನು ಕೇಳಲತ್ಯಂತೋತ್ಸುಕನಾಗಿದ್ದೇನೆ; ಸಂತೋಷದಿಂದ ಹೇಳಬೇಕು.

ಯುವತಿ:—ಇಲ್ಲಿ ಅನ್ಯರಾರೂ ಇಲ್ಲವಲ್ಲವೇ? ಈ ನನ್ನ ಕಥೆಯನ್ನು ಯಾರಿಗೂ ಹೇಳಬಾರದೆಂದು ತಿಳಿದಿದ್ದೆನು. ಈಗ ತಮಗೆ ಹೇಳಲು ಇಚ್ಛಿಸುತ್ತೇನೆ.

ಹೀಗೆ ಹೇಳಿದುದನ್ನು ಗುಲಾಬಸಿಂಗನು ಕೇಳಿ, ರಣಸಿಂಗನನ್ನು ಗುಡಿಸಲಿನ ಹೊರಕ್ಕೆ ಕಳುಹಿಸಿದನು. ಯುವತಿಯು ತನ್ನ ಕಥೆಯನ್ನು ಈ ರೀತಿ ಹೇಳತೊಡಗಿದಳು:—„ನನ್ನ ಹೆಸರು ರೋಷನಾ! ನನ್ನ ತಂದೆಯು ಢಿಲ್ಲಿಯ ಬಾದಷಹನ ಒಬ್ಬ ಪ್ರಸಿದ್ಧ ಸರದಾರನು. ತಾಯಿತಂದೆಗಳಿಗೆ ನಾನೊಬ್ಬಳೇ ಮಗಳು. ಆದ್ದರಿಂದ ನನ್ನನ್ನು ಪ್ರೀತಿಯಿಂದ ಸಾಕಿದರು. ನನಗೆ ಆರು ವರ್ಷಗಳಾಗಲು ನನ್ನ ದುರ್ದೈವದಿಂದ ನನ್ನ ತಾಯಿಯು ಪರಲೋಕಕ್ಕೆ ಹೋದಳು. ನನ್ನ ತಂದೆಯು ನನ್ನಲ್ಲಿ ಪ್ರೇಮವನ್ನಿಟ್ಟಿದ್ದನು; ಆದರೂ ಅವನು ಎರಡನೆಯ ಲಗ್ನವಾದನು. ಆ ನನ್ನ ಮಲತಾಯಿಯು ರೂಪವತಿಯು. ಅವಳು ದೊಡ್ಡವಳಾಗುವವರೆಗೂ ಸುಲಲಿತವಾಗಿತ್ತು; ಬಳಿಕ ತಂದೆಯು ಮೊದಲೆಷ್ಟು ಪ್ರೇಮವನ್ನಿಟ್ಟಿದ್ದನೋ ಆಮೇಲೆ ಅಷ್ಟು ತಿರಸ್ಕಾರ ಮಾಡುತ್ತಾ ಬಂದನು. ನನ್ನ ಮಲತಾಯಿಯಂತೆ ತಿರಸ್ಕಾರವರ್ತನೆಯು ಯಾರಿಗೂ ಬರಬಾರದೆಂದು ಈಶ್ವರನನ್ನು ಬೇಡುತ್ತೇನೆ. ಆಕೆಯು ನನ್ನಲ್ಲನೇಕ ಮತ್ಸರಕೃತ್ಯಗಳನ್ನು ಮಾಡಿದ್ದಾಳೆ; ಅವುಗಳಲ್ಲಿ ಕೆಲವನ್ನು ಹೇಳುವೆನು. ನಾನು ನನ್ನ ತಂದೆಯೊಡನೆ ನಿತ್ಯವೂ ಊಟಮಾಡುವುದನ್ನು ಬಿಡಿಸಿದಳು. ನಾನು ಹೊಟ್ಟೆತುಂಬ ಊಟಮಾಡಬಾರದೆಂಬಾಶೆಯು ಅವಳಿಗಿತ್ತು. ಹೀಗೆ ಅನೇಕ ವರುಷಗಳು ಕಳೆದವು; ನನಗೆ ಲಗ್ನವಾಯಿತು. ಆಗ್ರದಲ್ಲಿ ಪ್ರಖ್ಯಾತ ಸರದಾರನಾದ 'ಗುಲಜಾರಖಾನ್' ಎಂಬ ನನ್ನ ಮಾವನಿಗೆ ನನ್ನಲ್ಲಿ ಬಹು ಪ್ರೀತಿಯಿತ್ತು. ಇದರಿಂದ ನನ್ನ ದುಃಖವು ಕೊನೆಗಂಡಿತೆಂದು ತಿಳಿದಿದ್ದೆನು. ಇದು ನನ್ನ ಭ್ರಮೆಯಾಯಿತು." ಇಷ್ಟನ್ನು ಹೇಳುತ್ತಿರುವಾಗ ದೇಹವು ಕಂಪಿಸಿ ಮಾತು ನಿಂತಿತು. ಗದ್ಗದಸ್ವರದಿಂದ ಪುನಃ ಹೇಳಲಾರಂಭಿಸಿದಳು:—„ಆದರೂ ಪ್ರಥಮದಲ್ಲೇ ನನ್ನ ಪತಿಯು ನನ್ನನ್ನು ತಿರಸ್ಕರಿಸಿ ತಾಡನೆಮಾಡಿ, 'ಚಂಡಾಲೆಯೆ! ನೀನು ಯಾರಆಜ್ಞೆಯಿಂದಿಲ್ಲಿಗೆ ಬಂದೆ? ಎಲ್ಲಿಗಾದರು ಹೋಗು. ಎಂದು ಶಬ್ದಗಳಿಂದ ನನ್ನನ್ನು ಸಂಭಾವನೆ ಮಾಡಿದನು. ಪ್ರಥಮ ಪ್ರಸಂಗದಲ್ಲೇ ಈ ದಾರುಣವಾಕ್ಯ[illegible]ವಾದದ್ದನ್ನು ನೋಡಿ, ನನಗೆಷ್ಟು ದುಃಖವಾಗಿರಬಹುದೋ ತಾವೇ ಊಹಿಸಿರಿ. ನಾನು ಬದುಕಿದ್ದರೂ ಸತ್ತಂತಾದೆನು. ಪತಿಪಾದದಲ್ಲಿ ಬಿದ್ದು ದೀನವಾಣಿಯಿಂದ 'ನಾಥನೇ! ಹೀಗೇಕೆ ತಿರಸ್ಕರಿಸುವಿರಿ?' ಎಂದು ಪ್ರಾರ್ಥಿಸಿ

ಕೊಂಡರೂ, ಉಪಯೋಗವಾಗಲಿಲ್ಲ. ನನ್ನ ಸ್ವಾಮಿಯು ಇಲ್ಲಿಂದ ಸುಮ್ಮನೆ ಹೋಗು ಎಂದು ಅರ್ಧ ಚಂದ್ರಪ್ರಯೋಗಮಾಡಿ; ಪ್ರಹರಿಸಿ; ಹೊರಗೆಹಾಕಿ; ಒಳಬಾಗಿಲನ್ನು ಹಾಕಿಕೊಂಡನು. ನನ್ನ ಮನಸ್ಸಿನ ಇಷ್ಟಾರ್ಥವೆಂಬ ಮಹಡಿಯು ಕಳಚಿಬಿತ್ತು; ನನ್ನ ಮನೋರಾಜ್ಯವು ರಸಾತಳಕ್ಕೆ ಹೋಯಿತು; ನನ್ನ ಸುಖಸರ್ವಸ್ವವು ನಾಶವಾಯಿತು.'' ಎಂದಾಯುವತಿಯು ದಿಗ್ಭ್ರಮೆಯಿಂದ ಸುಮ್ಮನೆ ಕುಳಿತಳು. 'ಇಂತಹ ಅಮೂಲ್ಯ ರತ್ನವು ಮರ್ಕಟದ ಕಯ್ಯಲ್ಲಿ ಕೊಡಲ್ಪಟ್ಟದ್ದು ಈಶ್ವರನ ಯಾವ ಹೇತುವಿರಬಹುದೋ ಯಾರುಬಲ್ಲರು?' ಪುನಃ ರೋಷನ್ನಳು, "ಸ್ತ್ರೀಯರ ಸರ್ವಾಧಾರವೂ ಪತಿಯಲ್ಲೇ ಇದೆ; ಸ್ತ್ರೀಯರ ಸುಖ, ದುಃಖ, ಆಶೆ, ನಿರಾಶೆಗಳೆಲ್ಲವೂ ಪತಿಯನ್ನೇ ಅವಲಂಬಿಸಿರುತ್ತದೆ. ಆದರೆ ಈ ಅಭಾಗಿನಿಗೆ ಈ ಸುಖವು ಲಭಿಸಲಿಲ್ಲ; ನಾಳೆ ನನ್ನ ಪತಿಯ ಮನಸ್ಸು ಪ್ರಸನ್ನವಾದೀತೆಂದು ಆಶೆಯಿಂದ ಕಾಲವನ್ನು ಕಳೆದನು. ಆದರೆ, ದುರ್ಭಾಗ್ಯವು ನನ್ನನ್ನು ಬಿಡಲಿಲ್ಲ. ನಾನು ಯಾರ ಆಶೆಯ ಮೇಲೆ ಕಾಲಕಳೆಯುತ್ತಿದ್ದೆನೊ, ಆ ಪತಿಯು ಒಂದು ದಿನ ಎಲ್ಲಿಗೋ ಹೊರಟುಹೋದನು. ಇರುವ ಸ್ಥಳವು ಈವರೆಗೆ ತಿಳಿಯಲಿಲ್ಲ. ನನ್ನ ದುಃಖನಿರಸನವು ಹೇಗಾದೀತು? ಒಂದು ಉಪಾಯವನ್ನು ಹೇಳೋಣಾಗಲಿ!" ಎಂದಳು.

ಆಗ ಗುಲಾಬಸಿಂಗನು ಏನುಮಾತು ಕೊಟ್ಟಾನು? ಧೈರ್ಯವನ್ನುಂಟು ಮಾಡುವ ಉದ್ದೇಶದಿಂದ "ನಿಮ್ಮ ಪತಿಯ ಶೋಧವಾಗುವ ಸಂಭವವಿದೆ. ನನ್ನ ಶಕ್ತ್ಯನುಸಾರ ಅವನ ಶೋಧನೆಗೆ ಪ್ರಯತ್ನಿಸುವೆನು." ಎಂದನು.

ರೋಷನ್ನಳು ನಿಜವಾಗಿ ಹರ್ಷಹೊಂದಿ:-"ಸ್ವಾಮಿ; ತಮ್ಮ ಈ ಮಧುರ ಶಬ್ದದಿಂದ ಅತಿಶಯ ಆನಂದವಾಗಿದೆ. ತಾವು ಪತಿಯನ್ನು ಹುಡುಕಿಸಿದರೂ ಪ್ರಯೋಜನವೇನು? ನನಗೆ ಆತನಿಂದ ಸುಖವುಂಟಾಗುವದೆಂಬುದು ವ್ಯರ್ಥವು. ನನ್ನ ಪತಿಯನುಸರಿಸಿರುವ ಮಾರ್ಗವು ಸುಖವಾಗಲಿ! ನಾನೇಕೆ ಅವರ ಸುಖಕ್ಕಡ್ಡ ಬರಲಿ? ನನ್ನ ಪತಿಯು ಗೃಹತ್ಯಾಗ ಮಾಡಿದಂದಿನಿಂದ ನನ್ನ ಮಾವನು ಹುಚ್ಚನಂತಾಗಿದ್ದಾನೆ. ಪತಿಯಿದ್ದರೂ ನಾನು ವಿಧವೆಯಂತೆ ಕಾಲ ಕಳೆಯುತ್ತಿದ್ದೇನೆ. ನನ್ನ ಮಾವನು ನನ್ನನ್ನು ನೋಡಲಾರದೆ ನನ್ನ ತಂದೆಯಮನೆಗೆ ಕಳುಹಿಸಿದನು. ಮತ್ತೊಂದು ಸಂಕಟ ಬಂದೊದಗಿತು!' ಎಂಬ ರೋಷನ್ನಳ ಮಾತನ್ನು ಕೇಳಿ ಗುಲಾಬಸಿಂಹನಿಗೆ ಖೇದವಾಯಿತು. ಈ ಸುಂದರಿಗೆ ಒಂದು ದುಃಖದನಂತರ ಮತ್ತೊಂದು ದುಃಖವು ಬಂದೊದಗಬಹುದೆ?

ಆತನು ಆಕೆಯನ್ನು ಕುರಿತು—'ತಮಗೆ ಈರೀತಿ ದುಃಖವುಂಟಾಗಬಹುದೇ? ನನಗೆ ಪಶ್ಚಾತ್ತಾಪವಾಗುತ್ತಿದೆ. ಹೀಗಾಗಲು ಈಶ್ವರನ ಯಾವದೋ ಒಂದು ಕಾರಣವಿರಬೇಕು. ಅದನ್ನೂಹಿಸಲು ನಮಗೆ ಶಕ್ತಿಯಿಲ್ಲ. ನಿರಾಶರಾಗಬೇಡಿ. ಮುಂದೆ ಭಾಗ್ಯೋದಯವಾಗಬಾರದೇಕೆ?" ಎಂದನು

ಆಗ ರೋಷನ್ನಳು, ಇದು ಶುದ್ಧಭ್ರಮೆಯೇ ಸರಿ! ಈ ಜನ್ಮದಲ್ಲಿ ನನಗೆ ಭಾಗ್ಯೋದಯವಾಗುವ ಆಶೆಯು ವ್ಯರ್ಥವೇ ಸರಿ. ಈವರೆಗೆ ನನ್ನ ಮನದಲ್ಲಿ ಸ್ವಲ್ಪ ಆಶಾಂಕುರವಿತ್ತು. ನನಗೆ ಮನೆಯಿಂದ ತಿರಸ್ಕಾರ ಉಂಟಾದದ್ದನ್ನು ನೆನಸಿಕೊಂಡರೆ, ಮೈಮೇಲೆ ಮುಳ್ಳು ಚುಚ್ಚಿದಂತೆ ಆಗಿ ನನ್ನ ಆಶಾತಂತುವು ಹರಿದು; ಆಶಾಕಟ್ಟಡವು ಮುರಿದುಬಿತ್ತು. ನನ್ನ ಸುಖವು ನಿಜವಾಗಿ ನಾಶವಾಯಿತು. ನನಗೆ ಮರಣ ಬಂದರೆ, ಸುಖವೆಂದು ಭಾವಿಸುತ್ತೇನೆ. ನಿಜವಾಗಿ ಈ ದಿನ ಆತ್ಮಹತ್ಯ ಮಾಡಿಕೊಳ್ಳಲು ಹೊರಟೆನು." ಎಂದಳು.

ಆಗ ಗುಲಾಬಸಿಂಗನು—"ಏನು? ಆತ್ಮಹತ್ಯವೇ!" ಎಂದು ಪ್ರಶ್ನೆಮಾಡಿದನು.

ಆಗ ರೋಷನ್ನಳು ಮುಂದಿನ ಕಥೆಯನ್ನು ಹೇಳತೊಡಗಿದಳು :—

"ನನ್ನ ದುರ್ಭಾಗ್ಯದಿಂದ ನನಗೆ ಸುಖದ ಸ್ಥಳವು ಒಂದೂ ಉಳಿಯಲಿಲ್ಲ. ನನ್ನ ಪತಿಯು ಹೊರಟು ಹೋದಮೇಲೆ, ದೆಹಲಿಯಲ್ಲಿ ನನ್ನ ತಂದೆಯ ಮನೆಗೆ ಬಂದೆನು. ಅಲ್ಲಿಯಾದರೂ ಸುಖ ದೊರೆವುದೆಂದೂ, ಮಲತಾಯಿಯು ದುಃಖ ಕೊಡಲಾರಳೆಂದೂ ತಿಳಿದಿದ್ದೆನು. ಆದರೆ, ನನ್ನಾಶೆಯು ವ್ಯರ್ಥವಾಯಿತು. ನಾನು ಮಾತಾಗೃಹಕ್ಕೆ ಬಂದಮೇಲೆ ಐದಾರು ದಿನಗಳು ಸುಖವಾಗಿದ್ದೆನು. ಆಕೆಯು ನನ್ನನ್ನು ಬಹು ಮಮತೆಯಿಂದ ಸತ್ಕರಿಸಿದಳು. ನನಗೆ ಆನಂದವಾಗುವಂತೆ ಬಹಿರಂಗದಲ್ಲಿ ಮಾತ್ರ ಒಳ್ಳೆಯಮಾತನ್ನಾಡುತ್ತಿದ್ದಳು. ನನ್ನ ಬೆನ್ನಿನಹಿಂದೆ ಕೈಯನ್ನು ತಿರುಗಿಸಿ; ನನ್ನನ್ನು ಅಣಕಿಸಿ; ಮಗುವೇ, ರೋಷನ್ನಳೇ? ನೀನು ಬಹು ಕೃಶಳಾದೆ. ನಿನ್ನಂತಹ ತರುಣಿಗಿಂತಹ ಚಿಂತೆಬಂತು? ನಿನ್ನ ಪತಿಯು ಎಲ್ಲಿ ಹೋದನೆಂದಲ್ಲವೇ ಚಿಂತಿಸುವುದು? ಆದರೆ, ನಿನ್ನ ಪತಿಯನ್ನು ಹುಡುಕಿಸುವೆನು. ಮಗುವೇ! ಕೆಟ್ಟ ಮುಖಮಾಡಿಕೊಂಡಿರಬೇಡ. ಈ ದಿನವಲ್ಲದಿದ್ದರೆ, ನಾಳೆಯಾದರೂ, ನಿನ್ನ ಗಂಡನನ್ನ ಹುಡುಕಿಸುವೆನು. ಇದಕ್ಕಾಗಿ ಏಕೆ ಇಷ್ಟು ವ್ಯಸನಪಡುತ್ತಿ?" ನನ್ನನ್ನು ಮಲತಾಯಿಯೆಂದು ತಿಳಿಯದಿರು. ನಿನ್ನ ಹಿರಿಅಕ್ಕನೆಂದು ತಿಳಿ! ಎನ್ನುವಳು. ಹೀಗೆ ಹೇಳಿದ ಲಾಘವಯುಕ್ತವಾದ ಭಾಷಣೆಯನ್ನು ಕೇಳಿ, ನಿಜವೆಂದು ಗ್ರಹಿಸಿದೆನು; ಆದರೆ, ಮುಂದೆ ನಿಜವಾದ ವಿಷಯವು ಲಕ್ಷ್ಯಕ್ಕೆ ಬಂತು. ಆ ಪಾಪಿಯ ಹೇತುವು ಅತ್ಯಂತ ನೀಚವಾದುದು. ಅದನ್ನು ಹೇಳುವುದಕ್ಕೂ ನನಗೆ ನಾಚಿಕೆಯಾಗುವುದು; ಆದರೆ, ತಮ್ಮಲ್ಲಿ ಹೇಳಬೇಕಾಯಿತು. ನಾನು ಮಾವನ ಮನೆಗೆ ಹೋದಮೇಲೆ ನಮ್ಮ ತಂದೆಯ ಮನೆಗೆ ಒಬ್ಬ ಸಾಧಾರಣವರ್ಗದ ತರಣನೊಬ್ಬನು ಪ್ರವೇಶಮಾಡಿದ್ದನು. ನನ್ನ ಮಾತೃವು ಅವನನ್ನು ತನ್ನ ಬಂಧುವೆಂದು ಹೇಳುತ್ತ ಗುಟ್ಟಾಗಿ ಅವನೊಡನೆ ನಿಂದ್ಯವರ್ತನೆಯಿಂದ ನಡೆಯುತ್ತಿದ್ದಳು. ಇದನ್ನು ಹೇಳುವುದಕ್ಕೆ ನಾಚುತ್ತೇನೆ ನನ್ನ ಜನಕನನ್ನು ಆ ಪಾಪಿಯು ತನ್ನ ಸೌಂದರ್ಯದಿಂದ ತನ್ನ ಮುಷ್ಟಿಯಲ್ಲಿಟ್ಟುಕೊಂಡಿದ್ದಾಳೆ. ಅವಳು ನನ್ನನ್ನೂ ತನ್ನಂತೆ ಪಾಪಕರ್ಮಕ್ಕೆ ಭಾಗಿಯಾಗೆಂದು ಉಪದೇಶಿಸುವಳು. ಆ ಮುಸಲ್ಮಾನನಿಗೆ ಇಪ್ಪ

ತ್ತೈದು ವರ್ಷ ವಯಸ್ಸಾಗಿತ್ತು. ಆತನು ನನ್ನೊಡನೆ ಮೊದಲು ಚೇಷ್ಟೆಮಾಡಲಾರಂಭಿಸಿದನು; ಬಳಿಕ ಈ ಸಂಗತಿಯನ್ನು ನನ್ನ ತಾಯಿಯೊಡನೆ ಸಮಯಬಿದ್ದಾಗ ತಿಳಿಸಬೇಕೆಂದಿದ್ದೆನು. ಇಷ್ಟರಲ್ಲೇ, ಆಕೆಯು ನನ್ನನ್ನು ಆ ದುಷ್ಟನಿಗನುಕೂಲಳಾಗೆಂದು ಹೇಳಿದಳು. ಈ ಮಾತನ್ನು ಕೇಳಿ ನನ್ನ ಕಿವಿಯಲ್ಲಿ ತಪ್ತವಾದ ಲೋಹರಸ ಬಿದ್ದಂತಾಯಿತು. ಕೂಡಲೆ, ಹಿಂದುಮುಂದೆ ಯೋಚಿಸದೆ ಆಕೆಯನ್ನು ಧಿಕ್ಕರಿಸಿದೆನು; ಅಂದಿನಿಂದ ನನ್ನ ವಿಪತ್ತಿಗೆ ಆರಂಭವಾಯಿತು. ಏನಾದರೂ ಹೇಳಿ, ನನಗೂ ತಂದೆಗೂ ಇರುವ ಪ್ರೇಮವನ್ನೊಡಿಸಿ, ಮನಸ್ಸನ್ನು ಕಲುಷಿತವಾಗಿ ಮಾಡಬೇಕೆಂದು ಯತ್ನಿಸಿದಳು. ಆದರೆ, ದೆಹಲಿಯಲ್ಲಿ ಈವರೆಗೆ ಆಕೆಯು ನನಗೆ ಪ್ರತೀಕಾರಮಾಡಲು ಅವಕಾಶ ದೊರೆಯಲಿಲ್ಲ. ಬಳಿಕ ಸುಲ್ತಾನ್ ಅಲ್ಲಾವುದೀನನು ಚಿತ್ತೂರಿಗೆ ದಂಡೆತ್ತಿ ಹೊರಡುವಾಗ ನನ್ನ ತಂದೆಯನ್ನು ತನ್ನ ಜೊತೆಗೆ ಹೊರಡುವಂತೆ ಬಲಾತ್ಕರಿಸಿದನು. ಆದರೆ, ನನ್ನ ತಾಯಿ ವಿನಹ ನನ್ನ ತಂದೆಯು ಕ್ಷಣಕಾಲವಾದರೂ ಇರಲಾರನಾದಕಾರಣ, ಅವಳನ್ನೂ ಕರೆದುಕೊಂಡು ಹೋಗಲು ಒಪ್ಪಿದನು. ನಾವು ಡಿಲ್ಲಿಯಿಂದ ಹೊರಟಮೇಲೆ ದಾರಿಯಲ್ಲಿ ನನ್ನ ಮಾವನು ನನ್ನ ಸೌಂದರ್ಯದ ವಿಷಯವನ್ನು ಪಾದಷಹನಿಗೆ ಹೇಳಿದನಂತೆ! ಇದರಿಂದವನ ಮನಸ್ಸು ವಿಕಾರವಾಯಿತಂತೆ!! ನನ್ನ ತಂದೆಯು ಒಂದು ಜಾವದವರೆಗೆ ಗಸ್ತುತಿರುಗುವುದಕ್ಕಾಗಿ ಸುಲ್ತಾನನ ಡೇರೆಯೊಳಕ್ಕೆ ಹೋಗಿ ಬರುತ್ತಿದ್ದನು. ಆ ಸಮಯವನ್ನು ಸಾಧಿಸಿ, ಆ ದುಷ್ಟ ಮಾವನು ನನ್ನ ತಾಯಿಯನ್ನು ನೋಡಲು ಬರುತ್ತಿದ್ದನು ಈ ರೀತಿಯಾಗಿ ಮೂರನೆಯ ದಿನ ರಾತ್ರಿ ಅವನ ಸಂಗಡ ಸುಲ್ತಾನನೂ ನನ್ನ ಡೇರೆಗೆ ಬಂದನು. ಸುಲ್ತಾನನು ನನ್ನನ್ನು ವಶಪಡಿಸಿಕೊಳ್ಳಲು ಪ್ರಯತ್ನಿಸಿದನು; ಆದರೆ, ನಾನು ಆ ದುಷ್ಟನ ಇಚ್ಛೆಗನುಕೂಲಳಾಗಲಿಲ್ಲ. ಕೊನೆಗೆ, ನನ್ನ ತಂದೆ ಬರುವ ಹೊತ್ತಾಗಲು ನಿರಾಶನಾದ ಸುಲ್ತಾನನು ನನ್ನ ಡೇರೆಯಿಂದ ಹೊರಗೆ ಹೊರಟನು ನನ್ನ ದುರದೃಷ್ಟದಿಂದ ಆಗಲೇ ನನ್ನ ತಂದೆಯೂ ಬಂದನು. ಆಗಲೇ ಸುಲ್ತಾನನು ಡೇರೆಯಿಂದ ಹೊರಗೆ ಬಂದುದನ್ನು ನೋಡಿದನು ಆಗ ನನ್ನ ತಂದೆಗೆ ಸಿಟ್ಟುಬಂತು. ನನ್ನನ್ನು ಹೆದರಿಸಿದನು. ನಾನು ನಿಜವಾಗಿ ನಿಷ್ಕಳಂಕಳಾಗಿದ್ದೂ ಈ ನಿರರ್ಥಕ ದೋಷಾರೋಪಣೆಯಾದ್ದನ್ನು ನೋಡಿ; ಬಹು ದುಃಖಪಟ್ಟೆನು. ಆದ್ದರಿಂದ ನಾನು ಆತ್ಮಹತ್ಯಮಾಡಿಕೊಳ್ಳಬೇಕೆಂದು ನಿಶ್ಚೈಸಿ ಈ ದಿನ ಗುಡಾರದಿಂನ ಹೊರಗೆ ಹೊರಟೆನು. ಇದೇ ನನ್ನ ಕರ್ಮಕಥೆ ನನಗೆ ಸುಖವು ಸಿಕ್ಕುವುದಕ್ಕೆ ಒಂದು ಸ್ಥಳವಾದರೂ ಇದೆಯೋ, ತಾವೇ ಹೇಳಿರಿ."

ಎಂದು ಹೇಳಿದ ಈ ನಿರಾಶೆಯ ಕೊನೆಯ ಮಾತನ್ನು ಕೇಳಿದ ಗುಲಾಬಸಿಂಗನು ಆಕೆಯನ್ನು ಕುರಿತು — "ನಿಜ. ಆ ನಿಮ್ಮ ಬಲತಾಯಿಯು ಅತಿ ದುಷ್ಟಸ್ವಭಾವದವಳೆಂಬುದರಲ್ಲಿ ಸ್ವಲ್ಪವೂ ಸಂಶಯವಿಲ್ಲ. ಆದರೆ ಚಿಂತೆಯಿಲ್ಲ; ಆ ದುಷ್ಟಳನ್ನೂ ಆಕೆಯ ಸಹೋದರನೆನ್ನುವವನನ್ನೂ ಚೆನ್ನಾಗಿ ಶಿಕ್ಷಿಸುವೆನು." ಎಂದನು.

ರೋಷನ್ :—ಆದರೆ, ಹಾಗೆ ನನ್ನ ಇಚ್ಛೆಯಿಲ್ಲ. ಮನುಷ್ಯನು ಯಾವದನ್ನು ಮಾಡುವನೋ, ಅದಕ್ಕೆ ತಕ್ಕ ಫಲವನ್ನು ಹೊಂದಿಯೇ ಹೊಂದುವನು. ಸರ್ವಶಕ್ತನಾದ ದೇವರು ನ್ಯಾಯಾನ್ಯಾಯ ವಿಚಾರಕನಾಗಿದ್ದಾನೆ. ಅವನು ಸಜ್ಜನರನ್ನು ರಕ್ಷಿಸುತ್ತಲೂ, ದುಷ್ಟರನ್ನು ಶಿಕ್ಷಿಸುತ್ತಲೂ ಇರುವನು. ಅವನೆಂದಿಗಾದರೂ, ಅವಳಿಗೆ ಯಥಾಯೋಗ್ಯವಾದ ಪ್ರಾಯಶ್ಚಿತ್ತವನ್ನು ಕೊಟ್ಟೇಕೊಡುವನು. ಆದರೆ ನನಗೆ ಒಂದು ಕೋರಿಕೆಯಿದೆ.

ಗುಲಾಬಸಿಂಗ :—ಆ ಕೋರಿಕೆಯಾವುದು ?

ರೋಷನ್ :—ನನ್ನ ತಂದೆಯ ಮನಸ್ಸಿನಲ್ಲುಂಟಾದ ಸಂಶಯವು ಇಲ್ಲದಂತಾಗಬೇಕು; 'ಜಾರಿಣಿ' ಎಂಬ ಈ ಕಲಂಕವು ನನಗೆ ತಗಲಬಾರದು. ಇಷ್ಟಾದರೆ, ನನಗೆ ಸುಖವಾದೀತು.

ಗುಲಾಬಸಿಂಗ :—ನಿಮಗೆ ತಗಲಿದ ಈ ಕಲಂಕವನ್ನು ಉಜ್ಜಿ ತೆಗೆಯಲು ನನ್ನ ಕಯ್ಯಲ್ಲಾದಷ್ಟು ಪ್ರಯತ್ನಿಸುವೆನು. ಎಂದು ಈಶ್ವರನನ್ನು ಸ್ಮರಿಸಿಹೇಳುತ್ತೇನೆ.

ರೋಷನ್ :—ಇದಕ್ಕಾಗಿ ನಾನು ತಮಗೆ ಅನಂತವಾಗಿ ಕೃತಜ್ಞಳಾಗಿದ್ದೇನೆ. ಇಷ್ಟಾದರೆ ನಾನು ಸುಖದಿಂದ ಸಾಯುವೆನು.

ಗುಲಾಬ :—ನೀವು ಸಾಯಬೇಕೆಂದು ಏಕೆ ಇಚ್ಛಿಸುವಿರಿ ?

ರೋಷನ್ :—ನಾನು ಇದ್ದು ಏನುಮಾಡಬೇಕು ? ಈ ಲೋಕದಲ್ಲಿ ನನ್ನ ಆಶೆಯು ಏನು ಉಳಿದಿದೆ? ನನ್ನ ಕಥೆಯನ್ನು ಹೇಳಿದೆನು. ತಮ್ಮ ಸಂಗತಿಯನ್ನು ಹೇಳಿರಿ ! ಕೇಳಲು ಇಚ್ಛಿಸುವೆನು.

ಗುಲಾಬಸಿಂಗ :—ನಾನು ಚಿತ್ತೂರು ಮಹಾರಾಜರವರ ಒಬ್ಬ 'ಕ್ಷತ್ರಿಯ ಸೇನಾಪತಿ' ನನ್ನ ಹೆಸರು ಗುಲಾಬಸಿಂಗ.

ರೋಷನ್ :—(ಆಶ್ಚರ್ಯದಿಂದ ನೋಡಿ) ತಾವು ಯವನವೇಷಧಾರಿಗಳಾಗಿರುವುದನ್ನು ನೋಡಿ ಯವನರೆಂದೇ ತಿಳಿದಿದ್ದೆನು. ಇಷ್ಟು ರಾತ್ರಿಯಲ್ಲಿ ಈ ವೇಷದಿಂದ ತಿರುಗಲು ಕಾರಣವೇನು ?

ಗುಲಾಬಸಿಂಗ :—ನಾನು ಅದನ್ನು ಹಿಂದಿನಿಂದ ಹೇಳುವೆನು. ಆದರೆ, ತಮ್ಮಿಂದ ಒಂದು ಕಾರ್ಯದಲ್ಲಿ ಸಹಾಯುವಾಗಬೇಕು; ಮಾಡುವಿರಾ ?

ರೋಷನ್ :—(ಆಶ್ಚರ್ಯದಿಂದ) ಯಾವ ಕಾರ್ಯಕ್ಕಾಗಿ ಯಾವ ಸಹಾಯವಾಗಬೇಕು ?

ಗುಲಾಬಸಿಂಗನು :—"ಯವನ ಸೇನೆಯ ನಡೆವಳಿಕೆ ಹೇಗಿದೆ ? ಎಂಬುದನ್ನು ತಿಳಿಯುವುದು ಅವಶ್ಯವಾಗಿದೆ. ನಿಮ್ಮ ಕಡೆಯಿಂದ ಇದು..." ಎಂದು ಇಷ್ಟು ಅರ್ಧೋಕ್ತಿಯನ್ನಾಡಿ ಈ ಮಾತಿನಿಂದ ಆಕೆಯ ಪರಿಣಾಮವೇನಾಗುವುದೆಂಬುದನ್ನು ಲಕ್ಷ್ಯವಿಟ್ಟು ನೋಡುತ್ತಿದ್ದನು.

ಈ ಕ್ಷತ್ರಿಯವೀರನು ಯಾವನ ಸೇನೆಯ ನಡವಳಿಕೆ, ರೀತಿಗಳನ್ನು ನೋಡು ವುದಕ್ಕಾಗಿ ಈ ಛದ್ಮವೇಷದಿಂದ ಹೊರಟಿರುವುದನ್ನು ಚಾಣಿಕ್ಯನಂತೆ ಬುದ್ಧಿಯುಳ್ಳ ರೋಷನ್ನಳು ತಿಳಿದುಕೊಂಡಳು. ಆಕೆಗೆ ಸ್ವಲ್ಪ ಭೀತಿಯುಂಟಾಯಿತು. ಇವ ನಿಗೆ ಯವನ ಸೇನೆಯ ವೃತ್ತಾಂತವನ್ನು ಕೊಡಬೇಕೇ, ಬೇಡವೇ, ಎಂಬುದನ್ನು ಬಹಳ ಕಾಲ ಆಲೊಚಿಸಿ ಈ ವರಿಗೆ ತನ್ನಲ್ಲಿ ತೋರಿಸಿದ ವರ್ತನದಿಂದ ತನ್ನಿಂದಾ ದಷ್ಟು ಸಹಾಯಮಾಡಬೇಕೆಂದು ನಿಶ್ಚಯಮಾಡಿ, "ತಾವು ಯಾವಾಗ ಯವನ ಸೇನೆಯಮೇಲೆ ದಂಡೆತ್ತುವಿರಿ?" ಎಂದಳು.

ಗುಲಾಬಸಿಂಗ:—ಮೊದಲು ಏಕಾಏಕಿ ಯುದ್ಧಮಾಡಬೇಕೆಂದಿದ್ದೆವು; ಆದರೆ ಕೆಲವುಕಾರಣಗಳಿಂದ ಈ ಯೋಚನೆಯನ್ನು ಈಗ ಬಿಟ್ಟಿದೇವೆ. ಈಗ ಯವನ ಸೇನೆಯ ಅಂತರ್ವ್ಯವಸ್ಥೆಯು ಹೇಗಿದೆ ಎಂಬುದನ್ನು ತಿಳಿಯಹೊಕ್ಕ ವನಾಗಿದೇನೆ.

ರೋಷನ್:—ತಾವು ಈ ರೀತಿಯಿಂದ ಬಂದಿರುವುದು ಯವನರಿಗೆ ತಿಳಿಯದೆ?

ಗುಲಾಬಸಿಂಗ:—ಈವರೆಗೆ ತಿಳಿದಿಲ್ಲ.

ರೋಷನ್:—ಈ ಕಾರ್ಯಭಾರವನ್ನು ಮಹಾರಾಣರವರು ಯಾರಮೇಲೆ ಹಾ ಕಿದ್ದಾರೆ?

ಗುಲಾಬಸಿಂಗ:—ತಮ್ಮ ಈ ಸೇವಕನ ಮೇಲೆ.

ರೋಷನ್:—ಒಳ್ಳೇದು. ಪವಿತ್ರರಾದ ಉದಾರ ಪುರುಷರ ಕೈಯ್ಯಲ್ಲಿ ಈ ಅಧಿ ಕಾರವಿರವುದನ್ನು ನೋಡಿ ನನಗೆ ಸಂತೋಷವಾಗಿದೆ. ಆದರೆ ಈಗ ಮುಂದೇನು ಮಾಡಬೇಕೆಂದಿಚ್ಛಿಸುವಿರಿ?

ಗುಲಾಬಸಿಂಗ:—ಈವರೆಗೆ ಯಾವ ವಿಚಾರವನ್ನು ನಿಶ್ಚೈಸಿಲ್ಲ. ಈ ಕೆಲಸಕ್ಕಾಗಿ ಈ ದಿನ ಸಾಯಂಕಾಲ ನಾನು ನನ್ನ ಅನುಚರನೊಡನೆ ಮನೆಯಿಂದ ಹೊರಟಿದ್ದೇನೆ. ಬರುಬರುತ್ತಾ ಈ ಗುಡಿಸಿಲಿನ ಯಜಮಾನನಾದ ವಿಶ್ವಾಸನೂ ಅವನ ತಾಯಿಯೂ ಬಹಳ ಹಸಿವೆಯಿಂದ ವ್ಯಾಕುಲವಾದ್ದನ್ನು ನೋಡಿ ಸ್ವಲ್ಪ ಆಹಾರವನ್ನು ಕೊಟ್ಟು; ಬಳಿಕ ಯವನರ ಗೂಡಾರದ ಕಡೆಗೆ ಬರುವುದಕ್ಕಾಗಿ ಹೊರಟೆನು. ಆಗ ನಿಮ್ಮ ದರ್ಶನವಾಯಿತು. ನೀವು ಗುಡಾರದಿಂ ಯಾವದಾರಿಯಿದ ಸುರಕ್ಷಿತವಾಗಿ ಹೊ ರಗೆ ಹೊರಟರೋ, ಆ ದಾರಿಯನ್ನು ನನಗೆ ತೋರಿಸಿದರೆ, ನಾನು ಯವನರ ಗುಡಾ ರಕ್ಕೆ ಹೋಗಿ; ನಮ್ಮ ಚಿಕ್ಕಮ್ಮನ ಕೌಟಿಲ್ಯವನ್ನು ನಿಮ್ಮ ತಂದೆಯವರಿಗೆ ದೃಢೀಕ ರಿಸಿ; ನಿಮ್ಮನ್ನು ನಿಷ್ಕಳಂಕರನ್ನಾಗಿ ಮಾಡಬೇಕೆಂದಿದೇನೆ. ಈಗ ನೀವು ಮೂರು ಸಹಾಯಗಳನ್ನು ಮಾಡಬೇಕು.

ಯಾವುವೆಂದರೆ:—

ಮೊದಲನೆಯದು:—ನನ್ನನ್ನು ನಿಮ್ಮ ಡೇರೆಗೆ ಸುರಕ್ಷಿತವಾಗಿ ಪ್ರವೇಶ ಮಾಡಿಸು ವುದು.

ಎರಡನೆಯದು:—ನನ್ನ ಸಂಗತಿಯನ್ನಾರಿಗೂ ಹೇಳದಿರುವುದು.

ಮೂರನೆಯದು :—ನಿಮ್ಮ ತಂದೆಯವರ ಮತ್ತು ನಿಮ್ಮ ದರ್ಶನವು ಏಕಕಾಲದಲ್ಲಾಗುವುದು. ನಿಮ್ಮ ತಂದೆಯವರನ್ನು ನೋಡಿದರೆ, ನನಗೆ ಸಹಾಯವಾದಂತಾಗುವುದು.

ರೋಷನ್ನಳು ಅವನಿಗೆ ಬೇಕಾದ ಸಂಗತಿಗಳನ್ನೆಲ್ಲ ತಿಳಿಸಿದಳು. ಇಷ್ಟರಲ್ಲಿಯೇ ವಿಶ್ವಾಸನೂ, ಅವನ ತಾಯಿಯೂ ಪೇಟೆಯಿಂದ ಧಾನ್ಯ ಮುಂತಾದುವನ್ನು ತೆಗೆದುಕೊಂಡು ಬಂದರು.

ಆಗ ಗುಲಾಬಸಿಂಗನು ಯಾವ ವಿಷಯವನ್ನೋ ನೆನೆದು ರೋಷನ್ನಳನ್ನು ಕುರಿತು—“ನಿಮ್ಮ ನಿಮ್ಮಲ್ಲಿಯೇ ಇಡಬೇಕೆಂದು ಈವರೆಗೆ ಯೋಚಿಸಿದ್ದೆನು ಆದರೆ, ಈಗ ನೀವು ಮೂವರೂ ಚಿತ್ತೂರು ದುರ್ಗದಲ್ಲಿ ಹೋಗಿರಬೇಕೆಂದಿಚ್ಛಿಸುವೆನು. ಇದರಮೇಲೆ ನಿಮ್ಮ ಇಷ್ಟ!” ಎಂದನು.

ಆಗ ರೋಷನ್ನಳು—“ನಾನು ನಿಮ್ಮ ಇಚ್ಛೆಗೆ ವಿರುದ್ಧವಾಗಿ ನಡೆವವಳಲ್ಲ.” ಎಂದು ಕೃತಜ್ಞತೆಯಿಂದ ಹೇಳಿದಳು. ಭೋಜನೋತ್ತರ ಎಲ್ಲರೂ ಚಿತ್ತೂರಿಗೆ ಹೋದರು. ಅಲ್ಲಿ ರೋಷನ್ನಳನ್ನೂ ಒಂದೆಡೆಯಲ್ಲಿ ಇಟ್ಟು ವಿಶ್ವಾಸನೊಡನೆ, ಪುನಃ ಯವನರ ಪಾಳೆಯಕ್ಕೆ ಹೊರಟನು. ರಣಸಿಂಗನನ್ನು ರೋಷನ್ನಳ ರಕ್ಷಣೆಗಾಗಿ ದುರ್ಗದಲ್ಲಿಯೇ ಇಟ್ಟನು.

ಪ್ರಕರಣ 12.

ರಾತ್ರಿಯ ಎರಡುಜಾವ ಕಳೆಯಿತು. ಅಲ್ಲಾವುದೀನನ ದಳಪತಿಯಾದ ನಸರುದಿನ್‌ಖಾನನು ಮನದಲ್ಲಿ ವಿಚಾರಮಾಡುತ್ತ ಡೇರೆಯಹೊರಗೆ ತಿರುಗುತ್ತಿದ್ದನು. ಅವನ ದುಃಖವು ಪೂರ್ಣವಾಗಿತ್ತು. ತನ್ನ ಒಬ್ಬಳೇ ಮಗಳು ವಿಚಾರಮಾಡದೆ, ಹೇಳದೆ, ಕೇಳದೆ ಎಲ್ಲಿಯೋ ಹೊರಟುಹೋಗಿರುವದನ್ನು ನೋಡಿ, ಕೊರಗುತ್ತಿದ್ದನು. ಆದರೆ, ಅವನಿಗೆ ಗೂಗೆಯ ಶಬ್ದವು ಕೇಳಿಬಂತು; ಕೂಡಲೆ ನೋಡಿದನು. ಬಹಳ ರಾತ್ರೆಯಾಗಿದೆಯೆಂದು ತಿಳಿದನು. ಆಕಾಶವು ಆಗ ಮೇಘದಿಂದ ಆಚ್ಛಾದಿತವಾಗಿದ್ದರಿಂದ ಚಂದ್ರನೂ ನಕ್ಷತ್ರಗಳೂ ಕಾಣುತ್ತಿರಲಿಲ್ಲ. ಸರ್ವತ್ರ ಅಂಧಕಾರವು ಹರಡಿತ್ತು. ಆಗ ಡೇರೆಯೊಳಕ್ಕೆ ಹೋಗಿ ಹಾಸಿಗೆಯಲ್ಲಿ ಬಿದ್ದುಕೊಳ್ಳಬೇಕೆಂದು ಯೋಚಿಸುತ್ತಿರಲು ಇಷ್ಟರಲ್ಲಿ ಕೃಷ್ಣವಸ್ತ್ರಧಾರಿಯಾದ ವ್ಯಕ್ತಿಯೊಬ್ಬ ಇವನನ್ನು ತಡೆದನು. “ನಸರುದಿನ್‌ಖಾನ್ ಸಾಹೇಬರೇ! ಹೆದರಲು ಕಾರಣವಿಲ್ಲ. ಕೂಗಬೇಡಿರಿ. ನಾನು ನಿಮಗೆ ತೊಂದರೆಕೊಡುವ ಉದ್ದೇಶದಿಂದ ಬರಲಿಲ್ಲ” ಎಂದು ಆ ವ್ಯಕ್ತಿಯು ಹೇಳಿದನು.

ನಸರುದೀನ್ :—ಹಾಗಾದರೆ, ನೀನು ಯಾರು? (ಎಂದು ಧೈರ್ಯದಿಂದ ಕೇಳಿದನು.)

ವ್ಯಕ್ತಿ :—ಖಾನ್‌ಸಾಹೇಬರೇ! ನಿಮ್ಮ ಮಗಳನ್ನು ನೋಡಬೇಕೆಂಬ ಆಶೆ ನಿಮಗೆ ಇದೆಯೇ? ಮತ್ತು ಆಕೆಯು ನಿಮಗೇನುಮಾಡಬೇಕು?

ನಸುರುದಿನ್ ;—ಅದ್ದಿಯೇನು? ನೋಡಲಿಚ್ಛಿಸುತ್ತೇನೆ.

ವ್ಯಕ್ತಿ :—ನಿಮ್ಮಿಚ್ಛೆಯನ್ನು ನಾನು ಪೂರ್ಣಮಾಡುವೆನು. ರೋಷನ್ನಳಿರುವಸ್ಥಳವು ನನಗೆ ತಿಳಿದಿದೆ.

ನಸರುದೀನ್ :—ಆದರೆ, ಸುಖದಲ್ಲಿರುವಳೊ? ದುಃಖದಲ್ಲಿರುವಳೊ?

ವ್ಯಕ್ತಿ :—ನಸರುದೀನ್‌ಸಾಹೇಬರೇ! ನಿಷ್ಕಳಂಕಳೂ ಸದ್ಗುಣಿಯೂ ಆದ ರೋಷನ್ನಳನ್ನ ದುಃಖಕೂಪದಲ್ಲಿ ಹಾಕಿ, ಈಗ ಹೀಗೆ ಕೇಳುವುದು ತಮ್ಮಂತಹರಿಗೆ ಶೋಭಿಸುವುದೇ!

ಆಗ ಖಾನನು ಆಶ್ಚರ್ಯಮುದ್ರೆಯಿಂದ „ಏನು ಹೇಳುವಿರಿ? ನಾನಾಕೆಯನ್ನು ದಃಖಕೂಪದಲ್ಲಿರಿಸಿದೆನೇ? ಅದು ಹೇಗೆ?" ಎಂದನು.

ವ್ಯಕ್ತಿ :—ಖಾನರೇ! ಸಾರಾಸಾರ ವಿಚಾರಮಾಡದೆ ಆ ಬಡ ನಿಷ್ಕಳಂಕ ಪತಿವ್ರತೆಗೆ ದುಶ್ಶಬ್ದವನ್ನಾಡುವಾಗ ಸ್ಮೃತಿಯಿರಲಿಲ್ಲವೇ? ಅಹಾ! ಇದುಕಲಿಯುಗ; ಆದರೂ ಸತ್ಯವೇ ಗೆಲ್ಲುವುದು. ಈ ತತ್ವವು ತಮಗೆ ಹೇಗೆ ತಿಳಿದೀತು? ನೋಡಿರಿ. ನಿಮ್ಮ ಪುತ್ರಿಯ ದರ್ಶನಾಪೇಕ್ಷೆ ಇದ್ದರೆ ನನ್ನ ಮಾತನ್ನು ಮನ್ನಿಸಿರಿ.

ನಸರುದಿನ್ :—(ಆತುರದಿಂದ) ಒಳ್ಳೆಯದು. ನಿಮ್ಮ ಮಾತಿನಂತೆ ನಡೆಸಲು ಸಿದ್ಧನಾಗಿದೇನೆ. ಯಾವಾಗ ರೋಷನ್ನಳನ್ನು ನೋಡುವೆನೋ ಎಂಬಂತಾಗಿದೆ.

ವ್ಯಕ್ತಿ :—ತಮ್ಮಂತೆಯೇ ರೋಷನ್ನಳೂ ನಿಮ್ಮ ದರ್ಶನೋತ್ಸುಕಳಾಗಿದ್ದಾಳೆ. ಖಾನರೇ! ನಿಮಗೆ ಖಂಡಿತವಾಗಿ ಹೇಳುತ್ತೇನೆ. ನೀವು ನನಗೆ ಮೋಸಮಾಡುವಿರಾದರೆ ನಿಮ್ಮ ಪ್ರಾಣಕ್ಕಪಾಯವುಂಟಾಗುವುದು. (ಎಂದು ನಮ್ರಭಾವದಿಂದ ಹೇಳಿ, ಒಮ್ಮೆ ಸಿಳ್ಳು ಹಾಕಿದನು.)

ಆಗ ಎರಡನೆಯ ವ್ಯಕ್ತಿಯೊಬ್ಬನು ಅವನಂತೆಯೇ ಕೃಷ್ಣವಸ್ತ್ರಧಾರಿಯಾಗಿ ಅಲ್ಲಿಗೆ ಬಂದನು. ಅವನು ಬಂದೊಡನೆಯೇ ಮೊದಲನೆಯ ವ್ಯಕ್ತಿಯು ಖಾನನನ್ನು ಕುರಿತು, „ಹೀಗೆ ಒಂದೊಂದು ಸಿಳ್ಳುಹಾಕಲು ಒಬ್ಬೊಬ್ಬ ಅನುಚರನು ಬರುವನು." ಎಂದನು. ಮೋಸಕ್ಕೆ ಪ್ರತೀಕಾರಮಾಡುವರು. ಖಾನರೇ! ತಾವು ನನ್ನಲ್ಲಿ ವಿಶ್ವಾಸವಿಟ್ಟರೆ ಎಲ್ಲವೂ ಸುಲಲಿತವಾಗಿ ನಡೆಯುವದು!" ಎಂದನು.

ಆಗ ಖಾನನು, „ಇದೇನಿರಬಹುದು? ಭೂತಚೇಷ್ಟೆಯೇ?" ಎಂದು ನಾನಾ ವಿಧವಾಗಿ ಆಲೋಚಿಸಿ ಬಹಳವಾಗಿ ಹೆದರಿ, 'ಅಲ್ಲನೇ! ರಕ್ಷಿಸು' ಎನ್ನುತ್ತ, „ನಾನು ತಮಗೆ ಸ್ವಲ್ಪವೂ ಮೋಸಮಾಡುವುದಿಲ್ಲ. ತಮ್ಮೊಡನೆ ಸಂತೋಷದಿಂದ ಬರುವೆನು" ಎಂದನು

ಆ ಇಬ್ಬರು ವ್ಯಕ್ತಿಗಳೇ 'ಗುಲಾಬಸಿಂಗ, ವಿಶ್ವಾಸರು' ಎಂಬುದನ್ನು ವಾಚಕರು ತಿಳಿಯಬೇಕು. ಧರ್ಮದಿಂದಾಗಲೀ ಪ್ರೀತಿಯ ದರ್ಶನದ ಅನಿವಾರ ಕಾರಣದಿಂದಾಗಲೀ ಖಾನನು ಗುಲಾಬಸಿಂಗನಲ್ಲಿ ವಿಶ್ವಾಸವಿಟ್ಟನು.

ಗುಲಾಬಸಿಂಗನು "ಖಾನರೇ! ಈಗ ನಡೆಯಿರಿ." ಎಂದು ಮುಂದೆ ಹೊರಟನು.

ಹಿಂದಿನಿಂದ ಖಾನನೂ ವಿಶ್ವಾಸನೂ ಹೋಗುತ್ತಿದ್ದರು. ಸ್ವಲ್ಪ ದೂರ ಹೋದಮೇಲೆ ಗುಲಾಬಸಿಂಗನು— "ಖಾನರೇ! ನೀವು ಈ ದಿನ ಪ್ರಾತಃಕಾಲದವರೆಗೆ ಮನೆಗೆ ಹಿಂತಿರುಗಿ ಬರುವುದಿಲ್ಲವೆಂದು ನಿಮ್ಮ ಪತ್ನಿಗೆ ಹೇಳಿ ಬನ್ನಿರಿ; ಇದರಲ್ಲಿ ಒಂದು ಗುಪ್ತ ರಹಸ್ಯವಿದೆ." ಎಂದನು.

ಖಾನನು ಕಿಂಚಿತ್ಶಂಕಿತನಾಗಿ "ಹೀಗೆ ಮಾಡಲು ಕಾರಣವೇನು?" ಎಂದು ಕೇಳಿದನು.

"ಇದರಿಂದ ತಮಗೆ ಲಾಭವಿದೆ." ಎಂದು ಗುಲಾಬಸಿಂಗನು ಹೇಳಿದನು.

"ಒಳ್ಳೇದು. ನಾನಾಕೆಗೆ ಹೇಳಿ ಬರುವೆನು." ಎಂದು ಹೇಳಿ; ನಸರುದೀನನು ಹೊರಟು ಹೋದನು. ಅವನು ಹೋದ ಮೇಲೆ, ಗುಲಾಬಸಿಂಗನು ವಿಶ್ವಾಸನನ್ನು ಕುರಿತು:— "ಈವರೆಗೆ ಎಲ್ಲವೂ ಸುಲಲಿತವಾಗಿ ನಡೆಯಿತು. ಮುಂದೇನಾಗುವುದೋ ದೇವರೇ ಬಲ್ಲನು" ಎಂದು ಒಂದು ನಿಮಿಷದ ಬಳಿಕ "ವಿಶ್ವಾಸನೇ! ನೀನು ಜಾಗರೂಕನಾಗಿರು. ಇಲ್ಲದಿದ್ದರೆ ಮೋಸವಾದೀತು." ಎಂದನು.

ವಿಶ್ವಾಸನು "ತಾವೂ ಜಾಗರೂಕರಾಗಿರುವುದೊಳ್ಳೆಯದು." ಎಂದನು. ಇಷ್ಟರಲ್ಲೆ ನಸರುದೀನನು ಪುನಃ ಬಂದನು. "ನೀವು ಹೇಳಿದಂತೆ ನಾನು ಎಲ್ಲಾ ವ್ಯವಸ್ಥೆಯನ್ನೂ ಮಾಡಿ ಬಂದೆನು. ಹೋಗುವ, ಹೊರಡಿರಿ." ಎಂದನು. ಗುಲಾಬಸಿಂಗನು— "ನೀವು ಪುನಃ ಬೇಗ ಹಿಂದಿರುಗುವಿರಿ; ಇದನ್ನು ಲಕ್ಷ್ಯದಲ್ಲಿಡಿ." ಎಂದನು. ಖಾನನು— "ಅದಕ್ಕೆ ಯೋಚಿಸಬೇಕಾಗಿಲ್ಲ. ಬೇಕಾದಾಗ ನಮ್ಮ ಭಾವಣಿಗೆ ಹೋಗೋಣ!" ಎಂದನು ಗುಲಾಬಸಿಂಗನು— "ಹಾಗಾದರೆ, ಚಿಂತಿಸಲು ಕಾರಣವೇ ಇಲ್ಲ." ಎಂದನು.

ಬಳಿಕ ಮೂವರೂ ಆ ಡೇರೆಯಿಂದ ಹೊರಟು ಚಿತ್ತೂರು ಕೋಟೆಯ ಹತ್ತಿರ ಬಂದರು. ಗುಲಾಬಸಿಂಗನು ವಿಶ್ವಾಸನನ್ನು ಕುರಿತು, "ನೀನು ಹೋಗಿ ರೋಷನ್ನಳನ್ನೂ ನಿನ್ನ ತಾಯಿಯನ್ನೂ ಕರೆದುಕೊಂಡು ಬಾ!" ಎಂದನು. ವಿಶ್ವಾಸನು ಹೊರಟುಹೋದನು. ಅವನು ಹೋದೊಡನೆಯೇ ಕೋಟೆಯೊಳಕ್ಕೆ ಹೋಗುವಂತೆ ಮೊದಲೇ ಏರ್ಪಾಡುಮಾಡಿದ್ದುದರಿಂದ ವಿಘ್ನವಿಲ್ಲದೆ ಕೋಟೆಯೊಳಕ್ಕೆ ಹೋದನು. ಅವನು ಬರುವುದರೊಳಗಾಗಿ ಗುಲಾಬಸಿಂಗನು— 'ನನಗೆ ರೋಷನ್ನಳು ದೊರೆತುದನ್ನು' ಖಾನನಿಗೆ ಹೇಳಿದನು. ಸ್ವಲ್ಪ ಕಾಲದಲ್ಲಿಯೇ ರೋಷನ್ನಳು ಬಂದಳು. ಒಡನೆಯೇ ಗುಲಾಬಸಿಂಗನು ನಸರುದೀನನನ್ನು ತೋರಿಸಿ, ನಿನ್ನ ತಂದೆ

ಯನ್ನು ನೋಡೆಂದು ಹೇಳಿದನು. “ಏನು? ನನ್ನ ತಂದೆಯೇ!” ಎಂದು ಹೇಳುವಾಗ ರೋಷನ್ನಳ ನೇತ್ರಗಳಲ್ಲಿ ಆನಂದಾಶ್ರುವು ಹರಿಯ ತೊಡಗಿತು. ‘ಅಪ್ಪಾ! ಅಪ್ಪಾ! ಎನ್ನುತ್ತ ತಂದೆಯ ಕಂಠವನ್ನಾಲಿಂಗಿಸಿದಳು. ಖಾನನಿಗೂ ಕಣ್ಣಿನಲ್ಲಿ ನೀರು ತುಂಬಿತು. ಕಂಠದಿಂದಾವಸ್ವರವೂ ಇಬ್ಬರಿಗೂ ಹೊರಡಲಿಲ್ಲ. ಸ್ವಲ್ಪ ಹೊತ್ತಿನಮೇಲೆ ಖಾನನು ಹೇಳಿದ್ದೇನೆಂದರೆ:—‘ ಮಗುವೇ! ರೋಷನ್ನಳೆ! ನಾನು ಮೂರ್ಖತೆಯಿಂದ ಸಾರಾಸಾರ ವಿಚಾರಮಾಡದೆ ವಾಕ್ಪ್ರಹರ ಮಾಡಿದೆನು. ಇದಕ್ಕಾಗಿ ನೀನು ನನ್ನನ್ನು ಮನ್ನಿಸುವುದಿಲ್ಲವೇ?” ಎಂದನು.

ರೋಷನ್ನಳು:—ತಂದೆಯೇ! ಹೀಗೆ ಹೇಳಬೇಡ; ಏನಾಗಬೇಕಾಗಿತ್ತೋ ಅದು ಆಯಿತು. ಅದಕ್ಕೇಕೆ ದುಃಖಿಸಬೇಕು? ಆದರೆ, ನನ್ನ ವಿಷಯದಲ್ಲಿ ತಮ್ಮ ಮನದಲ್ಲಿ ಹುಟ್ಟಿದ ಸಂಶಯವು ದೂರವಾಯಿತೇ?” ಎಂದು ವಾತ್ಸಲ್ಯದಿಂದ ಕೇಳಿದನು. “ಮಗುವೇ! ನಿನ್ನ ವಿಷಯದಲ್ಲಿ ನಿಜವಾಗಿ ನನಗೆ ಸಂಶಯವಿಲ್ಲ!” ಎಂದು ಖಾನನು ಮಗಳ ಬೆನ್ನನ್ನು ಸವರಿ “ಮಗುವೇ! ನನ್ನೊಡನೆ ನಮ್ಮ ಡೇರೆಗೆ ಬರುವಿಯೋ ಇಲ್ಲವೋ?” ಎನ್ನಲು; ರೋಷನ್ನಳು ಈ ಪ್ರಶ್ನೆಗೆ ಉತ್ತರ ಕೊಡದೆ, ಗುಲಾಬಸಿಂಗನ ಕಡೆಗೆ ಒಂದು ಬಾರಿ ನೋಡಿದಳು. ಆಗ ಅವಳ ಆಶೆಯನ್ನು ತಿಳಿದ ಗುಲಾಬಸಿಂಗನು ಖಾನನನ್ನು ಕುರಿತು—“ಸದ್ಯದಲ್ಲಿ ರೋಷನ್ನಳನ್ನು ಇಲ್ಲಿಡುವುದೊಳ್ಳೆಯದು. ಯೋಗ್ಯಕಾಲದಲ್ಲಿ ಆಕೆಯನ್ನು ತಮ್ಮಲ್ಲಿಗೆ ತಲ್ಪಿಸುತ್ತೇನೆ. ಇದಕ್ಕೆ ಸ್ವಲ್ಪವೂ ಯೋಚಿಸಬೇಡಿ!” ಎಂದನು. “ತಮ್ಮ ಇಚ್ಛೆಯಂತಾಗಲಿ!” ಎಂದು ಖಾನನು ಹೇಳಿದನು. ಆಗ ರೋಷನ್ನಳು “ತಂದೆಯೇ! ಈ ವೀರಕ್ಷತ್ರಿಯರು ನನ್ನನ್ನು ತಮ್ಮ ಭಗಿನಿಯಂತೆ ತಿಳಿದು ರಕ್ಷಿಸುತ್ತಿದಾರೆ. ನನಗಾಗಿ ಸ್ವಲ್ಪವೂ ಯೋಚಿಸಬೇಡಿ.” ಎಂದು ಕೃತಜ್ಞತೆಯಿಂದ ಹೇಳಿದಳು. ಆಗ ಖಾನನು “ಅದಕ್ಕಾಗಿ ಈ ವೀರಶ್ರೇಷ್ಠರಲ್ಲಿ ಅಂತಃಕರಣಪೂರ್ವಕ ಕೃತಜ್ಞನಾಗಿದ್ದೇನೆ.” ಎಂದನು. ಬಳಿಕ ಖಾನನೊಡನೆ ಗುಲಾಬಸಿಂಗನು ಯವನರ ಡೇರೆಯ ಕಡೆಗೆ ಹೊರಟನು. ರೋಷನ್ನಳು ವಿಶ್ವಾಸನ ತಾಯಿಯೊಡನೆ ಪುನಃ ಕೋಟೆಯೊಳಕ್ಕೆ ಹೊರಟು ಹೋದಳು. ಹೋಗ ಹೋಗುತ್ತ ಗುಲಾಬಸಿಂಗನು ಖಾನನನ್ನು ಕುರಿತು—“ಖಾನ್ ಸಾಹೇಬರೇ! ನಾನು ಮಾತು ಕೊಟ್ಟಂತೆ ನಿಮ್ಮ ಪುತ್ರಿಯನ್ನು ತೋರಿಸಿದೆನು. ಈಗ ಇನ್ನೊಂದು ದೊಡ್ಡ ಸಂಗತಿಯನ್ನು ತಮಗೆ ಹೇಳಬೇಕಾಗಿದ್ದದೆ. ಆದರೆ, ತಮಗೆ ನನ್ನ ಮಾತಿನಲ್ಲಿ ಪೂರ್ಣ ವಿಶ್ವಾಸವಿದೆಯೇ?” ಎಂದನು.

ಖಾನನು:—ಇನ್ನು ಮುಂದೆ ನಾನು ನಿಮ್ಮ ಮಾತಿನಲ್ಲಿ ನಂಬಿಕೆಯಿಡದಿದ್ದರೆ ನನ್ನಂತಹ ಕೃತಘ್ನರಾರಿದ್ದಾರೆ? ರಾಜಪುತ್ರ ವೀರಶ್ರೇಷ್ಠರೇ! ರಣಭೂಮಿಯಲ್ಲಿ ನೀವು ಹೇಗೆ ಯುದ್ಧಧರ್ಮದಿಂದ ನಡೆಯುವಿರೋ, ಹಾಗೆ ನಾನು ಜೀನನ್ನಿ ಕಂಠಶ್ಚ ಸ್ನೇಹದಿಂದಿರುವೆನು.

ಗುಲಾಬಸಿಂಗ:— ಹಾಗಾದರೆ ಕೇಳಿರಿ. ನಿಮ್ಮ ಸ್ತ್ರೀಯು ವ್ಯಭಿಚಾರಿಣಿ! ತನ್ನ

ಪಾಪಕೃತ್ಯವನ್ನು [illegible]ದಕ್ಕಾಗಿ ರೋಷನ್ನಳಲ್ಲಿ ಆಕೆಯು ನಿರರ್ಥಕವಾದ ಕಲಂಕವನ್ನಿಟ್ಟಳು.

ನಸರುದೀನ್:—ಹ, ದುರುಳ, ನಾಲಿಗೆಯನ್ನು ಬಿಗಿಹಿಡಿ.

ಗುಲಾಬಸಿಂಗ:—ತಮ್ಮ ಬೆದರಿಕೆಗೆ ಬೆದರುವವನಲ್ಲ. ಖಾನ್ ಸಾಹೇಬ್! ನಾನು ಪುನಃ ಹೇಳುವುದೇನೆಂದರೆ:—“ನಿಮ್ಮ ಸ್ತ್ರೀಯು ಕುಲಟೆಯಾಗಿದ್ದಾಳೆ!” ಈ ಮಾತಿನ ಸತ್ಯವನ್ನು ನೋಡುವುದಾದರೆ, ಈಗಲೇ ನಿಮ್ಮ ಸ್ತ್ರೀಯ ಡೇರೆಗೆ ಹೋಗಿ ನೋಡಿರಿ. ಆಗ ನಿಮಗೆ ತಕ್ಕಷ್ಟಕ್ಕೇ ನಿಜವು ತೋರೀತು.

ನಸರುದಿನ್:—ನಿಮಗೆ ಇದು ಹೇಗೆತಿಳಿಯಿತು. ?

ಗುಲಾಬಸಿಂಗ:—ರೋಷನ್ನಳೇ ಸಂಗತಿಗಳೆಲ್ಲವನ್ನೂ ಹೇಳಿದಳು ; ನಾನು ನಿಮ್ಮ ಡೇರೆಯನ್ನು ಪ್ರವೇಶಿಸಿದನಂತರ, ಮೊದಲು ತಮ್ಮನ್ನು ನೋಡಿದೆನು.

ಇದನ್ನು ಕೇಳಿ ಖಾನನು ಮೌನಹೊಂದಿ ಕ್ರೋಧದಿಂದ ಬೇಗ ತನ್ನ ಡೇರೆಗೆ ಹೋದನು ಅಲ್ಲಿ ಅವಳ ನಿಂದ್ಯಕೃತ್ಯವು ಅವನಿಗೆಗೋಚರಿಸಿತು. ಅದರಿಂದ ಸಂತಾಪ ಹೊಂದಿದನು. ಅಕಸ್ಮಾತ್ತಾಗಿ ಪತಿಯು ಬಂದುದನ್ನು ನೋಡಿ ಆ ಜಾರಿಣಿಯು ಹೆದರಿದಳು. ಆ ವಿಟನು, ಖಾನನಮೇಲೆ ಬಿದ್ದನು. ನಸುರುದೀನನು ಆತನನ್ನು ಕೊಂದು, ತನ್ನ ಸ್ತ್ರೀಯನ್ನು ಕೊಲ್ಲುವ ಪ್ರಯತ್ನದಲ್ಲಿದ್ದನು; ಅಷ್ಟರಲ್ಲೇ ಗುಲಾಬಸಿಂಗನು ಆತನ ಕತ್ತಿಯನ್ನೆಳೆದುಕೊಂಡನು. ಆದರೂ ಖಾನನು ಆಕೆಗೆ ಮೃತ್ಯುವಾದನು. ಸ್ವಲ್ಪ ಹೊತ್ತಿನ ಮೇಲೆ ಗುಲಾಬಸಿಂಗನು, “ ಖಾನ್ ಸಾಹೇಬರೇ! ಹಿಂದೆಒಂದು ದಿನ ನಿಮ್ಮ ಮಗಳ ಡೇರೆಯಿಂದ ಒಬ್ಬ ಮನುಷ್ಯನು ಹೊರಗೆ ಹೊರಟನಷ್ಟೆ! ಅವನನ್ನು ತಾವು ನೋಡಿದ್ದಿರಷ್ಟೆ!” ಎಂದನು.

ನಸರುದಿನ್:—ನಿಜ, ಅವನು ಓಡಿಹೋದನು, ಇಲ್ಲದಿದ್ದರೆ, ನಾ ನಾಸಮಯದಲ್ಲಿ ಸಂಹರಿಸುತ್ತಿದ್ದೆನು.

ಗುಲಾಬಸಿಂಗನು:—ಆದರೆ, ಅವನನ್ನು ಗುರ್ತಿಸಿದಿರಾ ?

ಖಾನನು:—ಇಲ್ಲ.

ಗುಲಾಬ:—“ ಹಾಗಾದರೆ ಕೇಳಿರಿ. ಆತನು ಬೇರೆ ಯಾರೂ ಅಲ್ಲ. ಸುಲ್ತಾನನೇ.

ನಸರುದೀನ್:-ಏನು,ನ್ವತಃ ಸುಲ್ತಾನನೋ? ಚೆನ್ನಾಗಿದೆ ರಾಜಪುತ್ರವೀರರೇ!” ಈಗ ನೀವು ಹೋಗಿ ಚಿತ್ತೂರುದ್ವಾರದಲ್ಲಿ ನನ್ನ ದಾರಿಯನ್ನು ನೋಡುತ್ತಿರಿ; ಆದರೆ ಸೂರ್ಯೋದಯಕ್ಕೆ ಮುಂಚೆಯೇ ನಾನು ಬರದಿದ್ದರೆ ಈ ದುರ್ದೈವಿ ನಸರುದೀನನು ಈ ಜಗತ್ತಿನಿಂದ ಹೊರಟು ಹೋದನೆಂದು ತಿಳಿಯಿರಿ; ಮತ್ತು ನನ್ನ ರೋಷನ್ನಳನ್ನು ಸಂರಕ್ಷಿಸಿರಿ.

ಎಂದು ಹೇಳಿ ಖಾನನು ಅಲ್ಲಿಂದ ಹೊರಟು ಹೋದನು. ಬಳಿಕ ಗುಲಾಬಸಿಂಗನೂ, [illegible] ದಾರಿಯ [illegible] ಆತನು ಈ ಯವನ ವೇಷಧಾರಿ

ಗಳಲ್ಲಿ ಸಂಶಯ ಹೊಂದಲಿಲ್ಲ ಈ ಸೈನಿಕನ ಮಾತಿನಿಂದ ಬಾದಷಹನು ಒಡೆಂ ಕಡು ದಿನಗಳಲ್ಲಿ ಚಿತ್ತೂರಿನಮೇಲೆ ಹಲ್ಲಾ ಹಚ್ಚುವವನಾಗಿದ್ದಾನೆಂದು ತಿಳಿಯಿತು. ಯಾವ ಕಾರ್ಯಕ್ಕಾಗಿ ಚಿತ್ತೂರಿನಿಂದ ಹೊರಟಿದ್ದರೋ, ಅದನ್ನು ಪೂರ್ಣವಾಗಿ ಮಾಡಿದವರಾದರು. ಇವರಿಂದ ಆನಂದವಾಯಿತು.

ಪ್ರಕರಣ 13

ರಾತ್ರೆ ಮೂರು ಜಾವ ಕಳೆಯಿತು. ಗುಡಾರದ ಮಧ್ಯದಲ್ಲಿ ಪಹರೆ ಕೊಡುತ್ತಿದ್ದವರ ಸಾವಧಾನ ಸೂಚಕ ಶಬ್ದವೂ ಕೇಳುತ್ತಿರಲಿಲ್ಲ. ದಿಲ್ಲಿಯ ಚಕ್ರವರ್ತಿಯಾದ ಅಲ್ಲಾವುದೀನನು ತನ್ನ ಸುವರ್ಣಕಾಂತಿಯುತ ಅರ್ಧ ಚಂದ್ರಕೃತಿಯ ಪತಾಕೆಯುಳ್ಳ ಮುಖ್ಯಮಲ್ಲಿನ ಡೇರೆಯಲ್ಲಿ ಹಂಸತೂಲಿಕಾತಲ್ಪದ ಮೇಲೆ ಮಲಗಿ ನಿದ್ರಿಸುತ್ತಿದ್ದನು. ರಾತ್ರಿಯೆ ಉತ್ತರಾರ್ಧದಲ್ಲಿ ಪ್ರಾಯಶಃ ಗಾಢನಿದ್ರೆಯೇ ಬರುವದು ಒಂದು ಸಾಧಾರಣ ನಿಯಮವಾಗಿದೆ.— ಈ ನಿಯಮಾನುಸಾರವಾಗಿ ಸುಲ್ತಾನನಿಗೆ ನಿದ್ರೆ ಹತ್ತಿತು. ಆದರೆ, ಅನೇಕ ರಾಜಕೀಯವಿಷಯದ ಧ್ಯಾನದಿಂದ ವಿಚಾರಭ್ರಮಣೆಯಾಗುತ್ತಿತ್ತು. ಸ್ವಲ್ಪ ಕಾಲದಲ್ಲಿ ಅವನ ಶಾಂತಿಗೆ ಭಂಗವುಂಟಾಯಿತು. ಅವನ ಮುಖ ಚಿಹ್ನೆಯಿಂದ ಅವನಿಗಾವುದೋ ಒಂದು ಭಯಂಕರ ಸ್ವಪ್ನಬಿದ್ದಿರಬಹುದೆಂದು ಕಾಣುತ್ತಿತ್ತು. ಅವನು ಅರ್ಧ ಜಾಗರೂಕತೆಯಿಂದ ಇದ್ದನು. ಈ ಕಾಲದಲ್ಲೊಬ್ಬ ಶಸ್ತ್ರಧಾರಿಯು ಕೃಷ್ಣವಸ್ತ್ರಾಚ್ಛಾದಿತನಾಗಿ ಡೇರೆಯ ಬಟ್ಟೆಯನ್ನು ಹರಿದುಕೊಂಡು ಒಳಗೆ ಬಂದನು. ಆಗ ಬಾದಷಹನ ಮುಖ ಚಿಹ್ನೆಯಲ್ಲಿ ಆದ ಬದಲಾವಣೆಯನ್ನು ನೋಡಿ, ಆ ವ್ಯಕ್ತಿಯು ತನ್ನಲಿಯೇ, "ನಿಜವಾಗಿ ಪಾಪಿಗಳಿಗೆ ನಿದ್ರೆ ಮತ್ತು ಮೃತ್ಯುಕಾಲಗಳಲ್ಲಿ ಸುಖಶಾಂತಿಯ ಲಾಭಗಳುಂಟಾಗುವುದಿಲ್ಲವೆಂಬುದು ಅಕ್ಷರಶಃ ನಿಜವಾಗಿದೆ. ಸಾಧಾರಣವಾಗಿ ಒಡವರಿಗೂ ಈ ಸುಖ ಮತ್ತು ಶಾಂತಿಯ ಲಾಭವು ದೊರೆಯುವುದು. ಈ ಶಾಂತಿಯು ಈ ಪಾಪಿಯ ಅದೃಷ್ಟದಲ್ಲಿ ಬರೆದಿಲ್ಲ. ಎಲ್ಲಿ ಇದ್ದೀತು? ಪಾಪಿಗಳಿಗೆ ಸಮಾಧಾನಲಾಭವು ಉಂಟಾಗುತ್ತಿದ್ದರೆ, ಧರ್ಮಾತ್ಮರಾಗಬೇಕೆಂದು ಯಾರು ಇಚ್ಛಿಸುತ್ತಿದ್ದರು? ಇವನು ಯಾವಯಾವ ಪಾತಕಗಳನ್ನು ಮಾಡಿದನೋ ಅವೂ ಇವನೆದುರಿನಲ್ಲಿ ನಿಂತಿರಬೇಕು; ಇಲ್ಲದಿದ್ದರೆ, ಇಷ್ಟು ಮನದ ಅಸ್ವಸ್ಥತೆಯು ಇವನಿಗಿರುತಿರಲಿಲ್ಲ ದೇವಾ! ಮನುಷ್ಯಪ್ರಾಣಿಯು ಎಷ್ಟು ಮೂರ್ಖತನ ಉಳ್ಳುದು? ಪಾಪಕ್ಕೆ ಪ್ರಾಯಶ್ಚಿತ್ತವು ಈ ರೀತಿಯಾಗಿ ಉಂಟಾಗುತ್ತಿದ್ದರೂ, ನಿತ್ಯವೂ ಇವನು ಪಾಪಕರ್ಮಗಳಲ್ಲಿ ಮಗ್ನನಾಗುತ್ತಿರುವನು. ಈ ಪಾಪಿಯಾದ ರಾಜನ ಸೇವೆಯಲ್ಲಿ ನಾನು ನನ್ನ ಜನ್ಮವನ್ನು ವ್ಯರ್ಥವಾಗಿ ಕಳೆದೆನು! ನನ್ನಿಂದ ದೊಡ್ಡತಪ್ಪಾಯಿತು; ಆದರೆ, ಇನ್ನು ಮುಂದೆ ಈ ತಪ್ಪನ್ನು

ತಿದ್ದಿಕೊಳ್ಳಬೇಕಾಗಿದೆ " ಎಂದು ತನ್ನಲ್ಲಿಯೇ ಹೇಳಿಕೊಂಡು; ಈ ಮದಾಂಧನಾದ ಬಾದಷಹನ ಕಣ್ಣನ್ನು ತೆರೆಯಬೇಕೆಂದು ಸುಲ್ತಾನನ ಹಾಸುಗೆಯ ಹತ್ತಿರ ಹೋಗಿ ಅವನ ಕೈಯನ್ನು ಬಲವಾಗಿ ಹಿಡಿದು ಅವನನ್ನು ಎಚ್ಚರಿಸಿ ಅಸ್ಫುಟಸ್ವರದಿಂದ, "ನರರೂಪದಿಂದ ಪೃಥ್ವಿಯಲ್ಲವತರಿಸಿದ ಅಲ್ಲಾವುದೀನ ಪಶುವೆ! ನಿದ್ರೆಯಿಂದೆಚ್ಚರಹೊಂದು. ನಿನ್ನ ಪಾಪದ ಪ್ರಾಯಶ್ಚಿತ್ತವನ್ನು ಅನುಭೋಗಿಸಲು ಸಿದ್ಧನಾಗು!" ಎಂದನು. ಇದನ್ನು ಕೇಳಿ ಸುಲ್ತಾನನು ಎಚ್ಚರಹೊಂದಿದನು. ಭಯಂಕರ ಸ್ವಪ್ನದಿಂದ ಅರ್ಧ ಭಾಗ ಹೆದರಿದ್ದನು ಈಗ ತನ್ನ ಕೈಯನ್ನು ಬಲವಾಗಿ ಹಿಡಿದು ಎದುರಿಗೆ ನಿಂತಿರುವ ವ್ಯಕ್ತಿಯನ್ನು ನೋಡಿದೊಡನೆಯೆ ಹೆಚ್ಚಾಗಿ ರೋದಿಸುವವನಾಗಿದ್ದನು. ಆ ವ್ಯಕ್ತಿಯು ಇಷ್ಟರಲ್ಲೇ ಕಠೋರವಾಣಿಯಿಂದ ಹೇಳಿದ್ದೇನೆಂದರೆ:—"ಜೋಕೆ! ಕೂಗುವಪ್ರಯತ್ನ ಮಾಡೀಯೇ! ನಾನು ಹೇಳುವುದನ್ನು ಲಕ್ಷ್ಯವಿಟ್ಟು ಕೇಳು! ಇಲ್ಲದೆ ಕೂಗಿ ನನ್ನನ್ನು ಹಿಡಿದುಕೊಳ್ಳುವ ಪ್ರಯತ್ನ ಮಾಡಿದೆಯೆಂದರೆ, ನಿನ್ನ ಕಿಂಕರನು ನಿನ್ನ ಸಹಾಯಕ್ಕೆ ಬರುವದಕ್ಕೆ ಪೂರ್ವವೇ ನಿನಗೆ ಯಮಪುರಿಯ ಮಾರ್ಗವನ್ನು ನನ್ನ ಈ ಕತ್ತಿಯು ತೋರಿಸುವುದು ಜೋಕೆ" ಎಂದನು.

ಸುಲ್ತಾನ್:—ನೀನಾರು? ನನ್ನನ್ನು ಕೊಲ್ಲಲು ಏಕೆ ಪ್ರಯತ್ನಿಸುವಿ?

ವ್ಯಕ್ತಿ:—ಪಾಪಿಷ್ಟನೇ! ಕೇಳು, ನಾನು ನಿನ್ನ ಸ್ವಾಮಿಭಕ್ತನಾದ ಸರದಾರನು. ಆದರೆ, ಈಗ ನಾನು ನಿನ್ನ ಕಾಲಮೃತ್ಯುವಾಗಿ ಬಂದಿದೇನೆ. ನನ್ನ ಹೆಸರು ನಸರುದಿನ್ ಖಾನ್, ಈಗ ಪರಿಚಯವಾಯಿತೇ?

ಸುಲ್ತಾನ್:—ಓಹೋ, ನಾನು ನಿನ್ನನ್ನು ಗುರ್ತಿಸಿದೆನು ಆದರೆ ನಸರುದೀನನೇ! ನಾನು ನಿನಗೆ ಯಾವ ಅಪರಾಧಮಾಡಿದೆನು? ನನಗೆ ನೆನಪಿಲ್ಲ. ಯಾರೋ ನಿನಗೆ ಕಲಿಸಿರಬಹುದು; ಆದ್ದರಿಂದ ನಿನ್ನ ಚಿತ್ತವು ಕಲುಷಿತವಾಗಿದೆಯೆಂದು ತಿಳಿಯುತ್ತದೆ; ಆದರೆ ನೀನುಹೋಗು. ನೀನು ಈವರೆಗೆ ಮಾಡಿದ ಸೇವೆಯನ್ನು ಸ್ಮರಿಸಿ ನಿನ್ನನ್ನು ಮನ್ನಿಸುವೆನು; ಈಗ ಹೋಗು. (ಎಂದು ಧೈರ್ಯದಿಂದ ಹೇಳಿದನು.)

ನಸರುದೀನ್:-ಅಪರಾಧ! ಮಹಮದನಧರ್ಮಕ್ಕೆ ಕಳಂಕವನ್ನುಂಟುಮಾಡಿದ ರಾಕ್ಷಸನೆ! ಪಿಶಾಚಿಯೇ! ಅಪರಾಧ? ಮಹಾಪರಾಧಮಾಡಿದ, ಚಂಡಾಲನೇ! ಸ್ಮರಣೆಯಾದರೆ, ನಿನ್ನನ್ನು ಈವರೆಗೇಕೆ ಜೀವಂತನನ್ನಾಗಿಟ್ಟೆನೆಂದು ಆಶ್ಚರ್ಯವಾಗುವುದು? ಆದರೆ, ನಾನು ನಿನ್ನ ಉಪ್ಪು, ಅನ್ನ ತಿಂದಿರುವುದರಿಂದ ನಿನ್ನನ್ನು ಕೊಲ್ಲಲು ಇಚ್ಛಿಸುವುದಿಲ್ಲ. ಕೇಳು; ನಾನೇಕೆ ಬಂದಿದೇನೆಂದರೆ:-ನಿನಗೆ ನಿನ್ನ ಭವಿಷ್ಯತ್ಕಾಲದ ಸ್ಥಿತಿಯ ಕಲ್ಪನೆಯಾಗುವಂತೆ ಮಾಡಬೇಕೆಂದು! ಬಂದೆ. ನಿನಗೆ ಇಚ್ಛೆಯಿಲದಿದ್ದರೂ ನನ್ನ ಕ್ರೂರವಾಣಿಯನ್ನು ಕೇಳಬೇಕಾಗಿದೆ." ಎಂದು ಹೇ ವಾಗ ನಸರುದೀನನ ನೇತ್ರಗಳು ಬೆಂಕಿಯ ಕೆಂಡಗಳಂತೆ ಕೆಂಪಾಗಿ

ಸುಲ್ತಾನ್:—(ಕ್ರೋಧದಿಂದ) ನನ್ನ ತಪ್ಪಿಲ್ಲದೆ, ನೀನು ಈಗ ದುರುಕ್ತಿಯಿಂದ ನನ್ನನ್ನು ಅವಮಾನಿಸುವಿಯೋ ಇದಕ್ಕಾಗಿ ನಿನಗೆ ಆಮೇಲೆ ಪಶ್ಚಾತ್ತಾಪವಾದೀತು.

ನಸರುದೀನ್:—(ಹಾಸ್ಯದಿಂದ) ಯಾವಾಗ ನಿನ್ನ ವಿಚಾರಣೆಯು ಪರಮೇಶ್ವರನ ಸಭೆಯಲ್ಲಿ ಆಗುವುದೋ, ಆಗ ಈ ಲೋಕದಲ್ಲಿ ಹೆಣ್ಣುಮಕ್ಕಳಲ್ಲಿ ಬಲಾತ್ಕಾರ ಮಾಡಿದಕ್ಕೆ ನಿನಗಾಗಿ ಈಶ್ವರನು ಬೇರೊಂದು ನರಕವನ್ನು ನಿರ್ಮಿಸಬೇಕಾದೀತು! ಇದನ್ನು ನೀನು ಲಕ್ಷ್ಯದಲ್ಲಿಡು.

ಸುಲ್ತಾನ್:—ನಾನು ಯಾರ ಹೆಣ್ಣುಮಕ್ಕಳಲ್ಲಿಯೂ ಬಲಾತ್ಕಾರ ನಡೆಸಿಲ್ಲ.

ನಸರುದೀನ್:—ಚೆನ್ನಾಗಿದೆ. ನೀನು ಎರಡುದಿನಗಳಹಿಂದೆ ನನ್ನ ಮಗಳ ಡೇರೆಗೆ ಕಳ್ಳನಂತೆ ಯಾವ ಉದ್ದೇಶದಿಂದ ಪ್ರವೇಶಿಸಿದ್ದೆ; ಹೇಳುವಿಯಾ ? ನೀಚನೇ

ಸುಲ್ತಾನ್:—ಇದು ಶುದ್ಧ ಸುಳ್ಳು. ಇದೊಂದುಕಲ್ಪನೆ.

ನಸರುದೀನ್:—(ಧಿಕ್ಕಾರದಿಂದ) ಪಿಶಾಚಿಯೇ ! ಅಪರಾಧಮಾಡಿಯೂ ಈಗ ಅಹಂಕಾರ ತೋರಿಸುವಿಯಾ ? ಎಂದನು.

ಅಲ್ಲಾವುದೀನನು ಒಬ್ಬ ಪಾಷಾಣ ಹೃದಯದ ಪುರುಷನಾಗಿದ್ದನು. ಅವನು ಬಹಳ ಪಾಪಕರ್ಮಗಳನ್ನು ಮಾಡಿದ್ದನು. ಕಣ್ಣುಮುಚ್ಚಿ ತೆರೆಯುವಷ್ಟರಲ್ಲಿ ಮಾಡಿದ ಪಾಪಕರ್ಮವು ಮೂರ್ತಿಭವಿಸಿ ಈಗ ಅವನ ಕಣ್ಣೆದುರಿಗೆ ನಿಂತಿದ್ದರಿಂದ ಅವನ ಮನಸ್ಸು ಅಸ್ಥಿರವಾಗಿ ನಡಗಲಾರಂಭಿಸಿದ್ದನು. ಯಾವ ದಯಾಳುವಾದ ಚಿಕ್ಕಪ್ಪನನ್ನು ಕೊಂದು; ರಾಜ್ಯಾರೂಢನಾದನೋ, ಆ ಜಲಾಲುದೀನನ ಸ್ವರ್ಗಸ್ಥವಾದ ಆತ್ಮನು ಅವನ ಇದುರಿಗೆ ಬಂದು; “ಎಲೈ ನರಾಧಮನೆ! ಯಾವ ರಾಜ್ಯಸುಖಕ್ಕಾಗಿ ನೀನು ನನ್ನನ್ನು ಕಪಟದಿಂದ ಕೊಂದೆಯೋ ಆ ರಾಜ್ಯವು ನೀನು ಸತ್ತಮೇಲೆ ನಿನ್ನೊಡನೆಯೇ ಪರಲೋಕಕ್ಕೆ ಬರುವುದಿಲ್ಲ! ಯಮನಿಗೆ ಧನಿಕನೂ ದರಿದ್ರರೂ ಸಮಾನರಾಗಿದ್ದಾರೆ! ಪರಲೋಕದಲ್ಲಿ ರೌರವವೆಂಬ ನರಕ ಹೊರತು, ಬೇರೆ ಸ್ಥಾನವು ನಿನಗೆಲ್ಲಿ ಸಿಕ್ಕುವುದು?” ಎಂದು ಅವನಿಗೆ ಹೇಳುವಂತೆ ತೋರಿತು. ಆ ಸರಳಿಯೂ ಆದ ಅಲ್ಲಾವುದೀನನು ಬಾಯಿಯಿಂದ “ಮನ್ನಿಸು ಮನ್ನಿಸು” ಎಂದು ಹೇಳಿದನು. ಸುಲ್ತಾನನ ಇಂತಹ ಸ್ಥಿತಿಯನ್ನು ನೋಡಿ, ನಸರುದೀನನಿಗೆ ಬಹು ಸಂತೋಷವಾಯಿತು ಮತ್ತು ಅವನಿಗೆ ಸ್ವಲ್ಪ ದಯೆಬಂತು. ಗಾಂಭೀರ್ಯದಿಂದ ಸುಲ್ತಾನನನ್ನು ಕುರಿತು, “ದುರಾತ್ಮನೇ! ಕಣ್ಣುಮುಚ್ಚಿಕೊಂಡು “ಮನ್ನಿಸು! ಮನ್ನಿಸು” ಎಂದು ಬಾಯಿಯಿಂದ ಹೇಳಿದರೆ, ಪಾಪಕ್ಷಾಲನೆಯಾಗುವುದೇ ? ಹಾಗಾದರೆ, ಪಾಪಿಗಳಿಗೆ ಪಶ್ಚಾತ್ತಾಪದಿಂದ ದಗ್ಧವಾಗುವ ಪ್ರಸಂಗಬರುತ್ತಿರಲಿಲ್ಲ. ಹೀಗೆ ಬಕದಸ್ವರೂಪವನ್ನು ಧಾರಣೆಮಾಡಿ ಪಾಪಮುಕ್ತರಾಗುವುದಾದರೆ, ಪಾಪಿಗಳಿಗೆ ಕ್ಷುಲ್ಲಕ ಕಾರಣದಿಂದ ಕಂಪಿಸುವ ಪ್ರಸಂಗ ಬರುತ್ತಿರಲಿಲ್ಲ. ಪಾಪಿಗಳ ಮನಸ್ಸು ಸರ್ವದಾ ಅಸ್ಥಿರವಾಗಿರುತ್ತದೆ. ಅವನು ಪಾಪದ ಸ್ಮೃತಿಯಿಂದ ಹೇಗೆ ಹೇಗೆ ದೂರ ಹೋಗಲು ಯತ್ನಿಸುವನೋ, ಹಾಗೆ ಹಾಗೆ ಅದು ಅವನ ಬೆನ್ನನ್ನೇ

ಹತ್ತುವನು. ಪಾಪಪರಿಹಾರಕ್ಕೆ ಎಷ್ಟು ಪ್ರಯತ್ನಿಸಿದರೂ, ಅದು ವ್ಯರ್ಥವಾಗುವುದು. ಸುಲ್ತಾನನೇ! ನನ್ನ ಈ ಮಾತಿನ ನಿಜತ್ವವು ನಿನ್ನನುಭವಕ್ಕೆ ಸ್ಪಷ್ಟವಾಗಿ ತಿಳಿದು ಬರುತ್ತದೆ.'' ಎಂದನು.

ನಸರುದೀನನ ಒಂದೊಂದು ಶಬ್ದವೂ ಸುಲ್ತಾನನ ಹೃದಯಕ್ಕೆ ಶಲ್ಯರೂಪವಾಗಿ ತಾಗಿತು. ಆದರೂ, ಅವನು ಕೃತ್ರಿಮಧೈರ್ಯವನ್ನು ಹೊಂದಿ "ನಸರುದೀನನೇ! ನೀನು ಈಗ ಇಲ್ಲಿಂದ ಹೊರಟು ಹೋಗು; ನಿನ್ನ ತಲೆಯು ಈಗ ಸರಿಯಾದ ಸ್ಥಿತಿಯಲ್ಲಿಲ್ಲ. ಮನಸ್ಸು ಬಂದರೆ ನಾನು ನಿನ್ನನ್ನು ಈಗಲೇ ಯಥಾಯೋಗ್ಯವಾಗಿ ಶಿಕ್ಷಿಸಲು ಶಕ್ತನಾಗಿದ್ದೇನೆ; ಹೋಗು, ನಿನ್ನನ್ನು ಮನ್ನಿಸುತ್ತೇನೆ!'' ಎಂದನು.

ನಸರುದೀನ್:—ಹೀಗೂ ಚೆನ್ನಾಗಿದೆ! ನಿನ್ನ ಕತ್ತಿಯನ್ನು ತೆಗೆದುಕೋ! ನನ್ನ ಕೈಗಳೆರಡನ್ನು ಹಿಡಿ. ಆದರೆ, ನಿನ್ನ ರಕ್ತದಿಂದ ನನ್ನ ಕಠಾರಿಯನ್ನು ಅಪವಿತ್ರವಾಗಿ ಮಾಡಲಾರೆನು.

ಸುಲ್ತಾನ್:—ಹಾಗಾದರೆ, ನಿನ್ನ ಇಚ್ಛೆಯೇನು?

ನಸರುದೀನ್:—ನನ್ನ ಇಚ್ಛೆಯೋ? ಕೇಳು; ನಾನು ಈಗ ನಿನಗೆ ಶಾಪಕೊಡಲು ಬಂದಿದೇನೆ. ನೀನು ಅನ್ಯರಲ್ಲಿ ಹೇಗೆ ವರ್ತಿಸುವೆಯೋ ಅವರೂ ನಿನ್ನಲ್ಲಿ ಹಾಗೆ ನಡೆಯುತ್ತಾರೆ. ನಿನಗೆ ಸುಖದಿಂದ ಮರಣವಾಗದು, ನಿನ್ನ ವಂಶವು ನಾಶವಾಗುವುದು!

ಇದನ್ನು ಕೇಳಿದ ಸುಲ್ತಾನನ ಹೃದಯವು ಕಂಪಿಸಿತು. ಧೈರ್ಯಗುಂದಿತು. ಅವನು ತನ್ನಪರಾಧವನ್ನು ಒಪ್ಪಿಕೊಂಡನು. ನಸರುದೀನನ ಕ್ಷಮೆಯನ್ನು ಕೇಳಿದನು. ಆದರೆ, ಅವನಿಗೆ ದಯೆಬರಲಿಲ್ಲ. ಆಗ ನಸರುದೀನನು "ಮನ್ನಿಸುವದಕ್ಕೆ ನಾನು ಯಾರು? ಆ ಸರ್ವಸಾಕ್ಷಿಯಾದ ದೇವನ ಹತ್ತಿರ ನಿನ್ನಪಾಪಕೃತ್ಯಕ್ಕೆ ಉತ್ತರ ಕೊಡಬೇಕಾಗುವುದು. ಅವನನ್ನೇ ಕ್ಷಮೆಯನ್ನು ಬೇಡಿಕೊ. ಸನ್ಮಾರ್ಗದಿಂದ ನಡೆದರೆ, ಸದ್ಗತಿಯೂ, ಉಂಟಾಗಿ ದುರ್ಮಾರ್ಗದಿಂದ ನಡೆದರೆ ಅಂತ್ಯದಲ್ಲಿ ಉಗ್ರಯಾತನೆಯನ್ನನುಭವಿಸಿಯೇ! ಇದನ್ನು ಚೆನ್ನಾಗಿ ಲಕ್ಷ್ಯವಿಡು ಸಲಾಂ! ಕೊನೆಯ ಸಲಾಂ! ಸುಲ್ತಾನ್! ಈಗ ಈ ನನ್ನ ಕೊನೆಯವಂದನೆಯನ್ನು ತೆಗೆದುಕೊ!! ಇನ್ನು ಮುಂದೆ ಪರಮೇಶ್ವರನ ಸಭೆಯಲ್ಲಿ ನಾನು ಸಿಕ್ಕುವೆನು.''—ಎಂದು ಹೇಳಿ

ನಸರುದೀನನು ಬಂದ ದಾರಿಯಿಂದ ಡೇರೆಯ ಹೊರಗೆ ಹೊರಟು ಕುದುರೆಯನ್ನೇರಿ ಚಿತ್ತೂರು ಕಡೆಗೆ ಹೊರಟನು. ಅವನು ಹೋದ ಬಳಿಕ, ಅಲ್ಲಾವುದೀನನು ಜಾಗರೂಕನಾಗಿ ನಸರುದೀನನನ್ನು ಹಿಡಿಯಲು ಐದಾರು ಜನ ಸವಾರರನ್ನು ರವಾನಿಸಿದನು; ಆದರೆ ಅವನು ಸಿಕ್ಕಲಿಲ್ಲ. ಆಗ ಕ್ರೂರಾತ್ಮನಾದ ಸುಲ್ತಾನನು ಅವನನ್ನು ಹಿಡಿಯಲು ಕಳುಹಿಸಿದ ಸವಾರರನ್ನು ಯಮಪುರಿಗೆ ಕಳುಹಿಸಿ ತನ್ನ ಕ್ರೋಧಾಗ್ನಿಯನ್ನು ಶಾಂತಿಪಡಿಸಿ, ಪೊರೆಯನ್ನು ಉಗಿದ ಹಾವಿನಂತೆ ಆದನು. ದುರ್ಗದ ಹತ್ತಿರ ಐದು ದಿನದಲ್ಲಿ ಗುಲಾಬಸಿಂಗನು ನಸರುದೀನನನ್ನು ನೋಡಿದನು.

ಆಗ ಗುಲಾಬಸಿಂಗನು ಅವನನ್ನು ವಿಚಾರಿಸಿದನು:—ಈಗ ಏನು ವರ್ತಮಾನ?"

ಖಾನ:—ಖುರಾನೆಂಬ ನಮ್ಮ ಪವಿತ್ರ ಮತಗ್ರಂಥದ ಆಜ್ಞೆಗೆ ವಿರುದ್ಧವಾಗಿ ನಡೆ ಯುವ ಸುಲ್ತಾನನ ಸೇವೆಯನ್ನು ನಾನು ನಿಜವಾಗಿ ಬಿಟ್ಟು ಬಂದಿದ್ದೇನೆ.

ಗುಲಾಬ:—ಇದಕ್ಕೇನು ಕಾರಣ?

ಖಾನನು:—ಅಸತ್ಯದ ಖಂಡನ; ಮತ್ತು ಸತ್ಯದ ಅವಲಂಬನ! ಎಂದನು.

ಇಷ್ಟು ಮಾತು ನಡೆದ ಮೇಲೆ ಚಿತ್ತೂರಿನ ದ್ವಾರದವರೆಗೆ ಬಂದು ಸೇರಿದರು. ಅಲ್ಲಿ ಎಂಟು ಹತ್ತು ಜನರು 'ನೀನು, ತಾನು' ಎಂದು ಪಹರೆಯವರು ಜಗಳವಾಡುತ್ತಿದ್ದರೆಂದು ಗೊತ್ತಾಯಿತು. ಆಗ ಗುಲಾಬಸಿಂಗನು ಅದನ್ನು ವಿಚಾರಿಸಿದನು. ಆ ಮನುಷ್ಯರಲ್ಲಿ ಒಬ್ಬ ವೃದ್ಧನು ಮುಂದೆ ಬಂದು ಗುಲಾಬಸಿಂಗನಿಗೆ ತನ್ನ ಪರಿಚಯವನ್ನು ಕೊಟ್ಟನು. ಆ ವೃದ್ಧನು ಸಂಗತಿಯನ್ನು ತಿಳಿದಮೇಲೆ ದುರ್ಗದ ಬಾಗಿಲು ತೆರೆಯಲ್ಪಟ್ಟಿತು. ಆಗ ಸರ್ವರೂ ಒಳಗೆ ಹೋದರು. ವಾಚಕರೇ! ಈ ಮಂಡಲಿ ಯಾವುದು?

ಪ್ರಕರಣ 14.

ಸಾಯಂಕಾಲದ ಐದು ಘಂಟೆಯ ಸಮಯ. ಸೂರ್ಯನಾರಾಯಣನು ತನ್ನ ಶಾಂತ ಕಿರಣಗಳನ್ನು ಚಿತ್ತೂರಿನ ಮೇಲೆ ಎರಚುತ್ತಿದ್ದನು. ಇಂತಹ ಕಾಲದಲ್ಲಿ ಚಿತ್ತೂರಿನ ಪಶ್ಚಿಮದಿಕ್ಕಿನ ಕಾಡಿಗೆ ಪ್ರವೇಶಿಸಬೇಕು. ಈ ಕಾಡಿನಲ್ಲಿ ನಾನಾವಿಧ ತರುಚಯಗಳು ಬೆಳೆದಿದ್ದುವು. ಇಲ್ಲಿ ಕ್ರೂರಮೃಗಗಳು ವಾಸಿಸುತ್ತಿದ್ದುದರಿಂದ ಯಾರಿಗೂ ಅಲ್ಲಿ ಪ್ರವೇಶಿಸಲು ಧೈರ್ಯವಿರಲಿಲ್ಲ. ಇಂತಹ ನಿರ್ಜನಸ್ಥಳದಲ್ಲಿ ಒಬ್ಬ ತರುಣ ರೈತನು ದೊಡ್ಡ ಕಲ್ಲಿನಮೇಲೆ ಕುಳಿತಿದ್ದನು. ಅವನ ವಯಸ್ಸು ಇಪ್ಪತ್ತುವರ್ಷವಿರಬಹುದು. ಅವನ ಬಟ್ಟೆಯು ಬಡರೈತನ ಬಟ್ಟೆಯಂತಿತ್ತು; ಇವನು ತನ್ನ ಬಲಗೈಯನ್ನು ಬಲದೊಡೆಯಲ್ಲಿಯೂ ಎಡದ ಕೈಯನ್ನು ಮೊಳಕಾಲಿನಮೇಲೂ ಇಟ್ಟು ಅದರ ಮೇಲೆ ತನ್ನ ತಲೆಯನ್ನಿಟ್ಟುಕೊಂಡಿದ್ದನು. ಆ ಕಾಲದ ಅವನ ಚಿತ್ರ ತೆಗೆಯುವ ಕಾರ್ಯವನ್ನು ಉತ್ತಮವಾಗಿ ಮಾಡುತ್ತಿರುವವನೆಂದು ಕಾಣುತ್ತಿತ್ತು. ಇವನ ಬಟ್ಟೆಯು ಸೇನಾಪತಿಯ ಬಟ್ಟೆಗಳಿಗಿಂತ ಶೋಭಾಯಮಾನವಾಗಿತ್ತು. ಅವನ ನೇತ್ರವು ತೇಜಸ್ಸುಳ್ಳದ್ದಾಗಿಯೂ ಮುಖವು ಗೌರವರ್ಣವುಳ್ಳದ್ದಾಗಿಯೂ ಇದ್ದವು. ಅವನ ಚಹರೆಯು ಶೌರ್ಯವನ್ನು ಸೂಚಿಸುತ್ತಿತ್ತು. ಇವನು ನಿಜವಾಗಿ ಶೂರಯೋಧನೆಂದು ತೋರುತ್ತಿತ್ತು. ಅವನ ಶರೀರವು ದೃಢವಾಗಿಯೂ ಎದೆಯು ಅಗಲವಾಗಿಯೂ ಅವಯವವು ಪುಷ್ಟವಾಗಿ

ಯೂ ಇದ್ದವು. “ಈ ತರುಣನು ರೈತನಲ್ಲ; ಯಾವುದೋ ಒಂದು ಉಚ್ಚಕುಲದಲ್ಲಿ ಹುಟ್ಟಿದವನಾಗಿರಬೇಕು.” ಎಂದು ನೋಡಿದವರಿಗೆ ಭಾಸವಾಗುತ್ತಿತ್ತು.

ಸ್ವಲ್ಪಹೊತ್ತು ಮನಸ್ಸಿನಲ್ಲಿ ಯೋಚಿಸುತ್ತಾ ತನ್ನಲ್ಲಿ ಹೇಳಿಕೊಂಡದ್ದೇನೆಂದರೆ:— “ಈ ವರೆಗೆ ನಾನು ಆನಂದದಿಂದ ಆಯುಸ್ಸನ್ನು ಕಳೆದೆನು. ಆನಂದವು ಬಹುಕಾಲ ಸ್ಥಿರವಾಗಿರುವುದಲ್ಲವೆಂದು ಈಗ ತಿಳಿಯಿತು! ನನ್ನ ಪೂಜ್ಯನಾದ ತಂದೆಯು ಮುಮೂರ್ಷುವಾಗಿದ್ದಾನೆ. ಅವನು ಈ ಲೋಕವನ್ನು ಬಿಟ್ಟು ಹೋದರೆ, ನನಗೆ ಯಾರು ದಿಕ್ಕು? ಅವನು ಚೆನ್ನಾಗಿರುವವರೆಗೆ ದುಃಖವು ಹೇಗೆಂಬುದು ನನಗೆ ಅನುಭವವಿರಲಿಲ್ಲ. ಆ ನನ್ನ ತಂದೆಯು ಈ ಅಭಾಗ್ಯವನನ್ನು ಬಿಟ್ಟು ಹೋದರೆ ನನ್ನ ಅವಸ್ಥೆ ಏನಾದೀತು? ಹಿರಿಯರಿಂದ ಆರ್ಜಿತವಾದ ಭೂಮಿಗಳನ್ನು ತಂದೆಯು ವ್ಯವಸಾಯಮಾಡುತ್ತಿದ್ದನು. ನಾನು ಇನ್ನು ಬೇಸಾಯಮಾಡದಿದ್ದರೆ ನನ್ನ ರಕ್ಷಣೆಯು ಹೇಗಾಗುವುದು? ನನ್ನ ಮನೋತರಂಗವು ಗಗನಕ್ಕೆ ಬಟ್ಟೆಯನ್ನು ಮುಚ್ಚಿದಂತಾಗುವುದು. ನಾನು ಈ ವ್ಯವಸಾಯವನ್ನು ಬಿಟ್ಟು ಎಲ್ಲಿಗಾದರೂ ಹೊರಟುಹೋಗಬೇಕು ಒಳ್ಳೆಯ ಲೌಕಿಕ ವೃತ್ತಿಯನ್ನು ಹೊಂದಬೇಕು. ದೊಡ್ಡ ದೊಡ್ಡ ಯುದ್ಧಮಾಡಬೇಕು. ಅಧಿಕಾರ ಸಂಪಾದಿಸಬೇಕು. ಎಂದು ನನಗೇಕೆ ಕೋರಿಕೆಗಳುಂಟಾಗಬೇಕು? ನನ್ನ ಅದೃಷ್ಟದಲ್ಲಂತಹ ಸುಖವು ಬರೆದಿದೆಯೇ? ಈವರೆಗೆ ಒಂದು ಆಶೆಯ ತಂತುವಾದರೂ ನೆರವೇರಲಿಲ್ಲ. ಆದರೆ, ನನ್ನ ಮನದಲ್ಲಿ ಇಂತಹ ವಿಚಾರವೇಕೆ ಬರುವುದು? ನನ್ನ ಸರ್ವೇಚ್ಛೆಗಳೂ ತೃಪ್ತಿಯಾದೀತೆಂದು ಹೇಗೆ ತಿಳಿಯಬೇಕು? ನಿಜವಾಗಿ ಇದರಲ್ಲಿ ಈಶ್ವರನ ಯಾವುದೋ ಒಂದು ಹೇತುವಿರಬೇಕು. ಇಲ್ಲದಿದ್ದರೆ ಏಕಾಂತವಾಸದಲ್ಲಿರುವವನಾಗಿ ಆಯುಷ್ಯವನ್ನು ಕಳೆಯುವ ಈತನವನದಲ್ಲಿ ಹೀಗೆ ಸ್ವಾಭಿಮಾನೋತ್ಪಾದಕ ವಿಚಾರವು ಎಂದಿಗೂ ಬರುತಿರಲಿಲ್ಲ. ಈಶ್ವರನ ಮನಸ್ಸಿನಲ್ಲಿದ್ದರೆ, ನನ್ನ ಸರ್ವೇಚ್ಛೆಯೂ ತೃಪ್ತಿಹೊಂದಲು ಕ್ಷಣವಾದರೂ ವಿಳಂಬವಾಗದು.

ಆಗ ಅವನ ಬೆನ್ನ ಹಿಂದೆಯೇ ಗಿಡಗಳ ಮಧ್ಯದಲ್ಲಿ ಯಾವುದೋ ಒಂದು ಪ್ರಾಣಿಯ ಹೆಜ್ಜೆಯ ಶಬ್ದವು ಕೇಳಿಸಿತು ಅಂದರೆ 15–16 ವರ್ಷ ವಯಸ್ಸಿನ ಸುಂದರ ಬಾಲೆಯು ಇವನ ಕಡೆಗೆ ಬರುತಿರುವಂತೆ ಕಂಡಿತು ಈ ಬಾಲೆಯ ಮತ್ತು ಈತನ ಮುಖದ ಹೋಲಿಕೆಯು ಬಹು ಸಾಮಾನ್ಯವಾಗಿ ಕಾಣುತ್ತಿತ್ತು. ಅವಳು ಬಂದೊಡನೆಯೇ ಗಾಬರಿಯಿಂದ “ಅಣ್ಣಾ! ನೀನು ಎಷ್ಟು ಹೊತ್ತಿನಿಂದ ಇಲ್ಲಿ ಹೀಗೆ ಚಿಂತಿಸುತ್ತ ಸ್ವಸ್ಥನಾಗಿ ಕುಳಿತಿದ್ದಿಯೆ. ‘ಅಲ್ಲಿ ತಂದೆಯ ಸ್ಥಿತಿಯು ಏನು?’ ಎಂಬ ಎಚ್ಚರಿಕೆಯಾದರೂ ಇದೆಯೇ? ಅವನು ಪ್ರತಿ ನಿಮಿಷವೂ ನಿನ್ನ ಹೆಸರನ್ನು ಹಿಡಿದು ಕೂಗುತ್ತಿರುವನು ನಡೆಯಪ್ಪಾ! ನಡೆ, ಬೇಗ!” ಎಂದಳು.

ಈ ಶಬ್ದವನ್ನು ಕೇಳಿದೊಡನೆಯೇ ಆ ತರುಣನು ಕೂಡಲೆ ಎದ್ದು, ಭಗಿನಿಯೊಡನೆ ಮಾತಾಡಲು ಮನಶ್ಶುದ್ಧಿಯಿಲ್ಲದವನಾಗಿದ್ದರೂ, ಆತ್ಮಸಂಯಮನವಾ

ಡಿಕೊಂಡು ಹೇಳಿದನು. “ಅಮ್ಮಾ !ನಾನು ಯಾವ ದುಃಖಕಾರಕ ಪ್ರಸಂಗದ ಕಲ್ಪನೆಯನ್ನು ಮಾಡುತ್ತಿದ್ದನೋ ಆ ಪ್ರಸಂಗವು ಹತ್ತಿರ ಬಂದಂತೆ ತಿಳಿಯುವದು! ಆಹಾ! ಈಗ ನಾನು ‘ಅಪ್ಪಾ, ಅಪ್ಪಾ’ ಎಂದು ಯಾರನ್ನು ಕರೆಯಲಿ!”

ಬಾಲಕಿ:—ಅಣ್ಣಾ, ಹೀಗೆ ದುಃಖಿಸಬೇಡ. ನನಗೂ ಈಗ ಯೋಚನೆಯಾಗಿದೆ; ಆದರೆ ಮಾಡುವುದೇನು? ನಾನು ಅವನನ್ನು ಬಿಟ್ಟು ನಿನ್ನನ್ನು ಹುಡುಕಲು ಬಂದಿದೇನೆ. ಅವನ ಜೀವವು ಬಹು ಸಂಕಟಪಡುತ್ತಿತ್ತು. ಆದರೆ ಏನುಮಾಡುವ? ನೀನೆಷ್ಟು ವ್ಯಸನದಿಂದ ಹೇಳುತ್ತೀಯೆ? ಅವನು ನಿನಗೊಂದು ಗುಪ್ತವೃತ್ತಾಂತವನ್ನು ಹೇಳುವವನಾಗಿದ್ದಾನೆಂದು ನನಗೆ ತಿಳಿಯಿತು. ಆದ್ದರಿಂದ ನಾನು ಹೊರಟುಬಂದೆ. ಆದರೆ ನಮಗೆ ಏನಾದೀತು? ಅವನ ಅನಂತರ ನಾವು ಯಾರ ಆಧಾರದಿಂದ ಬದುಕಿರಬೇಕು. ಇದು ಈಶ್ವರನಿಗೆ ಇಷ್ಟವೇ?

ತರುಣ:—ಈಶ್ವರನಲ್ಲಿ ದೋಷಾರೋಪ ಮಾಡಬೇಡ! ಅವನ ಇಚ್ಛೆಯಂತೆ ಎಲ್ಲವೂ ಆಗುತ್ತಿರುವುದು. ಬೇಗನಡೆ. ಕಾಲನ್ನು ಎತ್ತಿಹಾಕು. ತಂದೆಯಕೊನೆಯ ದರ್ಶನವು ಇಂದೀ ಅಭಾಗ್ಯನಿಗೆ ಆಗುವುದೋ ಇಲ್ಲವೋ ತಿಳಿಯದು!

ಬೇಗಬೇಗ ಓಡತೊಡಗಿದರೆಂದರೆ, ಅತಿಶಯೋಕ್ತಿಯಾಗಲಾರದು. ಬಳಿಕ ಅವರು ಒಂದು ಗುಡಿಸಲಹತ್ತಿರಕ್ಕೆ ಹೋದರು. ಆ ಗುಡಿಸಲು ಕಾಮಾಟಿಗಳ ಗುಡಿಸಲಾಗಿತ್ತು. ಅದಕ್ಕೆ ಮಣ್ಣಿನಗಾರೆಮಾಡಿತ್ತು. ಇಬ್ಬರೂ ಮೆಟ್ಟಲುಗಳನ್ನು ಹತ್ತಿ ಒಳಗೆ ಹೋದರು. ಅಲ್ಲಿ ಮಂಚದಮೇಲೆ ಒಬ್ಬಮುದುಕನು ಮುಮೂರ್ಷಾವಸ್ಥೆಯಲ್ಲಿರುವುದನ್ನು ನೋಡಿದರು. ಈ ಇಬ್ಬರನ್ನೂ ನೋಡಿ ಆತನು ಕ್ಷೀಣಸ್ವರದಿಂದ ಹೇಳಿದ್ದೇನಂದರೆ: . ಶೂರಸೇನನೇ! ಬಾಲನೇ! ನೀನೆಲ್ಲಿದ್ದೆ!

“ಅಪ್ಪಾ! ನಾನು ಇಲ್ಲಿಯೇ ಇದೇನೆ; ನೋಡು.” ಎಂದು ಶೂರಸೇನನು ಸಹೋದರಿಯೊಡನೆ ಮರಣ ಮುಖದಲ್ಲಿದ್ದ ತಂದೆಯ ಮಂಚದ ಮೇಲೆ ಹೋಗಿ ಕುಳಿತನು ಮುದುಕನಾದ ರೈತನು ಶೂರಸೇನನಕೈಯನ್ನು ಹಿಡಿದು ಕ್ಷೀಣಸ್ವರದಿಂದ, “ನನ್ನ ಪ್ರಿಯಬಾಲನೆ! ನನ್ನ ಪ್ರಾಣಜ್ಯೋತಿಯು ಸ್ವಲ್ಪಕಾಲದಲ್ಲೇ ಈ ಕ್ಷಣ ಭಂಗುರವಾದ ಲೋಕವನ್ನು ಬಿಟ್ಟು ಹೋಗತಕ್ಕದ್ದಾಗಿದೆ; ನಾನು ಈವರೆಗೆ ತಿಳಿಸದೇಯಿರುವ ವಿಷಯವನ್ನು ಈಗ ನಿನಗೆ ಹೇಳುತ್ತೇನೆ.” ಎಂದನು.

ಆಗ ಶೂರಸೇನನು ಏನನ್ನೂ ಹೇಳಲಿಲ್ಲ; ಆದರೆ ತನ್ನ ಬಾಲ್ಯದಿಂದ ರಕ್ಷಿಸಿದ ತನ್ನ ಪ್ರಿಯಕರನಾದ ತಂದೆಯು ಮರಣಪಥವನ್ನು ಹಿಡಿಯುವವನಾಗಿರುವುದನ್ನು ನೋಡಿ, ಮನೋವ್ಯಾಕುಲದಿಂದ ಅವನಿಗೇನೂ ತೋಚದೇಹೋಯಿತು. ಅವನು ಅಳತೊಡಗಿದನು. ಅವನೆಂದಿಗೂ ದುಃಖವನ್ನು ಕಂಡವನಲ್ಲ. ಸ್ವಲ್ಪಕಾಲದಬಳಿಕ ಆ ವೃದ್ಧನು ಬಾಲನನ್ನು ಕುರಿತು, “ನಾನು ಸಾಯುವ ಮುಂಚೆಯೇ ನಿನಗೊಂದು ರಹಸ್ಯವನ್ನು ಹೇಳುವೆನು!” ಎಂದನು.

ಶೂರಸೇನನು “ಏನು? ರಹಸ್ಯವೇ! ಅಪ್ಪಾ! ಅದಾವ ವಿಷಯವೋ ನನಗೆ ತಿಳಿಯದು.” ಎಂದು ದುಃಖದಿಂದಲೂ ಆಶ್ಚರ್ಯಮುದ್ರೆಯಿಂದಲೂ ಕೇಳಿದನು.

ವೃದ್ಧ:—ನನ್ನಾಯುಷ್ಯ ಮಧ್ಯದಲ್ಲಿ ಆ ರಹಸ್ಯವನ್ನು ನಾನು ನನ್ನ ತುಟಿಯಿಂದ ಹೊರಗೆ ತೆಗೆಯಲಿಲ್ಲವಾದರೂ ಈಗ ಅದನ್ನು ಗುಟ್ಟಿನಲ್ಲಿಟ್ಟು ಬಿಟ್ಟರೆ, ದುಷ್ಟ ಪರಿಣಾಮವಾಗಿ ನಿಮ್ಮಿಬ್ಬರಿಗೂ ಅನ್ಯಾಯ ದೊರೆಯುದೆಂದು ನನಗೆ ತಿಳಿಯುತ್ತದೆ. ನಾನು ಹೇಳುವದನ್ನು ಲಕ್ಷ್ಯವಿಟ್ಟು ಕೇಳಿರಿ.

ಇದನ್ನು ಕೇಳಿ ಶೂರಸೇನನು ಉತ್ಸಾಹದಿಂದ “ಅಪ್ಪಾ, ಹೇಳು! ಅಪ್ಪಾ, ಹೇಳು! ನಾವು ಲಕ್ಷ್ಯದಿಂದ ಕೇಳುವೆವು.” ಎಂದು; ಅವನು ತನ್ನಲ್ಲಿಯೇ ‘ಈಶ್ವರನ ಪ್ರೇರಣೆಯಿಂದ ನನ್ನ ಮನದಲ್ಲಿ ಯಾವ ಉಚ್ಚ ವಿಚಾರವು ಬರುತ್ತಿರುವುದೋ ಆ ಸಂಬಂಧವಾಗಿಯೇ ಈತನು ಹೇಳುವ ರಹಸ್ಯವಾಗಿರಬಹುದೇ? ಹಾಗಿದ್ದರೆ, ಈಶ್ವರನೇ ಹೇಳುವನೆನ್ನಬೇಕು!’ ಹೀಗೆ ವಿಚಾರಮಾಡುತ್ತಿದ್ದುದರಿಂದ ಅವನ ಮನಸ್ಸು ಆ ಗುಪ್ತಗೋಷ್ಟಿಯನ್ನು ಕೇಳುವುದರಲ್ಲಿ ಆಸಕ್ತವಾಗಿ, ಅಪ್ಪಾ! ಹೇಳು; ನೋಡೋಣ! ನೀನು ಹೇಳುವುದನ್ನು ಕೇಳಲು ಸಿದ್ಧರಾಗಿದೇವೆ ಎಂದನು.

ವೃದ್ಧನು ಆ ಸಹೋದರರಿಬ್ಬರನ್ನೂ ಹತ್ತಿರ ಕರೆದು “ಬಾಲರೇ! ನಾನು ಚಿಕ್ಕಂದಿನಿಂದಲೂ ಅಕ್ಕರೆಯಿಂದ ನಿಮ್ಮನ್ನು ಪಾಲಿಸಿದೇನೆ; ನೀವು ನನ್ನನ್ನು ತಂದೆಯೆಂದು ತಿಳಿದಿದ್ದೀರಿ. ನಾನು ನಿಮ್ಮನ್ನು ಮಕ್ಕಳೆನ್ನುತ್ತಿದ್ದೇನೆ. ನೀವು ನನ್ನ ಮಕ್ಕಳಲ್ಲ. ನಿಮ್ಮ ತಂದೆ ಬೇರೆ” ಎಂದನು.

ಶೂರಸೇನನ:—“ಏನು ನೀನು ನನ್ನ ತಂದೆಯಲ್ಲವೇ?” ಎಂದು ಅಂತಃಕರಣದಲ್ಲಿ ವಿಚಾರವುಳ್ಳವನಾಗಿ ಆಶ್ಚರ್ಯದಿಂದ ಅಳುತ್ತಾ ಕೇಳಿದನು.

ವೃದ್ಧ:—“ಹುಡುಗರೇ! ನಾನು ನಿಮ್ಮ ತಂದೆಯಲ್ಲ! ನೀವು ಚಿಕ್ಕವರಾಗಿರುವಾಗ ಕಾರಣಾಂತರದಿಂದ ರಕ್ಷಣೆಗಾಗಿ ನನ್ನ ಸ್ವಾಧೀನರಾದಿರಿ. ಯಾವ ವಿಶ್ವಾಸದಿಂದ ನನ್ನ ವಶಕ್ಕೆ ನೀವು ಒಪ್ಪಿಸಲ್ಪಟ್ಟಿರೋ, ಆ ವಿಶ್ವಾಸದಿಂದ ನಿಮ್ಮನ್ನು ಈವರೆಗೆ ರಕ್ಷಿಸಿ ಈ ಸ್ಥಿತಿಗೆ ತಂದೆನೋ ಅದು ಈ ಮರಣಕಾಲದಲ್ಲಿ ಆತ್ಮಾನಂದವನ್ನುಂಟುಮಾಡುತ್ತಿದೆ. ಬಾಲರೇ! ನೀವು ಒಕ್ಕಲಿಗರ ಕುಲದಲ್ಲಿ ಹುಟ್ಟಿದವರಲ್ಲ. ಉಚ್ಚ ಕ್ಷತ್ರಿಯ ಕುಲದಲ್ಲಿ ಹುಟ್ಟಿದವರು.”

ಹುಡುಗರು:—ಆದರೆ, ನಮ್ಮ ಜನನೀ ಜನಕರಾರು? ಎಲ್ಲಿದ್ದಾರೆ?

ವೃದ್ಧ:—ಮಕ್ಕಳೇ! ನಿಮ್ಮ ಉತ್ಸಾಹವು ನನಗೆ ಪೂರ್ಣವಾಗಿ ತಿಳಿದಿದೆ. ಆದರೆ, ಅದನ್ನು ತೃಪ್ತಿಪಡಿಸಲು ನನಗೆ ಅದೃಷ್ಟವಿಲ್ಲ. ಆದ್ದರಿಂದ ಪಶ್ಚಾತ್ತಾಪವಾಗವದು.

ಇದನ್ನು ಕೇಳಿ ಅಂತಃಕರಣದಲ್ಲಿ ನಿರಾಶೆಯೆಂಬ ತಿಮಿರ ಸಾಮ್ರಾಜ್ಯವು ಉತ್ಪನ್ನವಾಯಿತು. ಅಷ್ಟರಲ್ಲೇ ಯುವಕನ ಬಾಯಿಯಿಂದ, “ದೈವಗತಿ! ಎರಡನೆಯದೇನು!” ಎಂದು ನಿರಾಶಾಯುಕ್ತವಾದ ಶಬ್ದವು ಹೊರಹೊರಟಿತು. ಅವನು ಸ್ತಬ್ಧನಾದನು.

ನಿರಾಶನಾಗಿ ಕುಳಿತ ಶೂರಸೇನನ್ನು ಕುರಿತು:—“ಶೂರಸೇನ! ಇಷ್ಟು ನಿರಾಶನಾಗಬೇಡ. ನನಗೆ ನಿನ್ನ ಜನನೀಜನಕರ ಪರಿಚಯವಿಲ್ಲವಿದ್ದರೂ ಅದನ್ನು

ಗೊತ್ತುಮಾಡುವ ಮಾರ್ಗವು ನನಗೆ ತಿಳಿದಿದೆ. ಅದನ್ನು ಈಗ ನಾನು ನಿನಗೆ ಹೇಳುತ್ತೇನೆ. ಆಮಾರ್ಗದಿಂದಲೇ ಹೋದರೆ, ನಿನಗೆ ಅದು ಗೊತ್ತಾಗುವುದು," ಎಂದನು. ಆಗ ಶೂರಸೇನನ ಅಂತಃಕರಣದಲ್ಲಿ ಆಶಾದೀಪವು ಪ್ರದೀಪ್ತವಾಯಿತು. ಅವನು "ಅದು ಯಾವಮಾರ್ಗವು ?" ಎಂದು ಕೇಳಿದನು.

ಆಗ ವೃದ್ಧನು ತನ್ನಲ್ಲಿದ್ದ ಒಂದು ಕಾಗದದ ಸುರಳಿಯನ್ನು ತೆಗೆದು ಅವನ ಕೈಯಲ್ಲಿ ಕೊಟ್ಟು, "ಬಾಲನೇ ! ನೀನು ನನ್ನ ಮರಣಾನಂತರ ಯೋಗ್ಯ ಕ್ರಿಯೆಯನ್ನು ಮಾಡಿ, ಎರಡುದಿನಗಳ ಬಳಿಕ ನೀನೀಕಾಗದವನ್ನು ತೆರೆದು ನೋಡು. ಇದರಲ್ಲಿ ಯಾರ ಹೆಸರು ಬರೆದಿರುವುದೋ ಅದನ್ನು ನೋಡು. ಈ ಉಂಗುರವನ್ನು ನನ್ನ ಹೆಸರಹೇಳಿ ಅವನಿಗೆ ಕೊಡು. ಆ ಸದ್ಗೃಹಸ್ಥನು ನಿಮ್ಮ ಜನ್ಮದ ಗುಪ್ತ ರಹಸ್ಯವನ್ನು ಹೇಳುವನು. ಅವನು ಹೇಳಿದ ಮಾರ್ಗವನ್ನವಲಂಬಿಸಿರಿ" ಎಂದು ಆ ಕಾಗದವನ್ನು ಕೊಡಲು ಅವನದನ್ನು ತೆಗೆದುಕೊಂಡು; "ಅಪ್ಪಾ ! ನಿಮ್ಮಾಜ್ಞೆಯಂತೆ ನಾನು ಮಾಡಲು ಸ್ವಲ್ಪವೂ ಹಿಂದೆಗೆಯುವುದಿಲ್ಲ." ಎಂದನು.

ವೃದ್ಧನು:—"ಈಶ್ವರನು ನಿಮಗೆ ಕಲ್ಯಾಣಮಾಡಲಿ ? ದೀರ್ಘಾಯುಸ್ಸನ್ನು ಕೊಡಲಿ ! ಬಾಲರೇ ಈಗ ನನ್ನ ಮರಣಾನಂತರ ನೀವು ನಿಮ್ಮ ತಂದೆತಾಯಿಗಳನ್ನು ಶೋಧನೆಮಾಡಿ ಸೌಖ್ಯಹೊಂದಬೇಕೆಂದಿಚ್ಛಿಸುತ್ತೇನೆ. ಈಶ್ವರನು ನಿಮ್ಮ ಇಚ್ಛಿತ ಕಾರ್ಯದಲ್ಲಿ ಸಹಾಯವಾದಾನು." ಎಂದನು.

ಬಾಲಕರು "ಅಪ್ಪಾ! ನಿಮ್ಮುಪಕಾರವನ್ನು ಜನ್ಮಾವಧಿ ಮರೆಯುವುದಿಲ್ಲ. ನೀವು ನಮ್ಮ ತಂದೆಯಲ್ಲವೆಂದು ಈಗ ತಿಳಿಯಬಂದಿದೆ. ಆದರೂ, ತಾವು ತಮ್ಮ ಮೃದುವಾಣಿಯಿಂದ ನಮ್ಮನ್ನು ಪ್ರತ್ಯಕ್ಷ ತಾಯಿತಂದೆಗಳಿಗಿಂತ ಅಧಿಕವಾಗಿ ಮಮತೆಯಿಂದನಡೆಸಿ ರಕ್ಷಿಸಿದಿರಿ. ಕೃತಘ್ನರಾಗುವದು ನಮ್ಮ ಧರ್ಮವಲ್ಲ. ಇನ್ನು ಮುಂದೆಯೂ ತಮ್ಮಲ್ಲಿ ತಂದೆಯಂತೆ ವರ್ತಿಸುತ್ತೇವೆ." ಎಂದು ಕೃತಜ್ಞತಾಪೂರ್ವಕವಾಗಿ ಹೇಳಿದರು.

ವೃದ್ಧನು "ಆ ಪರಮ ಕೃಪಾಳುವಾದ ಪರಮೇಶ್ವರನು ನಿಮಗೆ ಸಹಾಯ ಮಾಡಲಿ," ಎಂದುಹೇಳಿ ಅತಿಶ್ರಮದಿಂದ ನಿಶ್ಚೇಷ್ಟಿತನಾದನು. ಅವನ ಸರ್ವಶರೀರವೂ ತರತರ ನಡಗಲಾರಂಭಿಸಿತು."

"ಕೊನೆಗೆ ನಾನು ಹೇಳಿದಂತೆಮಾಡು. 'ರಾಮ—ರಾಮ—ರಾ—ಮ—" ಎನ್ನುತ್ತಾ ಅವನ ಪ್ರಾಣದೀಪವು ಶಾನ್ತವಾಯಿತು. ಆ ಸಹೋದರರ ನೇತ್ರಗಳಿಂದ ಈ ದುಃಖಸ್ಥಿತಿಯ ಕಾಲದಲ್ಲಿ ದುಃಖಾಶ್ರುವು ಸುರಿಯಲಾರಂಭಿಸಿತು ವಿಲಾಪಿಸಿದರು. ಅದನ್ನು ವರ್ಣಿಸಲು ಪ್ರಸ್ತುತ ನಮ್ಮ ಲೇಖಣಿಯು ಅಸಮರ್ಥವಾಗಿದೆ.

ಭಾಮಿನಿ|| ದೀನಸುಜನರ ದುಃಖನಿಕರವ |
ನಾಸುರಾಗದಿ ಸರ್ವಸಾಕ್ಷಿಯು |
ಮಾನಸಿಥಿ ಹರಿಸಲಪಿಸಂಕಟಹರಿಸ ನನವರತ ||

ಪ್ರಕರಣ 15.

ಹಿಂದಿನಪ್ರಕರಣದಲ್ಲಿ ಹೇಳಿದ ಸಂಗತಿಯು ನಡೆದು ಏಳೆಂಟು ದಿನಗಳಾದವು. ಅರಾವಲಿ ಪರ್ವತದ ನಿಬಿಡವಾದಡವಿಯ ನಡುವೆ ಒಂದು ಪ್ರಯಾಣಿಕರಗುಂಪು ಪ್ರಯಾಣ ಮಾಡುತ್ತಿತ್ತು. ಆ ಕಾಲದಲ್ಲಿ ಅಡವಿಯ ದಾರಿಯಲ್ಲಿ ಪ್ರವಾಸ ಮಾಡುವವರಿಗೆ ತೊಂದರೆ ಸಂಭವಿಸುತಿತ್ತು. ಲೂಟಿಮಾಡುವ ಕಳ್ಳರ ಭೀತಿ ಅತಿಯಾಗಿರುವುದರಿಂದ ಆಯುಧಗಳನ್ನು ತೆಗೆದುಕೊಂಡ ಹೊರತು, ಯಾರೂ ಹೊರ ಹೊರಡುತಿರಲಿಲ್ಲ. ಆ ಪ್ರಯಾಣಿಕರಲ್ಲಿ ಒಬ್ಬನು ವೃದ್ಧ ರಾಜಪುತ್ರನು. ಅವನು ಕಥ್ಯೇವಾಡೆಯ ತುರಗವನ್ನೇರಿ ಹೋಗುತಿದ್ದನು. ಅವನ ಹಿಂದೆ ಒಬ್ಬಬಾಲೆಯೂ ಅಂತಹ ಕುದುರೆಯನ್ನೇರಿ ಹೋಗುತ್ತಿದ್ದಳು, ಆಕೆಯ ಹಿಂದು ಮುಂದೆ ಎರಡು ಮೂರುಜನ ಸವಾರರು ಆಯುಧ ಸಮೇತರಾಗಿ ಪ್ರಯಾಣ ಮಾಡುತ್ತಿದ್ದರು. ಆ ವೃದ್ಧರಾಜಪುತ್ರಸವಾರು ಉಡಿಗೆತೊಡಿಗೆಗಳು ಸುಂದರವಾಗಿದ್ದುವು. ಆದರೂ, ಅವರ ಹತ್ತಿರ ಒಂದು ಕಠಾರಿಯಿತ್ತು. ಇವನನ್ನು ನೋಡಿದರೆ, ಶ್ರೀಮಂತನೆಂದು ಕಾಣುತ್ತಿತ್ತು. ಈವರೆಗೆ ಪ್ರವಾಸದಲ್ಲಿ ಸಂಕಟವಾಗದೇ ಇದ್ದುದಕ್ಕಾಗಿ ಈ ವೃದ್ಧನಾದ ರಾಜಪುತ್ರ ವ್ಯಾಪಾರಿಗೆ ಅತ್ಯಾನಂದವಾಯಿತು. ಇನ್ನು ಸ್ವಲ್ಪ ದೂರಹೋಗಿ ಸೇರಿದರೆ, ಸುಖದಿಂದ ತಲಪುವೆನೆಂದು ತಿಳಿದಿದ್ದನು. ಹೀಗೆ ವಿಚಾರಮಾಡುತ್ತಿರುವಾಗ ಇವರನ್ನು ಲೂಟಿಮಾಡುವ ಕೆಲವರು ಗಂಟುಬಿದ್ದರು. ಅಕಸ್ಮಾತ್ತಾಗಿ ಆಕಾಶದ ಕೆಳಭಾಗದಲ್ಲಿಯೂ ಭೂಮಿಯ ಮೇಲುಭಾಗದಲ್ಲಿಯೂ ಬಂದುಬೀಳಬೇಕೆಂದು ಯೋಚಿಸಿ, ಎಂಟುಜನ ಲೂಟಿಗಾರರು ಅವರಮೇಲೆ ಒಂದೇ ಬಾರಿ ಬಂದು ಬಿದ್ದರು. ಆ ಲೂಟಿಗಾರರ ಸರದಾರನೊಬ್ಬನು ಈ ವ್ಯಾಪಾರಿಯನ್ನು ಹಿಡಿದು „ನಿಮ್ಮ ಹತ್ತಿರ ಇರುವ ಧನವೆಲ್ಲವನ್ನು ಒಂದೇಸಾರಿ ನಮಗೆಕೊಡಿ. ಇಲ್ಲದಿದ್ದರೆ, ನಮ್ಮ ಕತ್ತಿಗೆ ನೀವು ಬಲಿಯಾಗುತ್ತೀರಿ. ಇದನ್ನು ಲಕ್ಷ್ಯದಲ್ಲಿಡಿ.’ ಎಂದನು, ಇದನ್ನು ನೋಡಿ ಆ ವ್ಯಾಪಾರಿಯು ಮೊದಲು ಸ್ವಲ್ಪ ಗಾಬರಿಯಾಗಿದ್ದನು. ಆ ಬಾಲಕಿಯ ರೋದನವು ಕೇಳಿಸಿತು. ಆಗ ಆ ವೃದ್ಧನು, ತನ್ನ ಆಯುಧವನ್ನು ತೆಗೆದುಕೊಂಡು „ದುಷ್ಟರಿರಾ! ನಿಮ್ಮ ಬೆದರಿಕೆಗೆ ಬೆದರುವನಲ್ಲ” ಎಂದು ತನ್ನ ಸವಾರರನ್ನು ಕುರಿತು „ಗೆಳೆಯರೇ! ಏನು ನೋಡುತ್ತೀರಿ. ನಿಮ್ಮ ಕತ್ತಿಯನ್ನು ಹೊರಕ್ಕೆ ತೆಗೆಯಿರಿ! ಮತ್ತು ಈ ಪಿಂಡಾರಿಗಳ ಮುಂಡಕಂಡಗಳನ್ನು ಭೂಮಂಡಲ ಮಾತೆಗೆ ಅರ್ಪಿಸಿರಿ.” ಎಂದನು. ಈ ಧೈರ್ಯೋತ್ಪಾದಕ ವಾಕ್ಯಗಳನ್ನು ಕೇಳಿ, ಐವರು ರಾಜಪುತ್ರ ಸಿಪಾಯಿಗಳು ಮೈಮೇಲೆ ಎಚ್ಚರವಿಲ್ಲದೆ ಆಯುಧಗಳನ್ನು ತೆಗೆದುಕೊಂಡು ಕ್ರೂರನಾಗಿ ಯುದ್ಧಮಾಡಿದರು. ಆದರೆ, ದುರದೃಷ್ಟದಿಂದವರ ಕೈ

ಏನೂ ನಡೆಯಲಿಲ್ಲ. ಪಿಂಡಾರಿಗಳ ತಂಡವು ಅಂಡಲೆಯುತ್ತ ಪುಂಡರಾಗಿ ಲೂಟಿ ಯಲ್ಲಿ ತತ್ಪರರಾದರು. ಪಿಂಡಾರಿತಂಡದ ಮುಖಂಡನು ವೃದ್ಧವ್ಯಾಪಾರಿಯನ್ನು ಹಿಡಿದು ಹಗ್ಗದಿಂದ ಕುಗ್ಗುವಂತೆ ಬಿಗ್ಗಿಸಿಕಟ್ಟಿದನು. ಇಷ್ಟರಲ್ಲೇ ಒಬ್ಬ ಶಿಷ್ಟ ನಾದ ಪುಷ್ಟತರುಣ ದಿಟ್ಟಕುದುರೆ ಸವಾರನು ಪೂರ್ಣಾವೇಶದಿಂದ ಕುದುರೆ ಯನ್ನು ಜದುರ ತನದಿಂದೋಡಿಸುತ್ತಾ ಆ ಸ್ಥಳಕ್ಕೆ ಬಂದನು. ಕೂಡಲೆ, ಎಲ್ಲವೂ ಅವನಿಗೆ ಕಾಣಿಸಿತು. ಅವನು ತನ್ನ ಕತ್ತಿಯನ್ನು ತತ್ತರಪಡದೆ ಜಿತ್ತರದಿಂದೊರೆ ಯಿಂದ ತೆಗೆದು, ಆ ಕಳ್ಳಸವಾರರ ಮೇಲೆ ಬಿದ್ದನು. ಮತ್ತು ಅವರ ಶಿರವನ್ನು ಧರೆಗುರುಳಿಸಿದನು. ತಮ್ಮ ಸವಾರನು ಬಿದ್ದಿರುವದನ್ನು ನೋಡಿ ಆ ಕಳ್ಳರು ಜಾಗ್ರತೆಯಾಗಿ ಈ ತರುಣನಮೇಲೆ ಬಿದ್ದರು. ಆದರೆ ಆ ಕ್ಷತ್ರಿಯ ಕುಲೋತ್ಪ ನ್ನನಾದಾ ತರುಣನು ಕ್ಷತ್ರಿಯ ತೇಜದಿಂದ ಇಬ್ಬರು ಕಳ್ಳರನ್ನು ನಿಮಿಷಾರ್ಧ ದಲ್ಲಿ ಭೂಮಿಗೆ ಕೆಡಹಿದನು. ಆ ರಾಜಪುತ್ರ ವ್ಯಾಪಾರಿಯು ತನ್ನ ಸಹಾಯಕ್ಕೆ ಬಂದ ತರುಣನನ್ನು ನೋಡಿ, ಕರುಣದಿಂದವನ ಸಹಾಯಕ್ಕೆ ಬಂದನು. ಉಳಿದ ಕಳ್ಳರು ತಮ್ಮ ಸಗದಾರನ ಶರೀರವನ್ನೆತ್ತಿಕೊಂಡು ಓಡಿಹೋದರು. ಇದೆಲ್ಲವನ್ನೂ ಬರೆಯುವದಕ್ಕೆ ನಮಗೆಷ್ಟು ಹೊತ್ತು ಬೇಕಾಯಿತೋ ಆ ಸಮಾಧಾನ ಸಮಯ ದಲ್ಲಿ ಅಷ್ಟುಹೊತ್ತು ಬೇಕಾಗುವುದಿಲ್ಲ. ಸ್ವಲ್ಪ ವಿಶ್ರಾಂತಿಹೊಂದಿ ಆ ವದ್ಧ ವ್ಯಾಪಾರಿಯು ಆ ತರುಣನನ್ನು ಕುರಿತು, "ಮಗುವೇ! ನೀನು ನಿಜವಾದ ವೀರ ಪುತ್ರನು! ನಿನ್ನಿಂದ ಈದಿನ ನಮ್ಮ ಪ್ರಾಣಗಳುಳಿದವು ನೀನೀಸಮಯದಲ್ಲಿ ಬಾರ ದಿದ್ದಲ್ಲಿ ನಾನೂ ನನ್ನ ಪುತ್ರಿಯೂ ಕಳ್ಳರ ಬಂದಿವಾನರಾಗುತ್ತಿದ್ದೆವು. ಭಾಪು! ವತ್ಸನೇ! ಪುತ್ರನಿದ್ದರೆ, ನಿನ್ನಂತಹ ಪುತ್ರರಿರಬೇಕು! ಈ ದಿನದ ನಿನ್ನ ಈ ಪರಾಕ್ರ ಮವನ್ನೆಂದಿಗೂ ಮರೆಯುವುದಿಲ್ಲ." ಎಂದನು, ತರುಣನು ಅವನನ್ನು ಕುರಿತು! "ನನ್ನಲ್ಲಿ ಉಪಕಾರಿಯಾಗಲು ಕಾರಣವಿಲ್ಲ." ಎಂದು ರಕ್ತದಿಂದ ನೆನೆದ ಕತ್ತಿ ಯನ್ನು ಶುದ್ಧಿಮಾಡಿ ಎರೆಯಲ್ಲಿ ಹಾಕಿ "ನಾನು ಇಂತಹ ಸಮಯದಲ್ಲಿ ಬಂದು ದಕ್ಕಾಗಿ ಪರಮೇಶ್ವರನಲ್ಲಿ ಕೃತಜ್ಞರಾಗಿರಿ" ಎಂದನು. ಇಷ್ಟು ಮಾತನಾಡುತ್ತಿ ರುವಾಗ ಇವನ ಸಹೋದರಿಯಾದ ಆ ಬಾಲೆಯು ಈ ಕದನವೆಲ್ಲಾ ಮುಗಿದು ಶಾಂತವಾದುದನ್ನು ನೋಡಿ ಅಲ್ಲಿಗೆ ಬಂದಳು. ಅವಳನ್ನು ನೋಡಿ ವೃದ್ಧನು "ಈಕೆಯು ನಿನ್ನ ತಂಗಿಯೇ? ಎಂದು ಕೇಳಿದನು.

ತರುಣ:—ನಿಜ; ಇವಳು ನನ್ನ ತಂಗಿ. ನಾವಿಬ್ಬರೂ ಅಲ್ಲಿ ದೂರದಲ್ಲಿ ಹೋಗುತ್ತಿದ್ದೆವು. ಆದ್ದರಿಂದ ಆಕೆಯನ್ನಲ್ಲಿಯೇ ಬಿಟ್ಟು ಇಲ್ಲಿ ಏನು ಗದ್ದಲವೋ ನೋಡೋಣವೆಂದು ಬಂದೆನು. ಈ ಕಳ್ಳರ ಕೃತ್ಯವು ಕಾಣಿಸಿತು? ನೀವು ಎಲ್ಲಿಗೆ ಹೋಗುವಿರಿ?

ವೃದ್ಧ:—ನಾನು ಚಿತ್ತೂರಿಗೆ ಹೋಗುವೆನು. ಈಗ ಅಲ್ಲಾವುದೀನ್ ಖಿಲ್ಜಿಯು ಚಿತ್ತೂರಿಗೆ ಮುತ್ತಿಗೆ ಹಾಕುವನೆಂದು ಕೇಳಿದೆ. ಇಂತಹ ವಿಪತ್ಕಾಲದಲ್ಲಿ ನಮ್ಮ ರಾಣಾರಿಗೆ ಸಹಾಯ ಮಾಡುವುದು ರಾಜಪುತ್ರರಾದ ನಮ್ಮ ಕರ್ತ

ವೃವು. ಇದಕ್ಕಾಗಿ ನಾನು ನಿನ್ನೆಯ ದಿನ ವಿಜಯನಗರದ ಕೆಲಸವನ್ನು ತೀರಿಸಿಕೊಂಡು ಹೊರಟೆನು. ಈಗ ನಾನು ವೃದ್ಧನಾದ್ದರಿಂದ ಯುದ್ಧ ಮಾಡುವ ಶಕ್ತಿಯಿಲ್ಲ; ಆದರೂ ನನ್ನಲ್ಲಿರುವ ಧನವನ್ನು ನನ್ನ ಸ್ವದೇಶ ಸೇವೆಗೆ ಅರ್ಪಿಸಬೇಕು. ಇದೇ ನನ್ನ ಆಲೋಚನೆ.

ಶೂರಸೇನ:—ಒಳ್ಳೇದು, ಆದರೆ ಈ ಬಾಲೆಯನ್ನು ಸಂಗಡ ಕರೆದುಕೊಂಡು ಬರಲು ಕಾರಣವೇನು? ಇಂತಹ ಯುದ್ಧದ ಗಲಭೆಯಲ್ಲಿ ಸ್ತ್ರೀಯರನ್ನು ಸಂಗಡ ಕರೆದುಕೊಂಡು ಬರುವದು ಅಪಾಯಕರವಲ್ಲವೇ?

ವೃದ್ಧ:—ನಿಜ, ಆದರೆ, ಮನೆಯಲ್ಲಿ ಈ ಹುಡುಗಿ ವಿನಹ ನನಗೆ ಯಾರೂ ಇಲ್ಲ. ಆದ್ದರಿಂದ ನನ್ನ ಬಂಧುಜನರನ್ನು ನೋಡಲು ವಿಜಯನಗರಕ್ಕೆ ಕರೆದು ಕೊಂಡು ಹೋಗಿದ್ದೆ. ಬರುವಾಗ ಒಬ್ಬಳನ್ನೇ ಬಿಟ್ಟಿರದೆ ಕರೆದುಕೊಂಡು ಬಂದೆ. ವತ್ಸನೇ! ನೀನು ಎಲ್ಲಿಗೆ ಹೋಗಬೇಕು? ನಿನ್ನ ಹೆಸರೇನು? ಉಪಕಾರಿಯಾದ ನಿನ್ನ ಹೆಸರನ್ನು ಮೊದಲೇ ವಿಚಾರಿಸಲು ಮರೆತೆನು. ಕ್ಷಮಿಸಿ, ಹೇಳು.

ಶೂರಸೇನ:—ನನ್ನ ಹೆಸರು, 'ಶೂರಸೇನ,' ನನ್ನ ತಂಗಿಯ ಹೆಸರು 'ವಿಜಯೆ,' ನಾವು ಚಿತ್ತೂರಿಗೆ ಹೋಗುವೆವು.

ವೃದ್ಧ:—ಏನು! ನೀವೂ ಚಿತ್ತೂರಿಗೆ ಬರುವಿರಾ? ಉತ್ತಮವಾಯಿತೆನ್ನಬೇಕು! ಮಗನೇ, ನಿನ್ನ ಹೆಸರು ನಿನ್ನ ಶೌರ್ಯಕ್ಕೆ ಸಹಜವಾಗಿದೆ. ನಿನ್ನ ತಂಗಿ ಯನ್ನೂ ನೋಡಿ ಅತ್ಯಾನಂದಪಡುವೆನು. ನೀನು ಹೇಳಿದ ಶೂರಸೇನ, ವಿಜಯೆ ಎಂಬ ಹೆಸರುಗಳನ್ನು ಕೇಳಿರುವೆನು; ನಿಜ. ಆದರೆ, ಅದು ಎಲ್ಲಿ ಎಂಬುದು ನನಗೆ ನೆನಪಿಲ್ಲ.

ಶೂರಸೇನ:—ನೀವು ಚಿತ್ತೂರಿಗೆ ಹೋಗುವಿರಷ್ಟೆ, ಬಹು ಜನರ ಪರಿಚಯವಿರ ಬಹುದಲ್ಲವೇ?

ವೃದ್ಧ:—ನಿಜ, ಅಲ್ಲಿ ನನಗೆ ಬಹುಜನರ ಪರಿಚಯವಿದೆ.

ಶೂರಸೇನ—ಹಾಗಾದರೆ, ನಿಮಗೆ ಪ್ರಸಿದ್ಧ ಸಾಹುಕಾರರಾದ ರಾಯಸಿಂಗರ ಪರಿಚಯವಿರಬಹುದಲ್ಲವೇ? ನಾನು ಅವರನ್ನು ನೋಡಲು ಹೋಗುವೆನು.

ವೃದ್ಧ:—ಏನು? ರಾಯಸಿಂಗ ಸಾಹುಕಾರನೆ? ಎಲೈ, ಅವನೇ ನಾನು? ನಿನ್ನೆ ದುರಿಗೇ ನಿಂತಿದ್ದೇನೆ.

ಇದೇ ಅಲ್ಲವೆ. ವಿಲಕ್ಷಣ ಯೋಗಾಯೋಗವು? ಈ ರಾಜಪುತ್ರ ಸಾಹುಕಾರನ ಬಾಯಿಂದ ಈ ಮಾತನ್ನು ಕೇಳಿದೊಡನೆ ಶೂರಸೇನನಿಗೆ ಆನಂದವಾಯಿತು.

ರಾಯಸಿಂಗ:—ನೀನು ನನ್ನನ್ನು ನೋಡಲು ಬಂದಿರುವ ಕಾರ್ಯವು ಮಹತ್ವ ವುಳ್ಳದಾಗಿರಬೇಕು. ಆದರೆ, ನಾನು ಎಂದೂ ನಿನ್ನನ್ನು ನೋಡಿದ ನೆನಪಿಲ್ಲ.

ಶೂರಸೇನನು:—"ಕದಾಚಿತ್, ಈ ಉಂಗುರವನ್ನು ನೋಡಿ ನೀವು ನನ್ನನ್ನು

ಗುರ್ತಿಸಲು ಶಕ್ತರಾಗುವಿರಿ!" ಎಂದು ಸೊಂಟದ ಪಟ್ಟಿಯಿಂದ ಉಂಗುರ ಒಂದನ್ನು ತೆಗೆದು ರಾಯಸಿಂಗನ ಕೈಯಲ್ಲಿ ಕೊಟ್ಟನು.

ಆ ವ್ಯಾಪಾರಿಯು ಆ ಉಂಗುರವನ್ನು ಬಹು ಉತ್ಸಾಹದಿಂದ ತನ್ನ ಕೈಯಲ್ಲಿ ತೆಗೆದುಕೊಂಡು, ಅದನ್ನು ಸೂಕ್ಷ್ಮರೀತಿಯಿಂದ ನೋಡಿದನು. ನಿಶ್ಚಯವಾದ ಮೇಲೆ ಅವನಿಗೆ ಆನಂದವುಂಟಾಗಿ; ಕೂಡಲೆ ಶೂರಸೇನನನ್ನು ಆಲಿಂಗಿಸಿದನು. "ನನ್ನ ಬಾಲಕನೇ! ಪರಮೇಶ್ವರನು ದಯಾಶಾಲಿಯಾಗಿ ಈ ದಿನ ವಿಚಿತ್ರ ರೀತಿಯಿಂದ ನಿಮ್ಮ ದರ್ಶನವನ್ನು ಅಕಸ್ಮಾತ್ತಾಗಿ ಮಾಡಿಸಿದನು! ಇದಕ್ಕಾಗಿ ನಾವು ಆ ಜಗನ್ನಿಯಂತನನ್ನು ಪರಿ[illegible] ಅನುಗ್ರಹದಿಂದ ನಾನು ಅವನ ಉಪಕಾರವೆಂದು ತಿಳಿಯುತ್ತೇನೆ. ನೀವು ನನ್ನಿದಿರಿಗೆ ಬಂದುದಕ್ಕಾಗಿ ಆನಂದವಾಯಿತು! ಶೂರಸೇನನೇ! ನೀನು ನಿನ್ನ ವಯಸ್ಸಿಗೆ ತಕ್ಕಂತೆಯೂ ಹೆಸರಿಗೆ ತಕ್ಕಂತೆಯೂ ಶೂರನಾಗಿದ್ದೀಯೆಂದು ನನಗೆ ನಂಬಿಕೆಯಾಯಿತು. ಬಾಲೆಯಾದ ವಿಜಯೆ! ನಿನ್ನ ಸೌಂದರ್ಯವು ದೇದೀಪ್ಯಮಾನವಾಗುವದೆಂದು ತಿಳಿದಿದ್ದೆನು ಬಾಲರಿರಾ! ಯಾವ ಜಮೀನ್ದಾರನು ಬಾಲ್ಯದಿಂದ ಪಾಲಿಸಿದನೋ ಆ ಜನವನು ಸ್ವರ್ಗಸ್ಥನಾದನೇ!" ಎಂದು ಕೇಳಿದನು.

ಶೂರಸೇನ:—ಮಹಾಸ್ವಾಮಿ! ಪ್ರೀತಿಕರನಾದ ತಂದೆಯಂತಿದ್ದಂತಹ ಆ ಒಳ್ಳೆಯ ಜಮೀನ್ದಾರನು ನಮ್ಮ ದುರ್ದೈವದಿಂದ ಮರಣಹೊಂದಿದನು.

ರಾಯಸಿಂಗ:—ಬಾಲರೇ! ಅವನು ಯೋಗ್ಯರೀತಿಯಿಂದ ತನ್ನ ಕರ್ತವ್ಯವನ್ನು ನೆರವೇರಿಸಿದನು. ಇದಕ್ಕಾಗಿ ನನಗೆ ಅತ್ಯಾನಂದವಾಗುತ್ತಿದೆ. ಈಗ ಮನೆಗೆ ಹೋದಮೇಲೆ, ಎಲ್ಲಾ ಸ್ಥಿರಸ್ಥಾವರ ಆಸ್ತಿಯನ್ನು ನೋಡಿ ನಾನು ನಿಮ್ಮ ಜನ್ಮಕಾಲ ಸಂಬಂಧದ ಗುಪ್ತ ರಹಸ್ಯವನ್ನು ಹೇಳುವೆನು. ಅವರೆಗೆ ಹೆದರಬೇಡಿ. ಎಂದು ಹೇಳಿ ಎಲ್ಲರೂ ಮುಂದೆ ನಡೆಯಲಾರಂಭಿಸಿದರು.

ಅಕಲ್ಪಿತಯೋಗಾಯೋಗ.

ಪ್ರಕರಣ 16.

ಆ ಕಾಲದಲ್ಲಿ ಪ್ರವಾಸಿಗಳ ಮಾರ್ಗಕ್ರಮಣಕ್ಕೆ ಬಹಳ ತೊಂದರೆಗಳುಂಟಾಗುತ್ತಿದ್ದುವು. ಮಾರ್ಗಪರಿಚಯವಿರುವ ಮನುಷ್ಯನಿದ್ದಲ್ಲಿ ಮುಂದಿನ ದಾರಿಯನ್ನು ನಡೆಯಲು ಸಾಧ್ಯವಾಗುತ್ತದೆ; ಇತರರಿಗೆ ಶಕ್ಯವಲ್ಲ. ಸಾಧಾರಣ ಪ್ರವಾಸಿಗಳಿಗೆ ಆ ದಾರಿಯೇ ತಿಳಿದಿಲ್ಲ. ದನಗಳು ತಿರುಗಾಡುವ ಬೆಟ್ಟದಲ್ಲಿ ಒಂದು ಕಾಲುದಾರಿಯಿತ್ತು. ಪ್ರವಾಸಿಗಳಿಗದೇ ಸುಲಭ ಮಾರ್ಗವು. ಈಗಿನಂತೆ ಗಾಡಿಗಳು ಹೋಗುವ ಮಾರ್ಗಗಳಿರಲಿಲ್ಲ. ಈ ಒಳದಾರಿಯಲ್ಲಿ

ಎರಡು ತಾಸುಗಳಲ್ಲಿ ಹೋಗುವ ದಾರಿಯನ್ನು ಎಲ್ಲರೂ ತಿರುಗುವ ದಾರಿಯಲ್ಲಿ ನಾಲ್ಕು ತಾಸುಗಳಲ್ಲಿ ಹೋಗುವರು. ಆ ಪ್ರವಾಸಿಗಳು ಆ ಒಳದಾರಿಯಿಂದಲೇ ಹೋದರೂ ಸೂರ್ಯಾಸ್ತವಾಗುವದಕ್ಕೆ ಮೊದಲೇ ಚಿತ್ತೂರನ್ನು ಸೇರಲಿಲ್ಲ. ಮಧ್ಯದಲ್ಲಿ ಎಲ್ಲಿಯೂ ನಿಲ್ಲದೆ ತನ್ನ ಮನೆಗೆ ಹೋಗಬೇಕಾಗಿ ರಾಯಚಂದನು ಯೋಚಿಸಿದ್ದನು. ಈಗ ನಡೆದ ಅಪಾಯದಲ್ಲಿ ಶೂರಸೇನನು ರಕ್ಷಿಸಿದನು. ಆದ್ದರಿಂದ ಚಿತ್ತೂರು ಹೊರಗೆ ಇರುವದು ಅಪಾಯವೆಂದು ತಿಳಿದಿದ್ದನು. ಸ್ವಲ್ಪವೂ ವಿಶ್ರಾಂತಿ ಹೊಂದಲಿಲ್ಲ. ಆದರೂ ರಾತ್ರಿಯಾಯಿತು. ಬರುವ ಮಾರ್ಗದಲ್ಲಿ ಚಿತ್ತೂರಿನ ಹೊರಗೆ ಇದ್ದ ಅಲ್ಲಾವುದ್ದೀನನ ಪಾಳೆಯವನ್ನು ನೋಡಿದರು. ಆ ಪಾಳೆಯದ ದೀಪದ ಪ್ರಕಾಶವನ್ನು ನೋಡಿ; ಶೂರಸೇನನು :-
"ರಾಯಚಂದರೇ ! ಇದು ಅಲ್ಲಾವುದ್ದೀನನ ಪಾಳೆಯವೆ ?" ಎಂದನು.

ರಾಯಚಂದ :—ವತ್ಸಾ ! ಅಹುದು. ಇದೇ ಆ ಮಹಾನುಭಾವನ ಛಾವಣಿ. ಈಗ ಬಹಳ ಹೊತ್ತಾಗಿದೆ. ಚಿತ್ತೂರು ದುರ್ಗದ್ವಾರವು ತೆರೆದಿರುವದೋ ಇಲ್ಲವೋ ತಿಳಿಯದು.

ಶೂರಸೇನ ;—ನಾನು ಸುಲ್ತಾನನ ವಾಸಸ್ಥಾನವನ್ನು ನೋಡಬಯಸುತ್ತೇನೆ. ಸ್ವದೇಶಹಿತಾರ್ಥವಾಗಿ ಪ್ರಯತ್ನಿಸುವ ನಮ್ಮ ರಾಣರಿಗೆ ಸಹಾಯಮಾಡುವದೇ ನಮ್ಮ ಕರ್ತವ್ಯವಲ್ಲವೇ ? ನೀವು ಆಜ್ಞೆ ಕೊಟ್ಟರೆ........

ಎಂದು ಅರ್ಧೋಕ್ತಿ ಆಡುತಿರುವಾಗಲೇ ರಾಯಚಂದನು "ಬೇಡಪ್ಪಾ ! ನಿನ್ನಂತಹ ಅನಭ್ಯಸ್ತಬಾಲನು ಇಂತಹ ಕಾರ್ಯದಲ್ಲಿ ಪ್ರವೇಶಿಸಬಾರದು ನಿನಗೆ ಈವರೆಗೆ ಲೋಕದ ಅನುಭವವಿಲ್ಲ. ಯವನನ ಛಾವಣಿಯನ್ನು ಪ್ರವೇಶಿಸುವದು ಅಪಾಯಕರ ! ಈಗ ನೀನು ಹೋಗಬೇಡ. ಈ ಹೊತ್ತಿನಲ್ಲಿ ದುರ್ಗದ್ವಾರವು ತೆರೆಯದಿದ್ದರೂ ದ್ವಾರಪಾಲಕರು ನನ್ನ ಹೆಸರನ್ನು ಕೇಳಿದೊಡನೆ ದ್ವಾರವನ್ನು ತೆರೆವರು." ಎಂದು ಹೇಳಿ ; ಮುಂದಿನ ದಾರಿಯಲ್ಲಿ ಹೋಗುತ್ತಿದ್ದನು. ಶೂರಸೇನನು ಅದನ್ನು ಒಪ್ಪಲಿಲ್ಲ. ಹೇಗಾದರೂ ಯವನರ ಛಾವಣಿಯನ್ನು ಪ್ರವೇಶಿಸಬೇಕೆಂದಿಚ್ಛಿಸುತ್ತಿದ್ದನು. ರಾಯಚಂದನ ಮಾತನ್ನು ಕೇಳಿ ಅವನೊಡನೆ ಅವನು ಹೋಗಬೇಕಾಯಿತು. ರಾತ್ರಿ ಹತ್ತು ಘಂಟೆಯಾಗಿತ್ತು. ಎಲ್ಲರೂ ಕೋಟೆಯ ಮುಖ್ಯದ್ವಾರದ ಹತ್ತಿರ ಬಂದು ಸೇರಿದರು. ಆದರೆ ಆ ಕಾಲದಲ್ಲಿ ಕೋಟೆಯ ಬಾಗಿಲು ಹಾಕಿತ್ತು. ಇದನ್ನು ನೋಡಿ ರಾಯಚಂದನು ತನ್ನ ಹೆಸರನ್ನು ಹೇಳಿ ಬಾಗಿಲು ತೆರೆಯುವಂತೆ ದ್ವಾರರಕ್ಷಕರಿಗೆ ಪರಿಪರಿಯಿಂದ ಹೇಳಿದನು, ಆದರೆ ಅದೆಲ್ಲ ವ್ಯರ್ಥವಾಯಿತು. ರಾತ್ರಿಯಲ್ಲಿ ಬಾಗಿಲನ್ನು ಖಂಡಿತವಾಗಿ ತೆರೆಯಬಾರದೆಂದಪ್ಪಣೆಯಾಗಿತ್ತು. ಆದ್ದರಿಂದ ರಾಯಚಂದನನ್ನು ಬಲ್ಲವರಾದರೂ, ಬಾಗಿಲು ತೆರೆಯಲು ಬಾಗಿಲು ಕಾಯುವವರಿಗೆ ಧೈರ್ಯವಾಗಲಿಲ್ಲ. ಆಗ ವೃದ್ಧ ರಾಯಚಂದನು ನಿರಾಶನಾದನು. ಬೆಳಗಾಗುವವರೆಗೂ ಆ ಸ್ಥಳದಲ್ಲೇ ರಾತ್ರಿಯನ್ನು ಕಳೆಯಬೇಕಾಗಿ ಬಂದಿತು. ಸರ್ವರೂ ಬಯಲೊಳಗಿರಬೇಕೆಂದು ತಿಳಿದಿದ್ದರು.

ಆದರೆ, ಯತ್ನವಿಲ್ಲದೆ ಕೊನೆಗೆ ಸರ್ವರೂ ಒಂದು ಮರದಕೆಳಗೆ ಇಳಿದುಕೊಂಡರು. ಇಂತಹ ಉತ್ಕೃಷ್ಟ ಸಮಯವನ್ನು ನೋಡಿ ಶೂರಸೇನನು ಯವನರ ಪಾಳಯಕ್ಕೆ ಹೋಗುವುದಾಗಿ ಹೇಳಿದನು. ರಾಯಚಂದನು ಇದಕ್ಕಡ್ಡಿಮಾಡಿದನು. ಆದರೆ, ಶೂರಸೇನನು ಕೇಳಲಿಲ್ಲ. ವಿಜಯೆಯೂ ಬಹಳವಾಗಿ ಹೇಳಿದಳು. ಆದರೆ ವ್ಯರ್ಥವಾಯಿತು. ಬಳಿಕ ಎರಡು ತಾಸುಗಳಲ್ಲಿ ಹಿಂದಿರುಗಿ ಬರುವುದಾಗಿ ಅಭಿವಚನ ಕೊಟ್ಟು ಅವನು ಆ ಪಾಳಯದ ಕಡೆಗೆ ಹೊರಟನು. ಆಗ ತನ್ನ ಪೂರ್ವದ ರೈತನ ಉಡುಪನ್ನು ಧರಿಸಿದನು. ಪಾಳೆಯದಹತ್ತಿರ ಬಂದನು. ಆಗ ಪಹರೆಯವರು ಜಾಗರೂಕರಾಗಿ ಪಹರೆ ಕೊಡುತ್ತಿದ್ದರೆಂದು ತೋರಿತು. ಛಾವಣಿಯೊಳಕ್ಕೆ ಹೋಗಲು ಸುರಕ್ಷಿತಮಾರ್ಗವು ಎಲ್ಲಿಯೂಕಾಣಲಿಲ್ಲ. ಪ್ರತಿಬಾಗಿಲಲ್ಲೂ ಪಹರೆಯವರು ಜಾಗರೂಕರಾಗಿದ್ದರು. ಶೂರಸೇನನು ಒಂದು ಗಿಡವನ್ನುಹತ್ತಿ ಛಾವಣಿಯನ್ನು ಸೂಕ್ಷ್ಮರೀತಿಯಿಂದ ನೋಡಿದನು. ಆಗ ಆ ಡೇರೆಯ ಎದುರಿಗೆ ವೃಕ್ಷಗಳತೋಪಿನಿಂದ ಕೃಷ್ಣವಸ್ತ್ರಧಾರಿಯಾದವನೊಬ್ಬನು ಹೊರಗೆ ಬರುತ್ತಿದ್ದನು. ಅವನು ಅಡಗುತ್ತಾ ವಂಚಿಸುತ್ತಾ ಛಾವಣಿಯಿಂದ ಹೊರಗೆಬರುತ್ತಿದ್ದುದನ್ನು ಕಂಡನು ಆತನು ಯಾವ ದಾರಿಯಿಂದ ಬರುವನೆಂಬುದನ್ನು ಲಕ್ಷ್ಯವಿಟ್ಟು ನೋಡಿದನು. ಆತನು ಡೇರೆಯ ಕನಾತಿನ ಪರದೆಯನ್ನು ಓರೆಮಾಡಿಕೊಂಡು ಎರಡನೆಯ ಗುಪ್ತದ್ವಾರದಿಂದ ಛಾವಣಿಯ ಹೊರಗೆ ಹೊರಟನು. ಅವನು ಹೊರಗೆ ಬರುವದಾರಿಯನ್ನು ಚೆನ್ನಾಗಿ ನೋಡಿ, ಶೂರಸೇನನು ಗಿಡದಿಂದಿಳಿದು, ಆ ದಾರಿಯನ್ನು ಹುಡುಕುತ್ತಾ ಹೊರಟನು ; ಬಹಳ ಹೊತ್ತಿನಮೇಲೆ ಆ ಗುಪ್ತದ್ವಾರವು ಸಿಕ್ಕಿತು. ಇವನು ಆ ದಾರಿಯಿಂದ ಹೋಗುವಷ್ಟರಲ್ಲಿಯೇ ಅವನೆದುರಿಗೊಬ್ಬ ಯವನ ವ್ಯಕ್ತಿಯು ನಿಂತಿರುವದನ್ನು ನೋಡಿದನು. ಅವನನ್ನು ನೋಡಿ ಶೂರಸೇನನು ಸ್ವಲ್ಪಹೆದರಿದನು. ಆದರೆ, ಕೊನೆಗೆ ಅವನು ಧೈರ್ಯ ಹೊಂದಿ ಅಲ್ಲಿಯೇ ನಿಂತನು.

ವ್ಯಕ್ತಿ :—ನೀನಾರು ? ಏಕೆ ಇಲ್ಲಿಗೆಬಂದೆ ?

ಶೂರಸೇನನು :—“ ಖಾನ್‌ಸಾಹೇಬರೇ ! ನಾನೊಬ್ಬ ಬಡರೈತ ಬಾಲಕನು. ದಾರಿ ತಪ್ಪಿದ್ದರಿಂದ ರಾತ್ರಿಯಲ್ಲಿ ಹೊರಗೆ ಇರುವದು ಅಪಾಯಕರವೆಂದು ತಿಳಿದು ಕೊನೆಗೆ ಈ ಛಾವಣಿಯಲ್ಲಿ ಯಾರಹತ್ತಿರವಾದರೂ ಭಿಕ್ಷೆಬೇಡಿ ಕ್ಷುಧಾಶಾಂತಿಮಾಡಿಕೊಳ್ಳಬೇಕೆಂದೂ, ಇಲ್ಲಿ ರಾತ್ರಿಯನ್ನು ಕಳೆಯಬೇಕೆಂದೂ, ಬಂದೆನು. ಏನಾದರೂ ಸ್ವಲ್ಪ ತಿಂಡಿಯನ್ನು ಕೊಟ್ಟರೆ, ಬಡವನಿಗೆ ದೊಡ್ಡ ಉಪಕಾರವಾದೀತು.” ಎಂದು ಹೇಳಿ ಆ ವ್ಯಕ್ತಿಯ ಕಾಲಿಗೆ ಬಿದ್ದನು.

ಆ ವ್ಯಕ್ತಿಯು ಅವನಕಡೆಗೆ ಬಹಳ ಹೊತ್ತು ನೋಡಿದನು. ಆಗ ಅವನಿಗೆ ಅವನಲ್ಲಿ ಸಂಶಯವುಂಟಾಯಿತು. ಬಳಿಕ ಅವನು ಬಲವಾಗಿ ಸಿಳ್ಳುಹಾಕಿದನು. ಕೂಡಲೆ ಕೆಲವರು ಯವನರು ಆ ಸ್ಥಳಕ್ಕೆ ಬಂದರು.

ಅವನಲ್ಲೊಬ್ಬನನ್ನು ಕುರಿತು.—"ಅಬ್ದುಲ್ಲನೆ! ನಿಮ್ಮಲ್ಲಿ ಎಚ್ಚರಿಕೆಯಿಲ್ಲವೇ? ನೀನೇ ಹೇಳು. ನಿಮ್ಮ ಅಜಾಗರೂಕತೆಯಿಂದ ಈ ಗುಪ್ತದ್ವಾರವು ತೆರೆಯಲ್ಪಟ್ಟೇ ಇದೆ ಆ ದಾರಿಯಿಂದಲೇ ಈ ನಿನ್ನಪ್ಪನೇ ಇಲ್ಲಿಗೆ ಬಂದನು. ಗುಲಾಮರಿರಾ! ನಿಮ್ಮನ್ನಿಲ್ಲಿಯೇ ಸಂಹರಿಸಬೇಕು. ಈತನು ಒಬ್ಬ ರೈತನ ವೇಷದಿಂದ ಬೊಗಳುತಿರುವನು. ಈ ನೀಚನನ್ನೇನು ನೋಡುವಿರಿ? ಇವನ ದೇಹವನ್ನು ಶೋಧಿಸಿರಿ" ಎಂದನು

ಕೂಡಲೆ ಆ ಸಿಪಾಯಿಗಳು ಶೂರಸೇನನನ್ನು ಹಿಡಿದು ಶೋಧನೆಮಾಡಿದರು. ಆದರೇನು ಸಿಕ್ಕಲಿಲ್ಲ ಆ ವ್ಯಕ್ತಿಯು ವಿಚಾರವಮಾಡಿ ಸ್ವಲ್ಪಕಾಲ ಯೋಚಿಸಿ, "ಎಲೈ ಹುಡುಗನೆ! ನೀನು ರೈತನಮಗನಾದರೆ, ಇಲ್ಲಿಗೆ ಸಾಯುವದಕ್ಕೇಕೆ ಬಂದೆ?" ಎಂದನು.

ಶೂರಸೇನನು:—ಖಾವಂದರೇ! ಏನು ಮಾಡಬೇಕು? ರಾತ್ರಿಯಾದ್ದರಿಂದ ನಾನು ಇಲ್ಲಿಗೆ ಬರಬೇಕಾಯಿತು. ರಾತ್ರಿಕಾಲದಲ್ಲಿ ಭೂತಪಿಶಾಚಗಳ ಭೀತಿಯು ಬಹುವಾಗಿರುತ್ತದೆ ಎಂದು ಹೆದರಿ ಇಲ್ಲಿ ಬಂದೆನು

ವ್ಯಕ್ತಿ:—ಆದರೆ, ಹತ್ತಿರ ಚಿತ್ತೂರು ನಗರವಿದೆಯಷ್ಟೆ. ಅಲ್ಲಿಗೇಕೆ ಹೋಗಲಿಲ್ಲ?

ಶೂರಸೇನ:—ನಾನು ಚಿತ್ತೂರು ವಾಸಿಯಲ್ಲ. ಇಲ್ಲಿಗಿಪ್ಪತ್ತು ಹರಿದಾರಿ ದೂರದಲ್ಲಿನ ಒಂದು ಹಳ್ಳಿಯಲ್ಲಿ ನಾನಿರುತ್ತೇನೆ. ನನ್ನ ವೃದ್ಧಪಿತನು ಸ್ವಲ್ಪದಿನಗಳಿಗೆ ಮುಂಚೆ ಕಾಲವಾದನು. ನಮ್ಮ ಕುಟುಂಬವು ಬಹಳ ದೊಡ್ಡದಾದಕಾರಣ, ಉದರನಿರ್ವಾಹಕ್ಕೆಂದು ಹೊರಗೆ ಹೊರಟೆನು. ಆದರೆ, ದಾರಿತಪ್ಪಿ ತಮ್ಮ ಪಾಳಯಕ್ಕೆ ಬಂದೆನು. ಖಾನ್‍ಸಾಹೇಬರೇ! ನಾನು ಬಡವ. ಬಹುಬಡವ. ನನಗೆಲ್ಲಿಯಾದರೂ ಸ್ವಲ್ಪ ಅನ್ನವನ್ನು ಕೊಡಿಸಿದರೆ ನಾನು ತಮ್ಮುಪಕಾರವನ್ನು ಜನ್ಮಾವಧಿ ಮರೆಯೆನು.

ಈ ರೀತಿಹೇಳಿ ಬಂದಕಾರ್ಯವನ್ನು ಮರೆಮಾಚುತ್ತಾ ಮತ್ತೊಮ್ಮೆ ಅವನ ಕಾಲಿಗೆ ಬಿದ್ದನು. ಇದನ್ನು ನೋಡಿ ಆ ವ್ಯಕ್ತಿಯಾದ ಅಲಫ್‍ಖಾನನು ಇವನನ್ನು ಕುರಿತು—"ನಿನ್ನಂತಹ ಮೋಸಗಾರರಾದ ಎಷ್ಟೋ ಜನರನ್ನು ನೋಡಿದೇನೆ." ಎಂದುಹೇಳಿ; "ಅಬ್ದುಲ್ಲನೇ! ಇವನನ್ನು ನನ್ನ ಡೇರೆಗೆ ಕರೆದುಕೊಂಡು ಹೋಗು ನಾನು ನಿನ್ನ ಹಿಂದೆಯೇ ಬರುವೆನು" ಎಂದುಹೇಳಿ; ದಳಪತಿಯಾದ ಅಲಫ್‍ಖಾನನು ಎಲ್ಲಿಗೋ ಹೊರಟುಹೋದನು. ಅವನು ಹೋದಮೇಲೆ ಆ ಗುಪ್ತದ್ವಾರದಿಂದ ಬೇರೆಇಬ್ಬರು ವ್ಯಕ್ತಿಗಳು ಒಳಗೆಬಂದರು. ಈ ಸಿಪಾಯಿಯು ಅವರನ್ನೂ ಕರೆದುಕೊಂಡು ಅಲಫ್‍ಖಾನನ ಡೇರೆಗೆ ಹೋದನು. ಅಲಫ್‍ಖಾನನು ಬರುವುದಕ್ಕೆ ಬಹುಕಾಲಬೇಕೆಂದು ಯೋಚಿಸಿ ಶೂರಸೇನನನ್ನು ಕರೆದುಕೊಂಡುಬಂದ ಸೈನಿಕನು ಸ್ವಸ್ಥವಾಗಿ ಕುಳಿತನು. ಅವನನ್ನು ಕುರಿತು ಏನೂತಿಳಿಯದ ಹಳ್ಳಿಗಾಡಿನವರಂತೆ ಮಾತಾಡತೊಡಗಿದನು. ಏನೆಂದರೆ,—

"ಏನು ಖಾನ್ ಸಾಹೇಬರೇ! ನಿಮ್ಮ ಸರದಾರ ಸಾಹೇಬರು ಏಕೆ ನನ್ನನ್ನು ಹಿಡಿದುಕೊಂಡರು?"

ಸೈನಿಕ:—ಹುಡುಗನೇ! ನೀನು ಗೂಢಚಾರನೆಂದು ತೋರಿದ್ದರಿಂದ.

ಶೂರಸೇನ:—ನಾನು ಗೂಢಚಾರನೇ? ಗೂಢಚಾರನೆಂದರೇನು?

ಸೈನಿಕ:—(ತಿರಸ್ಕಾರೋದ್ಗಾರದಿಂದ) ಈ ಕಾಡುಕುರುಬನಿಗೆ ಅಂತರಂಗ ವಿಚಾರನೆಂದರೇನೆಂಬುದು ತಿಳಿಯದು. ಮಗನೇ! ಗೂಢಚಾರನೆಂದರೆ, ಗುಟ್ಟಾದ ವರ್ತಮಾನವನ್ನು ತಿಳಿಯುವ ಚಾರನು.

ಶೂರಸೇನ:—ಹಾ! ಹಾ! ಈಗ ತಿಳಿಯಿತು. ಶತ್ರುಗಳ ಗುಪ್ತವಾರ್ತೆಗಳನ್ನು ತಿಳಿದು ತನ್ನ ರಾಜನಿಗೆ ತಿಳಿಸುವವನೇ ಗೂಢಚಾರನೇ!

ಸೈನಿಕ:—ಅಹುದು.

ಶೂರಸೇನ:—ಆದರೆ, ನೀವು ನನ್ನನ್ನು ಗೂಢಚಾರನೆಂದು ಹಿಡಿದಿದ್ದೀರಿ. ಆದರಂತೆ ನಿಮ್ಮ ಕಡೆಯವರೂ ಯಾರಾದರೂ ಚಿತ್ತೂರಿಗೆ ಹೋಗಿರಬಹುದಲ್ಲವೇ?

ಸೈನಿಕ:—ಹುಚ್ಚನಂತೆ ಇದನ್ನು ಏಕೆ ವಿಚಾರಿಸುತ್ತಿ? ನಮ್ಮ ಕಡೆಯವರೂ ಹೋಗಿರುವರು.

ಶೂರಸೇನ:—ಹಾಗಾದರೆ, ಕಾಲಕಾಲಕ್ಕೆ ಅವರಿಂದ ನಿಮಗೇನಾದರೂ ವರ್ತಮಾನವು ತಿಳಿದಿದ್ದೀತಲ್ಲವೇ? ಅವರು ಏನಾದರೂ ವರ್ತಮಾನತಂದರೇ? ಹೇಗೆ ತಂದರೆಂದು ನನಗೆ ತಿಳಿಯುವುದಿಲ್ಲವೆಂದೂಹಿಸುವೆನು. ಏಕೆಂದರೆ, ರಾಜಪುತ್ರರು ಧೂರ್ತರಾಗಿದ್ದಾರೆ.

ಸೈನಿಕ:—ಎಲೈ! ಧೂರ್ತರಾದರೇನಾಯಿತು? ನಮ್ಮ ಗೂಢಚಾರರು ಜಾಗರೂಕರಾಗಿದ್ದಾರೆ. ಅಲ್ಲಿಂದ ಖಂಡಿತವಾದ ಸಂಗತಿಗಳನ್ನು ತಿಳಿಸುತ್ತಲೇ ಇರುತ್ತಾರೆ. ಇದಕ್ಕಾಗಿ ಪಾದಷಹನು ಸುಮ್ಮನೆ ಕುಳಿತಿರುವನು. ಇಲ್ಲದಿದ್ದರೆ, ಸುಲ್ತಾನನು ಇಷ್ಟರಲ್ಲೇ ಚಿತ್ತೂರು ದುರ್ಗದಮೇಲೆ ಧ್ವಜಗಳನ್ನು ನಿಲ್ಲಿಸುತ್ತಿದ್ದನು.

ಶೂರಸೇನ:—ಈ ವೃತ್ತವು ನಿಜವೇ? ನನಗೆ ತಿಳಿಯುವುದಿಲ್ಲ.

ಸೈನಿಕ:—ನಿಜವಲ್ಲವೆನ್ನುವಿಯಾ?

ಶೂರಸೇನ:—ಇದರಲ್ಲಿ ಸಂಶಯವೇನು? ಆ ರಾಜಪುತ್ರ ಕೃತ್ರಿಮಿಗಳು. ಅವರ ಮನದಲ್ಲಿರುವುದೇ ಒಂದು! ಬಾಯಿಯಲ್ಲಿ ಹೇಳುವುದೇ ಒಂದು!

ಸೈನಿಕ:—ಬಹುಶಃ, ಹೀಗೆ ತೋರುವದು ನಿಜ. ಡಿಲ್ಲಿಗೆ ಸನ್ಯಾಸಿ ವೇಷದಿಂದ ಬಂದ ಸರದಾರಗುಲಾಬಸಿಂಗನಿಂದ ವರ್ತಮಾನವನ್ನು ತಿಳಿದು ರಾಣನು ಯುದ್ಧಕ್ಕೆ ಸಿದ್ಧನಾಗಿದ್ದಾನೆ. ಇದು ಖಂಡಿತ ಬಾಲನೇ! ಈಗ ನೀನೇ ಹೇಳು; ನಮ್ಮ ಗೂಢಚಾರರು ಜಾಗರೂಕರೇ? ನಿಮ್ಮ ರಾಜಪುತ್ರ ಗೂಢಚಾರರು ಜಾಗರೂಕರೇ?

ಶೂರಸೇನ — ಹೀಗಿದ್ದರೆ, ನಾನು ಹೇಳಿದುದು ಸುಳ್ಳಾಯಿತು. ಆದರೆ, ರಾಜಪುತ್ರರು ಹೇಗೆ ಯುದ್ಧಕ್ಕೆ ಸಿದ್ಧರಾಗಿರುವರೋ ಹಾಗೆಯೇ ನೀವೂ ಸಿದ್ಧರಾಗಿರುವಿರಿ.

ಸೈನಿಕ:— ಅದ್ದಿಯೇನು? ನಮ್ಮ ಸುಲ್ತಾನನು ರಾಜಪುತ್ರರನ್ನು ಯುದ್ಧದಲ್ಲಿ ಸೋಲಿಸುವನು. ತನಗೆ ಅಸಾಧ್ಯವಾಗದೆ ಹಿಂತಿರುಗುವನಾಗಿದ್ದಾನೆ. ಇಲ್ಲಿಯೇ ಇದ್ದರೆ, ಆಹಾರ ಸಾಮಗ್ರಿಗಳ ನ್ಯೂನತೆಯುಂಟಾಗಬಹುದು.

ಎನ್ನುವಷ್ಟರಲ್ಲಿ ಸರದಾರ ಅಲಫ್‌ಖಾನನು ಅಲ್ಲಿಗೆ ಬಂದು ಈ ಶಬ್ದವನ್ನು ಕೇಳಿ ಒಡನೇ ಸಿಪಾಯಿಗೆ ಕಣ್ಣನ್ನು ಮಿಟಕಿಸಿ; "ಮೂರ್ಖರಿರಾ! ಯಾರ ಹತ್ತರ ಏನು ಹೇಳಬೇಕೆಂಬುವದು ನಿಮಗೆ ತಿಳಿಯದು. ಇವನಾರು? ನಿಮಗೆ ಗೊತ್ತಿದೆಯೇ?" ಎಂದು "ಎಲೈ, ಹುಡುಗನೆ! ನನ್ನೊಡನೆ ಬಾ!" ಎಂದು ಹೇಳಿ ಅಲಫ್‌ಖಾನನು ಡೇರೆಯೊಳಕ್ಕೆ ಹೋದನು. ಅವನ ಹಿಂದೆ ಶೂರಸೇನನು ಹೆದರುತ್ತಾ ಹೆದರುತ್ತಾ ಅಲ್ಲಿಗೆ ಹೋದನು. ಆ ಸಿಪಾಯಿಗಳು ಡೇರೆಯ ಬಾಗಿಲಲ್ಲಿ ನಿಂತರು. ಡೇರೆಯೊಳಕ್ಕೆ ಹೋದವಡನೆಯೇ ಅಲಫ್‌ಖಾನನು ಶೂರಸೇನನನ್ನು ಕುರಿತು, "ಬಾಲಕನೇ! ನೀನು ನಿಜ ಹೇಳಿದರೆ, ಇಲ್ಲಿಂದ ಮುಕ್ತನಾಗುವಿ. ಇಲ್ಲದಿದ್ದರೆ, ನಿನ್ನನ್ನಿಲ್ಲಿಯೇ ಕೊಲ್ಲುವೆನು." ಎಂದನು. ಅದಕ್ಕೆ ಶೂರಸೇನನು, "ಸರದಾರ ಸಾಹೇಬರೇ! ಹೀಗೇಕೆ ನನ್ನನ್ನು ಹೆದರಿಸುವಿರಿ? ನಾನೊಬ್ಬ ರೈತನ ಮಗನು. ನಿಮ್ಮ ಕಾಲನ್ನು ಮುಟ್ಟಿ ಪ್ರಮಾಣಮಾಡಿ ಹೇಳುತ್ತೇನೆ. ಚಿತ್ತೂರು ಹೇಗಿದೆ ಯೆಂಬುದನ್ನು ಈವರೆಗೆ ನಾನು ನೋಡಿಲ್ಲ." ಎಂದನು.

ಅಲಫ್‌ಖಾನನು "ಹೀಗೆಯೇ? ಆದರೆ ನಿನಗೆ ದಂಡೋಪಾಯವನ್ನು ತೋರಿಸಬೇಕು. ಇಲ್ಲದಿದ್ದರೆ, ನೀನು ನಿಜ ಹೇಳುವಹಾಗಿಲ್ಲ" ಎಂದು ಸಿಪಾಯಿಗಳನ್ನು ಕೂಗುವವನಾಗಿದ್ದನು. "ಖಾಜಿಸಾಹೇಬರು ಬಹು ತ್ವರೆಯ ಕೆಲಸಕ್ಕಾಗಿ ತಮ್ಮನ್ನು ನೋಡಲು ಬಂದಿದ್ದಾರೆ" ಎಂದು ಒಬ್ಬ ದೂತನು ಬಂದು ಹೇಳಿದನು. ಆಗ ಅವರನ್ನು ಕರೆದುಕೊಂಡು ಬರುವಂತೆ ಸಂಜ್ಞೆಯಿಂದ ತಿಳಿಸಿ ಅಲಫ್‌ಖಾನನು, ಶೂರಸೇನನ್ನು ಕುರಿತು, "ಬಾಲಕನೇ! ನೀನು ಸ್ವಲ್ಪಕಾಲ ಹೊರಬಾಗಿಲಲ್ಲಿ ನಮ್ಮ ಸಿಪಾಯಿಗಳ ಸಂಗಡ ಇರು. ನನಗೆ ಈಗ ಸ್ವಲ್ಪ ಕೆಲಸವಿದೆ. ಅದನ್ನು ತೀರಿಸಿಕೊಂಡು ನಿನ್ನ ವಿಷಯವನ್ನು ಏನಾದರೂ ವಿಚಾರಿಸುವೆನು. ಈಗ ಹೊರಗೆ ಹೋಗು. ನಾನು ಹೇಳಿದಾಗ ಬಾ." ಎಂದು ಹೇಳಿದನು. ಈ ಮಾತನ್ನು ಕೇಳಿ ಶೂರಸೇನನು ಡೇರೆಯ ಹೊರಗೆ ಬಂದನು. ಡೇರೆಯ ಕನಾತನ್ನೆತ್ತಿಕೊಂಡು ಅವರ ಮಾತನ್ನು ಕೇಳತೊಡಗಿದನು. ಅವರು ಬಹಳ ಮೆಲ್ಲಗೆ ಮಾತಾಡುತ್ತಿದ್ದುದರಿಂದ ಏನೂ ಕೇಳಲಿಲ್ಲ. ಆದರೆ ಸ್ವಲ್ಪ ಕೇಳಿಸಿತು. ಇದರಿಂದ ಮೂರನೆಯ ದಿನ ರಾತ್ರಿ ಚಿತ್ತೂರನ್ನು ಮುತ್ತಿಗೆ ಹಾಕುವ ಹಾಗೆ ಸುಲ್ತಾನನು ನಿಶ್ಚಯಿಸಿರುವ ಸಂಗತಿ ತಿಳಿಯಿತು. ಮೆಲ್ಲಗೆ ಡೇರೆ

ಯು ಹೊರಗೆ ಬಂದನು. ಈ ಸಮಯವನ್ನು ನೋಡಿ ಶೂರಸೇನನಿಗೆ ಹಾಸ್ಯಚಿಹ್ನೆಯು ಕಾಣಿಸಿತು. ಆ ಸಿಪಾಯಿಗಳನ್ನು ಕುರಿತು, "ಖಾನ್ ಸಾಹೇಬರೇ! ನಾನೂ ನಿಮ್ಮಲ್ಲಿ ಸಿಪಾಯಿ ಕೆಲಸಕ್ಕೆ ನಿಂತೆನು. ಅಲಫ್ ಖಾನನಿಗೆ ನನ್ನಲ್ಲಿ ಪೂರ್ಣ ವಿಶ್ವಾಸ ವುಂಟಾಯಿತು. ಈಗ ಚಿತ್ತೂರು ವರ್ತಮಾನವನ್ನು ತರುವ ಕೆಲಸವನ್ನು ನನಗೆ ನೇಮಿಸಿರುವನು. ಅಲ್ಲಿಗೆ ನಾನು ಹೋಗಬೇಕಾಗಿದೆ. ನಿಮ್ಮ ಮೈತ್ರಿಯ ಲಾಭವಾದದ್ದು ನನ್ನ ಸದ್ಭಾಗ್ಯವೆನ್ನಬೇಕು. ಇಲ್ಲದಿದ್ದರೆ, ನನ್ನ ಪರಿಚಯ ಬಲ್ಲವರು ಇಲ್ಲಿ ಅನ್ಯರಾರಿದ್ದರು? ಒಳ್ಳೇದು! ಬರುತ್ತೇನೆ." ಎಂದು ಹೇಳಿ ಜಾಗ್ರತೆಯಾಗಿ ಹೊರಟು ಸುರಕ್ಷಿತವಾಗಿ ಪಾಳಯದ ಹೊರಗೆ ಬಂದನು. ಶೂರಸೇನನು ಪುನಃ ಬಂದುದನ್ನು ನೋಡಿ; ವೃದ್ಧ ರಾಯಚಂದನು ದ್ವಾರವನ್ನು ತೆಗೆಯಲು ಎಲ್ಲರೂ ಪುನಃ ಪ್ರಾರ್ಥಿಸಿದರು. ಅವರು ಕೇಳಲಿಲ್ಲ. ಇಷ್ಟರಲ್ಲೇ ಗುಲಾಬಸಿಂಗನು ಕೆಲವು ಜನರೊಡನೆ ಅಲ್ಲಿಗೆ ಬಂದನು. ಅವನು ರಾಯಚಂದನನ್ನು ಗುರ್ತಿಸಿದನು. ಬಳಿಕ ಅವನ ಪ್ರಣೆಯಿಂದ ಬಾಗಿಲು ತೆರೆದರು. ಎಲ್ಲರೂ ಒಳಗೆ ಹೋದರು.

ಕಂದಾರ್ಥ—ತನ್ನಯದೇಶದರಕ್ಷಣೆಗೆ|
ನನ್ನಿಯೊಳೆಸಗುವನು ತಾನೆಧನ್ಯಂಜಗದೊಳ್ ||

ಪ್ರಕರಣ 17.

ಆ ದಿನ ಗುಲಾಬಸಿಂಗನು ಬಾಕರಖಾನನೆಂಬವನನ್ನು ಮಹಾರಾಣಾ ಭೀಮಸಿಂಗನಿಗೆ ಪರಿಚಯಮಾಡಿಸಿದನು. ಅವನ ಸಂಗತಿಯನ್ನು ಹೇಳಿದನು. ಆಗ ರಾಣನು ಅವನನ್ನು ಆದರದಿಂದ ಸತ್ಕರಿಸಿದನು. ಮಧ್ಯರಾತ್ರಿಯಾದಮೇಲೆ ಆ ಇಬ್ಬರೂ ಮಹಾರಾಣನ ಹತ್ತಿರ ಹೋದರು. ಈ ಮುಸಲ್ಮಾನ್ ಸರದಾರನು ತನ್ನ ಕಡೆಗೆ ಬರುತ್ತಿರುವದನ್ನು ನೋಡಿ ರಾಣನಿಗೆ ಮೊದಲು ಬಹಳ ಆಶ್ಚರ್ಯವಾಯಿತು. ಆದರೂ ಅದನ್ನು ತೋರಿಸದೆ "ಗುಲಾಬಸಿಂಗನೇ! ಮತ್ತು ಅತಿಥಿರಾಜನೇ! ಬನ್ನಿ" ಎಂದನು.

ಭೀಮಸಿಂಗ ಮತ್ತು ಗುಲಾಬಸಿಂಗರು ಕುಳಿತ ಬಳಿಕ ಮಹಾರಾಣನು ಆಗಂತುಕನನ್ನು ಕುರಿತು, "ನೀವು ಯಾರು? ಇಲ್ಲಿಗೆ ಬರಲು ಕಾರಣವೇನು?" ಎಂದು ಕೇಳಿದನು.

ಬಾಕರಖಾನನು:—"ನನ್ನ ಸಂಗತಿಯನ್ನು ಗುಲಾಬಸಿಂಗರೇ ಹೇಳುವರು." ಎಂದು ನಮ್ರತೆಯಿಂದ ಹೇಳಿದನು.

ಗುಲಾಬಸಿಂಗನು ಅವನ ವೃತ್ತಾಂತವನ್ನು ಮಹಾರಾಣನಿಗೆ ತಿಳಿಸಿದನು. ಇದನ್ನು ಕೇಳಿ ರಾಣನಿಗೆ ಶೋಕಕ್ರೋಧಗಳೆರಡೂ ಉಂಟಾದವು. "ಆಗನು

ನಕ್ಕೆ ಕಾರಣವಿದೆಯೇ? ಹೀಗೆಂದು ಸ್ವಪ್ನದಲ್ಲೂ ನಾನು ಯೋಚಿಸಿರಲಿಲ್ಲ. ನಾನು ನಿಮ್ಮನ್ನು ಬಾದಶಹನ ಗೂಢಚಾರರೆಂದು ತಿಳಿದಿದ್ದೆ. ಗುಲಾಬಸಿಂಗನು ಹಿಡಿದು ತಂದಿರಬಹುದೆಂದೂ ತಿಳಿದಿದ್ದೆನು. ಆದರೆ ನನ್ನ ಸಂಶಯವು ದೂರವಾಯಿತು. ಇರಲಿ; ಈಗ ನೀವು ಯಾರಿಗೆ ಸಹಾಯಮಾಡುವಿರಿ? ಆದರೆ, ವಿಶ್ವಾಸಘಾತಮಾಡಬೇಡಿ. ಕ್ಷತ್ರಿಯರಲ್ಲಿ ಸಿಕ್ಕಿರುವದನ್ನು ಲಕ್ಷ್ಯದಲ್ಲಿಡಿ. ನಾನು ಇದನ್ನು ರಾಜನೀತಿಗನುಸಾರವಾಗಿ ಹೇಳುವೆನು.'' ಎಂದನು.

ಬಾಕರ್‌ಖಾನ್ :—ಈ ವಿಷಯದಲ್ಲಿ ತಾವು ಸ್ವಲ್ಪವೂ ಸಂಶಯಪಡಬೇಡಿರಿ. ನಾನು ಅಂತಹ ಮನುಷ್ಯನಲ್ಲ. ಆದರೆ, ನಾನು ಬಾಯಿಯಿಂದ ಮಾತ್ರ ಸಹಾಯಮಾಡತಕ್ಕವನು; ಶರೀರದಿಂದಲ್ಲ.

ಮಹಾರಾಣ :—ಅಂದರೇನು? ನಿಮ್ಮ ಮಾತಿನ ಭಾವಾರ್ಥವು ನನಗೆ ತಿಳಿಯಲಿಲ್ಲ. ಸ್ಪಷ್ಟವಾಗಿ ಹೇಳಿ; ನೋಡೋಣ.

ಬಾಕರ್‌ಖಾನ್ :—ನನ್ನ ಭಾವಾರ್ಥವೇನೆಂದರೆ :-ನನ್ನ ವೈರವು ವ್ಯಕ್ತಿ ವಿಷಯಕವಾದದ್ದು. ಸುಲ್ತಾನ್ ಅಲ್ಲಾವುದೀನನು ವ್ಯಸನಿ, ಅತ್ಯಾಚಾರಿ, ಅಧರ್ಮಿ, ವ್ಯಭಿಚಾರಿ, ಪಾಪಿಪುರುಷನಾಗಿರುವದರಿಂದಲೂ, ನನ್ನಲ್ಲಿ ಅಯೋಗ್ಯವಾಗಿ ವರ್ತಿಸಿದ್ದರಿಂದಲೂ, ಅವನಿಗೆ ವೈರಿಯಾಗಿದ್ದೇನೆ ನಾನು ಅವನಿಗೆ ಪರಾಜಯ ಅಥವಾ ನಾಶವನ್ನುಂಟುಮಾಡಬೇಕಾದದ್ದು ಸ್ವಾಭಾವಿಕವಾದದ್ದು. ಆದರೆ, ಇಸ್ಲಾಮಿ ಧರ್ಮ ವಿಷಯದಲ್ಲಿ ನನ್ನ ಮನದಲ್ಲಿ ಪೂಜ್ಯಬುದ್ಧಿ ಇರುವದರಿಂದ ನಮ್ಮ ಧರ್ಮಬಾಂಧವರಿಗೆ ವಿರುದ್ಧವಾಗಿ ನಾನೆಂದಿಗೂ ಕತ್ತಿಯನ್ನು ಉಪಯೋಗಿಸುವುದಿಲ್ಲ. 'ಆದರೆ, ಸುಲ್ತಾನ್ ಅಲ್ಲಾವುದೀನನ ಯುದ್ಧಪದ್ಧತಿಯು ಹೇಗಿದೆ? ಮುಂದಿನ ಧೋರಣೆ ಹೇಗಿದೆ?' ಎಂಬುದನ್ನು ನಾನು ತಮಗೆ ಹೇಳುವೆನು. ಎಲ್ಲಾ ಸಂಗತಿಗಳನ್ನೂ ಲಕ್ಷ್ಯವಿಟ್ಟು ಮುಂದಿನ ಕರ್ತವ್ಯವನ್ನು ಯೋಚಿಸುವುದು ನಿಮ್ಮ ಸೇನಾಪತಿಯದಾಗಿದೆ.

ರಾಣನು :—ಮುಸಲ್ಮಾನರ ಧರ್ಮದಲ್ಲಿ ನೀತಿ, ಸತ್ಯ ಧಾರ್ಮಿಕತೆಗಳಿಲ್ಲ. ವ್ಯಭಿಚಾರ, ಪರಧನಾಪಹಾರಗಳೇ ಮುಖ್ಯ ನೀತಿ ಎಂದು ತಿಳಿಯುವ ಮುಸಲ್ಮಾನರ ವಿಷಯದಲ್ಲೂ ಅವರ ಧರ್ಮ ವಿಷಯದಲ್ಲೂ ತಮಗೆ ಇಷ್ಟು ಅಭಿಮಾನವಿರುವದನ್ನು ನೋಡಿ ನನಗೆ ಅತ್ಯಾಶ್ಚರ್ಯವಾಗಿದೆ

ಬಾಕರ್‌ಖಾನ್ :—ಮಹಾರಾಣರೇ! ನಿಮ್ಮಂತಹ ಉದಾರಿಗಳ ಮುಖದಿಂದ ಈ ಮಾತು ಹೊರಟಿರುವದನ್ನು ನೋಡಿ ನನಗೆ ಆಶ್ಚರ್ಯವಾಗಿದೆ. ಈಗ ನಮ್ಮ ಜ್ಞಾತಿಗಳಲ್ಲಿ ನೀತಿ,ಸತ್ಯಗಳು ಬಹ್ವಂಶಗಳಲ್ಲಿ ಲೋಪವಾಗುತ್ತಿವೆ. ನಿಜ ತಮ್ಮ ಆಕ್ಷೇಪವು ಸತ್ಯವು. ಆದರೆ, ಇದು ಧರ್ಮದ ದೋಷವಲ್ಲ. ವ್ಯಕ್ತಿಯದಾಗಿದೆ. ಧರ್ಮಕ್ಕೆ ದೋಷಕೊಡುವದು ಅಕಾರ್ಯವಾಗಿದೆ

ನೋಡಿರಿ. ಯಾವನೋ ಒಬ್ಬ ಆರ್ಯಧರ್ಮಾವಲಂಬಿಯು ಧರ್ಮವಿರುದ್ಧವಾಗಿ ನಡೆದರೆ, ತಮ್ಮ ಆರ್ಯಧರ್ಮಕ್ಕೆ ದೋಷಕೊಡಬಹುದೇ? ಮುಸಲ್ಮಾನರ ಧರ್ಮದಲ್ಲಿ ಸುರಾಪಾನ, ವ್ಯಭಿಚಾರ, ಪರಧನಾಪಹಾರ, ಅಸತ್ಯಭಾಷಣ ಇತ್ಯಾದಿ ದುರ್ಗುಣಗಳನ್ನು ನಿಷೇಧಿಸಿರುವದು. ಈಗಿನ ಮುಸಲ್ಮಾನರು ಈ ಆಜ್ಞೆಗಳನ್ನು ಲಕ್ಷಿಸದೇ ಇರುವ ತಪ್ಪು ಅವರದಾಗಿದೆ. ಅವರೇ ಅದಕ್ಕೆ ಉತ್ತರಕೊಡತಕ್ಕವರಾಗಿದ್ದಾರೆ. ಸೂಕ್ಷ್ಮರೀತಿಯಿಂದ ನೋಡಿದರೆ, ಆರ್ಯಧರ್ಮಕ್ಕೂ ಮುಸಲ್ಮಾನರ ಧರ್ಮಕ್ಕೂ ವಿಶೇಷ ಭೇದವಿಲ್ಲ. ಆರ್ಯಧರ್ಮವು ಆರ್ಯಾವರ್ತದಲ್ಲಿಯೂ ಮುಸಲ್ಮಾನ್ ಧರ್ಮವು ಅರಾಬಿ ದೇಶದಲ್ಲಿಯೂ ಹುಟ್ಟಿ ಪ್ರಬಲವಾಯಿತು. ಆದರೆ, ದೇಶಕಾಲಾನುಸಾರವಾಗಿ ಈ ಧರ್ಮಗಳ ಆಚರಣೆಯಲ್ಲಿ ಭೇದವು ತೋರುವುದು. ಆದರೆ, ಇದು ಅಷ್ಟುಮಹತ್ವದ್ದಲ್ಲ; ಆರ್ಯಧರ್ಮವು ಅರಾಬಿದೇಶದಲ್ಲಿ ಉತ್ಪನ್ನವಾಗಿದ್ದರೆ, ಆ ಧರ್ಮದಲ್ಲೂ ಆವಶ್ಯಕವಾಗಿ ದೇಶ ಕಾಲಾನುಸಾರವಾದ ನಿಯಮಗಳುಂಟಾಗುತ್ತಿದ್ದುವು. ಇದಕ್ಕೆ ಉದಾಹರಣೆ ಏನೆಂದರೆ:—ಮುಸಲ್ಮಾನ್ ಧರ್ಮದಲ್ಲಿ ನಾಲ್ವರು ಸ್ತ್ರೀಯರನ್ನು ಲಗ್ನಮಾಡಿಕೊಳ್ಳಬಹುದೆಂದು ಹೇಳಿದೆ. ಆದರೆ ಇದರ ರಹಸ್ಯವೇನೆಂದರೆ–ಅರಾಬಿ ದೇಶದಲ್ಲಿ ಪ್ರತಿಯೊಬ್ಬನೂ ನೂರುಜನರನ್ನು ಮದುವೆಯಾಗುತ್ತಿದ್ದನು. ಈ ಸಂಖೆಯನ್ನು ಕಮ್ಮಿಮಾಡುವುದಕ್ಕಾಗಿ ಈರೀತಿಯಾಗಿ ನಾಲ್ವರನ್ನು ಮಾತ್ರ ಮದುವೆಯಾಗಬೇಕೆಂದು ಮಹಮದನು ಬರೆದಿರುವನು. ಆದರೆ, ಈ ಧರ್ಮದಲ್ಲಿ ನೀತಿಯಿಲ್ಲವೇ? ಹೀಗೆಯೇ ಅನೇಕ ಆಜ್ಞೆಗಳಿವೆ. ಇದಕ್ಕಾಗಿ ನಾನು ಯಾವ ಧರ್ಮದಲ್ಲಿ ಬೆಳೆದು ಈಸ್ಥಿತಿಗೆ ಬಂದೆನೋ ಆ ಪವಿತ್ರ ಧರ್ಮತತ್ವವು ನನ್ನ ಮಾಂಸಖಂಡಗಳಲ್ಲೆಲ್ಲಾ ವ್ಯಾಪಿಸಿರುವದು. ನಾನು ಆ ಧರ್ಮವನ್ನು ಕೊನೆಯವರೆಗೂ ಅವಲಂಬಿಸಿ ನನ್ನ ಜನ್ಮವನ್ನು ಸಾರ್ಥಕಮಾಡಿಕೊಳ್ಳುವೆನು.

ಭೀಮಸಿಂಗನು ಜಾಕರಖಾನನನ್ನು ಪ್ರಶಂಸಿಸಿ; ಅವನನ್ನು ಕುರಿತು—“ನಿಮ್ಮ ಧರ್ಮಾಭಿಮಾನವು ಧನ್ಯವಾದದ್ದು! ನೀವು ಧನ್ಯರು ನಿಜವಾಗಿ ಸರ್ವ ಮುಸಲ್ಮಾನರೂ ತಮ್ಮಂತೆ ಧರ್ಮಾಭಿಮಾನಿಗಳಾಗಿಯೂ, ಸತ್ಯಾವಲಂಬಿಗಳಾಗಿಯೂ, ಇದ್ದಿದ್ದರೆ, ಹಿಂದೂಮುಸಲ್ಮಾನರಲ್ಲಿ ಎಂದಿಗೂ ಯುದ್ಧವಾಗುತ್ತಿರಲಿಲ್ಲ. ಆದರೆ, ಈಗ ಇದು ಅಶಕ್ಯವಾಗಿದೆ.” ಎಂದನು.

ಜಾಕರಖಾನ್ :—ಪರಮೇಶ್ವರನ ಇಷ್ಟಬಂದರೆ, ಹೀಗೂ ಆಗುವುದು. ಮತ್ತು ಹಿಂದೂ ಮುಸಲ್ಮಾನರು ಒಬ್ಬರಿಗೊಬ್ಬರು ಬಂಧುಗಳಾದಾರು. ಇಲ್ಲದಿದ್ದರೆ ಎಲ್ಲಿಯೂ ಹೀಗಾಗುತಿರಲಿಲ್ಲ. ಅಂತಹ ಕಾಲವೂ ಬರಬಹುದು. ಹಿಂದೂ ಮುಸಲ್ಮಾನರನ್ನು ಗೆದ್ದು ಮೂರನೆಯವರು ಪ್ರಬಲರಾದಾರು. ಹಿಂದೂ ಮುಸಲ್ಮಾನರು ಅವರ ಕಿಂಕರರಾಗುವರು. ಎಂದನು.

ಆಗ ಗುಲಾಬಸಿಂಗನು "ನೀವು ಹೇಳಿದುದು ಅಕ್ಷರಶಃ ಸತ್ಯವಾಗಿದೆ." ಎಂದು ಅವನ ಮಾತನ್ನು ಪುಷ್ಟೀಕರಿಸಿದನು.

ರಾಣಾ:—ಈಗ ಈ ಮಾತನ್ನು ಬಿಟ್ಟುಬಿಡಿ. ತಮ್ಮ ಪ್ರಸಂಗವಿಷಯದಲ್ಲಿ ವಿಚಾರಮಾಡಿ. ರಾತ್ರಿಯು ಸ್ವಲ್ಪವಿದೆ. ಕೆಲಸ ಬಹಳವಿದೆ ಜಾಕರ್‌ಖಾನ್! ಅಲ್ಲಾವುದೀನನ ಯುದ್ಧಪದ್ಧತಿ ಹೇಗಿದೆ?

ಭೀಮಸಿಂಗ:—ಈ ರಹಸ್ಯವನ್ನು ಮೊದಲು ತಿಳಿಯಬೇಕು. ಬಳಿಕ ಅದರಂತೆ ನಾವೂ ಯುದ್ಧಪದ್ಧತಿಯನ್ನು ಸ್ವೀಕರಿಸಬೇಕು.

ಗುಲಾಬಸಿಂಗ:—ಆದರೆ, ಮೇವಾಡದ ಕ್ಷತ್ರಿಯರು ಯುದ್ಧಮಧ್ಯದಲ್ಲಿ ಪ್ರಾಣ ಹೋದರೂ, ಅಧರ್ಮಾವಲಂಬನೆ ಮಾಡುವದಿಲ್ಲ.

ಜಾಕರಖಾನ್:—ಧರ್ಮಯುದ್ಧವೆಂದರೇನು? ಇದು ಅಲ್ಲಾವುದೀನನಿಗೆ ಕಲ್ಪನೆಯಲ್ಲಿಯೂ ಇಲ್ಲ. ಅವನ ಯುದ್ಧಪದ್ಧತಿಯು ಸದಾ ಕಪಟಪ್ರಪಂಚದಿಂದ ತುಂಬಿರುತ್ತದೆ. ಇದಕ್ಕಾಗಿ ಅವನೊಡನೆ ಯುದ್ಧಮಾಡುವಾಗ ಸದಾ ಜಾಗರೂಕರಾಗಿರಬೇಕು. ಯುದ್ಧಮಾಡುತ್ತಾ ಮಾಡುತ್ತಾ ಪರಾಭವಹೊಂದಿ ಸೈನ್ಯವು ಓಡುತ್ತಿರುವದೆಂದು ತೋರುವುದು. ಆಗ ನೀವು ಅಜಾಗರೂಕರಾಗಿ ಅವನ ಸೇನೆಗೆ ಬೆನ್ನು ಕೊಟ್ಟು ಹಿಂತಿರುಗಿದರೆ, ಅವನ ಸೇನೆಯು ಹಿಂತಿರುಗಿ ನಿಮ್ಮ ಮೇಲೆ ಬಿದ್ದೀತು. ಅವನಿಗೆ ಜಯವಾಗದಿದ್ದರೆ, ಮರೆಹೊಕ್ಕು ಹಗೆಯಿಂದ ಉದಾರತ್ವದ ಲಾಭಹೊಂದಲು ಸಹಾ ನಾಚುವದಿಲ್ಲ. ಆದರೆ, ಪುನಃ ಸಮಯ ಸಿಕ್ಕಿದರೆ, ವಚನಭಂಗ ಮಾಡುತ್ತಾ ನಿಮ್ಮ ಮೇಲೆ ಬೀಳಲು ತಿಲಮಾತ್ರವೂ ಹಿಂತೆಗೆಯನು. ಶತ್ರುವು ಕೈಗೆ ಸಿಕ್ಕಿದರೆ, ಔದಾರ್ಯದಿಂದ ಬಿಡುಗಡೆಮಾಡುವದು ಸ್ವಪ್ನದಲ್ಲೂ ಇಲ್ಲ. ಅಲ್ಲಾವುದೀನನ ಯುದ್ಧಪದ್ಧತಿಯು ಷಹಬುದೀನ್ ಘೋರಿಯ ಯುದ್ಧಪದ್ಧತಿಯಂತಿದೆ. ಪೃಥ್ವೀರಾಜ ಚವ್ಹಾಣನು ಘೋರಿಗೆ ಆರುಸಾರಿ ಹಲ್ಲಿನಿಂದ ಹುಲ್ಲು ತಿನ್ನಿಸಿದ್ದಾನೆ; ಮತ್ತು ಆರುಸಾರಿಯೂ ಮಹೌದಾರ್ಯದಿಂದ ಬಿಟ್ಟುಕೊಟ್ಟಿರುತ್ತಾನೆ. ಆದರೂ ಏಳನೇ ಸಾರಿ ಕೃತ್ರಿಮಿಯಾದ ಘೋರಿಯ ಕೈಯಲ್ಲಿ ಸಿಕ್ಕಿದನು. ಹಿಂದಿನ ಉಪಕಾರವನ್ನು ಲಕ್ಷಿಸದೆ, ಅವನನ್ನು ಕೊಲ್ಲಿಸಿದನು. ಅಲ್ಲಾವುದೀನನ ಸ್ವಭಾವವೂ ಇಂತಹುದೇ ಆಗಿದೆ. ಅವನಲ್ಲಿ ವಿಶ್ವಾಸವಿಡುವದು ಉಪಯೋಗವಿಲ್ಲ. ಅವನಂತಹ ವಿಶ್ವಾಸಘಾತಕಿಯು ಈ ಲೋಕದಲ್ಲಿ ಯಾರೂ ಇಲ್ಲ. ನಾನು ಇನ್ನೂ ಅಗತ್ಯವಾಗಿ ಹೇಳುವದೇನೆಂದರೆ:—ಈಗಿನಿಂದ ಯುದ್ಧಕ್ಕೆ ಸಿದ್ಧಮಾಡಿಕೊಳ್ಳಿ! ಸೇನೆಯನ್ನು ರಾತ್ರಿಯಲ್ಲಾಗಲಿ ಅಪರರಾತ್ರಿಯಲ್ಲಾಗಲಿ, ಸಿದ್ಧರಾಗಿರುವಂತೆ ಮಾಡಿರಿ. ಪ್ರತಿಯೊಬ್ಬ ಸೇನಾಪತಿಯ ಕೈಯಲ್ಲಿ ಬೇರೆಬೇರೆ ಸೇನೆಯನ್ನು ಕೊಟ್ಟು, ಬೇರೆಬೇರೆ ಸ್ಥಳದಲ್ಲಿ ನಿಲ್ಲಿಸಿರಿ. ಆಯಾಯ ಸ್ಥಳದ ಎಲ್ಲಾ ಅಧಿಕಾರವನ್ನೂ ಅವರಲ್ಲಿಯೇ ಇಡಿರಿ. ನನ್ನ ಈ ಸೂಚನೆಯು ತಮಗೆ ಯೋಗ್ಯ ಕಂಡರೆ, ಆ ರೀತಿ ನಡೆಸಿರಿ. ಆದರೆ, ನಾನು ಕೋಟೆಯ ಮಧ್ಯದಲ್ಲಿದ್ದು ತಮಗೆ ಸ್ವಲ್ಪ ಸಹಾಯಮಾಡಲು ಶಕ್ಯನಾದೇನು.

ರಾಣ:—ತಮ್ಮ ಮಾತಿನಲ್ಲಿ ನಮಗೆ ಪೂರ್ಣವಿಶ್ವಾಸವಿದೆ. ನೀವು ಹೇಳಿದಂತೆ ನಾವು ಪೂರ್ಣಜಾಗರೂಕರಾಗಿ ಕಾದುವೆವು. ನೀವು ಧಾರ್ಮಿಕ ಸದ್ಭಾವದಿಂದ ಪ್ರೇರಿತರಾಗಿ ಯುದ್ಧಭೂಮಿಗೆ ಬಾರದಿದ್ದರೂ, ಇಲ್ಲಿಯೇ ಇದ್ದು ಯಾವ ಉಪಾಯವನ್ನು ತೋರಿಸುವಿರೋ ಅದೇ ನಮಗೆ ಲಾಭವಾಗಿದೆ.

ಭೀಮಸಿಂಗ:—(ಕೃತಜ್ಞತೆಯಿಂದ) ನೀವು ಕೊಟ್ಟ ಸಲಹೆಗಾಗಿ ನಾವು ಬಹಳ ಕೃತಜ್ಞರಾಗಿರುತ್ತೇವೆ.

ಜಾಕರಖಾನ್‌ನನು "ಈ ಗುಲಾಬಸಿಂಗರು ನನಗೆ ಮಾಡಿದ ಉಪಕಾರದ ಮುಂದೆ ನನ್ನ ಕರ್ತೃತ್ವಕ್ಕೆ ಬೆಲೆಯಿಲ್ಲ. ಉಪಕಾರಸ್ಮರಣೆಯು ಈ ವೀರಪುರುಷರಿಗೆ ಮಾತ್ರವೇ ಸರಿ. ಎಲ್ಲಿಯುವರೆಗೆ ಕ್ಷತ್ರಿಯ ವೀರರ ಮಧ್ಯದಲ್ಲಿ ಇವರಂತಹ ಶೂರರೂ, ಸಾಹಸಿಗಳೂ, ರಾಜನಿಷ್ಠ ಪುರುಷರೂ, ಜೀವಿಸಿರುವರೋ ಅವರೆಗೆ ಕ್ಷತ್ರಿಯರಿಗೆ ಪರಾಭವವಾಗುವದು ಶಕ್ಯವಲ್ಲ." ಎಂದು ನಿರಭಿಮಾನದಿಂದ ಹೇಳಿದನು.

ಗುಲಾಬಸಿಂಗನು ಹೊರಗೆ ಹೋಗಿ, ರಾಯಚಂದನನ್ನೂ ಅವನೊಡನೆ ಇದ್ದ ರಾಜಪುತ್ರಸರದಾರನನ್ನೂ ಕರದುಕೊಂಡು ಬಂದು ಕುಳ್ಳಿರಿಸಿ; ತಾನೂ ಉಚಿತಾಸನದಲ್ಲಿ ಕುಳಿತನು.

ಆಗ ರಾಣನು ಅವನನ್ನು ಕುರಿತು—"ನೀವು ಯಾರು? ನಿಮಗೇನು ಬೇಕು!" ಎಂದು ಆ ಸರದಾರನನ್ನು ಕೇಳಿದನು. ಆಗ ಶೂರಸೇನನು, "ತಮ್ಮ ಪ್ರಜಾಜನಗಳ ಪೈಕಿ ನಾನೊಬ್ಬನು. ರಾಯಚಂದ್ರ ಸಾಹುಕಾರರಿಗೆ ನನ್ನ ಪರಿಚಯವಿದೆ. ಈ ರಾತ್ರಿಯಲ್ಲಿ ವಿಜಯನಗರದಿಂದ ಬರುತ್ತಿರುವಾಗ ಮಾರ್ಗದಲ್ಲಿ ಅಲ್ಲಾವುದ್ದೀನನ ಪಾಳಯವು ಕಾಣಿಸಿತು. ಅಲ್ಪತರವಾದ ದೇಶಸೇವೆಯನ್ನು ಮಾಡಬೇಕೆಂದೂಹಿಸಿ, ದೇಶಸೇವೆಯನ್ನು ಮಾಡಿದೆನು. ಮಹತ್ವಾದ ವರ್ತಮಾನವನ್ನು ತಂದಿದ್ದೇನೆ ಅದನ್ನು ತಮಗೆ ತಿಳಿಸಬೇಕೆಂದು ಈ ಕಡೆ ಬಂದೆನು." ಎಂದನು.

ರಾಣನು:—ಏನು? ನೀವು ದೇಶಕ್ಕೆ ಮಾಡಿದುದೇನು? ಮಜಭಾಪು! ತಮ್ಮಂತಹ ಸಾಹುಕಾರರ ಬಾಲಕರು ದೇಶಸೇವೆಗಾಗಿ ತಮ್ಮ ಪ್ರಾಣವನ್ನು ಲಕ್ಷಿಸದೆ, ಪ್ರಯತ್ನಿಸುವುದು ಈ ದೇಶದ ಸುಭಾಗ್ಯವೆನ್ನಬೇಕು. ವೀರನೇ! ನಿನ್ನ ಹೆಸರೇನು?

ತರುಣ:—ಈ ದಾಸನಿಗೆ ಶೂರಸೇನನೆನ್ನುತ್ತಾರೆ.

ರಾಣ:—ನಿಜವಾಗಿ ನೀವು ಹೆಸರಿಗೆ ತಕ್ಕಂತೆ ಶೂರರಾಗಿರಬಹುದು. ತಮ್ಮಲ್ಲಿ ನಿಜವಾದ ಕ್ಷತ್ರಿಯರ ತೇಜಸ್ಸು ಗೋಚರಿಸುತ್ತದೆ. ಒಳ್ಳೇದು! ಏನು ವರ್ತಮಾನ ತಂದಿರುವಿರಿ? ಹೇಳಿರಿ ನೋಡುವ!

ಶೂರಸೇನ:—ಮಹಾರಾಣರವರೇ! ಈ ಸಂಗತಿಯನ್ನು ತಿಳಿಯಲು ಎಷ್ಟು ಶ್ರಮವಾಯಿತೆಂದರೆ, ಪ್ರಾಣಕ್ಕೇ ಅಪಾಯ ಬಂದಿತ್ತು; ಆದರೆ, ಸುದೈವದಿಂದ ಸುರಕ್ಷಿತವಾಗಿ ತಪ್ಪಿಸಿಕೊಂಡೆನು. ನಾನು ತಂದ ವರ್ತಮಾನವೇನೆಂದರೆ:— ಈ ಸೂರ್ಯೋದಯವಾಗುವದಕ್ಕೆ ಮೊದಲೇ ಅಲ್ಲಾವುದೀನನು ನಿಮ್ಮ ದುರ್ಗವನ್ನು ಮುತ್ತುವನು. ಇದೇ ವರ್ತಮಾನವು."

ಭೀಮಸಿಂಗ:—ಏನು? ಇನ್ನೊಂದು ತಾಸಿನಲ್ಲೇ!

ಶೂರಸೇನ:—ಮಹಾರಾಣರೇ! ಇಷ್ಟರಲ್ಲೇ ಪಾಳಯವನ್ನು ಬಿಟ್ಟಿರಬಹುದು.

ಗುಲಾಬಸಿಂಗ:—ಆದರೆ, ಇದನ್ನು ನಂಬುವದು ಹೇಗೆ? ದೃಷ್ಟಾಂತವೇನು?

ಶೂರಸೇನ:—ನಾನು ರಾಜಪುತ್ರನಾಗಿ ಅಸತ್ಯವನ್ನು ಹೇಳಿ ಫಲವೇನು?

ಬಾಕರಖಾನ್:—ಗುಲಾಬಸಿಂಗರೇ! ಈ ತರುಣನು ತಂದಿರುವ ವೃತ್ತಾಂತವು ನಿಜವಾಗಿರಬೇಕು! ನಾನು ಹಿಂದೆ ತಮಗೆ ಅಲ್ಲಾವುದೀನನ ಯುದ್ಧಪದ್ಧತಿಯ ವಿಷಯದಲ್ಲಿ ಏನು ಹೇಳಿದೆನೋ ಅದಕ್ಕೆ ಇದೇ ಪ್ರತ್ಯಕ್ಷ ಪ್ರಮಾಣವು. ನಾನು ಅಲ್ಲಿರುವವರೆಗೆ ಈ ವೃತ್ತಾಂತವಿರಲಿಲ್ಲ. ಆದರೆ, ಇಷ್ಟರಲ್ಲೇ ಇದನ್ನು ನಿಶ್ಚೈಸಿರುವೆನು. ಶೂರಸೇನನೇ ಈ ವರ್ತಮಾನವನ್ನು ಯಾರು ಕೊಟ್ಟರು?

ಶೂರಸೇನ:—ನಾನು ಗೂಢಚಾರನಾಗಿದೇನೆಂದು ತಿಳಿದು ನನ್ನನ್ನು ಅಲಫ್ ಖಾನನು ಹಿಡಿದನು. ಅವನು ನನ್ನನ್ನು ವಿಚಾರಿಸುತ್ತಿರುವಾಗ ಖಾಜೇ ಸಾಹೇಬರು ಅವನಿದ್ದಲ್ಲಿಗೆ ಬಂದರು. ಅವರು ಅಲಫ್ ಖಾನನಿಗೆ ಸೂರ್ಯೋದಯಕ್ಕೆ ಪೂರ್ವವೇ ಹಲ್ಲಾ ಹತ್ತುವ ವಿಷಯದ ನಿಶ್ಚಯವನ್ನು ಹೇಳಿದರು. ಆಗ ನಾನು ಡೇರೆಯ ಹಿಂಭಾಗದಲ್ಲಿದ್ದು ಕೇಳಿದೆನು.

ರಾಣನು "ಈ ತರುಣನ ಮಾತಿನಲ್ಲಿ ನನಗೆ ವಿಶ್ವಾಸವಿದೆ. ಗುಲಾಬಸಿಂಗನೇ! ನೀನು ಸಿದ್ಧನಾಗು. ವರ್ತಮಾನ ನಿಜವಾಗಲಿ, ಸುಳ್ಳಾಗಿರಲಿ. ಜಾಗರೂಕರಾಗಿದ್ದರೆ, ಲಾಭವಾಗುವದು." ಎಂದಾಜ್ಞಾಪಿಸಿ ಬಳಿಕ ಶೂರಸೇನನನ್ನು ಕುರಿತು, "ಶತ್ರುವಿನ ದೆಸೆಯಿಂದ ತಪ್ಪಿಸಿಕೊಂಡು ಬಂದುದು ಹೇಗೆ?" ಎಂದು ಕೇಳಿದನು.

ಶೂರಸೇನ:—ಮಹಾರಾಜರೇ! ಅಲಫ್ ಖಾನನು ಖಾಜೇಸಾಹೇಬರೊಡನೆ ಮಾತಾಡುತ್ತಿರುವಾಗ ಸೇವಕರನ್ನು ವಂಚಿಸಿ ಬೇಗ ಓಡಿಬಂದೆ. ಬಳಿಕ ಅಲ್ಲಿ ಬಹಳ ಗದ್ದಲವಾಗಿದ್ದೀತು!

ರಾಣ:—ಭಾಪು! ಶೂರಸೇನ! ಈಗ ನೀನು ದೇಶಕ್ಕೆ ದೊಡ್ಡ ಕಾರ್ಯವನ್ನು ಮಾಡಿರುತ್ತಿ. ಇಷ್ಟು ಚಿಕ್ಕವಯಸ್ಸಿನಲ್ಲಿ ನೀನು ಮಾಡಿದ ಈ ಸಾಹಸವನ್ನು ನೋಡಿ ನನಗೆ ದೊಡ್ಡ ಕೌತುಕವಾಗಿದೆ. ನಿಮ್ಮ ತಂದೆಯ ಹೆಸರೇನು?

ಶೂರಸೇನನು ನೆಲವನ್ನು ನೋಡುತ್ತಾ "ಮಹಾರಾಣರೇ! ತಂದೆತಾಯಿಯಾರೆಂಬುದು ನನಗೆ ಸ್ವಲ್ಪವೂ ತಿಳಿಯದು. ವೃದ್ಧರಾಯಚಂದರಿಗೆ ಗೊತ್ತಿದೆ ಅವರು ಅದನ್ನು ಈವರೆಗೆ ಹೇಳಿಲ್ಲ" ಎಂದನು.

ರಾಣ:—ನಿಮಗಾ ವಿಷಯವು ತಿಳಿಯದಿದ್ದರೂ ತಮ್ಮ ಚಿಹ್ನೆಯಿಂದಲೇ ನಿಮ್ಮ ಕುಲದ ದೊಡ್ಡಸ್ತಿಕೆ ತೋರುವದು. ನೀವು ಒಂದು ಸೇನೆಯ ತುಕಡಿಯ ಅಧಿಕಾರವನ್ನು ಸ್ವೀಕರಿಸುವಿರಾ?

ಶೂರಸೇನ:—ಮಹದಾನಂದದಿಂದ; ಹಾಗಾದರೆ, ನಾನು ಭಾಗ್ಯವಂತನಾದೇನು.

ರಾಣ:—ಒಳ್ಳೆಯದು; ಗುಲಾಬಸಿಂಗನೇ! ಇವನನ್ನು ನಿನ್ನೊಡನೆ ಕರೆದುಕೊಂಡು ಹೋಗಿ; ಸೇನೆಯ ಒಂದು ಭಾಗದ ಅಧಿಕಾರವನ್ನು ಕೊಡು. ಇವನಂತಹ ತರುಣನು ರಾಜ್ಯಕ್ಕಾಧಾರಸ್ತಂಭವಾಗಿರುತ್ತಾನೆ. ದೇಶಕ್ಕೆ ಸುಸ್ಥಿತಿಯನ್ನು ತರಲೂ, ಪರರಾಜ್ಯದ ದೆಸೆಯಿಂದ ಪ್ರಿಯಕರವಾದ ಸ್ವದೇಶವನ್ನು ರಕ್ಷಿಸುವುದಕ್ಕೆ ಈ ವೀರನೇ ಮುಂದೆ ಬರಬೇಕು. ಗುಲಾಬಸಿಂಗನೇ! ನೀನು ಹೋಗುವಾಗ ಗೋರಾಸಿಂಹ ಮತ್ತು ಇತರ ಸಹಾಯಕಾರಿಗಳಾದ ರಾಜರಿಗೂ ತಮ್ಮ ತಮ್ಮ ಸೇನೆಯೊಡನೆ ಯುದ್ಧಕ್ಕೆ ಸಿದ್ಧರಾಗಿರುವಂತೆ ಹೇಳು.

ಬಳಿಕ ಸ್ವಲ್ಪ ಹೊತ್ತು ವಿಚಾರಮಾಡಿ ಭೀಮಸಿಂಗ ಗುಲಾಬಸಿಂಗರು ತಮ್ಮ ತಮ್ಮ ಸಿದ್ಧತೆಯನ್ನು ಮಾಡಿಕೊಂಡರು. ಎಲ್ಲಾ ಕಡೆಯಲ್ಲೂ ಕದನಕ್ಕೊದಗಿ ಸಿದ್ಧರಾಗಿರುವಂತೆ ಕಾಣಿಸಿತು. ಈ ರೀತಿಯಾಗಿ ಚಿತ್ತರದ ಚಿತ್ತೂರು ನಗರವು ಎತ್ತೆತ್ತಲೂ ಶತ್ರುಗಳ ಮೇಲೆ ಬೀಳಲು ಸಿದ್ಧವಾಯಿತು.

ಪ್ರಕರಣ 18.

ಧರ್ಮಾಭಿಮಾನ.

ಈ ದಿನ ಚಿತ್ತೂರು ದುರ್ಗದಲ್ಲಿ ಒಂದು ಮಹಾ ಪರ್ವಣಿಯಂತೆ ಉತ್ಸಾಹವು ತೋರುತ್ತಿತ್ತು. ಪ್ರತಿ ಮನೆಯಲ್ಲೂ ಸ್ತ್ರೀಯರು ತಮ್ಮ ಪತಿಪುತ್ರರನ್ನು ಕದನಕ್ಕೆ ಹೋಗುವ ಮೊದಲು ಮೃಷ್ಟಾನ್ನದಿಂದ ತೃಪ್ತಿಪಡಿಸುತ್ತಿದ್ದರು. ಲೋಹಕಾರರಲ್ಲಿ ಬಹು ಗದ್ದಲ ಉಂಟಾಗಿತ್ತು. ಪ್ರತಿಯೊಬ್ಬ ಯೋಧನೂ ತನ್ನ ಅಸ್ತ್ರಾದಿಗಳನ್ನು ಮಸೆದು ಇಡುತ್ತಿದ್ದನು. ಇಂತಹ ಕಾಲದಲ್ಲಿ ಒಂದು ಮನೆಯ ಕಿಟಕಿಯ ಹತ್ತಿರ ಇಬ್ಬರು ಚಿಕ್ಕ ಬಾಲಕರು ಈ ಹೊರಗಿನ ಗದ್ದಲಗಳನ್ನು ನೋಡುತ್ತಾ ಇದ್ದರು. ಅವರು ಇದನ್ನು ನೋಡಿ ಆಶ್ಚರ್ಯ ಹೊಂದಿದರು. ಈ ದಿನ ಏನೀಗದ್ದಲವೋ ತಿಳಿಯದೆ, ಅವರ ತಾಯಿಯು

ಹತ್ತಿರ ಹೋದರು. ಆಗ ಅವರ ತಾಯಿಯು ಮಹಾರಾಣಿಗೆ ವಿಜಯವಾಗ ಲೆಂದು ಒಡೆಯನಾದ ಮೃಡನನ್ನು ಬೇಡಿಕೊಳ್ಳುತ್ತಿದ್ದಳು. ಇಷ್ಟರಲ್ಲೇ ಆ ಬಾಲಕರಿಬ್ಬರೂ ಆಕೆಯ ಹತ್ತಿರ ಬಂದರು. ಇದನ್ನು ನೋಡಿ ಆನಂದಪಟ್ಟಳು. ಹಿರಿಯವನಾದ ಬಾಲಕನು ತನ್ನ ತಾಯಿಯ ಕುತ್ತಿಗೆಯನ್ನು ತಬ್ಬಿಕೊಂಡು “ ಅಮ್ಮಾ! ಈ ದಿನದ ಗಡಿಬಿಡಿಯೇನು? ಎಲ್ಲರೂ ತಮ್ಮ ತಮ್ಮ ಕತ್ತಿ, ಢಾಲು, ಪರಶು ಮುಂತಾದ ಆಯುಧಗಳನ್ನು ಮಸೆದಿಡುತ್ತಿರುವರು. ಇದೇಕೆ? ಅದು ತಿಳಿದಿದ್ದರೆ ಹೇಳುವಿಯಾ?” ಎಂದನು.

ತಾಯಿ :—ಬಾಲನೇ! ಯವನರು ನಮ್ಮ ದುರ್ಗವನ್ನು ಮುತ್ತುವವರಾಗಿ ದ್ದಾರೆ. ಅವರೊಡನೆ ಕಾದುವದಕ್ಕೆ ಎಲ್ಲವನ್ನೂ ಸಿದ್ಧಪಡಿಸಿಕೊಳ್ಳು ವರು. ಬಾಲರಿರಾ! ಸ್ವದೇಶದ ರಕ್ಷಣೆಗಾಗಿ ಈ ಕ್ಷಣದಲ್ಲಿ ಎಷ್ಟೋ ಜನರು ತನು, ಮನ ಧನಗಳನ್ನು ಕೊಟ್ಟು ತಮ್ಮ ಜನನಿಯರನ್ನು ಧನ್ಯರ ನ್ನಾಗಿ ಮಾಡುವರು.

ಎರಡನೆಯ ಬಾಲಕನು :—ಈ ಮುಸಲ್ಮಾನರಾರು?

ತಾಯಿ :—ಇವರು ನಮ್ಮ ವೈರಿಗಳು. ಧರ್ಮಯುದ್ಧವನ್ನೆಂದಿಗೂ ಮಾಡರು. ಕೃತ್ರಿಮ ಯುದ್ಧಮಾಡುವರು.

ಬಾಲಕ :—ಅಮ್ಮಾ! ಕದನದಲ್ಲಿ ಕಪಟವನ್ನು ಪ್ರಯೋಗಿಸುವರೇ?

ತಾಯಿ :—ಅಹುದು. ಆದರೆ, ನಮ್ಮಂತಹ ಕ್ಷತ್ರಿಯರಲ್ಲಿ ಎಂದಿಗೂ ಮೋಸ ವನ್ನೇ ಮಾಡುವರು.

ಬಾಲ :—ಅಮ್ಮಾ! ಕಪಟವೆಂದರೇನು? ಆ ಜನರು ಕ್ಷತ್ರಿಯರಾದ ನಮಗೆ ಮಿಠಾಯಿ ಮುಂತಾದ ತಿಂಡಿಯನ್ನು ಕೊಟ್ಟು ವಶಮಾಡಿಕೊಂಡು ಜಯಿ ಸುವದೇ ಕಪಟವೋ? ಆದರೆ, ನಾವು ಅಂತಹ ಸಾದುಸ್ವಭಾವಸ್ಥರಲ್ಲ. ಇಲ್ಲಿ ಎಷ್ಟೋ ಮಿಠಾಯಿ ಅಂಗಡಿಗಳಿರುವವು; ಅವರಿಗೇನು ಗೊತ್ತು?

ತಾಯಿ :—(ನಕ್ಕು) ಬಾಲರೇ! ಅವರು ಮಠಾಯಿಯನ್ನು ಕೊಟ್ಟು ವಶಮಾಡಿ ಕೊಳ್ಳುವುದಿಲ್ಲ. ಆದರೆ, ಬಾಯಿಯಲ್ಲಿ ಸವಿಮಾತನಾಡಿ ಸಮಯಸಿಕ್ಕಿ ದರೆ, ಕುತ್ತಿಗೆಯನ್ನು ತತ್ತರಪಡದೆ ಕತ್ತರಿಸುವರು.

ಬಾಲಕ :—ಅಮ್ಮಾ! ಅವರು ಕೃತ್ರಿಮ ತೋರಿಸಿದರೆ, ತೊಂದರೆಯೇನು? ಕ್ಷತ್ರಿ ಯರಾದ ನಾವು ಮೋಸಹೋಗುವೆವೇ? ಒಳ್ಳೆಯ ಮಾತಾಡಿದೆ.

ತಾಯಿ :—ಬಾಲಕರೇ! ರಾಜಕಾರ್ಯ ರಹಸ್ಯವು ನಿಮಗೆ ತಿಳಿಯದು ಕ್ಷತ್ರಿ ಯರಂತೆ ಇತರ ವರ್ಣದವರು ಧರ್ಮಾವಲಂಬಿಗಳಲ್ಲ. ನೀವು ಕ್ಷತ್ರಿಯರ ಅಂಕುರವಾಗಿದ್ದೀರಿ. ನಿಮಗಿದು ಹೇಗೆ ತಿಳಿದೀತು? ಯವನರ ರಾಜ ಕಾರ್ಯಕ್ಕೆ (ಮೋಸಕ್ಕೆ) ಗಡಿಯೇ ಇಲ್ಲ. ನಿಮಗೆ ಅದನ್ನು ಹೇಳಿದರೆ, ತಿಳಿಯುವುದಿಲ್ಲ. ನೀವು ಆಟವಾಡಿ; ನಡೆಯಿರಿ.

ಬಾಲಕ:—ಅಮ್ಮಾ! ಇಲ್ಲ. ನಮ್ಮ ಉತ್ಸಾಹವನ್ನು ಭಂಗಮಾಡಬೇಡ. ನಾವೂ ವೀರಬಾಲರು. ಶ್ರೀ ರಾಮನು ರಾವಣಾದಿಗಳನ್ನು ಹೇಗೆ ಕೊಂದನೋ, ಹಾಗೆಯೇ, ನಾವೂ ಯವನರನ್ನು ಸಂಹರಿಸುವೆವು.

ತಾಯಿ:—ಬಾಲರೇ! ಈಗ ನಿಮ್ಮ ವಯಸ್ಸು ಚಿಕ್ಕದು; ಅದರಿಂದ ಕದನಕ್ಕೆ ನೀವು ಹೋಗಲಾರಿರಿ. ನೀವು ಈ ವಿಷಯದಲ್ಲಿ ಮನಸ್ಸಿಡದಿರಿ. ಆಡಿರಿ; ತಿನ್ನಿರಿ; ಕುಡಿಯಿರಿ. ಯುದ್ಧ ವಿದ್ಯೆಯನ್ನು ಕಲಿಯಿರಿ. ನಿಮ್ಮ ಕರ್ತವ್ಯವಿಷ್ಟೆ!

ಬಾಲರು:—ಅಮ್ಮಾ! ಇಲ್ಲ. ನಾವು ತಂದೆಯೊಡನೆ ಯುದ್ಧಕ್ಕೆ ಹೋಗತಕ್ಕವರು. ನಾವು ಕ್ಷತ್ರಿಯರಲ್ಲವೇ? ಚಿಕ್ಕವರಾದರೇನು? ಮೇವಾಡದಲ್ಲಿ ಜನಿಸಿಲ್ಲವೇ? ಮೇವಾಡದಲ್ಲಿ ಜನಿಸಿದವರಿಗೆ ಭಯವೆಲ್ಲಿ? ಅಮ್ಮಾ! ಹೇಗಾದರೂ ಮಾಡು ತಂದೆಯೊಡನೆ ನಮ್ಮನ್ನು ಕದನಕ್ಕೆ ಕಳುಹಿಸಲೇಬೇಕು. ಆದರೆ, ನಾವು ಹೇಗೆ ಯುದ್ಧಮಾಡುವೆವೋ ನೀನದನ್ನು ನೋಡುವಿ!

ಈ ಮಾತನ್ನು ಕೇಳಿ ಆ ವೀರಮಾತೆಯು ನೇತ್ರದಿಂದ ಆನಂದಾಶ್ರುವು ಸುರಿಯುತ್ತಿತ್ತು. ಹರ್ಷಾತಿರೇಕದಿಂದ ಆಕೆಯ ಕಂಠದಿಂದ ಮಾತು ಹೊರಡಲಿಲ್ಲ. ಅವಳು ಪುತ್ರರಿಗೆ ಧನ್ಯವಾದವನಾಡಿ, "ಬಾಲರೇ! ನಿಮ್ಮ ಈ ಮಾತನ್ನು ಕೇಳಿ ಧನ್ಯಳಾದೆನು. ನನ್ನುದರದಲ್ಲಿ ನಿಮ್ಮಂತಹ ವೀರರತ್ನಗಳು ಜನಿಸಿದುದು ಮಹಾಭಾಗ್ಯವೆಂದೂಹಿಸುವೆನು. ಬಾಲರೇ, ಸ್ವದೇಶಹಿತಕ್ಕಾಗಿ ನೀವು ಪ್ರಾಣವನ್ನೂ ಲಕ್ಷಿಸದಿರಿ. ಎಂದು ಇಷ್ಟೇ ನಾನು ಹೇಳುವುದು. ಸದಾ ಧರ್ಮದಿಂದ ಕಾದಿರಿ. ವೈರಿಯು ಮರೆಹೊಕ್ಕರೆ ಜೀವದಾನ ಕೊಡಿ. ವೈರಿಗಳ ನಾರಿಯರೂ ಪುತ್ರರೂ ಸಿಕ್ಕಿದರೆ, ದುಃಖಪಡಿಸದೆ ಪ್ರೀತಿಯಿಂದ ಸನ್ಮಾನಿಸಬೇಕು. ಯುದ್ಧದಲ್ಲಿ ಹಿಮ್ಮೆಟ್ಟದಿರಿ. ಬಾಲರೇ! ನಿಮ್ಮಂಗದಲ್ಲಿ ಕ್ಷಾತ್ರಿಯ ರಕ್ತವು ಹರಿಯುತ್ತಿರುವದು ಇದನ್ನು ಮರೆಯದಿರುವುದು ಮುಖ್ಯವು. ನಿಮ್ಮ ಕುಲಕ್ಕೆ ಕಲಂಕವನ್ನುಂಟುಮಾಡುವ ಕೃತ್ಯಗಳನ್ನು ಮಾಡಬೇಡಿರಿ. ನನ್ನ ಈ ಉಪದೇಶದಂತೆ ನಡೆದರೆ, ನಿಮಗೆ ಇಹಪರಗಳಲ್ಲಿ ಕೀರ್ತಿಯುಂಟಾದೀತು." ಎಂದಳು.

ರಾಜಪುಟಾನದಲ್ಲಿ ಬಾಲಕರಿಗೆ ಐದು ವರ್ಷವಾಗಲು ಅವರಿಗೆ ಢಾಲು ಕತ್ತಿ ಮುಂತಾದ ಆಯುಧಗಳನ್ನು ಕೊಡುತ್ತಿದ್ದರು; ಮತ್ತು ಯುದ್ಧೋಪಯೋಗದ ಶಿಕ್ಷಣವನ್ನು ಆರಂಭಿಸುತ್ತಿದ್ದರು. ಈ ಬಾಲರು ಈ ಸಮಯದಲ್ಲಿ ಸುಮಾರು ಹತ್ತು ಹನ್ನೆರಡು ವರ್ಷ ವಯಸ್ಸುಳ್ಳವರಾಗಿದ್ದರು. ಇಷ್ಟರಲ್ಲೇ ಯುದ್ಧ ವಿದ್ಯಾಶಿಕ್ಷೆಯನ್ನುಂಟಾಗಿದ್ದರು. ತಾಯಿಯಾಜ್ಞೆಯೊಡನೆಯೇ ಢಾಲು, ಕತ್ತಿ ಮುಂತಾದ ಆಯುಧಗಳನ್ನು ಧರಿಸಿ ರಣಾಂಗಣಕ್ಕೆ ಹೋಗಲು ಸಿದ್ಧರಾದರು. ಇಷ್ಟರಲ್ಲೇ ಅವರ ತಂದೆಯು ಹೊರಗಿನಿಂದ ಬಂದನು. ಅವನು ಬಾಲರ ಸಿದ್ಧ

ತೆಯನ್ನು ನೋಡಿ, “ ಈಗ ಈ ಬಾಲಕರು ಏನು ಯೋಚಿಸಿರುವರು ? ” ಎಂದು ತನ್ನ ಕಾಂತೆಯನ್ನು ಕೇಳಿದನು.

ಪತ್ನಿ :—ಏನೋ, ಅವರನ್ನೇ ವಿಚಾರಿಸಿರಿ !

ತಂದೆ :—ಬಾಲರೇ ! ಈಗ ಶಸ್ತ್ರಾಸ್ತ್ರಧಾರಿಗಳಾದ ನೀವು ಯಾವ ಆಟಕ್ಕೆ ಹೋಗುವ ವಿಚಾರಮಾಡಿದ್ದೀರಿ ?

ತಂದೆಯ ಮಾತನ್ನು ಕೇಳಿ ಜ್ಯೇಷ್ಠಪುತ್ರನಾದ ವಿನಯನು “ ಅಪ್ಪಾ ! ಈಗ ನಾವು ತಮ್ಮೊಡನೆ ಯವನರ ಸಂಗಡ ಕದನಮಾಡುವದಕ್ಕೆ ಬರುವವರಾಗಿದ್ದೇವೆ. ಅಪ್ಪಾ ! ನಮಗೆಷ್ಟೋ ಆನಂದವಾಗಿದೆ. ನಾವು ನಮ್ಮ ಕತ್ತಿಯಿಂದ ದುಷ್ಟರ ತಲೆಗಳನ್ನು ತತ್ತರಿಸದೆ ಕತ್ತರಿಸುವೆವು. ಕ್ಷತ್ರಿಯ ವೀರರನ್ನು ಜಯಿಸಲು ಸಮರ್ಥರು ಯಾರೂ ಇಲ್ಲವೆಂಬುದನ್ನು ದೃಷ್ಟಾಂತಪಡಿಸುವೆವು. ಅಪ್ಪಾ ! ನೀವೇ ಹೇಳಿರಿ ! ಕ್ಷತ್ರಿಯ ವೀರರಂತೆ ಆ ಮನುಷ್ಯರು ಶ್ರೇಷ್ಠಕುಲೋತ್ಪನ್ನರೇ? ರಣಭೂಮಿಯನ್ನು ವಿಹಾರಭೂಮಿಯೆಂದು ತಿಳಿಯುವ ನಮ್ಮೊಡನೆ ಯಾರು ಕಾದುವರು ? ಯವನರು ಕಪಟಪ್ರಪಂಚದಲ್ಲಿ ಪ್ರವೀಣರೆಂದು ನಮ್ಮ ತಾಯಿಯು ಹೇಳಿದಳು. ಇರಲಿ ! ಅವರ ಹೆಚ್ಚಿಗೆಯೇನು ? ಈಗ ನೀವು ನಮ್ಮನ್ನು ನಿಮ್ಮೊಡನೆ ಕರೆದುಕೊಂಡು ಹೋಗಿ. ನಾವು ಚಿಕ್ಕವರಾದರೂ ಸಿಂಹಶಾಬರಲ್ಲವೇ ? ಪ್ರಾಣಹೋದರೂ ಹಿಮ್ಮೆಟ್ಟುವವರಲ್ಲ. ರಾಜ್ಯವೇಹೋಗಲಿ ! ದೇಹವೇಹೋಗಲಿ ! ಪ್ರಾಣವೇಹೋಗಲಿ ! ಆದರೆ ನಾವು ಯವನರ ದಾಸ್ಯವನ್ನೊಪ್ಪುವದಿಲ್ಲ. ಅಪ್ಪಾ ! ಈಗ ನಡಿ.” ಎಂದನು.

ತಂದೆ :—ನನ್ನ ಕುಲದೀಪಕರಾದ ವತ್ಸರೇ ! ಶಾಂತರಾಗಿರಿ. ಧೈರ್ಯಹೊಂದಿರಿ. ನಾನು ನಿಮ್ಮಿಚ್ಛೆಯನ್ನು ಪೂರ್ಣಮಾಡುವೆನು. ನಿಮ್ಮನ್ನು ಯುದ್ಧಭೂಮಿಗೊಯ್ಯುವೆನು.

ಸ್ತ್ರೀ :—ಆದರೆ ಇಷ್ಟು ವಯಸ್ಸಿನಲ್ಲಿ ದೇಹದಲ್ಲಿಷ್ಟು ಶೌರ್ಯವೆಲ್ಲಿಂದಬಂತು ? ಇದನ್ನು ವಿಚಾರಮಾಡಿರಿ.

ಬಾಲಕರು :—ಅಮ್ಮಾ, ಇದೇನು ? ನೀನು ನಮಗೆ ನಿತ್ಯವೂ ವೀರರ ಕಥೆಯನ್ನು ಹೇಳುತ್ತಿರಲಿಲ್ಲವೇ ? ಅಂತಹ ಪರಾಕ್ರಮವನ್ನು ತೋರಿಸಿ ಕ್ಷತ್ರಿಯ ಧರ್ಮವನ್ನು ಅವಲಂಬಿಸಿರೆಂದು ನೀವು ನಿಮಗೆ ಹೇಳುತಿರಲಿಲ್ಲವೇ ? ಆದರೆ, ಈಗ ಹೀಗೇಕೆ ವಿಚಾರಿಸುತ್ತಿಯೇ ? ನಮಗೆ ಗುರು ನೀನೆ ! ನೀನೆ ನಮ್ಮ ದೇವತೆ ! ನೀನೇ ಮಾರ್ಗದರ್ಶಕಳು “ ಭಾಪು ಬಾಲರೇ ! ಭಾಪು ! ಈಗ ನೀವು ನಿಮ್ಮ ಕುಲಕ್ಕೆ ಭೂಷಣರಾಗಿರುವಿರಿ ! ನಿಮ್ಮಂತಹ ಪುತ್ರರು ಯಾರಿಗೆ ಲಭಿಸುವರೋ ಅವರ ತಾಯಿತಂದೆಗಳೇ ಧನ್ಯರು ! ಒಳ್ಳೇದು ಈಗ ನಗಾರಿಯನ್ನು ಹೊಡೆಯುವ ವರೆಗೆ ನೀವು ಆಡಿರಿ.” ಎಂದು ತಂದೆಯು ಹೇಳಿದನು. ಇದನ್ನು ಕೇಳಿ ಬಾಲಕರು ಆಟಕ್ಕೆ ಹೊರಟುಹೋದರು.

ವೀರಮಾತೆ ಮತ್ತು ವೀರಬಾಲಕ

ಪ್ರಕರಣ 19.

ಸುಲ್ತಾನ್ ಅಲ್ಲಾವುದೀನನು ನಿತ್ಯದಂತೆ ಕೃತ್ರಿಮಪರನಾಗಿ ಚಿತ್ತೂರನ್ನು ಹಲ್ಲಾಹತ್ತಲು ಸಿದ್ಧನಾಗುತ್ತಿದ್ದನು. ಈ ವೃತ್ತಾಂತವನ್ನು ಶೂರಸೇನನು ಸಕಾಲದಲ್ಲಿ ರಾಣನಿಗೆ ಸೂಚಿಸಿಯೇ ಇದ್ದನು. ಇದರಿಂದ ರಾಣನೂ ಯುದ್ಧಕ್ಕೆ ಸಿದ್ಧನಾಗಲು ವಿಳಂಬವಾಗಲಿಲ್ಲ. ರಾತ್ರಿಯಲ್ಲೇ ಸಾಮಂತರಾಜರಿಗೆಲ್ಲಾ ಯುದ್ಧಕ್ಕೆ ಸಿದ್ಧರಾಗಬೇಕೆಂದು ನಿರೂಪ ಕೊಟ್ಟಿದ್ದನು. ಗೂಢಚರರು ಸುಲ್ತಾನನು ಚಿತ್ತೂರುಕಡೆಗೆ ಬರುವದಕ್ಕಾಗಿ ಸೇನೆಯೊಡನೆ ಪಾಳಯವನ್ನು ಬಿಟ್ಟ ವರ್ತಮಾನವನ್ನು ಹೇಳುವುದಕ್ಕಾಗಿ ಓಡಿಬಂದು ಮಹಾರಾಣನಿಗೆ ಹೇಳಿದರು. ರಾಣನು ಸಾಮಂತರಾಜರೆಲ್ಲರಿಗೂ ರಣಭೂಮಿಯಲ್ಲಿ ಸಿದ್ಧರಾಗಲು ಆಜ್ಞಾಪಿಸಿದನು. ಅದರಂತೆ ನಿಮಿಷಾರ್ಧದಲ್ಲಿ ಸೈನ್ಯವೆಲ್ಲವೂ ಸಿದ್ಧವಾಯಿತು. ಮಹಾರಾಣನಾದ ಲಕ್ಷ್ಮಣಸಿಂಹನೂ ಭೀಮಸಿಂಗನೂ ಸರ್ವ ಸೈನ್ಯದೊಡನೆ ಹೊರಟರು. ಮೊದಲು ದೇವಿಯಮಂದಿರಕ್ಕೆ ಹೋಗಿ ದೇವಿಯನ್ನು ಅನನ್ಯಭಾವದಿಂದ ವಂದಿಸಿ ಪೂಜಿಸಿದರು. ಪೂಜೆಯಾದಮೇಲೆ ಮಹಾರಾಣನು ದೇವಿಯ ಎದುರಿನಲ್ಲಿ ತನ್ನ ಕಠಾರಿಯನ್ನು ಹಿರಿದು ದೇವಿಯನ್ನು ವಂದಿಸಿ ಭಕ್ತಿಭಾವದಿಂದ “ಜಯದೇವಿ! ಅಂಬೆ! ಈವರೆಗೆ ಮೇವಾಡದ ರಾಣನು ತನ್ನ ಧರ್ಮಕರ್ಮ ಪ್ರಜಾಪಾಲನಾದಿ ಕರ್ತವ್ಯಗಳಲ್ಲಿ ಸತ್ಯಾವಲಂಬನದಿಂದ ಇದ್ದಿದ್ದರೆ, ಈ ದಿನ ಯುದ್ಧದಲ್ಲಿ ನೀನು ನಮ್ಮ ಕಂಠದಲ್ಲಿ ವಿಜಯಮಾಲೆಯನ್ನು ಹಾಕು! ಎಂದು ನಿನ್ನ ಪಾದದಲ್ಲಿ ಕರದ್ವಯವನ್ನು ಜೋಡಿಸಿ ವಿಜ್ಞಾಪಿಸಿಕೊಳ್ಳುವೆನು. ಮಾತೆ! ಮಹಾಕಾಳಿ! ಮಹಿಷಾಸುರಮರ್ದಿನಿ! ಸಮರಾಂಗಣದಲ್ಲಿ ನೀನು ಶತ್ರುಶೋಣಿತವನ್ನು ಯಥೇಚ್ಛವಾಗಿ ಪಾನಮಾಡು. ನೀನು ನಮ್ಮ ಕಾಳಿ! ಚಂಡಿಕೆ! ಚಾಮುಂಡಿ! ಮಹಿಷಾಸುರಮರ್ದಿನಿ ಎಂಬ ನಿನ್ನ ಹೆಸರನ್ನು ಸಾರ್ಥಕ್ಯಮಾಡಿ ನಿನ್ನ ಬಾಲಕನ ಉತ್ಸಾಹವನ್ನು ವೃದ್ಧಿಮಾಡು! ಹೇ, ಜಗಜ್ಜನನಿ! ಯೋಗಮಾಯೆ! ನಿನ್ನ ಬಲದಿಂದಲೇ ಈಗ ನಾವು ಒಬ್ಬ ಪ್ರಬಲ ಶತ್ರುವಿನೊಡನೆ ಸಮರ ಕ್ಷೇತ್ರದಲ್ಲಿ ಹೋರಾಡಬೇಕೆಂದು ಸಾಹಸಮಾಡಿದ್ದೇವೆ. ಶತ್ರುವು ಬಲವಂತನಾಗಿದ್ದಾನೆ. ಆದರೆ, ಅಧರ್ಮಾವಲಂಬಿಯಾಗಿದ್ದಾನೆ. ಆದ್ದರಿಂದ ಅಧರ್ಮನಾಶಮಾಡಿ, ಧರ್ಮವನ್ನು ಸ್ಥಾಪಿಸುವಿಯೆಂದು ನಮಗೆ ದೃಢವಾದ ಆಶೆಯಿದೆ! ನೀನು ಸ್ವತಂತ್ರ ದೇವತೆಯಾಗಿದ್ದಿ! ರಾಜಪುತ್ರರನ್ನು ರಕ್ಷಿಸುವವಳಾಗಿದ್ದಿ! ಸತ್ವ ಮತ್ತು ಶಕ್ತಿಗಳನ್ನು ಕೊಡು. ನಮ್ಮ ಧರ್ಮಕರ್ಮ ಪ್ರಾಣಗಳು ನೀನೇ ಆಗಿದ್ದಿ!” ಎಂದು ಭೀಮಸಿಂಗನು ಪ್ರಾರ್ಥಿಸಿದನು.' ದೇವಿಯ ಅರ್ಚಕನು ಮಹಾರಾಣಾ ಲಕ್ಷ್ಮ

ಣಸಿಂಹ ಭೀಮಸಿಂಗರ ಕಠಾರಿಗಳಿಗೆ ರಕ್ತಚಂದನವನ್ನು ಲೇಪಿಸಿ ಆಶೀರ್ವದಿಸಿ ಕೊಟ್ಟನು. ದೇವಿಯ ಪೂಜಾದಿಗಳು ತೃಪ್ತಿಕರವಾಗಿ ನಡೆದವು. ವೀರರೆಲ್ಲರೂ ಯುದ್ಧಕ್ಕೆ ಹೊರಟರು. ಸೈನಿಕರೆಲ್ಲರೂ ದೇವಿಗೆ ವಂದಿಸಿದರು. ಎಲ್ಲರ ಮುಖವೂ ಪ್ರಫುಲ್ಲವಾಗಿತ್ತು! ಶ್ರೀದೇವಿಯ ದರ್ಶನಮಾಡಿ, "ಜಯ ಜಗದಂಬೆ" ಎಂದು ಶೌರ್ಯೋತ್ಪಾದಕವಾದ ಘರ್ಜನೆಮಾಡಿದರು. ಮಹಾರಾಣಾ ಲಕ್ಷ್ಮಣಸಿಂಗನು ರಣಭೂಮಿಗೆ ಹೊರಡಲು ಸಿದ್ಧನಾಗಿರುವದನ್ನು ನೋಡಿ; ಭೀಮಸಿಂಗನು—"ಮಹಾರಾಣರೇ! ಸ್ವತಃ ಯುದ್ಧಕ್ಕೆ ಹೊರಡುವಿರಾ?" ಎಂದು ಕೇಳಿದನು.

ರಾಣ:—ಇದನ್ನು ಕೇಳ ಬೇಡಿರಿ. ನಾನು ಕ್ಷತ್ರಿಯನಲ್ಲವೇ? ಯುದ್ಧಭೂಮಿಗೆ ಉತ್ಸಾಹದಿಂದ ಪ್ರಯಾಣಮಾಡುವುದು ಕ್ಷತ್ರಿಯ ಧರ್ಮವಲ್ಲವೇ? ಆದರೆ ವಿಚಾರಿಸುವದೇನು? ಕ್ಷತ್ರಿಯ ಧರ್ಮಾನುಸಾರ ನಡೆವುದು ನನ್ನ ಧರ್ಮವು.

ಭೀಮಸಿಂಗನು:—"ನೀವು ಹೇಳುವುದು ಅಕ್ಷರಶಃ ನಿಜ. ನಿಮ್ಮಂಗದಲ್ಲಿ ಶುದ್ಧವಾದ ಕ್ಷತ್ರಿಯ ರಕ್ತವು ಆಡುತ್ತಿರುವದೆಂದು ತಮ್ಮ ವಿಚಾರವು ಹೀಗಿರುವದು ಸ್ವಭಾವಿಕವಾದದ್ದು. ಆದರೆ ನನ್ನ ನಮ್ರವಾದ ವಿನಂತಿಯೊಂದಿದೆ. ಏನೆಂದರೆ:—ನೀವು ಈಗ ಯುದ್ಧಕ್ಕೆ ಹೊರಡದಿದ್ದರೆ ಒಳ್ಳೆಯದು." (ಎಂದು ಮನೋಭಿಪ್ರಾಯವನ್ನು ಹೇಳಿದನು.)

ರಾಣ:—(ವಿಸ್ಮಯದಿಂದ) ಕಾರಣವೇನು?

ಭೀಮಸಿಂಹ:—ಕಾರಣವಿದೆ, ನೀವು ದುರ್ಗ ಮಧ್ಯದಲ್ಲಿದ್ದರೆ, ಸೈನಿಕರೂ ಸಾಮಂತರಾಜರೂ, ಸ್ಥಿರವಾದ ಉಲ್ಲಾಸವುಳ್ಳವರಾಗಿ ತಮ್ಮ ಭೀತಿಯಿಂದ ಪ್ರಾಣವನ್ನು ಲಕ್ಷಿಸದೆ ಕಾದುವರು. ಆದ್ದರಿಂದ ನೀನು ಯುದ್ಧಭೂಮಿಗೆ ಹೋಗಬಾರದು. ಎಂದು ಈಶ್ವರ ಸಂಕಲ್ಪವಾಗಿದೆ. ಆದರೆ ಆಕಸ್ಮಾತ್ತಾಗಿ ವಿಪರೀತವಾದ ಪರಿಣಾಮ ಉಂಟಾದರೆ, ಹಗೆಗಳಿಗೆ ಜಯವಾದೀತು. ನೀವು ದುರ್ಗ ಮಧ್ಯದಲ್ಲಿದ್ದರೆ ನಮಗೆ ಕಾಲಕ್ಕೆ ಅಪೇಕ್ಷಿಸಿದ ಸಹಾಯಮಾಡಬಹುದು. ಇದೆಲ್ಲವನ್ನೂ ಲಕ್ಷ್ಯವಿಟ್ಟು ನಾನು ನಿಮಗೆ ವಿನಂತಿ ಗೈಯುವೆನು. ನಿಮಗೆ ಇಂತಹ ಸೇವಕನು ಜೀವಂತನಾಗಿರುವಾಗ ರಣರಂಗಕ್ಕೆ ನೀವು ಹೋಗುವದು ಸ್ವಲ್ಪವೂ ಯೋಗ್ಯವಲ್ಲ.

ರಾಣ:—ಹೀಗೆ ಮಾಡಿದರೆ, ನನ್ನನ್ನು ಜನರು ರಣಭೀರುವೆಂದಾರು! ರಾಜಪುತ್ರ ಸ್ತ್ರೀಯರು ನನ್ನ ಮಾತೆಯನ್ನು ನಿಂದಿಸ್ಯಾರು!

ಭೀಮಸಿಂಹ:—ಯಾರೂ ನಿಮ್ಮನ್ನು ರಣಭೀರುವೆನ್ನಲಾರರು; ಯಾರಾದರೂ ಹೇಳಿದರೆ, ಅದರಿಂದ ತೊಂದರೆಯಿಲ್ಲ. ಗೂಗೆಯು ಗಗನಮಣಿಯನ್ನು ನಿಂದಿಸುವುದೆಂದು ಆ ಸೂರ್ಯನು ಪ್ರಕಾಶಕಾರಿಯಾಗಲು

ಹೆದರುವನೇ? ನಿಂದಿಸುವುದು ಮಂದಮತಿಗಳಾದ ನರರ ಸ್ವಭಾವವು ರಾಮಚಂದ್ರನಂತಹ ಸದ್ಗುಣಿಯನ್ನೂ, ಸೀತೆಯಂತಹ ಪತಿವ್ರತೆಯನ್ನೂ ಜನರು ನಿಂದಿಸುವದಕ್ಕೆ ಹಿಂದು ಮುಂದು ನೋಡಲಿಲ್ಲ. ಹೀಗಿರುವಲ್ಲಿ ನಮ್ಮದೇನು? ಜನರು ವಂದಿಸಲಿ, ಅಥವಾ ನಿಂದಿಸಲಿ, ಆ ಕಡೆಗೆ ಲಕ್ಷ್ಯಕೊಡದಿರುವುದು ಉತ್ತಮ. ನನ್ನ ಮಾತನ್ನು ಮನ್ನಿಸಿ, ದಯೆಯಿಟ್ಟು ದುರ್ಗದೊಳಕ್ಕೆ ನಡೆಯಿರಿ.

ಭೀಮಸಿಂಗನ ಮಾತನ್ನು ಕೇಳಿ ರಾಣನಿಗೆ ದುಃಖವಾಯಿತು. ಆದರೆ ಇಚ್ಛೆ ಇಲ್ಲದಿದ್ದರೂ ಅವನ ವಿನಂತಿಯನ್ನು ಸ್ವೀಕರಿಸಿ; "ನಿಮ್ಮ ಪ್ರಣೆಯಂತೆ ದುರ್ಗದೊಳಕ್ಕೆ ಹೋಗುತ್ತೇನೆ ಆದರೆ, ದೂತಮುಖದಿಂದ ಯುದ್ಧ ವೃತ್ತಾಂತವನ್ನು ದಿನಕ್ಕೆ ಎರಡುಸಾರಿ ತಿಳಿಸದಿರಬೇಡಿರಿ. ಈ ವ್ಯವಸ್ಥೆಮಾಡಿದರೆ, ಉಪಕಾರವಾದೀತು!" ಎಂದನು. ಭೀಮಸಿಂಹನು ಹಾಗಿಯೇ ಆಗಲೆಂದೊಪ್ಪಿದನು. ಮಹಾರಾಣನು ಅಂಗರಕ್ಷಕರೊಡನೆ ಕಿಲ್ಲೆಯನ್ನು ಹೊಕ್ಕನು. ಭೀಮಸಿಂಹನು ಯುದ್ಧರಂಗಕ್ಕೆ ಹೋದನು. ಸೈನಿಕರೆಲ್ಲರೂ ಯುದ್ಧಕ್ಕೆ ಸಿದ್ಧರಾದರು. ಭಲ್ಲೆ ಕಠಾರಿ, ಗದೆ ಮುಂತಾದವುಗಳಮೇಲೆ ಸೂರ್ಯ ಕಿರಣಗಳು ಬಿದ್ದು ಹೊಳೆಯುತ್ತಿದ್ದವು. ಸೈನಿಕರು "ಮಹಾರಾಣಾ ಲಕ್ಷ್ಮಣಸಿಂಗರಿಗೆ ವಿಜಯವಾಗಲಿ! ಭೀಮಸಿಂಗರಿಗೆ ಜಯವಾಗಲಿ! ಶ್ರೀ ಏಕಲಿಂಗಸ್ವಾಮಿಗೆ ಜಯ!" ಎಂದು ಬಾರಿಬಾರಿಗೂ ಗರ್ಜಿಸಿ, ಗಗನದಲ್ಲಿ ಪ್ರತಿಧ್ವನಿಯನ್ನುಂಟುಮಾಡುತ್ತಿದ್ದರು. ಸೇನೆಯ ಉತ್ಸಾಹವನ್ನು ನೋಡಿ, ಭೀಮಸಿಂಗನು ಆನಂದಹೊಂದಿದನು. ಸೇನೆಯ ನಡುವೆ ನಿಂತು, ಸೈನಿಕರನ್ನು ಕುರಿತು "ವೀರರಿರಾ! ಈದಿನ ನೀವು ನಮ್ಮ ದೇಶದ ರಕ್ಷಣೆಗಾಗಿ ಯವನರೊಡನೆ ಕಾದುವವರಾಗಿದ್ದೀರಿ! ಯವನ ಬಾದಷಹನಾದ ಅಲ್ಲಾವುದೀನನು ಭಯಂಕರವಾದ ಅಭಿಲಾಷೆಯಿಂದ ನಮ್ಮ ಮೇಲೆ ಬರುತ್ತಿರುವನು ಅವನು ನನ್ನ ಕುಲವಧುವನ್ನು ಅಪಹರಿಸಿ ತನ್ನ ರಾಣಿವಾಸಕ್ಕೆ ಸೇರಿಸಿಕೊಳ್ಳಬೇಕೆಂಬ ವುದ್ದೇಶದಿಂದ ಬರುತ್ತಿರುವನು. ನಿಮಗೆ ಇದು ಸಂತೋಷಕರವೇ?" ಎಂದು ಕೇಳಿದನು. ಸೈನಿಕರು ಏಕಕಾಲದಲ್ಲಿ "ಇಲ್ಲ! ಇಲ್ಲ! ರಾಜಪುತ್ರ ವೀರರಾದ ನಾವು ಎಂದಿಗೂ ಬಿಟ್ಟುಕೊಡುವದಿಲ್ಲ. ಕಾದಿ ಕಾದಿ ಸಾಯುವೆವೇ ಹೊರತು ಅಧರ್ಮಕ್ಕೆ ಭಾಗಿಗಳಾಗುವದಿಲ್ಲ" ಎಂದು ಧ್ವನಿಗೈದರು. ಭಾಪು! ಭಾಪು! ನನ್ನ ರಣಧುರಂಧರರೇ! ಧನ್ಯರು! ನೀವೇ ಧನ್ಯರು: ಆದರೆ ನಾನು ಆಜ್ಞಾಪಿಸುವಂತೆ ನಿಮ್ಮ ತಾಯಿ, ಅಕ್ಕ, ತಂಗಿ, ನಿಮ್ಮ ಸ್ತ್ರೀಯರ ಪಾತಿವ್ರತ್ಯ ರಕ್ಷಣೆಗಾಗಿಯೂ, ಮಾನರಕ್ಷಣೆಗಾಗಿಯೂ ಮುಂದೆ ನಡೆಯಿರಿ. ಯವನರನ್ನು ಮುತ್ತಿಗೆ ಹಾಕಿರಿ." ಎಂದನು. ಇದನ್ನು ಕೇಳಿ ಸೈನಿಕರು "ಶ್ರೀ ಏಕಲಿಂಗಸ್ವಾಮಿಯೆ! ಹರಹರ! ಶಂಭೋ! ಜಯ ಏಕಲಿಂಗಜೀ!" ಎಂದು ಭೀಮಘರ್ಜನೆ ಗೈಯುತ್ತಾ ಮುಂದೆ ಹೋದರು. ಯವನಸೇನೆಯು ಸಮೀಪದಲ್ಲಿ ಬರುವುದನ್ನು ನೋಡಿ ಸೇನೆಯನ್ನು ಭೀಮಸಿಂಗನು ನಾಲ್ಕು ಭಾಗವನ್ನಾಗಿ ಮಾಡಿದನು. ದಕ್ಷಿಣಪಾರ್ಶ್ವದ ಅಧಿಪತ್ಯವನ್ನು ಗೋರಾಸಿಂಹನಿಗೂ, ಉತ್ತ

ರದ ಸೇನೆಯಾಧಿಪತ್ಯವನ್ನು ಜಾಲಿಂಸಿಂಹನಿಗೂ, ಪಶ್ಚಿಮದ ಕಡೆಯಧಿಕಾರವನ್ನು ಗುಲಾಬಸಿಂಗನಿಗೂ ಕೊಟ್ಟು ಯುದ್ಧದ ರೀತಿಯನ್ನು ತಿಳಿಸಿದನು. ಅಗ್ರಭಾಗವಾದ ಪೂರ್ವಭಾಗವನ್ನು ಭೀಮಸಿಂಗನೇ ಇಟ್ಟುಕೊಂಡನು. ಅವನ ಶರೀರವು ಬಲವಾಗಿಯೂ, ಎತ್ತರವಾಗಿಯೂ ಇತ್ತು. ಅವನ ನೇತ್ರಗಳು ಕಮಲಗಳಂತಿದ್ದುವು; ಮುಖದಲ್ಲಿ ಕ್ಷಾತ್ರತೇಜವು ಹೊಳೆಯುತ್ತಿತ್ತು. ಈ ರೀತಿಯಾಗಿ ಸೇನೆಯ ಅಧಿಕಾರವನ್ನು ವಿಭಾಗದಲ್ಲಿ ಸಹಾಯಕ್ಕಾಗಿಟ್ಟನು. ಆ ಸೇನೆಗೆ ಶೂರಸೇನನನ್ನು ಅಧಿಪತಿಯನ್ನಾಗಿ ಮಾಡಿದನು.

ಮುಸಲ್ಮಾನರ ಸೇನೆಯಲ್ಲಿಯೂ ನಾಲ್ಕು ಭಾಗ ಮಾಡಲ್ಪಟ್ಟಿತ್ತು. ಒಂದು ಭಾಗದ ಆಧಿಪತ್ಯವು ಅಲಫ್‌ಖಾನನಿಗೂ, ಎರಡನೆಯದು ನುಸರತ್‌ಖಾನನಿಗೂ, ಮೂರನೆಯದು ಮಾಲಿಕಾಫರನಿಗೂ, ನಾಲ್ಕನೆಯದು ಖುಸ್ರುಖಾನನಿಗೂ ನಿಯಾಮಕವಾಗಿತ್ತು. ಅಲ್ಲಾವುದೀನನು ಸ್ವತಃ ಸೇನೆಯ ಮಧ್ಯಭಾಗದಲ್ಲಿ ನಿಂತು ಸೈನಿಕರ ಉತ್ಸಾಹವನ್ನು ವೃದ್ಧಿಮಾಡುತ್ತಿದ್ದನು. ಸ್ವಲ್ಪ ಕಾಲದಲ್ಲಿ ಯುದ್ಧಾರಂಭವಾಯಿತು.

“ಹೊಡೆ! ಕತ್ತರಿಸು! ಜಯ (ಏಕಲಿಂಗಸ್ವಾಮಿ) ಜಯ ಮಹಿಷಾಸುರಮರ್ದಿನಿ! ಜಯ ಚಂಡಿಕೇ!” ಎಂದು ಘರ್ಜಿಸುತ್ತಾ ರಾಜಪುತ್ರರು ಕಾದಿದರು. “ದೀನದೀನ್! ಅಲ್ಲಾಹೋ! ಅಕ್ಬರ್! ಕಾಫರನನ್ನು ಕತ್ತರಿಸಿರಿ!” ಎಂದು ಯವನರು ಹೇಳುತ್ತಿದ್ದರು. ಎರಡು ಸೇನೆಗಳೂ ಕೈಹಚ್ಚಿದವು. ಬಾಣಗಣವನ್ನು ಬಿಡಲಾರಂಭಿಸಿದರು. ಗಾಯಪಟ್ಟವರ ರೋದನಗಳಿಂದ ರಣರಂಗವು ಅತಿ ಭಯಂಕರವಾಯಿತು! ಸೈನಿಕರ ಶರೀರಗಳು ಪಟಪಟನೆ ಬೀಳುತ್ತಿದ್ದವು. ಅಲ್ಲಾವುದೀನನು ಮುಸಲ್ಮಾನರಿಗೆ ಉತ್ಸಾಹ ಕೊಡುತ್ತಿದ್ದನು. ಭೀಮಸಿಂಗನು ರಾಜಪುತ್ರರಿಗೆ ಸ್ಪರ್ಧೆಯನ್ನುಂಟುಮಾಡುತ್ತಿದ್ದನು. ಗೋಲಿ ಮತ್ತು ಬಾಣವರ್ಷಗಳನ್ನು ಸುರಿಸಿದರು. ಒಂಟೆಗಳಮೇಲೆ ಫಿರಂಗಿಗಳನ್ನೇರಿಸಿದರು. ಎಲ್ಲೆಲ್ಲಿಯೂ ಅಲ್ಲೋಲಕಲ್ಲೋಲವಾಗಿ ಧೂಳಿನಿಂದ ರವಿಮಂಡಲವು ಕಾಣದಂತಾಯಿತು. ಸ್ವಲ್ಪ ಕಾಲದಲ್ಲಿಯೇ ರಾಜಪುತ್ರರ ಕಠಾರಿಗಳು ಪಠಾಣರನ್ನು ರುಚಿ ನೋಡುತ್ತಿದ್ದವು. ರಾಜಪುತ್ರರು ಮುಂದೆ ನುಗ್ಗಿದರು. ಅಲ್ಲಾವುದೀನನ ಅಂಗರಕ್ಷಕನಾದ ಷೇರ್‌ಖಾನನ ಮೇಲೆ ಒಂದು ಬಾಣವು ಬಂದು ಅವನೆದೆಯಲ್ಲಿ ನಟ್ಟಿತು. ಅವನು ಭೂಮಿಯಲ್ಲಿ ಬೀಳಲು ಸುಲ್ತಾನನು ಗಾಬರಿಯಾದನು. ಗುಲಾಬಸಿಂಗನಿಂದ ಬಿಡಲ್ಪಟ್ಟ ಮಾರ್ಗಣದ ಪ್ರಭಾವವನ್ನು ನೋಡಿ ಸುಲ್ತಾನನು ಹೆದರಿದನು. ಯವನರಲ್ಲಿ ಗದ್ದಲವಾಯಿತು. ಇಷ್ಟರಲ್ಲೇ ಇನ್ನೊಂದು ಬಾಣವು “ಸೂ! ಸೂ!” ಎನ್ನುತ್ತಾ ಬಂದು ಸುಲ್ತಾನನ ಛತ್ರಿಯನ್ನು ಕೆಡಹಿತು. ಕೂಡಲೇ ಅಲ್ಲಾವುದೀನನು ಬಿದ್ದನೆಂದು ತಿಳಿದು ಯವನ ಸೇನೆಯಲ್ಲಿ ಹಾಹಾಕಾರ ಉಂಟಾಯಿತು. ಪಲಾಯನ ಮಾಡಲಾರಂಭಿಸಿದರು. ಪ್ರಥಮದಲ್ಲೇ ರಾಜಪುತ್ರರ ಸೇನೆಯು ವಿಜಯಮೊಂದಿದಂತೆ ಕಾಣಿಸಿತು. ಭೀಮಸಿಂಗನು ತನ್ನ ಶೌರ್ಯ

ವನ್ನು ತೋರಿಸಿದನು. ರಾಜಪುತ್ರರು ಚನ್ನಾಗಿ ಕಾದಿದರು. ಮುಸಲ್ಮಾನರ ಸೇನೆಯು ರಜಸೇನೆಯು ವಿಭಾಗಿಸಲ್ಪಟ್ಟಿತು. ಏಕಾಏಕಿ ಗುಲಾಬಸಿಂಗನು ಸುಲ್ತಾನನಿದುರಿಗೆ ಬಂದನು. ಸುಲ್ತಾನನು ನೋಡಿ ಕುದುರೆಯನ್ನೋಡಿಸುತ್ತಾ ಬಂದನು. ಹಾ! ಹಾ! ಎನ್ನುತ್ತಾ ಸುಲ್ತಾನನ ಅಂಗರಕ್ಷಕರಲ್ಲಿ ಒಬ್ಬನು ಕೊಲ್ಲಲ್ಪಟ್ಟನು. ಇದನ್ನು ನೋಡಿ, “ಮಹಾರಾಜರಿಗೆ ವಿಜಯವಾಗಲಿ! ಎನ್ನುತ್ತಾ ರಾಜಪುತ್ರರು ಏಕಕಾಲದಲ್ಲಿ ಜಯಸೂಚಕ ಗರ್ಜನೆಯನ್ನು ಮಾಡಿದರು. ಈ ಕಾಲದಲ್ಲಿ ನುಸರತ್ ಖಾನನು ತನ್ನ ಸೇನೆಯೊಡನೆ ಬಂದು ರಾಜಪುತ್ರಸೇನೆಯ ಹಿಂಭಾಗವನ್ನು ಮುತ್ತಿದನು. ಈಗ ಮಾತ್ರ ರಾಜಪುತ್ರಸೇನೆಯು ಸಂಕಟದಲ್ಲಿ ಸಿಕ್ಕಿತು. ಆದರೆ ರಾಜಪುತ್ರಯೋಧರು ಶೂರರೂ, ಸಾಹಸಿಗಳೂ ಆದ್ದರಿಂದ ತಮ್ಮ ಬೆನ್ನನ್ನು ತಿರುಗಿಸಲಿಲ್ಲ. ಇಭ್ಭಾಗದೆಲ್ಲಿಯೂ ಸಮವಾಗಿ ಕಾದಿದರು. ಯವನರ ಕೃತ್ರಿಮ ಕೌಶಲ್ಯವನ್ನು ನೋಡಿ ಭೀಮಸಿಂಗನು ಸಂತಾಪ ಹೊಂದಿದನು. ತನ್ನ ಕುದುರೆಯನ್ನಲ್ಲಿಗೆ ಓಡಿಸಿದವನಾಗಿ ಸುಲ್ತಾನನ ಮೇಲೆ ಬಿದ್ದನು. ಸುಲ್ತಾನನು ಆಗ ಅಂಬಾರಿಯಲ್ಲಿ ಕುಳಿತಿದ್ದನು. ಹತ್ತಿರ ಬಂದ ಒಡನೆಯೇ ಅವನು ಬಂದು ಕತ್ತಿಯ ಪೆಟ್ಟಿನಿಂದ ಸುಲ್ತಾನನ ಆನೆಯ ಸೊಂಡಿಲನ್ನು ಕತ್ತರಿಸಿ ಬಿಟ್ಟನು. ಕೂಡಲೆ ಆನೆಯು ವ್ಯಾಕುಲಿತವಾಗಿ ಸಿಕ್ಕಿದ ಕಡೆ ಓಡತೊಡಗಿತು. ಅದನ್ನರಿತು ಸುಲ್ತಾನನು ಮಾವುತನೊಡನೆ ಕೆಳಗೆ ಹಾರಿದ್ದರಿಂದ ಬದುಕಿದನು. ಮಾಲಿಕಾಫರನು ಈ ವಿಲಕ್ಷಣ ಧೈರ್ಯವನ್ನು ನೋಡುತ್ತಾ ಅಲ್ಲಿ ನಿಂತಿದ್ದನು. ಅವನು ಕೂಡಲೆ ತನ್ನ ಕುದುರೆಯ ಮೇಲೆ ಸುಲ್ತಾನನನ್ನು ಕೂರಿಸಿ ಅವನನ್ನು ಕರೆದುಕೊಂಡು ಬಹುದೂರ ಹೋದನು. ಭೀಮಸಿಂಹನು ಯವನ ಸೇನೆಯ ಮಧ್ಯಭಾಗದಲ್ಲಿದ್ದುದರಿಂದ ಅವನನ್ನು ಮುತ್ತಿದರು. ಅವನಮೇಲೆ ಬಾಣಗಳನ್ನು ಬಿಡುತ್ತ ಕತ್ತಿ ಭಲ್ಲೆಗಳನ್ನು ಉಪಯೋಗಿಸುತ್ತಿದ್ದರು. ಭೀಮಸಿಂಗನ ಶರೀರದಿಂದ ರಕ್ತವು ಪ್ರವಹಿಸುತ್ತಿತ್ತು. ಭೀಮಸಿಂಗನು ಪರಾಕ್ರಮವನ್ನು ತೋರಿಸಿದನು. ಆದರೆ ಅವನು ಯವನ ಸೇನೆಯ ಸಂಗಡ ನಿಲ್ಲಲಾರದೆ ಗಾಯಹೊಂದಿ ನಿರ್ಬಲನಾದನು. ಗುಲಾಬಸಿಂಗನಿಗೆ ಇದು ತಿಳಿಯಲಿಲ್ಲ. ಅವನು ತನ್ನ ಸೇನೆಯೊಡನೆ ಮುಂದೆ ಹೋಗುತ್ತಿದ್ದನು. ಭೀಮಸಿಂಗನು ಧೈರ್ಯ ಹೊಂದಲಿಲ್ಲ. ಅವನು ಕುದುರೆಯ ಬೆನ್ನಿನಿಂದ ಬೀಳುವುದರಲ್ಲಿದ್ದನು. ಇಷ್ಟರಲ್ಲಿಯೇ ನಮ್ಮ ಶೂರಸೇನನು ಕ್ಷಣಕಾಲವೂ ವಿಳಂಬಮಾಡದೆ ಭೀಮಸಿಂಗನನ್ನು ತನ್ನ ಕುದುರೆಯ ಮೇಲೆತ್ತಿ ಕುಳ್ಳಿರಿಸಿದನು. ಅವನನ್ನು ಯವನರ ಮುತ್ತಿಗೆಯಿಂದ ಹೊರಗೆ ತಂದನು. ಶೂರಸೇನನು ವಿಳಂಬ ಮಾಡಿದ್ದಲ್ಲಿ ಭೀಮಸಿಂಗನ ಪ್ರಾಣಕ್ಕೆ ಅಪಾಯವಾಗುತ್ತಿತ್ತು. ಈಗ ಭಯಂಕರವಾಗಿ ಯುದ್ಧವು ನಡೆಯುತ್ತಿತ್ತು. ಇನ್ನೂ ಸ್ವಲ್ಪ ಹೊತ್ತು ಹೀಗೆಯೇ ಬಲವಾಗಿ ಯುದ್ಧವು ನಡೆದರೆ ಯವನರಲ್ಲಿ ಒಬ್ಬನಾದರೂ ದೆಹಲಿಗೆ ಹಿಂತಿರುಗಿ ಹೋಗುವಂತೆ ಕಾಣುವುದಿಲ್ಲ. ಆದರೆ ಯವನ ಸೇನೆಯು ಕುಶಲವುಳ್ಳದ್ದಾಗಿತ್ತು. ಇಂತಹ ಸಮಯ ನೋಡಿ ಯುದ್ಧವನ್ನು ನಿಲ್ಲಿ

ನವ ಗುರುತಿನ ಧ್ವಜವನ್ನು ನಿಲ್ಲಿಸಿದರು. ಧರ್ಮಾಧರ್ಮ ವಿಚಾರದಿಂದ ಕಾದುವ ಕ್ಷತ್ರಿಯ ವೀರರು ಇದನ್ನು ನೋಡಿ ಸ್ತಬ್ಧರಾದರು. ಆದರೆ ಸ್ವಲ್ಪ ಕಾಲ ಆ ಬಾವುಟಗಳು ಕಾಣಲಿಲ್ಲ. ಯವನ ಸೇನೆಯು ದುರ್ದೆಸೆಯುಳ್ಳದ್ದು. ಸೂರ್ಯನಾರಾಯಣನು ಅಸ್ತಮಿಸುವವನಾಗಿದ್ದನು. ರಾತ್ರಿಯ ವಿಶ್ರಾಂತಿಗಾಗಿ ಆ ದಿನ ಯುದ್ಧಕಾರ್ಯವನ್ನು ನಿಲ್ಲಿಸಿ ಉಭಯ ಸೈನಿಕರೂ ತಮ್ಮ ಶಿಬಿರಗಳಿಗೆ ಹೋದರು. ಆ ದಿನದ ಕದನದ ಪರಿಣಾಮದಿಂದ ಸುಲ್ತಾನನು ಹತಾಶನಾದನು. ಅವನ ಸೇನೆಯು ರಾಜಪುತ್ರರ ಸೇನೆಗಿಂತ ಹೆಚ್ಚಾಗಿ ಹಾನಿಹೊಂದಿತ್ತು. ಛಾವಣಿಯ ನಡುವೆ ಅಲ್ಲೋಲಕಲ್ಲೋಲವಾಯಿತು. ಗಾಯಹೊಂದಿದವರ ಸೇವೆಗೆ ಹಕೀಮರು (ವೈದ್ಯರು) ನಿಯಮಿತರಾದರು. ಉಭಯಸೈನಿಕರೂ ಒಲೆಯನ್ನು ಹೊತ್ತಿಸಿ ಸ್ವಯಂಪಾಕ ಮಾಡಿ ರಾತ್ರಿ ವಿಶ್ರಾಂತಿಹೊಂದಿ ಪ್ರಾತಃಕಾಲದಲ್ಲಿ ಯುದ್ಧದಲ್ಲಿ ತತ್ಪರರಾದರು. ಆಗ ಭೀಮಸಿಂಗನು ತನ್ನ ಸೇನೆಯನ್ನುದ್ದೇಶಿಸಿ, "ರಾಜಪುತ್ರವೀರರೇ! ನಿನ್ನೆಯ ಯುದ್ಧದಲ್ಲಿ ನೀವು ನಿಮ್ಮ ಮಾತೃಭೂಮಿಯ ರಕ್ಷಣೆಗಾಗಿ ಯಾವ ಶೌರ್ಯವನ್ನು ತೋರಿಸಿದಿರೋ ಅದರಿಂದ ಯವನ ಸೇನೆಗೆ ಮುಖ ಸುತ್ತಾಗಿದೆ. ನಮ್ಮ ಸೇನೆಯಲ್ಲಿ ಅನೇಕರು ಧಾರಾತೀರ್ಥದಲ್ಲಿ ಬಿದ್ದರು. ಆದರೆ ಯವನ ಸೇನೆಯಷ್ಟು ನಷ್ಟವು ನಮಗಾಗಿಲ್ಲ. ಪ್ರತಿಯೊಬ್ಬರೂ ತಾವು ನಾಲ್ಕಾರು ಯವನರನ್ನಾದರೂ ನಿವಾರಿಸಬೇಕಾಗಿದೆ. ನನ್ನ ಬಾಂಧವರೇ! ನೀವು ಹಗೆಯವರೊಡನೆ ಕಾದುವುದರಲ್ಲಿ ಸ್ವಲ್ಪವೂ ಹಿಂಜರಿಯದಿರಿ. ಯವನ ಸೇನೆಯು ನಮ್ಮ ಸೇನೆಗಿಂತ ಹೆಚ್ಚಾಗಿದೆ. ಆದರೆ ಯವನರು ಅಂತಃಕರಣಪೂರ್ವಕ ಕ್ಷತ್ರಿಯರಂತೆ ಕಾದುವವರಲ್ಲ. ಇದನ್ನು ಲಕ್ಷ್ಯವಿಡಿ. ನೀವು ಈ ದಿನ ಹಿಂದೆಗೆದರೆ ಮಹದನರ್ಥವಾಗಬಹುದು. ನೀವು ನಿಮ್ಮ ಪತ್ನೀ ಪುತ್ರಿಯರನ್ನೂ, ಸಹೋದರಿ ಮಾತೆಯರನ್ನೂ ಯವನರ ಗುಲಾಮರನ್ನಾಗಿ ಮಾಡದಿರಿ. ಯವನರು ನಮ್ಮ ಸ್ತ್ರೀಯರ ಪಾತಿವ್ರತ್ಯವನ್ನು ನಾಶಮಾಡ್ಯಾರು, ಮತ್ತು ಗುಲಾಮರನ್ನಾಗಿ ಮಾರಿಬಿಟ್ಟಾರು. ಬೇಡ! ಬೇಡ! ಈ ವಿಚಾರ ಸ್ವಲ್ಪವೂ ಬೇಡ! ನಮ್ಮ ಕ್ಷತ್ರಿಯವೀರರೆಂದಿಗೂ ಕಲಂಕಿತರಾಗರು. ಬಾಂಧವರೇ! ನೀವು ಈಗಲೇ ಜಯವಾಗುವಂತೆ ಕಾದಿರಿ. ಕ್ಷತ್ರಿಯಸೇನೆಯ ಶೌರ್ಯಕ್ರೀಡೆಯು ಹೀಗಿದೆ ಎಂಬುದನ್ನು ಅವರಿಗೆ ಅನುಭವವಾಗುವಂತೆ ಮಾಡಿರಿ. ಯವನರಿಗೆ ರಾಜಪುತ್ರವೀರರಂತೆ ಶೌರ್ಯಸಾಹಸಗಳಿಲ್ಲ. ನಮ್ಮ ಜನ್ಮವು ಯುದ್ಧಕ್ಕಾಗಿಯೇ ಆಗಿದೆ. ಅವರದಲ್ಲ. 'ಜಯ! ಶ್ರೀ ಏಕಲಿಂಗಸ್ವಾಮಿನಾ! ಜಯ! ಮಹಾರಾಣಾಜೀ!' ಎಂದು ಕೂಗಿರಿ." ಎಂದನು.

ಭೀಮಸಿಂಗನ ಈ ಉತ್ಸಾಹ ಸೂಚಕ ವಾಕ್ಯಗಳನ್ನು ಕೇಳಿ ಕ್ಷತ್ರಿಯ ಸೇನೆಯ ಮಧ್ಯದಲ್ಲಿ ಗದ್ದಲವೆದ್ದಿತು. ಪ್ರತಿಯೊಬ್ಬರ ಬಾಹುಗಳೂ ಅದುರಿದವು. ಯುದ್ಧ ಪ್ರಾರಂಭವಾಯಿತು. ಯವನಸೇನೆಯೂ ಸಿದ್ಧವಾಯಿತು. ಅವರು ನಿಜವಾಗಿ ಧರ್ಮಾಂಧರಾಗಿದ್ದರು. "ರ ಹೇಗ ತೋಬಜೇ ಮಿಲೇಗೀ ಔರನು

ರೇಂಗೆ ತೋಬೆಕ್ಕೆ ಕತನು ಹುರಿಯಾಹೀ ಹುರಿಯಾ" ಎಂಬ ಭಾವನೆಯಿಂದ ಗಬನಿಯಿಂದ ಈ ಸೇನೆಯು ಬಂದದ್ದಾಗಿದೆ. ಪೂರ್ಣಶೌರ್ಯದಿಂದ ಕಾದಿದರು. ರಣಾಂಗದಲ್ಲಿ ಯವನರ ಬಹಳ ಸೇನೆಯು ನಾಶವಾಯಿತು. ಕ್ಷತ್ರಿಯರ ವಿಜಯಕಾಲವು ಸಮೀಪಿಸಿತು. ಆದರೆ ಸುಲ್ತಾನನು ಮೈಮರೆತಿರಲಿಲ್ಲ. ಪೂರ್ಣಸಾವಧಾನವುಳ್ಳವರಾಗಿದ್ದನು. ಹೀಗೆ ಯುದ್ಧಮಾಡಿದರೆ, ಪರಾಜಯವೇ ಸರಿಯೆಂದು ನಿಶ್ಚಯಿಸಿ ಭೀಮಸಿಂಗ ಗುಲಾಬಸಿಂಗರು ಇರುವ ಸೇನೆಯ ಭಾಗದೊಂದಿಗೆ ಯುದ್ಧಮಾಡದೆ ನುಸರತ್ ಖಾನನೊಡನೆ ಕೆಲವು ಸೇನೆಯನ್ನು ಕೊಟ್ಟು ಚಿತ್ತೂರಿಗೆ ಹಲ್ಲಾ ಹತ್ತುವಂತೆ ಕಳುಹಿಸಿದನು. ಕಳುಹಿಸುವಾಗ "ನುಸರತ್ ಖಾನನೇ! ಎಂಟುಸಾವಿರ ಸೇನೆಯೊಡನೆ ಚಿತ್ತೂರಿಗೆ ಕೂಡಲೇ ನಡೆ. ರಾಜಪುತ್ರ ಯೋಧರೆಲ್ಲರೂ ಇಲ್ಲಿಯೇ ಇದ್ದಾರೆ. ದುರ್ಗದಲ್ಲಿ ಸ್ತ್ರೀಯರೂ ಸ್ವಲ್ಪ ಸೇನೆಯು ಮಾತ್ರ ಇರಬಹುದು. ಕಾತರರಾದ ರಾಜಪುತ್ರರು ಮೈಮರೆತಿರುವರು. ಈಗ ಚಿತ್ತೂರನ್ನು ಸ್ವಾಧೀನಮಾಡಿಕೊಂಡರೆ ಇವರದೇನೂ ನಡೆಯುವದಿಲ್ಲ. ಇದು ನನಗೆ ನಂಬಿಕೆ ಇದೆ. ನೀನು ಜಾಗರೂಕನಾಗಿ ಯುಕ್ತಿಯಿಂದ ಕಾದಿದರೆ, ನಮಗೆ ವಿಜಯಶ್ರೀಯು ಮಾಲೆಯನ್ನು ಹಾಕುವಳು ಹೋಗು. ಬೇಗ ಹೋಗು! ಆನಂದ ವೃತ್ತಾಂತವನ್ನು ಕಳುಹಿಸು." ಎಂದನು. ನುಸರತ್ ಖಾನನು ಸುಲ್ತಾನನ ಆಜ್ಞೆಯಂತೆ ಎಂಟು ಸಾವಿರ ಸೇನೆಯೊಡನೆ ಚಿತ್ತೂರು ಕಡೆಗೆ ಹೊರಟನು

ಭಾಮಿನಿ—ಹಟದಿ ಪತಗವು ಪಕ್ಕಗೊಳುತಾ |
ಭಟರುಭಟರೊಳು ಭುಜಗಭುಜಗದಿ
ದಿಟದಿ ಕಾದುವ ತೆರದೊಳೀಗಲೆ ಕಾದುತಿಹರೈಸೆ ||

ಪ್ರಕರಣ 20.

ಕ್ಷತ್ರಿಯರ ಗೂಢಚಾರರು ಅಜಾಗರೂಕರಾಗಿರಲಿಲ್ಲ. ಅವರು ಯವನವೇಷದಿಂದ ಯವನ ಸೇನೆಯಲ್ಲಿ ತಿರುಗುತ್ತಿದ್ದರು. ನುಸರತ್ ಖಾನನು ಚಿತ್ತೂರು ದುರ್ಗವನ್ನು ಹಲ್ಲಾ ಹತ್ತಲು ಹೊರಟ ವೃತ್ತಾಂತವನ್ನು ತಿಳಿದು ಆ ಗೂಢಚಾರರು ವಿದ್ಯುದ್ವೇಗದಂತೆ ದುರ್ಗದ ಕಡೆಗೆ ಬಂದರು. ಅವರು ಮಹಾರಾಣನಿಗೆ ಹೇಳಿದುದರಿಂದ ಮಹಾರಾಣನು ಯುದ್ಧಕ್ಕೆ ಸಿದ್ಧನಾಗಿದ್ದನು. ದುರ್ಗದಲ್ಲಿ ಸ್ವಲ್ಪ ಸೇನೆಯಿತ್ತು. ಆದ್ದರಿಂದ ಕೋಟೆಯ ಹೊರಗೆ ಬಂದು ಕಾದಲು ಆಗಲಿಲ್ಲ. ಆದ್ದರಿಂದ ರಾಣನು ದುರ್ಗದಲ್ಲಿಯೇ ಇದ್ದು ಕಾದಬೇಕೆಂದು ನಿಶ್ಚಯಮಾಡಿದನು. ದೂತರಿಂದ ನಿಜವಾದ ವೃತ್ತಾಂತವನ್ನು ತಿಳಿದ

ರಾಜನು ದುರ್ಗದ ಬಾಗಿಲನ್ನು ಹಾಕಿಸಿದನು. ಬಳಿಕ ಪರ್ವತ ಶೃಂಗಕ್ಕೆ ಬೇರೆ ಬೇರೆ ಶರ್ಮದಾತ್ಮಾಂಶನನ್ನು ನಿಯಮಿಸಿದನು. ಕ್ಷತ್ರಿಯ ಧರ್ಮಾನುಸಾರ ಕಾದದೇ ಇರುವುದನ್ನು ನೋಡಿ ರಾಜಪುತ್ರರು ಅತಿಯಾಗಿ ದುಃಖಿಸಿದರು. ಆದರೆ ಮಹಾರಾಜನ ಆಜ್ಞೆಯಂತೆ ನಡೆಯತೊಡಗಿದರು. ರಾಜನ ಆಜ್ಞೆಯಂತೆ ಕೋಟೆಯ ಮೇಲೆ ನಿಂತು ಹಗೆಯ ಆಗಮನವನ್ನು ನಿರೀಕ್ಷಿಸುತ್ತಿದ್ದರು. ಆಗ ಸರ್ವಾಂಗಸುಂದರನಾದ ಷೋಡಶವರ್ಷೀಯನಾದ ಯುವಕನೊಬ್ಬನು ಶಸ್ತ್ರಾಸ್ತ್ರಧಾರಿಯಾಗಿ ಕೋಟೆಯ ಮೇಲಾಗದಲ್ಲಿ ತಿರುಗುತ್ತಾ ಶತ್ರುಸೇನೆಯ ಗಮನಾಗಮನಗಳನ್ನು ಸೂಕ್ಷ್ಮದೃಷ್ಟಿಯಿಂದ ನೋಡುತ್ತಿದ್ದನು. ಸ್ವಲ್ಪ ಕಾಲದಲ್ಲಿಯೇ ದೂರದಲ್ಲಿ ಧೂಳಿ ಏಳುವುದರಿಂದ ವೈರಿಸೇನೆಯು ಬರುವುದೆಂಬುದನ್ನು ಸೂಚಿಸುವುದಕ್ಕಾಗಿ ಶಂಖನಾದ ಮಾಡಿದನು. ಯವನ ಸೇನೆಯು ಕೋಟೆಯನ್ನು ಮುತ್ತಿತು. ಯವನರ ಸರದಾರನೊಬ್ಬನು ಕೋಟೆಯನ್ನೇರಲು ಸರಿಯಾದ ದಾರಿ ಇರುವುದೇ ಎಂದು ನೋಡುತ್ತಿದ್ದನು. ಇಷ್ಟರಲ್ಲೇ ಪೂರ್ವಪರಿಚಿತ ಯುವಕನು ಅವನ ಮೇಲೊಂದು ಬಾಣವನ್ನು ಬಿಟ್ಟನು. ಆ ಸಗಸಿಯಾದ ಸೈನಿಕನು ಗತಪ್ರಾಣನಾದನು. ಯವನರ ದಳಪತಿಯಾದ ನುಸರತ್ ಖಾನನು ಕೋಟೆಯೊಳಗೆ ಹೋಗುವ ದಾರಿಯೊಂದನ್ನು ಕಂಡು ಹಿಡಿದನು. ಆದರೆ, ಆ ದಾರಿಯು ಚಿಕ್ಕದಾಗಿಯೂ ದುರ್ಘಟವಾಗಿಯೂ ಇತ್ತು. ಆ ದಾರಿಯಿಂದ ಕೋಟೆಯನ್ನು ಹತ್ತುವುದು ಮಹಾ ಪ್ರಯಾಸವಾಗಿತ್ತು. ಒಂದೇಕಾಲದಲ್ಲಿ ನಾಲ್ಕು ಜನರಿಗಿಂತ ಹೆಚ್ಚಾಗಿ ಅಲ್ಲಿ ಹೋಗಲು ಅಶಕ್ಯವಾಗಿಯೂ ಇತ್ತು. ಇನ್ನು ಮುಂದೆ ಏನು ಮಾಡಬೇಕೆಂದು ವಿಚಾರಮಾಡಿ, ಚಿಂತೆಯಿಲ್ಲವೆಂದಾಲೋಚಿಸಿ, “ಹಿಮ್ಮತ್ ಮರ್ದಾ ತೋ ಮದತ್ ಖುದಾ” ಎಂಬಂತಾಗುವುದು; ಪ್ರಯತ್ನಿಸಲೇಬೇಕು. ಮುಂದೆ ಮಹಮ್ಮದನ ಇಚ್ಛೆಯೆಂದೂಹಿಸಿ, ಆ ಮಾರ್ಗದಿಂದ ದುರ್ಗವನ್ನು ಪ್ರವೇಶಿಸಲು ತನ್ನ ಸೇನೆಗೆ ಅಪ್ಪಣೆಮಾಡಿದನು. ಅರ್ಧ ಮಾರ್ಗ ಬರುವವರಿಗೂ ಯಾರೂ ಅಡ್ಡಿಮಾಡಲಿಲ್ಲ. ಇದರಿಂದ ಕೋಟೆಯೊಳಗೆ ಚೆನ್ನಾಗಿ ಬಂದೋಬಸ್ತು ಇರುವುದಿಲ್ಲವೆಂದು ನುಸರತ್ ಖಾನನು ಯೋಚಿಸಿದನು. ಆದರೆ ಬೇಗನೆ ತನ್ನಭಿಪ್ರಾಯವು ತಪ್ಪೆಂದು ಅವನ ದೃಷ್ಟಾಂತಕ್ಕೆ ಬಂತು. ವರ್ಷಾಕಾಲದ ವರ್ಷಧಾರೆಯಂತೆ ಯವನ ಸೇನೆಯಮೇಲೆ ಬಾಣವರ್ಷಕ್ಕಾರಂಭವಾಯಿತು. ಪುಂಡು ಯವನರ ದಂಡಿನ ಅಂಡಲೆಯುವ ಗೊಂದಲವುಂಟಾಯಿತು. ಆದರೆ ಈ ಯವನರು ಹಿಂದಿರುಗಿ ಹೋಗುವುದಕ್ಕಾಗಲಿಲ್ಲ. ಕೊನೆಗೆ ದುರ್ಗವನ್ನೇ ಹತ್ತಬೇಕೆಂದು ಧೈರ್ಯವನ್ನು ಬಿಡದೆ ಅಡಿಯಿಡುತ್ತಾ ನಡೆಯುತ್ತಾ ದಡವನ್ನು ಸೇರಲು ಮೂರು ಸಾವಿರ ಸೇನೆಯು ನಾಶವಾಯಿತು. ಈಗ ನುಸರತ್ ಖಾನನು ಜಯದ ವಿಷಯದಲ್ಲಿ ನಿರಾಶನಾದನು. ಆದರೂ ತನ್ನ ದಂಡಿನವರ ಉತ್ಸಾಹಭಂಗವಾಗಬಾರದೆಂದು ಬಹಿರಂಗದಲ್ಲಿ ಆವೇಶಿತನಾಗಿ “ಇಸ್ಲಾಮವೀರರೇ! ಶಕ್ತಿಯನ್ನು ತೋರಿಸಿ; ನಿರಾಶರಾಗಬೇಡಿ; ಧೈರ್ಯವಾಗಿರಿ; ಮಹಮ್ಮದನ ಕೃಪೆಯಿಂದ

ಈಗ ಯುದ್ಧದಲ್ಲಿ ನಮಗೇ ಜಯವಾಗುವುದು. ಮಹಮ್ಮದನ ಕರುಣವಿಲ್ಲವೆಂದೂ ಮುಳಿದನೆಂದೂ ಗಾಬರಿಯಾಗಬೇಡಿ. ನಮ್ಮ ಪವಿತ್ರಧರ್ಮಕ್ಕಾಗಿ ನಾವು ಕಾದಬೇಕೆಂದು ಲಕ್ಷ್ಯವಿಡಿರಿ. ಮುಂದೆ ನಡೆಯಿರಿ; ಅಲ್ಲಾಹೋ ಅಕ್ಬರ್!" ಎಂದು ಶೌರ್ಯೋತ್ಪಾದಕ ವಾಕ್ಯವನ್ನು ಹೇಳಿದನು. ಅದನ್ನು ಕೇಳಿ ಆ ಸೈನಿಕರ ಬಾಹುಗಳು ಸ್ಫುರಿಸಿದುವು. ಅವರು ತಮ್ಮ ಬಂದೂಕುಗಳನ್ನು ಹಾರಿಸಿದರು; ಆದರೂ ಉಪಯೋಗವಾಗಲಿಲ್ಲ. ರಾಜಪುತ್ರರ ಸೇನೆಯು ಗುಟ್ಟಿನಿಂದ ಅಡಗಿತ್ತು. ಅಲ್ಲಿ ಬಾಣವರ್ಷವನ್ನು ಕರೆದರು. ದಂಡಿನ ಧೈರ್ಯವು ದಿಂಡುಗೆಡೆದುಹೋಯಿತು. ಇಷ್ಟರಲ್ಲೇ ಘಟ್ಟನಾಬಟ್ಟೆಯಿಂದ ಬಂದು ಘಟ್ಟಬಾಣವು ನುಸರತ್‌ಖಾನನ ರುಮಾಲನ್ನು ಹೊಕ್ಕಿತು. ಆದರೆ ಗುರಿ ತಪ್ಪದಿದ್ದಲ್ಲಿ ಅವನಾತ್ಮವು ಅಲ್ಲಿನ ದರ್ಬಾರಿಗೆ ಹೋಗದಿರುತ್ತಿರಲಿಲ್ಲ. ಆ ಬಾಣವನ್ನು ರಾಜಪುತ್ರ ತರುಣನೊಬ್ಬನು ಬಿಟ್ಟನು. ರಾಜಪುತ್ರಸೈನಿಕರೂ ಯವನಸೈನಿಕರೂ ಎಲ್ಲರೂ ಆ ತರುಣನ ಹಸ್ತಲಾಘವ, ರಣನೈಪುಣ್ಯ, ಅಪೂರ್ವಶರಸಂಧಾನಗಳನ್ನು ನೋಡಿ ತಟಸ್ಥರಾದರು. ಯುದ್ಧಕಲೆಯಲ್ಲಿ ಮಹಾ ಪ್ರವೀಣನಾದ ಯವನಸೇನಾಪತಿ ನುಸರತ್‌ಖಾನನು ಆಶ್ಚರ್ಯದಿಂದ ದಿಙ್ಮೂಢನಾದನು. ಮತ್ತು ಆ ತರುಣನನ್ನು ನೋಡಿದನು. ಆಗ ಈತನ ಅಬಾಗರೂಕತೆಯನ್ನು ತಿಳಿದ ಆ ತರುಣನು ಮತ್ತೊಂದು ಬಾಣವನ್ನು ಬಿಟ್ಟನು. ಆ ಬಾಣವು ತನ್ನ ಕೆಲಸವನ್ನು ಪೂರ್ತಿಯಾಗಿ ಮಾಡಿತು. ನುಸರತ್‌ಖಾನನು ಸುಲ್ತಾನನ ಬಲಗೈಯಂತಿದ್ದನು. ಇವನು ಗಾಯಹೊಂದಿ ಬಿದ್ದನು. ಅವನ ಕೈಕತ್ತಿಯು ಕಳಚಿಬಿತ್ತು. ಯವನಸೇನೆಯಲ್ಲಿ ಹಾಹಾಕಾರ ಉಂಟಾಯಿತು. ಯವನರು ಪ್ರವೇಶಿಸಿದ ಮಾರ್ಗವನ್ನು ಶೂರಸೇನನು ಬಂಧಿಸಿದ್ದನು. ಇದರಿಂದ ಯವನಸೇನೆಯು ಸಂಕಟದಲ್ಲಿ ಸಿಕ್ಕಿತು. ಹಾಹಾಕಾರವೆದ್ದಿತು. ತನ್ನ ಸೇನೆಯ ದುರ್ದಶೆಯನ್ನು ನೋಡಿ ಉಳಿದ ಸೇನೆಯೊಡನೆ ಸುಲ್ತಾನನು ಬಂದು ಪ್ರಯತ್ನಮಾಡಿದನು. ಆದರೆ ನಿಷ್ಫಲವಾಗಿ ಮೂರುಸಾವಿರ ಯೋಧರರು ಕಂದಕದಲ್ಲಿ ಬಿದ್ದು ಮೃತರಾದರು. ಈ ಯುದ್ಧದಲ್ಲಿ ಹೀಗೆ ೭೦೦೦ ಸೇನೆ ಮಡಿಯಿತು. ಸಂಧ್ಯಾಕಾಲವಾಯಿತು. ಕ್ಷತ್ರಿಯರು ಯುದ್ಧವನ್ನು ನಿಲ್ಲಿಸಿದರು. ಧರ್ಮಯುದ್ಧ ಮಾಡುವ ಕ್ಷತ್ರಿಯವೀರರು ಈ ಕಾಲದಲ್ಲಿಯೂ ಮೋಸಹೋದರು. ಶತ್ರುಗಳು ವಿರಾಮಹೊಂದಿ ಲಾಭ ಪಡೆದರು. ಆದರೂ ಆ ಯವನರು ಈ ರಾಜಪುತ್ರರ ಔದಾರ್ಯವನ್ನು ಪ್ರಶಂಸಿಸಲೇಬೇಕು!

ಶರಕ್ಷ || ಸಮರದಿ ಕಾದುತ್ತೆ ಕುಮನದಿ ಅಲ್ಲನು |
ಬಿಮೆಯೊಳು ಭೀಮನೋಳಿದಿರಾಗಿ ||
ಅಮಮಾ ಆಜಿಯೊಳ್ |
ವಿಮನದಿ ಘೂಕದಸನುದಿಂ ಪೂಳೆಯುತಲಿರುತಿಹನು ||

ಪ್ರಕರಣ 21.

ಮಧುತಿಷ್ಠತಿ ಜಿಹ್ವಾಗ್ರೇ ಹೃದಯೇ ತು ಹಲಾಹಲಂ ||

ಕಪಟಪ್ರಪಂಚ.

ಎರಡು ದಿನಗಳ ಯುದ್ಧಗಳಲ್ಲಿ ಕ್ಷತ್ರಿಯರಿಗೇ ಜಯವಾಯಿತು. ಸುಲ್ತಾನನಿಗೆ ಬಲವಾದ ಸೇನೆಯಿದ್ದರೂ ಪರಾಜಯವಾಯಿತು. ಸುಲ್ತಾನನು ಆಶಾಭಂಗದಿಂದ ಸಂತಪಿಸಿದನು. ಇದನ್ನು ವರ್ಣಿಸಲು ಅಶಕ್ಯ. ಅವನು ಆ ಕಂದಕವನ್ನು ಮುಚ್ಚಬೇಕೆಂದು ಯತ್ನಿಸಿದನು. ಆದರೆ, ಯಾವ ಸಾಧನವೂ ಸಿಕ್ಕಲಿಲ್ಲ. ನಿರಾಶನಾಗಿ ರಾತ್ರಿಯೇ ಹಿಂದಿರುಗಿ ತನ್ನ ಪಾಳಯಕ್ಕೆ ಹೋಗಿ ಯುದ್ಧದ ಶ್ರಮೆಯಿಂದ ವಿಶ್ರಾಂತಿಗಾಗಿ ಡೇರೆಯೊಳಕ್ಕೆ ಹೋದನು. ನಿದ್ರಿಸಬೇಕೆಂದು ಯತ್ನಿಸಿದನು. ಆದರೆ, ನಿದ್ರೆ ಹತ್ತಲಿಲ್ಲ. ಕೊನೆಗೆ ಮಹಮದನ ಮತಕ್ಕೆ ವಿರುದ್ಧವಾಗಿ ಸುರಾದೇವಿಯ ಉಪಾಸನೆಮಾಡಿದನು. ಆದರೂ ನಿಷ್ಫಲವಾಯಿತು. ಸಾಧಾರಣವಾದ ಜನರಿಗೆ ಜ್ಞಾನತಪ್ಪಿಸುವ ಮದಿರವು ಸುಲ್ತಾನನ ನಿರಾಶೆಯುಳ್ಳ ಮನಕ್ಕೆ ಏನೂ ಪರಿಣಾಮಕೊಡಲಿಲ್ಲ. ಸ್ವಲ್ಪ ಕಾಲವಾದ ಮೇಲೆ ಹಾಸಿಗೆಯಿಂದೆದ್ದು ತನ್ನಲ್ಲಿ ಹೇಳಿಕೊಂಡದ್ದೇನಂದರೆ :—" ಮೇವಾಡದ ಕ್ಷತ್ರಿಯರು ಇಷ್ಟು ಉಪಾಯವಂತರೂ ಶೂರಯೋಧರೂ ಆಗಿದ್ದಾರೆಂದು ತಿಳಿದಿದ್ದಲ್ಲಿ ನಾನು ಇಲ್ಲಿಗೆ ಬರುತ್ತಿರಲಿಲ್ಲ; ಒಂದುವೇಳೆ ಬರಬೇಕಾದಲ್ಲಿ ಎಲ್ಲವನ್ನೂ ಸಿದ್ಧಪಡಿಸಿಕೊಂಡು ಬರುತ್ತಿದ್ದೆನು. ಬೇರೆ ದೇಶಗಳಲ್ಲಿ ವಿಜಯವಾದ್ದರಿಂದ ಇಲ್ಲಿಯೂ ಜಯವಾಗುವದೆಂದು ತಿಳಿದಿದ್ದೆನು. ಇಲ್ಲಿ ಪರಾಜಯಹೊಂದಿ ಹಿಂದಕ್ಕೆ ಹೊರಟುಹೋದರೆ ಈವರೆಗೆ ನನಗುಂಟಾಗಿರುವ ಧೈರ್ಯವು ಲೋಪಹೊಂದುವುದು. ಕಾದೋಣವೆಂದರೆ ಜಯದ ಚಿಹ್ನೆ ತೋರುವುದಿಲ್ಲ. ಯುದ್ಧಮಾಡುವುದೂ ಯೋಗ್ಯವಾಗಿಲ್ಲ. ಮಾಡದಿರುವದೂ ಯೋಗ್ಯವಲ್ಲ. ಈಗೇನುಮಾಡಲಿ? ಬೇರೆ ಯಾವ ಯುಕ್ತಿಯನ್ನು ತೆಗೆಯಲಿ? ಈಗ ಕಪಟಪ್ರಪಂಚಮಾಡುವದೇ ಯೋಗ್ಯವು. ಹೀಗೆ ಮಾಡಿದ ಹೊರತು ಇಚ್ಛಾಪೂರ್ತಿಯಾಗದು." ಎಂದು ಯೋಚಿಸುವಾಗ ಅವನಿಗೊಂದು ವಿಚಾರವು ತೋರಿತು. ಕೂಡಲೆ ತನ್ನ ಲೇಖಕನನ್ನು ಕರೆಯಿಸಿ, ಮೇವಾಡದ ರಾಣನಿಗೆ ಕೆಳಗೆ ಹೇಳುವಂತೆ ಕಾಗದ ಬರೆಸಿದನು :—

" ಅಖಂಡಪ್ರಥಪ್ರತಾಪಿಯಾದ ಮೇವಾಡ ಮಹಾರಾಣಾ ಲಕ್ಷ್ಮಣ ಸಿಂಹರೇ ! ನಾನು ಈ ಮೊದಲು ನಿಮಗೊಂದು ಪತ್ರವನ್ನು ಕಳುಹಿಸಿ ಯುದ್ಧಕ್ಕೆ

ಯಾವ ಕಾರ್ಣ ತೋರಿಸಿದೆನೋ ಅದು ಸುಳ್ಳು. ನಿಜವಾದ ಕಾರಣವೇನಂದರೆ, ನಿಮ್ಮ ಚಿಕ್ಕಮ್ಮನಾದ ಪದ್ಮಿನಿಯು ಅಗಣ್ಯ ಲಾವಣ್ಯಮಣಿಯಾಗಿರುವುದರಿಂದ ಆಕೆಯಲ್ಲಿ ಸ್ವರ್ಗಸೌಂದರ್ಯವು ವ್ಯಾಪಿಸುತ್ತದೆ. ಆಕೆಯ ಮುಖಕಮಲವನ್ನು ನೋಡಲು ಉತ್ಸುಕಿತನಾಗಿದೇನೆ. ಪದ್ಮಿನೀಜಾತಿಯ ಸ್ತ್ರೀಯ ದರ್ಶನದಿಂದ ಸರ್ವಪಾಪವೂ ನಶಿಸುವುದೆಂದು ಹಿಂದುಗಳು ಹೇಳುವರಷ್ಟೆ; ಆದ್ದರಿಂದ ನನ್ನ ಪಾಪನಾಶಕ್ಕಾಗಿ ಆಕೆಯನ್ನು ನೋಡಲಿಚ್ಛಿಸುವೆನು, ಈ ಇಚ್ಛೆಯನ್ನು ಪೂರ್ಣ ಮಾಡಿಕೊಳ್ಳಲು ನಾನು ಇಲ್ಲಿಗೆ ಬಂದಿರುತ್ತೇನೆ. ಮೇವಾಡದ ರಾಜಪುತ್ರರು ತಮ್ಮ ಸ್ತ್ರೀಯರ ಮರ್ಯಾದೆಯ ಬೆಲೆಯನ್ನು ಹೇಗಿಟ್ಟಿರುವರೆಂಬುದನ್ನು ಬಲ್ಲೆನು. ಆದರೆ, ಆಕೆಯ ಮುಖದರ್ಶನವಾಗದೆಂದು ತಿಳಿದು ಯುದ್ಧಕ್ಕೆ ಬಂದೆನು. ಯುದ್ಧದಲ್ಲಿ ನಿಮಗೆ ಪರಾಜಯವಾದರೆ ಪದ್ಮಿನಿಯ ಮುಖದರ್ಶನವಾಗಿ ತೃಪ್ತನಾಗುವೆನೆಂದು ಕಾರಣವಂ ಕಲ್ಪಿಸಿದೆನು. ಆದರೆ, ರಾಜಪುತ್ರರ ಶೌರ್ಯದ ಕಲ್ಪನೆಯೂ ನನಗೆ ಆಗಲಿಲ್ಲ. ಇನ್ನು ನನ್ನ ಮಾನ್ಯವಾದ ಪ್ರಾರ್ಥನೆ ಏನೆಂದರೆ:— "ಸೆರೆ ಹಿಡಿದ ನಮ್ಮ ಸೈನಿಕರನ್ನು ಬಿಡಬೇಕು. ಮತ್ತೂ ನನಗೊಂದುಬಾರಿ ಪದ್ಮಿನಿಯ ಮುಖದರ್ಶನಮಾಡಿಸಬೇಕು." ಇಷ್ಟಾದರೆ, ಯುದ್ಧವನ್ನು ನಿಲ್ಲಿಸಿ ಡಿಲ್ಲಿಗೆ ಹಿಂದಿರುಗಿ ಹೊರಟುಹೋಗುವೆನು. ಅಲ್ಲದೆ, ನಿಮ್ಮನ್ನು ಮಿತ್ರರೆಂದು ತಿಳಿಯುವೆನು. ಪದ್ಮಿನಿಯ ವಿಷಯದಲ್ಲಿ ನನ್ನಂತಃಕರಣದಲ್ಲಿ ಲೇಶವೂ ದುರ್ಬುದ್ಧಿ ಮಾಡುವುದಿಲ್ಲ. ಮಹಮದನಮೇಲೆ ಆಣೆಯಿಟ್ಟು ಹೇಳುವೆನು ಇಂದಿನಿಂದ ನಾನು ಅವಳನ್ನು ಭಗಿನಿಯಂತೆ ತಿಳಿಯುವೆನು. ನನ್ನ ಈ ಆಶೆಯ ವಿನಂತಿಯನ್ನು ಸ್ವೀಕರಿಸುವಿರೆಂದೂಹಿಸಿದ್ದೇನೆ. ನಾನು ತಮ್ಮ ಶತ್ರುವಾದರೂ ನಿಮ್ಮಿಚ್ಛೆಯಂತೆ ನಿಮ್ಮಲ್ಲಿ ವಿಶ್ವಾಸವಿಡಲು ಸಿದ್ಧನಾಗಿರುತ್ತೇನೆ.

ಇತಿ "ಸುಲ್ತಾನ್ ಅಲ್ಲಾವುದೀನ"

ಈ ಪತ್ರವನ್ನು ತೆಗೆದುಕೊಂಡು ಹೋಗುವ ದೂತನ ಕೈಯಲ್ಲಿ ಬಿಳೀ ನಿಶಾನಿಯನ್ನು ಕೊಟ್ಟು ರಾಣನ ಕಡೆಗೆ ಕಳುಹಿಸಿದನು. ದೂತನು ಛಾವಣಿಯಿಂದ ಹೊರಟನು. ಕೋಟೆಯ ಕಂದಕದ ಹತ್ತಿರ ಆ ಬಿಳಿಪಟವನ್ನು ಒಂದು ಎತ್ತರಪ್ರದೇಶದಲ್ಲಿ ನೆಟ್ಟನು. ಕ್ಷತ್ರಿಯ ಸೇನೆಯ ಗೂಢಚಾರರು ಅಲ್ಲಿ ಬಂದು ದೂತನು ಬಂದ ಸಂಗತಿಯನ್ನು ವಿಚಾರಿಸಿ ಕೋಟೆಯೊಳಕ್ಕೆ ಆತನನ್ನು ಕರೆದುಕೊಂಡು ಹೋದರು. ಇವನು ಶಸ್ತ್ರಧಾರಿಯಲ್ಲದ್ದರಿಂದ ಬಾಧಕವಿಲ್ಲವೆಂದು ತಿಳಿದು ಆತನನ್ನು ಕರೆದುಕೊಂಡು ಹೋದರು.

ಕಂದ || ನುಡಿಗಡಣದಿ ಜಗಕೆಲ್ಲಂ |
ಕಡುವಂಚನೆಗೈವರಹಹ ಕೃತ್ರಿಮಮನುಜರ್ ||
ತಡೆಯದೆ ಕಡುನಗೆಬರ್ಪುದು |
ನಡಗರಮಂಪೇಳಲೇನು ಜಗದೊಳಗಹಹಾ ||

ಪ್ರಕರಣ 22.

ಅಲ್ಲಾವುದೀನನ ಪ್ರಚಂಡಸೇನೆಯನ್ನು ಪರಾಭವಪಡಿಸುದುದರಿಂದ ಈ ದಿನ ಕ್ಷತ್ರಿಯವೀರರು ಆನಂದಾಂಬುಧಿಯಲ್ಲಿ ಮುಗ್ನರಾಗಿರುವರು. ಮನೆಮನೆಯಲ್ಲೂ ಮಾವಿನೆಲೆಯ ತೋರಣಗಳು ಕಟ್ಟಲ್ಪಟ್ಟಿದ್ದವು. ಅಲ್ಲಲ್ಲಿ ಆನಂದಪ್ರದರ್ಶಕವಾದ ಗಾಯನವು ಕೇಳಬರುತ್ತಿತ್ತು. ದೇವಾಲಯದಲ್ಲಿ ಘಂಟಾನಾದವಾಗುತ್ತಿತ್ತು. ಆನಂದಪ್ರದರ್ಶನಾರ್ಥವಾಗಿ ಮಹಾರಾಣನು ಈ ದಿನ ದರ್ಬಾರನ್ನು ಮಾಡಿಕೊಂಡಿದ್ದನು. ಸರ್ವಸಾಮಂತರೂ ಅಲ್ಲಿ ಸೇರಿದ್ದರು. ತಾರಾಗಣದಿಂ ಪರಿವೃತನಾದ ಇಂದುವಿನಂತಿರುವ ಮಹಾರಾಣಾ ಲಕ್ಷ್ಮಣಸಿಂಹನು ಸಾಮಂತರಾಜರಂ ಕುರಿತು ಹೇಳಿದುದೇನಂದರೆ:—

"ಅಲ್ಲಾವುದೀನನಂತಹ ಪ್ರಚಂಡಬಲನಾದ ವೈರಿಯನ್ನು ಹತವೀರ್ಯನನ್ನಾಗಿ ಮಾಡಿದ ಈ ದಿನವು ಎಷ್ಟೋಭಾಗ್ಯವುಳ್ಳದ್ದಾಗಿದೆ! ಶ್ರೀ ಏಕಲಿಂಗಸ್ವಾಮಿಯ ದಯೆಯಿಂದ ಕ್ಷತ್ರಿಯರ ಮರ್ಯಾದೆಯು ರಕ್ಷಿಸಲ್ಪಟ್ಟಿತು. ಅಲ್ಲಾವುದೀನನ ಮನದಲ್ಲಿ ಮನುಷ್ಯರ ಅಂತವಿದ್ದುದಾದರೆ ಪುನಃ ಕ್ಷತ್ರಿಯರ ಮಾತನ್ನೆತ್ತುವುದಿಲ್ಲ." ಎಂದನು.

ಒಬ್ಬವೃದ್ಧಮಂತ್ರಿ:—ಮಹಾರಾಣರೇ! ಸುಲ್ತಾನನು ಈ ತಮ್ಮ ಶಿಕ್ಷೆಯಿಂದ ಸಾಯುವವರೆಗೂ ಈ ಪರಾಜಯವನ್ನು ಮರೆಯುವುದಿಲ್ಲ. ಅವನ ದುರ್ಭಾಗ್ಯವು ಅವನಿಗೆ ಪುನಃ ಯುದ್ಧದನೆನಪನ್ನುಂಟುಮಾಡಬೇಕು.

ರಾಣ:—ಇದರಲ್ಲಿ ಸ್ವಲ್ಪವೂ ಸಂಶಯವಿಲ್ಲ.

ಭೀಮಸಿಂಗ್:—ಈ ಯುದ್ಧದಲ್ಲಿ ವಿಜಯಶ್ರೀಯು ತಮ್ಮ ಕಂಠದಲ್ಲಿ ಮಾಲೆಯನ್ನು ಹಾಕಿದ್ದಾಳೆ. ಯವನರ ಸೇನೆಯು ಸಾವಿರಾರು ಜನರನ್ನು ಕಳೆದುಕೊಂಡಿತು. ಮತ್ತೆ ಕೆಲವರು ಬಂದಿಗಳಾಗಿದ್ದಾರೆ. ತಮ್ಮಲ್ಲಿ ಐನೂರುಜನ ವೀರರು ನಾಶವಾಗಿದ್ದಾರೆ. ಅವರಲ್ಲಿ ವೀರಸಿಂಹ, ಧರ್ಮಸಿಂಹ, ರಾಮಸಿಂಹ, ಮುಂತಾದ ವೀರರು ನಾಶವಾದರು. ಇದರಿಂದ ಖೇದವಾಗುತ್ತಿದೆ. ನಾನುಕೂಡಾ ನಿನ್ನೆಯ ಪ್ರಸಂಗದಲ್ಲಿ ತಮ್ಮ ದೃಷ್ಟಿಗೆ ಬೀಳುತ್ತಿರಲಿಲ್ಲ. ಆದರೆ, ತಮ್ಮ ವೀರಸೇನಾಪತಿಯಾದ ಶೂರಸೇನನು ಸಕಾಲದಲ್ಲಿ ಸಹಾಯಕ್ಕೆಬಂದು ನನ್ನನ್ನು ತನ್ನ ಕುದುರೆಯಮೇಲೇರಿಸಿ ಕರೆದುಕೊಂಡುಬಂದು ಬದುಕಿಸಿದನು. ಶೂರಸೇನನು ನನಗೆಷ್ಟು ಉಪಕಾರಮಾಡಿದ್ದಾನೆ!

ರಾಣಾ :—ಚಿಕ್ಕಪ್ಪನೇ ! ಆತನಿಂದ ನಿಮಗೊಬ್ಬರಿಗೇ ಉಪಕಾರವಾಗಿಲ್ಲ : ಆದರೆ ಚಿತ್ತೂರಿನ ಮರ್ಯಾದೆಯೂ ಅವನಿಂದಲೇ ರಕ್ಷಿಸಲ್ಪಟ್ಟಿತು. ನೀವು ನಾಶವಾಗಿದ್ದಲ್ಲಿ ಈ ನಿಮ್ಮ ರಾಣಾನೊಂದಿಗೂ ಜೀವಿಸುತ್ತಿರಲಿಲ್ಲ. ಹಾಗೆ ನಾನು ಒದಕಿನ್ನು [illegible] ನನ್ನನ್ನು ನಿಂದಿಸುತ್ತಿತ್ತು. ವಿಪತ್ಕಾಲದಲ್ಲಿ ತಾನು ಕಲ್ಲಿಯೊಳಗಿದ್ದು ಮುದುಕನಾದ ಚಿಕ್ಕಪ್ಪನನ್ನು ಯುದ್ಧಕ್ಕೆ ಕಳುಹಿದನೆಂದ 'ಛೀ ! ಛೀ !' ಎಂದು ತಿರಸ್ಕರಿಸುತ್ತಿದ್ದರು. ಶೂರಸೇನನು ನಿನ್ನೆಯ ದಿನದಲ್ಲಿ ನನ್ನ ಮರ್ಯಾದೆಯನ್ನು ರಕ್ಷಿಸಿದನು. ತಮ್ಮ ಉಪಕಾರವನ್ನು ಮರೆಯುವನಲ್ಲ.

ಶೂರಸೇನ :—ಮಹಾರಾಜರೇ ! ನಾನು ಇದರಲ್ಲಿ ಹೆಚ್ಚಾಗಿ ಮಾಡಿದುದು ಏನು? ತನ್ನ ಪ್ರಭುವನ್ನು ರಕ್ಷಿಸುವದು ಪ್ರತಿಯೊಬ್ಬನಿಗೂ ಕರ್ತವ್ಯವು. ಅದರಂತೆ ನಾನೂ ಮಾಡಿದೆನು. ಇಲ್ಲದಿದ್ದರೆ, ಬಹಳ ಕಠಿಣಪ್ರಸಂಗ ಒದಗುತ್ತಿತ್ತು !

ರಾಣಾ :—ಗುಲಾಬಸಿಂಗನೇ ! ನೀನೂ ಬಹು ಪ್ರಯಾಸಪಟ್ಟೆ. ಆದರೆ ನಿನ್ನೆ ಕೋಟೆಯ ಬುರುಜಿನಲ್ಲಿ ನಿಂತು ಆ ತರುಣನಾದ ಪುರುಷನೊಬ್ಬನು ಬಾಣವನ್ನು ಬಿಟ್ಟನಷ್ಟೆ. ಆತನಾರು ? ಆತನ ಪರಿಚಯವು ನಮಗಿಲ್ಲ. ನಮ್ಮ ಪ್ರಜೆಗಳಲ್ಲಿ ಯಾರೂ ಇಷ್ಟು ಶರಸಂಧಾನದ ಕೌಶಲವುಳ್ಳವರಿಲ್ಲ. ಇದು ಆಶ್ಚರ್ಯ.

ಗುಲಾಬಸಿಂಗ :—ಮಹಾರಾಣಾರವರೇ ! ನನಗೂ ಆತನ ಪರಿಚಯವಿಲ್ಲ.

ಭೀಮಸಿಂಗ :—ಅವನನ್ನು ನಾನೂ ನೋಡಿಲ್ಲ.

ರಾಣಾ :—ಗುಲಾಬಸಿಂಗನೇ ! ನೀನು ಕೋಟೆಯಲ್ಲಿ ತಿರುಗಿ ಸೂಕ್ಷ್ಮರೀತಿಯಿಂದ ಆತನನ್ನು ಹುಡುಕಿ ಕರೆದುಕೊಂಡು ಬಾ ! ಆತನ ಪರಿಚಯವನ್ನು ಗೌರವಿಸುವದು ನಮ್ಮ ಕರ್ತವ್ಯ. ಶೂರಸೇನನೇ ! ನಿನ್ನ ಬಂದೀವಾನರುಗಳಾರೆಂಬುದು ನಿನಗೆ ತಿಳಿಯಿತೇ ?

ಶೂರಸೇನ :—ಇಲ್ಲ ಮಹಾರಾಣಾರವರೇ ! ರಾಮಸಿಂಗರು ಆ ವಿಷಯವನ್ನೇನೂ ಹೇಳಿಲ್ಲ. ನಾನು ಕೇಳಿದರೆ ಯುದ್ಧಾಂತ್ಯದಲ್ಲಿ ಹೇಳುವೆನೆಂದರು.

ರಾಣಾ :—ಗುಲಾಬಸಿಂಗನೇ ! ಈತನ ವಿಷಯದಲ್ಲಿ ನಿನ್ನ ತರ್ಕವೇನು?

ಗುಲಾಬಸಿಂಗ :—ಮಹಾರಾಣಾರವರೇ ! ಆತನನ್ನು ನೋಡಿದಂದಿನಿಂದ ನನ್ನ ಮನದಲ್ಲಿ ವಿಲಕ್ಷಣವಾದ ಭಾವವುಂಟಾಗಿದೆ. ಮನಸ್ಸಿನಲ್ಲಿ ಆನಂದೋತ್ಸಾಹವುಂಟಾಗುತ್ತಿದೆ. ನಿಜವೇನೋ ಶ್ರೀನಿವಾಸನೇ ಬಲ್ಲನು !

ರಾಣಾ :—ನನ್ನ ಸ್ಥಿತಿಯೂ ಹಾಗೆಯೇ ಆಗಿದೆ. ಬಾಲ್ಯದಲ್ಲೇ ಪುತ್ರನು ದೂರದೇಶಕ್ಕೆ ಪ್ರಯಾಣಮಾಡಿ ಹಿಂತಿರುಗಿ ಬಾರದೆ ಹೋದನೆಯೋ, [illegible]

'ಮಹಾರಾಜರೇ! [illegible] ಈ ಪತ್ರವನ್ನು ನೋಡಿ [illegible] ಈ ಕಾಲ ದಲ್ಲಿ ರಾಜಪುತ್ರರನ್ನು ಹಿಡಿದು ಕೊಂಡು [illegible]. ನಾನು [illegible]ವೆನು.

ಅಷ್ಟರಲ್ಲಿ ಒಬ್ಬ [illegible] ಬಂದು [illegible]ನು, 'ಮಹಾರಾಜರಿಗೆ ಜಯವಾಗಲಿ! [illegible] ಸುಲ್ತಾನನ [illegible] ಸಂಧಿ ಪತ್ರವನ್ನು ಕಳಿಸಿದ್ದಾನೆ. ಅಪ್ಪಣೆಯಾದರೆ ಒಳಗೆ ಕರೆತರಲೆ?' ಎಂದನು.

ರಾಣಾ:—ಕರೆದುಕೊಂಡು ಬಾ.

ಅಲ್ಲಾವುದ್ದೀನನ ದೂತನು [illegible] ಬಂದನು; ವಂದಿಸಿ ಸುಲ್ತಾನನ ಪತ್ರವನ್ನು ಮಹಾರಾಣಾರ ಪಾದದ ಹತ್ತಿರ ಇಟ್ಟನು. ಆ ಪತ್ರವನ್ನು ರಾಣನು [illegible] ಕೊಟ್ಟನು; ಅವನು ಪುರೋಹಿತನಿಗೆ ಕೊಟ್ಟನು. ಪುರೋಹಿತನು [illegible] ದೂತನನ್ನು ಹೊರಗೆ ಕೂತು [illegible] ದನು. ದೂತನು ಹೊರಗೆ ಹೋದಮೇಲೆ ಅವನು ಆ ಪತ್ರವನ್ನು [illegible] ಓದಿದನು. ಪತ್ರವು [illegible] ದಮೇಲೆ ಮಹಾರಾಣನು "ದುಷ್ಟ! ಪಾಪಿ!!" ಎಂದನು. ಸರ್ದಾರರು [illegible]ರಾದರು. ಬಳಿಕ ರಾಣನು ಹೇಳಿದ್ದೇನಂದರೆ:—"ವೀರರಿರಾ! ದುಷ್ಟ ಸುಲ್ತಾನನ ಸ್ವಭಾವದರ್ಶಕವಾದ ಪತ್ರವನ್ನು ತಾವು ಕೇಳಿದಿರಿ. ಪ್ರಥಮತಃ ಅವನು ಧರ್ಮದಿಂದಲೂ, [illegible] ಕಾರಣವನ್ನು ತೋರಿಸಿ ಯುದ್ಧಕ್ಕೆ ಪ್ರಾರಂಭಿಸಿದನು. ಈಗ ಯುದ್ಧದಲ್ಲಿ ಪರಾಜಯವಾಯಿತೆಂದು ನಿರ್ಲಜ್ಜನಾದ ನನ್ನನ್ನು ಪ್ರಾರ್ಥಿಸುವದಕ್ಕೆ ಸಿದ್ಧನಾದನು! ಇದರಮೇಲೆ ತಮ್ಮ [illegible]ನು?" ಎಂದನು. ಸಭೆಯಲ್ಲಿ [illegible] ವೀರರೆಲ್ಲರೂ, "ದೇವಿಯಾದ ಪದ್ಮಿನಿಯು ನಮ್ಮ ಮಾತೃವಾಗಿದ್ದಾಳೆ" ಎಂದು ಕೂಗಿದರು.

ಕೂಡಲೆ ಭೀಮಸಿಂಗನು [illegible] ಹೇಳಿದ್ದೇನಂದರೆ:—"ನನ ಬಾಂಧವರೇ! ಸ್ವಲ್ಪ ಶಾಂತರಾಗಿರಿ; ಮತ್ತು ನಾನು ಹೇಳುವದನ್ನು ಸಮಾಧಾನದಿಂದ ಕೇಳಿರಿ. ರಾಜಪುತ್ರರೂ, ರಾಜಪುತ್ರರ ಸ್ತ್ರೀಯರೂ [illegible] ಅಧರ್ಮವಾರ್ತೆಯನ್ನು ಎಂದಿಗೂ [illegible] ಕೇಳುವದಿಲ್ಲ. ನಾವು ರಾಜಪುತ್ರರಾಗಿದ್ದೇವೆ. ನಾವು ನಮ್ಮ ತಾಯಿ, ಮಗಳು, ಹೆಂಡತಿ [illegible] ರಕ್ಷಣೆಗಾಗಿ ಪ್ರಾಣಕೊಡುವೆವು. ಆದರೆ, [illegible]" ಈ ರೀತಿಯಾಗಿ [illegible]ವಾದ ಬಳಿಕ [illegible] ಭೀಮಸಿಂಗನಿಗೆ ಮುಂದಕ್ಕೆ ಮಾತಾಡಲು [illegible]. ಇದರಿಂದ ಭೀಮಸಿಂಗನು ಕ್ರೋಧಯುಕ್ತ ದೃಷ್ಟಿಯಿಂದ ಸರ್ವತ್ರ ನೋಡಿದನು. ಅವನು ಹೇಳುವದೇನಂದರೆ:—"ಬಾಂಧವರೇ! ನನಗೆ ಸ್ವಲ್ಪ ಮಾತಾಡಲು ಅವಕಾಶ ಕೊಡಿರಿ." ಎಂದನು. ಬಳಿಕ ಯಾರೂ ಮಾತಾಡಲಿಲ್ಲ. ಸಭೆಯು [illegible]. ಬಳಿಕ ಭೀಮಸಿಂಗನು ಹೇಳಿದ್ದೇನಂದರೆ:—"ನಾನು ಹೇಳುವುದರಲ್ಲಿ ಅಧರ್ಮವೂ, ಲಜ್ಜೆಯೂ, ಕುಲ

ಕಲಂಕವೂ, ಧನಹಾನಿಯೂ ಆಗುವದಿಲ್ಲ. ಅಂತಹ ಮಾತನಾಡಿದರೆ, ನನ್ನ ನಾಲಿಗೆಯು ತುಂಡುತುಂಡಾದೀತು. ಮಹಾರಾಣಾವರೇ! ಇದು ವಿಶ್ವಲೀಲೆಯಾಗಿದೆ! ವಿಶ್ವಾಮಿತ್ರನಂತಹ ಋಷಿವರ್‍ಯನಿಗೂ ಇಂತಹ ಸ್ಥಿತಿಯು ಆಗಲಿಲ್ಲವೇ? ಆದರೆ, ಅಲ್ಲಾವುದೀನನಂತವನಿಗೆ ಪಶ್ಚಾತ್ತಾಪವಾಗುವುದರಲ್ಲಿ ಆಶ್ಚರ್ಯವೇನು? ಜಲಾಲುದೀನನಂತಹ ಧರ್ಮಿಷ್ಠನಾದ ಚಾದಷಹನನ್ನೂ ನಿರ್ದೋಷಿಯಾದ ಯುವರಾಜನನ್ನೂ ಅವನ ರಾಣಿಯರನ್ನೂ ವಧಿಸಿದಮೇಲೆ ಆ ಪಾಪಿಯ ಆತ್ಮವು ಅವನಿಗೆ ದುಷ್ಕೃತ್ಯದ ನೆನಪನ್ನುಂಟುಮಾಡುವದಿಲ್ಲವೇ? ಅವನಿಗೆ ಪಶ್ಚಾತ್ತಾಪವಾಗುವದು ಸಹಜವು. ಅವನೂ ಮನುಷ್ಯನು. ಮನುಷ್ಯನು ಪಾಪವನ್ನು ಮಾಡುತ್ತಾನೆ; ಮತ್ತೂ ಪಶ್ಚಾತ್ತಾಪಹೊಂದುತ್ತಾನೆ! ಹಾಗೆಯೇ ಸುಲ್ತಾನನು ತನ್ನ ಭಯಂಕರಕೃತ್ಯದ ಪಾಪಕ್ಕೆ ಪಶ್ಚಾತ್ತಾಪ ಹೊಂದುವದಿಲ್ಲವೇ?" ಎಂದನು

ರಾಣಾ:—ಪಶ್ಚಾತ್ತಾಪ ಪಟ್ಟೇಪಡುವನು. ಅವನು ನನ್ನ ಮಾತೆಯ ಮುಖದರ್ಶನಮಾಡಲು ಇಚ್ಛಿಸುತ್ತಾನೆ!

ಒಬ್ಬ ಸಾಮಂತ:—ಮಹಾರಾಣರವರು ರಾಜಪುತ್ರಕುಲಕ್ಕೆ ಸಹಜವಾದ ಉತ್ತರಕೊಟ್ಟರು! ಸತ್ಯವನ್ನೇ ಹೇಳಿದರು!

ಭೀಮಸಿಂಗ:—ಪೃಥ್ವೀಸಿಂಗರೇ! ನೀವು ಯೋಗ್ಯವಾದ್ದನ್ನೇ ಹೇಳಿದಿರಿ! ಆದರೆ, ಪಾಪಿಯು ಪಾಪದೆಶೆಯಿಂದ ಮುಕ್ತನಾಗದೇಕೆಂದು ಪ್ರಾರ್ಥಿಸುತ್ತಿರುವಾಗ ಅವನಿಚ್ಛೆಯನ್ನು ತೃಪ್ತಿಪಡಿಸಲು ಕ್ಷತ್ರಿಯ ಕುಲದೀಪಕರು ಸಂಶಯಪಡಬಹುದೇ?

ಮಹಾರಾಣಾ:—ಮಾತೆಯ ಮುಖದರ್ಶನದ ಅವನಿಚ್ಛೆಯನ್ನು ತೃಪ್ತಿಪಡಿಸಲು ರಾಜಪುತ್ರರೆಂದಿಗೂ ಒಪ್ಪುವುದಿಲ್ಲ.

ಭೀಮಸಿಂಗ:—ಮೇವಾಡದ ರಾಣರವರ ಮುಖದಿಂದ ಈ ಮಾತು ಹೊರಡಬಹುದೇ? ರಾಜಕುಲದೀಪಕರಾದ ರಾಜಾಧಿರಾಜರು ಹೀಗೆ ಹೇಳಬಹುದೇ! ಮಹಾರಾಣರೇ! ಕ್ಷತ್ರಿಯವೀರರು ಶರಣಾಗತರ ಆಶ್ರಿತರು ಮತ್ತು ಪಾಪಿಗಳ ರಕ್ಷಕರು.

ಸಭೆಯಲ್ಲಿ ಒಬ್ಬನಾದರೂ ಮಾತಾಡಲಿಲ್ಲ.

ಭೀಮಸಿಂಗ:—ಪಾಪಿಗಳನ್ನು ಉದ್ಧರಿಸಿ ಸತ್ಯಮಾರ್ಗಕ್ಕೆ ತಿರುಗಿಸುವುದು ರಾಜಪುತ್ರರಿಗೆ ಭೂಷಣವು. ಮಹಾರಾಣರೇ! ಸುಲ್ತಾನನು ನನ್ನ ಕಾಂತೆಯನ್ನು ಭಗಿನಿಯಂತೆ ತಿಳಿಯುತ್ತಿದ್ದಾನೆ; ಮತ್ತು ಪವಿತ್ರಬುದ್ಧಿಯಿಂದ ಇವಳ ಮುಖದರ್ಶನದಲ್ಲಿ ಅಭಿಲಾಷೆಯುಳ್ಳವನಾಗಿದ್ದಾನೆ. ಅವನ ಪ್ರಾರ್ಥನೆಯನ್ನು ಸ್ವೀಕರಿಸಬೇಕೆಂಬುದೇ ನನ್ನ ಅಭಿಪ್ರಾಯವು. ಕಲಹಶಾಂತಿಯನ್ನುಂಟುಮಾಡದಿದ್ದರೆ, ನಿಷ್ಕಾರಣವಾಗಿ ಅನೇಕ ನರರನ್ನು ವಧೆಮಾಡಿಸಿ ಅನೇಕ ಅಬಲೆಯರನ್ನು ವೈಧವ್ಯಪಂಕದಲ್ಲಿ ಮುಳುಗಿಸಿ, ಅನೇಕ ಬಾಲಕರನ್ನು ನಿರಾಧಾರರನ್ನಾಗಿ ಮಾಡುವದರಲ್ಲಿ ಲಾಭವೇನು?

ಗೋರಾಸಿಂಹ:—ಅಲ್ಲಾವುದ್ದೀನನಂತಹ ಕೃತ್ರಿಮಿಯಲ್ಲಿ ಹೇಗೆ ವಿಶ್ವಾಸವಿಡಬೇಕು? ಜಲಾಲುದ್ದೀನನನ್ನೇ ಮೋಸದಿಂದ ಕೊಂದನು. ನಿಮ್ಮನ್ನು ಮೋಸಗೊಳಿಸುವದಿಲ್ಲವೆಂದು ಹೇಗೆ ನಂಬಬೇಕು? ಅವನ ಸ್ವಭಾವವು ಅತಿ ವಿಚಿತ್ರವಾಗಿದೆ. ಅವನು ಮೋಸಮಾಡ್ಯಾನು. ಜಾಗರೂಕರಾಗಿರಬೇಕು.

ಬಾದಲಸಿಂಹ:–ಸುಲ್ತಾನನು ಮೋಸಮಾಡುವವನಾಗಲಾರನೆಂದು ಊಹಿಸುತ್ತೇನೆ.

ಗೋರಾಸಿಂಹ:—ಬಾದಲಸಿಂಹನೇ! ನೀನು ಹೇಳುವದು ಉಚಿತವೇ ಸರಿ. ಆದರೆ ರಾಜನೀತಿಯನ್ನನುಸರಿಸಿ ಕೀಟಕಸಮನಾದ ಶತ್ರುವನ್ನು ಆನೆಯಂತೆ ಭಾವಿಸಿ ನಾವು ನಿತ್ಯವೂ ಜಾಗರೂಕರಾಗಿರಬೇಕು. ಅಜಾಗರೂಕರಾಗಿದ್ದರೆ ವಿಪಚ್ಚಕ್ರವು ನಮ್ಮ ಸುತ್ತಲೂ ತಿರುಗಬಹುದು. ಇದನ್ನೆಂದಿಗೂ ನಾವು ಮರೆಯಬಾರದು. ಯವನರು ಈ ರಾಜಕೀಯಕಾರ್ಯದಲ್ಲಿ ಧರ್ಮವೆಂದರೇನೆಂಬುದನ್ನು ಸ್ವಲ್ಪವೂ ಲಕ್ಷಿಸುವುದಿಲ್ಲ.

ಬಾದಲ:—ಕಾರಣವೇನು?

ಗೋರಾಸಿಂಹ:—ಪೃಥ್ವೀರಾಜನಿಗೆ ವಿಶ್ವಾಸಘಾತವಾಗಲಿಲ್ಲವೇ?

ಗುಲಾಬಸಿಂಗ:—ಗೋರಾಸಿಂಹನ ವಾಕ್ಯವು ವಿಚಾರಣೀಯವಾಗಿದೆ.

ರಾಣ:—ನಿಮ್ಮೆಲ್ಲರನುಮತಿಯೂ ಭಿನ್ನವಾಗಿದೆ. ಆದರೆ ಈ ಪತ್ರಕ್ಕೇನು ಉತ್ತರಕೊಡಬೇಕು?

ಗೋರಾಸಿಂಹ:—ಸುಲ್ತಾನನಿಗೆ ಬರೆಯುವದೇನೆಂದರೆ:—“ನಾವು ನಿಮ್ಮ ವಿನಂತಿಯನ್ನು ಮನ್ನಿಸಿದ್ದೇವೆ. ಆದರೆ ಅದರಲ್ಲಿ ಒಂದು ಪ್ರತಿಬಂಧಕವೇನೆಂದರೆ,—ಪದ್ಮಿನಿಯ ಪ್ರತ್ಯಕ್ಷದರ್ಶನವು ತಮಗೆ ಆಗುವದಶಕ್ಯವಾಗಿದೆ. ನಿಮಗೆ ಕನ್ನಡಿಯ ಮೂಲಕ ಆಕೆಯ ಪ್ರತಿಬಿಂಬವು ಮಾತ್ರ ದರ್ಶನವಾದೀತು! ಈ ದರ್ಶನಲಾಭದಿಂದ ನಿಮ್ಮ ಪಾಪಕ್ಕೆ ಪ್ರಾಯಶ್ಚಿತ್ತವು ಪೂರ್ಣವಾಗಿ ಆಗುವದು. ಇದು ತಮಗೊಪ್ಪಿದರೆ, ನೀವು ನಿಮ್ಮ ಅಂಗರಕ್ಷಕರೊಡನೆ ಚಿತ್ತೂರು ದುರ್ಗದೊಳಗೆ ಶಸ್ತ್ರಹೀನರಾಗಿ ಬರಬೇಕು.” ಎಂದು ಬರೆಯಬೇಕು.

ರಾಣ:—ಈ ದಾರಿಯು ಪ್ರಶಸ್ತವು. ಅವನು ಕೋಟೆಯೊಳಕ್ಕೆ ಅಂಗರಕ್ಷಕರೊಡನೆ ಬಂದರೆ ಇಲ್ಲಿ ಯಾವ ಕೃತ್ರಿಮವನ್ನು ತೋರಿಸ್ಯಾನು? ಹಾಗೆ ತೋರಿಸಿದರೆ ಅವನಿಗೇ ಅಪಾಯಕರವು.

ಗೋರಾಸಿಂಹ:—ನಿಜ. ಆದರೂ ನಮ್ಮ ಸೇನೆಯನ್ನು ಸುಲ್ತಾನನು ಬರುವದಕ್ಕೆ ಮೊದಲೇ ಸಿದ್ಧಪಡಿಸಿಕೊಂಡಿರಬೇಕು. ಸ್ವಪ್ನದಲ್ಲಿಯೂ ಅವನನ್ನು ನಂಬಬಾರದು. ಇದು ಬುದ್ಧಿವಂತರ ಕಾರ್ಯವಲ್ಲ. ಆದರೆ ಈ ಕಲಹವು ನನ್ನದು. ನಾವು ನಿಶ್ಚಿಂತರಾಗಿರಬೇಕು.

ಎಲ್ಲರ ಅನುಮತಿಯಂತೆಯೂ, ಗೋರಾಸಿಂಹನ ಇಚ್ಛೆಯಂತೆಯೂ ಅಲ್ಲಾವುದ್ದೀನನಿಗೆ ಪ್ರತ್ಯುತ್ತರವನ್ನು ಬರೆದು ಕಳುಹಿಸಿದರು. ಕ್ಷತ್ರಿಯರ ಸಭೆಯಲ್ಲಿ ಉತ್ಸವವು ಹರಡಿಕೊಂಡಿತು.

ಅಲಾವುದ್ದೀನನು ದೂತನ ಆಗಮನವನ್ನು ನಿರೀಕ್ಷಿಸುತ್ತಿದ್ದನು. ಮಧ್ಯಾಹ್ನಕಾಲದಲ್ಲಿ ದೂತನು ಪ್ರತ್ಯುತ್ತರದೊಡನೆ ಬಂದನು. ಅದನ್ನೋದಿ ಸುಲ್ತಾನನು ಹರ್ಷಿತನಾದನು. ರಾಜಪುತ್ರರ ಸತ್ಯವಾಕ್ಯದಲ್ಲಿ ಪೂರ್ಣವಾಗಿ ನಂಬುಗೆಯುಂಟಾಯಿತು ಬಳಿಕ ಅವನು ಅಂಗರಕ್ಷಕರೊಡನೆ ಚಿತ್ತೂರಿಗೆ ಹೋಗಲುದ್ಯುಕ್ತನಾದನು. ಅವನ ಮನದಲ್ಲಿ ವಿಶ್ವಾಸಘಾತದ ಭೀತಿ ಇರಲಿಲ್ಲ. ಕೂಡಲೆ, ದೂತಮುಖದಿಂದ ಈ ಸಂದೇಶವನ್ನು ಕಳುಹಿಸಿದನು "ಮಹಾರಾಣರಿಗೆ ಹೇಳು; ತಮ್ಮ ಔದಾರ್ಯಕ್ಕೂ, ನನ್ನಲ್ಲಿ ತೋರಿಸಿದ ಸದ್ಭಾವಕ್ಕೂ ನಾನು ತಮಗೆ ಋಣಿಯಾಗಿದ್ದೇನೆ. ನಾನು ನನ್ನ ಅಂಗರಕ್ಷಕರೊಡನೆ ನಾಳೆ ಸೂರ್ಯೋದಯಕಾಲಕ್ಕೆ ಚಿತ್ತೂರು ದುರ್ಗದೊಳಕ್ಕೆ ಬರುವೆನು! ತಾವು ತಕ್ಕ ವ್ಯವಸ್ಥೆ ಮಾಡಿಸಬೇಕು." ದೂತನು ಈ ಸಂದೇಶವನ್ನು ಸಾಯಂಕಾಲದ ಸಮಯದಲ್ಲಿ ಮಹಾರಾಣರಿಗೆ ವಿಜ್ಞಾಪಿಸಿದನು. ಇದರಿಂದ ರಾಜಪುತ್ರರು ಸುಲ್ತಾನನ ಆಗಮನ ವಿಷಯದಲ್ಲಿ ತಕ್ಕ ಸಿದ್ಧತೆಯನ್ನು ಮಾಡುತ್ತಿದ್ದರು.

ಭಾಮಿನೀ ಷ|| ಕಲಹದಿಂ ಸುಖದೊರೆಯದೆನುತಾ |
ನಲವಿನಿಂದಲೆ ಭೀಮನೃಪತಿಯು |
ಛಲದಿ ಕೋಪವನುಳಿದು ಡಿಲ್ಲಿಯಪತಿಗೆ ಪೇಳಿದನು ||
ಕಲುಷಕುಮತಿಯ ನೆನೆಯದಿರೆ ನೀಂ |
ಲಲಿತದರ್ಪಣದಲ್ಲಿ ನನ್ನಯ |
ಲಲನೆಪ್ರತಿಬಿಂಬವನು ತೋರಿಸೆನಿನಗೆ ನೋಡೆಂದಾ ||

ಪ್ರಕರಣ 23

ವಾಚಕರೇ! ನಡೆಯಿರಿ. ಈಗ ನಾವು ಮಹಾರಾಣಿಯಾದ ಪದ್ಮಿನಿಯ ದರ್ಶನ ಮಾಡುವ! ನಮ್ಮ ಕಥಾನಾಯಿಕೆಯಾದ ಪದ್ಮಿನಿಯು ಅರಮನೆಯ ದಿವಾನಖಾನೆಯಲ್ಲಿ ಚಿಂತಾತುರಳಾಗಿ ಕುಳಿತಿರುವಳು. ಈಗ ಬಿಳಿಯ ಸೀರೆಯನ್ನುಟ್ಟಿರುವಳು. ಹಸ್ತದಲ್ಲಿ ಸೌಭಾಗ್ಯಕಂಕಣವನ್ನೂ ಕಂಠದಲ್ಲಿ ಮುತ್ತಿನ ಹಾರವನ್ನು ಮಾತ್ರ ಧರಿಸಿರುವಳು. ಇಂತಹ ಸಾಧಾರಣವಾದ ಅಲಂಕಾರಗಳಿಂದ ಭೂಷಿತಳಾಗಿ ಚಿಂತಾಗ್ರಸ್ತಳಾಗಿರುವಳು. ಆಕೆಯ ರೂಪದಲ್ಲಾವ ನ್ಯೂನತೆಯೂ ಇಲ್ಲ. ಆಕೆಯ ನೈಸರ್ಗಿಕವಾದ ಸೌಂದರ್ಯವು

ಆಕಸ್ಮಿಕವಾದ ಖೇದವನ್ನುಂಟಾಗಿದೆ. ಬಹಳ ಹೊತ್ತಿನಿಂದ ಮುಗ್ಧಳಾಗಿರುವಳು. ಹೃದಯಂಗಮವಾದ ಶೋಕವನ್ನು ಅಸ್ಪಷ್ಟವಾದ ಮಾತಿನಿಂದ ಕಮ್ಮಿ ಮಾಡಲು ಯತ್ನಿಸುತ್ತಿರುವಳು.

"ಹಾ! ನನ್ನ ಅದೃಷ್ಟದಲ್ಲಿ ಏನು ಬರೆದಿದೆಯೋ ಯಾರು ಬಲ್ಲರು? ಕೇವಲ ನನ್ನ ಸೌಂದರ್ಯದಿಂದಲೇ ನನ್ನ ಪ್ರಾಣನಾಥನಿಗೂ, ಚಿತ್ತೂರು ನಿವಾಸಿಗಳೆಲ್ಲರಿಗೂ, ಮಹಾರಾಣಾರಿಗೂ, ಆಪತ್ತು ಬಂತಲ್ಲವೆ? ಶಿವ, ಶಿವಾ! ನನ್ನ ಇಂತಹ ಸೌಂದರ್ಯಕ್ಕೆ ಬೆಂಕಿ ಬೀಳಲಿ! ನನ್ನನ್ನು ನೋಡಿದ ಪ್ರಾಣನಾಥನ ಮನದಲ್ಲಿ ಯಾವಾಗಲೂ ಆನಂದೋರ್ಮಿಯು ಪ್ರವಹಿಸುತ್ತಿತ್ತೋ ಈಗ ನನ್ನನ್ನು ನೋಡದ ಆ ನಾಥನ ಅಂಗದಲ್ಲೇ ಬೆಂಕಿಬಿದ್ದಂತಾಗಿರಬೇಕಲ್ಲವೆ! ಅಯ್ಯೋ! ಬ್ರಹ್ಮದೇವ! ಇಷ್ಟಕ್ಕಾಗಿಯೇ ನೀನೇಕೆ ನನ್ನನ್ನು ಸೃಜಿಸಿದೆ? ಚಿತ್ತೂರೇ! ಮಾತೃಭೂಮಿಯಾದ ಚಿತ್ತೂರೇ! ಈ ಪದ್ಮಿನಿಯ ದೆಸೆಯಿಂದ ನಿನಗಿಂತಹ ಕಷ್ಟವುಂಟಾಯಿತಲ್ಲವೇ? ಅಭಾಗಿನಿಯಾದ ಪದ್ಮಿನಿಯೇ! ನೀನಿಷ್ಟು ಸುಂದರಿಯಾಗಿರದಿದ್ದಲ್ಲಿ ಆ ಪಿಶಾಚಪ್ರಕೃತಿಯ ಅಲ್ಲಾವುದ್ದೀನನ ದೃಷ್ಟಿಯು ಯಾವಾಗಲೂ ಚಿತ್ತೂರು ಕಡೆಗೆ ತಿರುಗುತ್ತಿರಲಿಲ್ಲವಲ್ಲ! ಪ್ರಾಣೇಶ್ವರ! ಪತಿಗೆ ಸುಖ ಕೊಡುವುದೇ ಸ್ತ್ರೀಧರ್ಮವಾಗಿದೆ. ಆದರೆ ಸುಖಕೊಡುವುದಂತಿರಲಿ; ಅದಕ್ಕೆ ಪ್ರತೀಕಾರವಾಗಿ ಚಂಡಾಲಿಯಾದ ನಾನು ತಮಗೆ ದುಃಖದಾತೆಯಾಗಿರುವೆನು. ನನ್ನಿಂದ ತಮಗೂ, ಎಲ್ಲಾ ಚಿತ್ತೂರು ನಿವಾಸಿಗಳಿಗೂ, ಸಂಕಟವುಂಟಾಗುವದೆಂದು ತಿಳಿದಿದ್ದಲ್ಲಿ ನಿಜವಾಗಿ ನಾನು ತಮ್ಮ ಕೈಯನ್ನು ಹಿಡಿಯುತ್ತಿರಲಿಲ್ಲ. ಹಾಗಾಗಿದ್ದಲ್ಲಿ ಚೆನ್ನಾಗಿತ್ತು. ತಮಗಿಂತಹ ವಿಪತ್ತಿನಲ್ಲಿ ಬೀಳುವ ಸಂಭವವುಂಟಾಗುತ್ತಿರಲಿಲ್ಲ. ಆದರೆ, ಅದೃಷ್ಟದಲ್ಲಿ ಬರೆದಿರುವುದನ್ನು ಎಷ್ಟು ಹೇಳಿದರೂ ಸ್ವಲ್ಪವೇ! ಇದೆಲ್ಲವೂ ನನ್ನ ದುರ್ಭಾಗ್ಯದೋಷವಾಗಿದೆ! ಪೂರ್ವಜನ್ಮದ ಪಾತಕಕ್ಕಿದು ಪ್ರಾಯಶ್ಚಿತ್ತವು! ಆದರೂ, ಈಗಲೂ ಪ್ರಾಣನಾಥರ ಪ್ರೀತಿಯು ನನ್ನಲ್ಲಿ ಮೇರುಪರ್ವತದಂತೆ ವೃದ್ಧಿಹೊಂದುತ್ತಿದೆ. ಇದೆಷ್ಟಾಶ್ಚರ್ಯವು? ಪ್ರಾಣನಾಥನೇ! ಈ ದೀನ ದಾಸಿಯಲ್ಲಿ ಯಾವ ತಮ್ಮ ಕೃಪೆಯು ಇರುವದೋ ಅದಕ್ಕೆ ನಾನು ಸರ್ವಥಾ ಅಪಾತ್ರಳು. ಪ್ರಾಣೇಶ್ವರಾ! ತಮ್ಮ ಸುಖಮಾರ್ಗಕ್ಕೆ ನಾನು ಕಂಟಕರೂಪಳಾಗಿದ್ದೇನೆ. ಉಪಕಾರಕ್ಕೆ ಪ್ರತ್ಯುಪಕಾರವೇ ಆಗುವದೆಂಬ ಲೋಕೋಕ್ತಿಯು ನನ್ನಲ್ಲಿ ವಿರೋಧವುಳ್ಳದ್ದಾಗಿದೆ. ಪ್ರಾಣನಾಥನ ಉಪಕಾರಕ್ಕೆ ಪ್ರತಿಯಾಗಿ ಅಪಕಾರ ಮಾಡುತ್ತಿರುವೆನು. ಎಲೈ, ಪಾಪಿಜೀವವೇ! ನೀನು ಈಗಲೂ ಈ ಶರೀರದ ಆಶ್ರಯವನ್ನು ಏಕೆ ಬಿಡಲೊಲ್ಲೆ? ಚಿತ್ತೂರೆಲ್ಲವೂ ಭಸ್ಮವಾದಮೇಲೆ ಈ ದೇಹವನ್ನು ಬಿಡಬೇಕೆಂದು ಇಚ್ಛಿಸುವಿಯಾ? ಹಾಗೆ ನಿಶ್ಚೈಸಿದ್ದಲ್ಲಿ ನೀನು ನಿರ್ಲಜ್ಜೆಯುಳ್ಳದ್ದೇ ಸರಿ. ಛೀ! ಛೀ! ಪಾಪಿ ಪದ್ಮಿನಿಯೇ! ಹೀಗೆ ಭೂಮಿಗೆ ಭಾರವಾಗಿರುವದು ನಿನಗೆ ಯೋಗ್ಯವಲ್ಲ. ನೀನು ಆತ್ಮಹತ್ಯ ಮಾಡಿಕೊ! [illegible] ಚಿಂತೆಯನ್ನು ಪರಿಹರಿಸಲು ಇದೇ ಸುಲಭಮಾರ್ಗವು." ಎಂದು

ಹೇಳಿಕೊಳ್ಳುತ್ತ ಸ್ತಬ್ಧಳಾಗುತ್ತಿರುವಳು. ಮನಸ್ಸಿನಲ್ಲಿಯೇ, „ಏನು? ನಾನು ಆತ್ಮಹತ್ಯೆ ಮಾಡಿಕೊಳ್ಳಲೇ! ರಾಜಪುತ್ರ ಸ್ತ್ರೀಯರಿಗೆ ಅಂತಹ ಮರಣವು ಯೋಗ್ಯವೇ? ಕೇವಲ ಸ್ವಾರ್ಥಕ್ಕಾಗಿ ನಾನೊಬ್ಬಳೇ ದುಃಖದಿಂದ ಮುಕ್ತಳಾಗಲೇ? ಇಲ್ಲ ನಾನು ವೀರಪತ್ನಿಯೂ, ಕ್ಷತ್ರಿಯ ಕನ್ಯೆಯೂ ಆಗಿದ್ದೇನೆ. ನಾನು ಚಹ್ವಾಣ ವಂಶದಲ್ಲಿ ಹುಟ್ಟಿ ಸೂರ್ಯವಂಶೀಯನ ಪತ್ನಿಯಾಗಿದ್ದೇನೆ. ನನ್ನ ಮನದಲ್ಲಿ ಇಂತಹ ಅಮಂಗಲವಿಚಾರವೇಕೆ ಬಂತು! ನಿಜವಾಗಿ ನನಗೆ ಭ್ರಮೆಯಾಗಿರಬೇಕು. ಈಶ್ವರನೇ! ನನಗೆ ಸಹಾಯಮಾಡು! ಶ್ರೀ ಏಕಲಿಂಗಸ್ವಾಮಿಯೇ! ನನಗೆ ಮಾರ್ಗತೋರಿಸು. ಪಾಪಿಯಾದ ಅಲ್ಲಾವುದ್ದೀನನೇ! ನನ್ನ ಸತೀತ್ವವನ್ನು ಹೇಗೆ ನಾಶಮಾಡುವಿಯೋ ನೋಡುವ! ಚಂಡಾಲನೇ! ರಾಜಪುತ್ರರ ದೇಹದಲ್ಲಿನ ರಕ್ತವು ಹೇಗಿದೆಯೆಂಬುದನ್ನು ಬಲ್ಲೆಯಾ? ರಾಜಪುತ್ರರಮಣಿಯು ಧನಲೋಭದಿಂದ ಸತೀಧರ್ಮಚ್ಯುತಳಾಗುವಳೆಂದು ತಿಳಿದೆಯೋ? ಹಾಗಾದರೆ ಇದು ನಿನ್ನ ಭ್ರಾಂತಿಯೇ ಸರಿ. ಧರ್ಮಪ್ರತಿಜ್ಞಾಪಾಲನಗಳಲ್ಲಿ ಸರಿಯಾದವರು ಕ್ಷತ್ರಿಯರಲ್ಲದೆ ಮತ್ತಾರಿದ್ದಾರೆ? ನಾವು ಚಿತ್ತೂರಿನವರಲ್ಲವೇ? ಯಾವುದಕ್ಕಾಗಿ ಸಾವಿರಾರು ಮಂದಿ ರಾಜಪುತ್ರರೇ ತಮ್ಮ ಪ್ರಾಣಗಳನ್ನು ಆಹುತಿಕೊಟ್ಟಿದ್ದಾರೋ ಅವರು ಅಂತಹ ಸ್ವಾತಂತ್ರ್ಯತೆಯನ್ನು ಬಿಡಲೂ ಇಲ್ಲ. ಮುಂದೆ ಬಿಡುವುದೂ ಇಲ್ಲ. ಯಾವ ನಾರಿಯು ವೀರಪುತ್ರರನ್ನು ಪ್ರಸವಿಸುವಳೋ, ಯಾವಳು ತನ್ನ ಪಾತಿವ್ರತ್ಯದಿಂದ ವಂಶಪಾವನಮಾಡಿ ಭೂಮಂಡಲದಲ್ಲಿರುವ ಅನ್ಯಸ್ತ್ರೀಯರನ್ನು ನಾಚಿಸುವಳೋ, ಅಂತಹ ಸ್ತ್ರೀಯರು ಈ ಚಿತ್ತೂರಿನಲ್ಲೇ ಇರುವರಲ್ಲವೇ? ಯಾವ ರಾಜನು ಸ್ವಪ್ರಜೆಗಳನ್ನು ತನ್ನ ಸುತರಂತೆ ರಕ್ಷಿಸುವನೋ, ಅವನು ಚಿತ್ತೂರು ರಾಜನಲ್ಲವೇ? ಕ್ಷತ್ರಿಯ ಕುಲತಿಲಕನೂ ಶಿಶೂದಯವಂಶದ ರಾಜರಕ್ಷಕನೂ ಆದ ಶ್ರೀ ಏಕಲಿಂಗಸ್ವಾಮಿಯೇ! ಈ ನಗರದ ಅಧಿಷ್ಠಾತ್ರಿಯಾಗಿದ್ದ ಈಗ ನೀನು ನನಗೆ ಸಹಾಯಮಾಡು.” ಎಂದು ಪ್ರಾರ್ಥಿಸಿಕೊಳ್ಳುತ್ತಿರುವಳು.

„ಪದ್ಮಿನಿಯೇ! ನಿನ್ನ ಪಾತಿವ್ರತ್ಯ ರಕ್ಷಣೆಯಾದೀತು!! ನಿನ್ನ ಕೀರ್ತಿಯು ಸ್ಥಿರವಾಗುವುದು!! ಜಗತ್ತಿನ ಸ್ತ್ರೀಯರು ನಿನ್ನ ಕೀರ್ತಿಯನ್ನು ಹಾಡುವರು; ನಿನ್ನನ್ನು ದೇವತೆಯಂತೆ ಭಜಿಸುವರು. ನಿನ್ನ ಮತ್ತು ನಿನ್ನಂತಹ ಸ್ತ್ರೀಯರ ಪಾತಿವ್ರತ್ಯ ಪ್ರಭಾವದಿಂದಲೇ ಆರ್ಯರ ಕೀರ್ತಿಯು ದಿಗಂತಗಳಲ್ಲಿ ಪ್ರಸರಿಸಬೇಕು.” ಎಂದು ಯಾರೋ ಹೇಳುವಂತೆ ಕೇಳುತಿರುವುದು.

ಪುನಃ ಪದ್ಮಿನಿಯು ಆವೇಶದಿಂದ, „ಪಾಪಿಗಳಿರಾ! ರಾಜಪುತ್ರರ ಸ್ವತಂತ್ರಭೂಮಿಯು ಪರಾಧೀನವಾದೀತೆಂದಾಶಿಸದಿರಿ! ಸ್ವಾತಂತ್ರ್ಯ ಪಾತಿವ್ರತ್ಯಗಳ ರಕ್ಷಣೆಗಾಗಿ ನಾನು ಅಬಲೆಯಾದರೂ ರಣರಂಗದಲ್ಲಿ ಕಾದಲು ಹಿಮ್ಮೆಟ್ಟೆನು.” ಎಂದು ಘಟ್ಟಿಯಾಗಿ ಹೇಳಿದಳು. ಇದನ್ನು ಮರೆಯಲ್ಲಿ ನಿಂತು ಕೇಳುತ್ತಿದ್ದ ಭೀಮಸಿಂಗನು „ಧನ್ಯೆ! ದೇವಿ! ಧನ್ಯೆ!!” ಎಂದು ಹೇಳಿದನು. ಆ ಸುಖ

ಯಾದ ಪದ್ಮಿನಿಯು ಜಾಗ್ರತಳಾಗಿ ಪತಿಯನ್ನು ನೋಡಿ ಆಶ್ಚರ್ಯಚಕಿತಳಾದಳು. ಸುಹಾಸ್ಯವದನದಿಂದ ಅವಳು ಪತಿಯನ್ನುದ್ದೇಶಿಸಿ, „ಸ್ವಾಮಿಯೇ! ತಾವು ಈಗ ಅಕಸ್ಮಾತ್ತಾಗಿ ಏಕೆ ದಯಮಾಡಿಸಿದಿರಿ?” ಎಂದಳು. „ಪ್ರಿಯೆ, ನೀನೇ ಧನ್ಯೆ! ನಿನ್ನ ಧೈರ್ಯ ಸಾಹಸಗಳನ್ನು ನೋಡಿ ರಾಜಪುತ್ರವೀರರು ಸಹಾ ಬಾಯಿಯಲ್ಲಿ ಬೆರಳನ್ನಿಡಬೇಕು! ಆದರೆ, ಈಗ ಯೋಚಿಸಬೇಕಾದ್ದೇನೂ ಇಲ್ಲ. ಶತ್ರುವಿನೊಡನೆ ಸಂಧಿಯನ್ನು ಮಾಡಿಕೊಂಡಿರುವೆವು” ಎಂದನು. ಪದ್ಮಿನಿಯು ಶಂಕಿತಳಾಗಿ, „ಯವನರನ್ನು ನಂಬುವುದು ಅಯೋಗ್ಯವು. ಅವರು ಕಪಟಿಗಳು. ಬಾಯಿಯಲ್ಲಿ ಹೇಳುವುದೊಂದು; ಮಾಡುವುದು ಮತ್ತೊಂದು.” ಎಂದಳು.

ಭೀಮಸಿಂಗ:—ಪ್ರಿಯೆ! ನಿನ್ನ ಶಂಕೆಯು ಅಕಾರಣವಾದದ್ದು. ಇಷ್ಟು ದೊಡ್ಡ ಪಾದಷಹನು ತನ್ನ ಮಾತಿಗೆ ಎಂದಿಗೂ ತಪ್ಪಲಾರನು.

ಪದ್ಮಿನಿ:—ಏನು ಹೇಳಿದಿರಿ? ದೊಡ್ಡಬಾದಷಹನೋ! ಕ್ಷತ್ರಿಯ ಕುಲಕೇಸರಿಯಾದ, ನನ್ನ ಕುಲಕ್ಕೇ ಸೂರ್ಯನಂತಿದ್ದ ಪೃಥ್ವಿರಾಜನ ಸಿಂಹಾಸನದಲ್ಲಿ ಕುಳಿತಿರುವವನು ದೊಡ್ಡ ಪಾದಷಹನೇ ಸರಿ! ಆದರೆ, ದೊಡ್ಡ ಪಾದಷಹನು ಪಾಪಾತ್ಮನಲ್ಲವೆಂಬುದು ಹೇಗೆ? ಮ್ಲೇಂಛರಲ್ಲಿ ಮತ್ತು ಅಲ್ಲಾವುದ್ದೀನನಲ್ಲಿ ವಿಶ್ವಾಸವಿಡಬಾರದು. ಆತನು ಚಿಕ್ಕಪ್ಪನನ್ನು ಕೊಂದು ಷಹಜಾದನನ್ನು ಅಂಧನನ್ನಾಗಿ ಮಾಡಿ, ಆತನ ರಾಣಿಯನ್ನು ಹುಚ್ಚಳನ್ನಾಗಿ ಮಾಡಿ ಕೊಂದನು. ಆ ವಿಷಸರ್ಪದಲ್ಲಿ ಯಾವಾಗಲೂ ವಿಶ್ವಾಸವಿಡುವದು ಯೋಗ್ಯವಲ್ಲ. ನಾಥರೇ! ಅವನ ಮನೋಭಾವವು ಯಾವುದೋ ಒಂದು ಕೃತ್ರಿಮವುಳ್ಳದ್ದಾಗಿರಬೇಕೆಂದು ನನ್ನ ಮನೋದೇವತೆಯು ಹೇಳುವುದು.

ಭೀಮಸಿಂಗನು ಮಂದಹಾಸದಿಂದ „ಪ್ರಿಯೆ! ನಿನ್ನ ಭೀತಿಯು ನಿರರ್ಥಕವು. ನೀನಾದರೋ ಕೋಮಲ ಮನವುಳ್ಳವಳು. ಆದ್ದರಿಂದ ನಿನ್ನ ಮನದಲ್ಲಿ ಶಂಕಿಸುವದು ಸಹಜವಾದದ್ದು. ನಡೆ, ನಾವು ಮಹಡಿಯಮೇಲೆ ಹೋಗಿ ಅಲ್ಲಾವುದ್ದೀನನ ಛಾವಣಿಯನ್ನು ನೋಡೋಣ. ಆವ ನ್ಯೂನತೆಯು ಗೋಚರಿಸುವದು.” ಎಂದನು. ಆಗ ಪದ್ಮಿನಿಯು „ನಾಥನೇ! ಸುಲತಾನನು ಯಾವಹೇತುವಿಗಾಗಿ ಸಂಧಿಮಾಡಿಕೊಂಡನು? ಅವನ ಪ್ರತಿಜ್ಞೆ ಯಾವದೋ ಒಂದು ಕೃತ್ರಿಮವುಳ್ಳದ್ದಾಗಿರಬೇಕು ಇಲ್ಲದಿದ್ದರೆ ಸಂಧಿಗೊಪ್ಪುತ್ತಿರಲಿಲ್ಲ.” ಎಂದಳು.

ಭೀಮಸಿಂಗ:—ನಿಜ; ಪ್ರಿಯಳೆ! ನಿನ್ನ ಮುಖದರ್ಶನವಾಗಬೇಕೆಂದು ಅವನು ಇಚ್ಛಿಸುತ್ತಾನೆ. ಅದರಿಂದ ತನ್ನ ಪಾಪನಾಶವಾಗುವದೆಂದು ತಿಳಿದಿದ್ದಾನೆ. ಇದರಲ್ಲಿ ಅವನಿಗೆ ಇನ್ನಾವ ದುಷ್ಟಹೇತುವೂ ಇಲ್ಲ. ಅವನು ನಿನ್ನನ್ನು ಧರ್ಮಭಗಿನಿಯಂತೆ ತಿಳಿದಿದ್ದಾನೆ ಅದಕ್ಕಾಗಿ ಅವನ ಪ್ರಾರ್ಥನೆಯನ್ನು ಮನ್ನಿಸಿ ಕನ್ನಡಿಯಲ್ಲಿ ನಿನ್ನ ಪ್ರತಿಬಿಂಬವನ್ನು ದರ್ಶನಮಾಡಿಸುವೆನೆಂದು ನಾನು ಅವನಿಗೆ ಮಾತುಕೊಟ್ಟಿರುವೆನು.

ಆಗ ಆ ಮಾತನ್ನು ಕೇಳಿ ಪದ್ಮಿನಿಯು « ನಾಥರೇ! ನೀವು ಇದೊಂದು ದೊಡ್ಡ ತಪ್ಪುಮಾಡಿದಿರಿ. ವೈರಿಯು ಮರೆಹೊಕ್ಕರೆ ರಕ್ಷಿಸುವುದು ಕ್ಷತ್ರಿಯರ ಧರ್ಮವು. ಆದರೆ, ಈಗ ಕ್ಷತ್ರಿಯರ ಈ ಉದಾರವರ್ತನೆಯು ಚಮತ್ಕಾರವಾಗಿದೆ. ಪಾತ್ರಾಪಾತ್ರ ವಿಚಾರಮಾಡದೆ ರಾಜಪುತ್ರರು ಔದಾರ್ಯತೋರಿಸುವುದರಿಂದ ಅವರು ನಾಶವನ್ನೇ ಹೊಂದುವರು. ನಾನು ಮಂದಮತಿಯಾದ ಅಬಲೆಯು. ಆ ಸುಲ್ತಾನನು ಘಾತಕಿಯಾದ ಸರ್ಪದಂತೆ ಜಾತಿಸ್ವಭಾವವನ್ನು ತೋರಿಸದೇ ಎಂದಿಗೂ ಬಿಡುವುದಿಲ್ಲ. ಇದನ್ನು ನೆನಪಿಸಿಕೊಳ್ಳಿರಿ ನಾಥರೇ! ತಮ್ಮೆದುರಿನಲ್ಲಿ ನಾನು ಅಮರ್ಯಾದೆಯಿಂದ ತಮ್ಮ ಮನೋವೃತ್ತಿಯನ್ನು ನಿರೂಗಿಸಲೆತ್ನಿಸಿದ ದಾಸಿಯನ್ನು ಮನ್ನಿಸಿರಿ" ಎಂದು ನಿಶ್ಚಯಾತ್ಮಕಬುದ್ಧಿಯಿಂದ ಕೈಜೋಡಿಸಿ ಹೇಳಿದಳು. ಇದನ್ನು ಕೇಳಿ ಭೀಮಸಿಂಹನು ವಿಚಾರಸಾಗರದಲ್ಲಿ ಬಿದ್ದನು. ಆಕೆಗೇನುತ್ತರ ಕೊಡಬೇಕೆಂಬುದು ಅವನಿಗೆ ತಿಳಿಯಲಿಲ್ಲ. ಸ್ವಲ್ಪಕಾಲ ಮೌನವಾಗಿದ್ದು, ಬಳಿಕ, « ಪ್ರಿಯಳೇ! ನೀನು ಹೇಳಿದುದು ಅಕ್ಷರಶಃ ಸತ್ಯವು. ಆದರೆ, ಅಲ್ಲಾವುದೀನನು ಕೃತ್ರಿಮ ತೋರಿಸುವನೆಂದು ಕಾಣುವುದಿಲ್ಲ. ಅವನ ಉತ್ಸಾಹವು ಪೂರ್ಣವಾಗಿ ಜೀರ್ಣವಾಗಿದೆ. ಅವನು ಅಲ್ಪರಾದ ಅಂಗರಕ್ಷಕರೊಡನೆ ಕಿಲ್ಲೆಯೊಳಕ್ಕೆ ಬರುವವನಾಗಿದ್ದಾನೆ. ಆಗ್ಗೆ ಹೆದರಲು ಕಾರಣವಿಲ್ಲ. ಹಾಗೆ ಅವನು ಮೋಸಮಾಡಿದರೆ, ರಾಜಪುತ್ರರು ಮುಯ್ಯಕ್ಕೆ ಮುಯ್ಯ ತೀರಿಸದೆ ಬಿಡರು. ಮೂರ್ತಿಮತ್ತಾದ ಕಾಲಪುರುಷನನ್ನೇ ಲಕ್ಷ್ಯಮಾಡದ ರಾಜಪುತ್ರರು ಅಲ್ಲಾವುದೀನನಿಗೆ ಹೆದರುವರೆ? ರಾಜಪುತ್ರನೊಬ್ಬನು ಜೀವಂತನಾಗಿರುವವರೆಗೂ ಸುಲ್ತಾನನು ಚಿತ್ತೂರನ್ನು ಪ್ರವೇಶಿಸಲು ಶಕ್ಯವಲ್ಲ" ಎಂದನು. ಪದ್ಮಿನಿಯು— « ನಾಥರೇ! ಅದೆಲ್ಲವೂ ನಿಜ; ಆದರೆ ಸರ್ವರೂ ರಾಜಪುತ್ರರಂತಿರರು. ಔದಾರ್ಯಗುಣವು ಪ್ರಶಂಸನೀಯವಾದುದೇನೋ ನಿಜ! ಆದರೆ, ಅದರಲ್ಲೂ ಮಿತಿಯಿರಬೇಕು. ಆದರೆ ನಾನು ಪುನಃ ಹೇಳುವೆನು. ತಾವೂ ಮಹಾರಾಣಾರವರೂ ಅಜಾಗರೂಕರಾಗಿರಬಾರದು." ಎಂದಳು. ಇಷ್ಟರಲ್ಲೇ ಮಹಡಿಯ ಕೆಳಭಾಗದಲ್ಲಿ ಯಾವದೋ ಒಂದು ಗದ್ದಲವೆದ್ದಿತು. ಅದನ್ನು ಭೀಮಸಿಂಗನು ನೋಡಿದನು. ಒಬ್ಬ ಸೈನಿಕನು ಈ ಕೆಳಗೆ ಹೇಳುವಂತೆ ಹೇಳುತ್ತ ಡಂಗೂರಹೊಡೆಯುತ್ತಾ ಸಾರುತ್ತಿದ್ದಂತೆ ಕಾಣಿಸಿತು.

« ಸೈನಿಕರೇ! ನಾಗರಿಕರೇ! ಮಹಾರಾಣಾರವರು ನಿಮ್ಮೆಲ್ಲರಿಗೂ ಈ ರೀತಿ ಆಜ್ಞಾಪಿಸಿದ್ದಾರೆ ಏನೆಂದರೆ—ಯಾರೂ ನಿದ್ರೆಗಧೀನರಾಗಿರಬೇಡಿ; ನಿರಾಯುಧರಾಗಿರಬೇಡಿ; ಯಾವ ಮಾದಕವಸ್ತುಗಳನ್ನೂ ಸೇವಿಸಬೇಡಿ. ಧನುಸ್ಸಿನಲ್ಲಿ ಬಾಣವನ್ನು ಹೂಡಿಯೇ ಇರಬೇಕು. ಏಕೆಂದರೆ, ಅಲ್ಲಾವುದೀನ್ ಬಾದಷಹನು ಸಂಧಿಮಾಡಿಕೊಳ್ಳಲು ದುರ್ಗದೊಳಕ್ಕೆ ಬರುವವನಾಗಿದ್ದಾನೆ. ಆಗ ಕದಾಚಿತ್ ದಂಗೆಯಾಗುವ ಸಂಭವವಿದೆ. ಆದ್ದರಿಂದ ಜಾಗರೂಕರಾಗಿರಿ!" ಆಗ ಭೀಮಸಿಂಗನು ಪದ್ಮಿನಿಯನ್ನು ಕುರಿತು « ಪ್ರಿಯೆ! ಈ ಡಂಗುರವನ್ನು

ಕೇಳಿದೆಯಾ? ಈಗಲಾದರೂ ಸಂಜೆಯಾಯಿತೇ? ನಡೆ. ಈಗ ಒಂದು ಘಳಿಗೆ ಮಾತ್ರ ವಿಶ್ರಾಂತಿ ಹೊಂದುವ!" ಎಂದು ಹೇಳಿ ಅನಂತರ ಉಭಯರೂ ಶಯನಸ್ಥಾನಾಭಿಮುಖರಾದರು.

ಪ್ರಕರಣ 24.

ಇಚ್ಛಾಪೂರ್ಣವಾಯಿತು.

ಮೂರನೆಯ ದಿನ ನಾಲ್ಕೈದು ಜನ ಅಂಗರಕ್ಷಕರೊಡನೆ ಅಲ್ಲಾವುದ್ದೀನನು ಚಿತ್ತೂರು ದುರ್ಗದೊಳಕ್ಕೆ ಬಂದನು. ಇವನ ಆಗಮನಕ್ಕಾಗಿ ನಗರವನ್ನು ಸಿಂಗರಿಸಿದ್ದರು. ಆಯಾ ಸ್ಥಳಗಳಲ್ಲಿ ರಸಾಲಪಲ್ಲವಗಳಿಂದ ತೋರಣಗಳನ್ನು ಹಾಕಿಸಿದ್ದರು. ಕ್ಷತ್ರಿಯರಲ್ಲಿ ಕೃತ್ರಿಮವೆಂಬ ಶಬ್ದವೇ ಇರಲಿಲ್ಲ; ಆದ್ದರಿಂದ ಅಲ್ಲಾವುದ್ದೀನನಿಗೆ ಲೇಶವೂ ಭೀತಿ ಇರಲಿಲ್ಲ. ಅವನು ಪದ್ಮಿನಿಯ ಮಹಲಿನ ಬಾಗಿಲಿನ ಹತ್ತಿರ ಬಂದನು. ಅವನನ್ನು ಗೌರವಿಸುವದಕ್ಕಾಗಿ ಭೀಮಸಿಂಗನು ಅವನ ಎದುರಿಗೆ ಬಂದನು. ಅಲ್ಲಾವುದ್ದೀನನ ರಾಜಯೋಗ್ಯ ಸತ್ಕಾರವು ಶೋಭಾಯಮಾನವಾಗಿತ್ತು. ಯುಕ್ತರೀತಿಯಿಂದ ಲಕ್ಷ್ಮಣಸಿಂಹ ಮತ್ತು ಸುಲ್ತಾನರಿಗೆ ದರ್ಶನವು ಆಯಿತು. ಸುಲ್ತಾನನು ಧೂರ್ತನಾಗಿಯೂ ಚಿತ್ತದಲ್ಲಿ ಹಾಲಾಹಲ ತುಂಬಿದವನಾಗಿಯೂ ಇದ್ದನು. ಆದರೂ, ತನ್ನ ಸಮೀಚೀನವಾಕ್ಯಗಳಿಂದ ಸರ್ವರಲ್ಲಿ ವಿಶ್ವಾಸವನ್ನುಂಟುಮಾಡಿಕೊಂಡನು. ಇವನ ವಚನಾಮೃತವನ್ನು ಕೇಳಿ ಇವನೆಂದಿಗೂ ಮೋಸಮಾಡುವದಿಲ್ಲವೆಂದು ಎಲ್ಲರೂ ತಿಳಿದರು. ಚಿತ್ತೂರಿನ ಮೇಲೆ ಮುತ್ತಿಗೆ ಹಾಕಲು ಬಂದದಕ್ಕಾಗಿ ಕ್ಷಮೆಯನ್ನು ಕೇಳಿಕೊಂಡನು. ಅತ್ಯಂತ ನಮ್ರತೆಯನ್ನು ತೋರಿಸಿದನು. ಬಳಿಕ ಕ್ಷತ್ರಿಯರು ಸುಪ್ರಸನ್ನರಾದರು. ಅವರು ಸುಲ್ತಾನನನ್ನೂ ಅಂಗರಕ್ಷಕರನ್ನೂ ಭೋಜನಾದಿಗಳಿಂದ ತೃಪ್ತಿಪಡಿಸಿದರು. ಬಳಿಕ ಭೀಮಸಿಂಗನು ತನ್ನ ಸ್ವಕೀಯವಾದ "ದಿವಾನಖಾನೆ"ಗೆ ಕರೆದುಕೊಂಡು ಹೋದನು. ಅಲ್ಲಿ ಸುಲ್ತಾನನಿಗೆ ಪದ್ಮಿನಿಯ ದರ್ಶನ ಮಾಡಿಸುವುದಕ್ಕಾಗಿ ತಕ್ಕ ವ್ಯವಸ್ಥೆಯನ್ನು ಪೂರ್ವದಲ್ಲೇ ಮಾಡಿಸಿದ್ದರು. ದರ್ಶನವು ಶಾಸ್ತ್ರಪದ್ಧತಿಯಂತೆ ಮುಖತಃ ನಡೆಯದೆ ಕೇವಲ ಪದ್ಮಿನಿಯ ಮುಖಮಂಡಲವು ಪ್ರತಿಬಿಂಬ, ಅಲ್ಲಾವುದ್ದೀನನಿಗೆ ತೋರುವಂತೆ ವ್ಯವಸ್ಥೆ ಮಾಡಿದ್ದರು. ಪದ್ಮಿನಿಯನ್ನು ಒಂದು ಬಾಗಿಲಲ್ಲಿ ನಿಲ್ಲಿಸಿ ಅದರ ಎದುರಿಗೊಂದು ಕನ್ನಡಿಯನ್ನಿಟ್ಟರು. ಆ ಕನ್ನಡಿಯ ಕಿರಣವು ಬೀಳುವ ಸ್ಥಳದಲ್ಲಿ ಮತ್ತೊಂದು ಕನ್ನಡಿಯನ್ನಿಟ್ಟಿದ್ದರು. ಅದರ ಮೂಲಕ ಪದ್ಮಿನಿಯ ಮುಖಮಂಡಲವು ಅಲ್ಲಾವುದ್ದೀನನಿಗೆ ಕಾಣಿಸುವಂತೆ ನಿರ್ಮಿಸಿದ್ದರು. ಈ ಉಪಾಯವು ಚಮತ್ಕಾರಿಕವಾಗಿತ್ತು. ಇದರಿಂದ

ಸುಲ್ತಾನನು ಉತ್ತಮನೇ ಆಗಿರಲಿ, ನೀಚನೇ ಆಗಿರಲಿ, ಅವನಿಗೆ ಪ್ರತ್ಯಕ್ಷವಾಗಿ ಪದ್ಮಿನಿಯನ್ನು ನೋಡಲು ಶಕ್ಯವಾಗಲಿಲ್ಲ. ಈ ಪದ್ಮಿನಿಯ ದರ್ಶನೋಪಾಯವನ್ನು ತಿಳಿದ ಭೀಮಸಿಂಗನು “ಸುಲ್ತಾನರೇ! ನಾನು ಈಗ ಹೊರಗೆ ಹೋಗುವೆನು. ಪದ್ಮಿನಿಯ ಸಹೋದರರಾದ ಗೋರಾಸಿಂಹ ಬಾದಲಸಿಂಹರು ಸ್ವಲ್ಪ ಕಾಲದಲ್ಲೇ ಬಂದು ತಮ್ಮ ಇಚ್ಛೆಯನ್ನು ಪೂರ್ಣಮಾಡುವರು.” ಎಂದನು. ಆಗ ಭೀಮಸಿಂಹನನ್ನು ಕುರಿತು ಸುಲ್ತಾನನು “ತಮ್ಮ ಇಚ್ಛೆಯಂತಾಗಲಿ” ಎಂದು ಸಂತೋಷವನ್ನು ತೋರಿಸಿದನು. ಭೀಮಸಿಂಹನು ಹೊರಟುಹೋಗಲು, ಪೂರ್ವ ಸಂಕೇತದಂತೆ ಗೋರಾಸಿಂಹ ಬಾದಲಸಿಂಹರು ಸುಲ್ತಾನನನ್ನು ಕುರಿತು ಕಠೋರವಾಗಿ ಹೇಳಿದುದೇನೆಂದರೆ:—ಆಲೀಶಾನ್ ಸುಲ್ತಾನರೇ! ಕೇಳಿರಿ; ಮೇಲಿನ ಗವಾಕ್ಷದಿಂದ ನನ್ನ ಸಹೋದರಿಯಾದ ಪದ್ಮಿನಿಯು ಬರುವಳು; ಆಕೆಯನ್ನು ತಾವು ಧರ್ಮಭಗಿನಿಯೆಂದು ತಿಳಿದಿರುವಂತೆ ಬರೆದಿದ್ದೀರಿ; ನೀವು ಪರಮತದವರಾಗಿದ್ದೀರಿ; ಹಿಂದೂಸ್ತ್ರೀಯರು ಪರಪುರುಷರಿಗೆ ತಮ್ಮ ಮುಖವನ್ನು ತೋರಿಸರು. ಆದ್ದರಿಂದ ತಮಗೆ ಪ್ರತ್ಯಕ್ಷವಾಗಿ ಮುಖದರ್ಶನವಾಗುವುದಿಲ್ಲ. ಇದಕ್ಕಾಗಿ ನಮ್ಮ ಪ್ರಾರ್ಥನೆ ಏನೆಂದರೆ:—ನೀವು ಗವಾಕ್ಷಿಯಕಡೆಗೆ ನೋಡಕೂಡದು. ಕೇವಲ ದರ್ಪಣದಲ್ಲೇ ನೋಡಬೇಕು. ಅದರಲ್ಲೇ ಪದ್ಮಿನಿಯ ಮುಖದರ್ಶನವಾಗುವುದು. ಮತ್ತು ಪಾಪನಾಶವಾಗುವುದು! ಈ ಕ್ಷಣದಲ್ಲೇ ಆಕೆಯ ದರ್ಶನವಾಗುವುದು.” ಎಂದನು. ಇಷ್ಟನ್ನು ಕೇಳಿ ಸುಲ್ತಾನನು ಸ್ವಲ್ಪಕಾಲ ಸ್ತಬ್ಧನಾದನು.

“ಆದರೆ, ನಮ್ಮ ಪ್ರಾರ್ಥನೆಯನ್ನುಲ್ಲಂಘಿಸಿದರೆ, ನಮ್ಮ ಈ ಕತ್ತಿಯಿಂದ ತಮ್ಮ ಶಿರವನ್ನು ಭೂಮಿಗಿಳಿಸುವೆವು. ಇದನ್ನು ಲಕ್ಷ್ಯದಲ್ಲಿಡಿ. ಇದನ್ನು ಮರೆಯಬೇಡಿ. ನಾವು ಈ ಸೂಚನೆಯನ್ನು ತಮಗೆ ಮೊದಲೇ ತಿಳಿಸಿರುವೆವು. ಆದ್ದರಿಂದ ನಮ್ಮ ತಲೆಯಮೇಲೆ ವಿಶ್ವಾಸಘಾತದ ಆರೋಪವನ್ನು ಹೊರಿಸಬೇಡಿರಿ.” ಎಂದು ಬಾದಲಸಿಂಗನು ಸ್ಪಷ್ಟವಾಗಿ ಸೂಚಿಸಿದನು.

ಆಗ ಸುಲ್ತಾನನು ಅವನನ್ನು ಸಂತುಷ್ಟಿಪಡಿಸಲು ಇಚ್ಛೆಯಿಲ್ಲದಿದ್ದರೂ ಅವನನ್ನು ಕುರಿತು—“ನಾನು ತಮ್ಮ ಮಾತಿನಂತೆ ನಡೆಯಲು ಸಿದ್ಧನಾಗಿರುತ್ತೇನೆ.” ಎಂದನು.

ಕಪಟವರಿಯದ ರಾಜಪುತ್ರರು ಅವನ ಮಾತಿನಲ್ಲಿ ವಿಶ್ವಾಸವಿಟ್ಟು ಪದ್ಮಿನಿಯನ್ನು ಗವಾಕ್ಷಿಗೆ ಬರಬೇಕೆಂದು ಸೂಚಿಸುವುದಕ್ಕಾಗಿ ದಾಸಿಯನ್ನು ಕಳುಹಿಸಿದರು. ಸುಲ್ತಾನನು ತನ್ನೆದುರಿನಲ್ಲಿರುವ ಕನ್ನಡಿಯ ಮುಂದೆ ಕುಳಿತು ಪದ್ಮಿನಿಯ ಮುಖದರ್ಶನಾಭಿಲಾಷಿಯಾಗಿದ್ದನು. ಸ್ವಲ್ಪ ಕಾಲದಲ್ಲೇ ಆ ಗವಾಕ್ಷಿಯ ಬಾಗಿಲು ತೆರೆಯಲ್ಪಟ್ಟಿತು ಇದು ಸುಲ್ತಾನನಿಗೆ ತಿಳಿಯಲಿಲ್ಲ. ಪದ್ಮಿನಿಯು ಗವಾಕ್ಷಿಯ ಮಧ್ಯದಲ್ಲಿ ಬಂದು ನಿಂತಿದ್ದಳು. ಪದ್ಮಿನಿಯು ಬಹು ಬೆಲೆಯುಳ್ಳ ಜರತಾರಿಯ ಶಾಲನ್ನು ಹೊದ್ದುಕೊಂಡಿದ್ದಳು. ಆಕೆಯ ಕಮಲನೇತ್ರ ಮಧ್ಯದಲ್ಲಿ ವಾತ್ಸಲ್ಯ ಚಿನ್ಹೆಯೂ, ಶೃಂಗಾರರಸ ಸೂಚನೆಯೂ ಸ್ಪಷ್ಟವಾಗಿ ತೋರುತ್ತಿತ್ತು;

ಹವಳದಂತಿರುವ ತುಟಿಗಳು ತಾಂಬೂಲಚರ್ವಣದಿಂದ ಆರಕ್ತವಾಗಿ ಕಾಣುತ್ತಿತ್ತು. ಗುಲಾಬಿಯಂತಿರುವ ಗಲ್ಲದಲ್ಲಿ ಸಹಜವಾದ ಲಜ್ಜಾರುಣಿಮೆಯು ಆಗಾಗ್ಗೆ ಕಾಣಿಸುತ್ತಿತ್ತು. ಭ್ರುಕುಟಿಯು ವಕ್ರವಾಗಿತ್ತು. ಕಪ್ಪಾದ ಭ್ರಮರದಂತಿರುವ ಕೇಶಕಲಾಪವು ನಿತಂಬದವರೆಗೂ ಪಸರಿಸಿತ್ತು. ಅವಯವಗಳಲ್ಲಿ ಸಹಜವಾದ ಲಾವಣ್ಯದಿಂದಲಂಕೃತಳಾಗಿದ್ದಳು. ಲೇಶಮಾತ್ರವೂ ನ್ಯೂನತೆಯುಳ್ಳವಳಾಗಿರಲಿಲ್ಲ. ಸುಲ್ತಾನನು ಏಕಾಗ್ರಚಿತ್ತದಿಂದ ರೆಪ್ಪೆಯನ್ನು ಮುಚ್ಚದೆ ಕನ್ನಡಿಯಲ್ಲಿ ನೋಡುತ್ತಿದ್ದನು. ಅವನೆದುರಿನಲ್ಲಿ ಆ ಪರಮಸುಂದರಿಯಾದ ಪದ್ಮಿನಿಯ ಬಿಂಬವು ಬಂದು ನಿಂತಿದ್ದುದು. ಆಕೆಯ ಗಲ್ಲದಲ್ಲಿ ಗುಲಾಬಿಯ ಹೂವಿನಂತಹ ಮಚ್ಚೆ ಇತ್ತು. ಆದರೂ ಭ್ರಾಂತಿಯಿಂದ ಗುಲಾಬಿಯ ಎಸಳೆಂದು ತಿಳಿದು ತೆಗೆದುಕೊಳ್ಳಲು ಇಚ್ಛಿಸಿ ಕೈನೀಡಿದನು. ಎಲೈ, ಮೋಹವೆ? ನೀನೆಷ್ಟು ಅಂಧನು? ಪದ್ಮಿನಿಯು ಗವಾಕ್ಷಿಯ ಮಧ್ಯದಲ್ಲಿ ಸ್ವಲ್ಪಕಾಲ ನಿಂತಿದ್ದು ಮೆಲ್ಲಮೆಲ್ಲನೆ ಪ್ರಥಮ ದರ್ಪಣವನ್ನು ನೋಡುತ್ತಾ ಹಿಂದೆ ಸರಿದಳು. ಕೂಡಲೆ, ಆಕೆಯ ಪಾದಗಳ ಶಬ್ದವಾಯಿತು. ಆ ಶಬ್ದವನ್ನು ಕೇಳಿ, "ಖಿನೇರಹೋ" ಎಂದು ಹೇಳಲಿಚ್ಛೆಯಿಂದ ತುಟಿಯನ್ನಲ್ಲಾಡಿಸಲುಯತ್ನಿಸಿದನು. ಆದರೆ ಬಾಯಿಯಿಂದ ಶಬ್ದಹೊರಡಲಿಲ್ಲ. "ಹಾ! ಹಾ!" ಎನ್ನುವುದರೊಳಗಾಗಿ ಪದ್ಮಿನಿಯು ಅದೃಶ್ಯಳಾದಳು. ಸುಲ್ತಾನನು ಅಸಾವಧಾನತೆಯಿಂದ ಕೂಡಿದ ನಿದ್ರೆಯಿಂದ ಎದ್ದಂತೆ, ಅಥವಾ ಭೂತಬಾಧೆ ಹೊಂದಿದಂತೆ ಒಂದೇಬಾರಿ "ಹೋದಳು!! ಹೋದಳು!! ಹಾ! ಹೋಗಿಯೇ ಹೋದಳು!!" ಎಂದು ಕೂಗಿಬಿಟ್ಟನು. ಸೌಂದರ್ಯಸೋಪಾನವನ್ನಡರಿದ ಸುಂದರಿಯ ಪ್ರತಿಬಿಂಬ ದರ್ಶನದಿಂದಲೇ ಅಲ್ಲಾವುದ್ದೀನನ ಅಂತಃಕರಣದಲ್ಲಿ ಅಸ್ವಸ್ಥತೆಯು ತಲೆದೋರಿತು. ಅವನು ತನ್ನ ಮನದಲ್ಲಿಯೇ ಚಿಂತಿಸಿ, ತನ್ನ ಮೌಢ್ಯಕ್ಕಾಗಿ ವ್ಯಸನದಿಂದ ಸ್ವಲ್ಪಕಾಲ ಕುತ್ತಿಗೆಯನ್ನು ಒಗ್ಗಿಸಿ ಕುಳಿತುಕೊಂಡಿದ್ದನು. ಕ್ಷತ್ರಿಯರ ಬಲ ಸಾಹಸ, ಪ್ರತಾಪಗಳ ಪರಿಚಯವು ಪೂರ್ಣವಾಗಿ ಸುಲ್ತಾನನಿಗೆ ಉಂಟಾಯಿತು; ಇವನು ಮನದಲ್ಲಿಯೇ ತಳಮಳಿಸಿದನು.

"ಗಈ! ಗಈ! ಹಾ ಗಈ! ಕಿಧರ ಗಈ! ಭಾಗ ಗಈ! ಫಿರನ ಆಯೇಗೀ! ನ ಆಯೇಗೀ! ಬಹಾರೋಂಪರಯಹುಸ್ನಜೀ ಬಾಕಿನೀಕಾಂ ಉರಾನಾಯೇಹಯಜೋವನ ಆಯಾ ಕಿಸೀಕಾ—ಜೋಸೀನೇಸೆ ಢಲಕಾ ದುಪಟ್ಟಾಕಿಸೀಕಾ, ಮಸಲಡಾಲಾ ಜಾಲಿಮ! ಕಲೇಜಾಕಿ ಸೀಕಾ—ಇಸೋಸಹಾಪಾನಾ ಲಗಸ್ನೋಕಿಯಾ, ಮಚಾಯೆಹಯ ಅಂಧೇರ ಸುನಸಾಕಿಸೀಕಾ—ದುಪಸ್ವಕೀತಕ ದೀರಮಾಜಾಕೀ ಕಿಸ್ಮತ; ಕಹಾತ ಆಗಯಾ ಜೋಬನ ಉಮದಾಕಿಸೀಕಾ—" ಎಂದು ಜೋರಾಗಿ ಬಡಬಡಿಸಿದನು.

"ಆ ದಿನ ರಾಘವಚೇತನನು ಪದ್ಮಿನೀಜಾತಿಯ ಸ್ತ್ರೀಯನ್ನು ವರ್ಣಿಸಿದನು. ಅದಕ್ಕಿಂತಲೂ ನಿಜವಾಗಿಯೂ, ಅತಿಶಯವಾಗಿಯೂ ಈ ಪದ್ಮಿನಿಯು ಸುಂದರಿಯಾಗಿದ್ದಾಳೆ. ಆಕೆಯನ್ನು ನೋಡಿ ನನ್ನ ಮನಸ್ಸು ಚಮತ್ಕಾರವುಳ್ಳ

ದ್ದಾಗಿದೆ; ನಾನು ಹಿಂದುಸ್ಥಾನದ ಬಾದಷಹನಾಗಿದೇನೆ. ಆದರೆ ಈ ಭೀಮಸಿಂಗನಿಗಿಂತ ನಾನು ಹೀನಭಾಗ್ಯನಾಗಿದೇನೆ. ಕಾಫರರ ಮನೆಯಲ್ಲಿ ಇಂತಹ ಸುಂದರಿ ಇರಬೇಕೆನ್ನುವುದು ಈಶ್ವರೇಚ್ಛೆಯಾಗಿದೆ. ಈಕೆಯನ್ನು ನೋಡಿದರೆ, ನನ್ನ ಮನಸ್ಸು ತೃಪ್ತಿಯಾಗುತ್ತಿತ್ತೆಂದು ತಿಳಿದಿದ್ದೆನು. ಆದರೆ ವಿಲಕ್ಷಣಸ್ವಭಾವವುಳ್ಳವನಾಗಿದೇನೆ. ನನ್ನ ಜೀವವು ಸಂಕಟಪಡುತ್ತಿದೆ ಆದರೆ ನಾನು ಈಗ ಏನನ್ನೂ ಮಾಡಲು ಶಕ್ತನಲ್ಲವಲ್ಲ; ಹಾ!" ಎಂದೂ——

"ಬೇಕರಾರಿಸೆ ಒದಲನಾಹಯ ಕರಾರಆಯಾ ತುವಾ ।
ಹಾಫಸೆ ವಿಕಲಾಹೀ ಜಾತಾಹಯುಶಿ ಕಾರಆಯಾ ತುವಾ ॥"

ಎಂದು ಮನಸ್ಸಿನಲ್ಲಿಯೇ ಹೇಳಿಕೊಂಡನು.

ಎರಡು ಮೂರು ನಿಮಿಷಗಳ ತರುವಾಯ ಗವಾಕ್ಷದ್ವಾರವು ಹಾಕಲ್ಪಟ್ಟಿತು. ಪದ್ಮಿನಿಯು ಅಲ್ಲಾವುದೀನನ ದೃಷ್ಟಿಗೆ ಅಗೋಚರಳಾದಳು. ಅವನು ಮನದಲ್ಲಿ ವಿಚಾರಯುಕ್ತನಾಗಿ ಗೋರಾಸಿಂಹನೊಡನೆ ಹೊರಗೆ ಬಂದನು. ಅಲ್ಲಿ ಅಕ್ಷ್ಮಣಸಿಂಹ, ಭೀಮಸಿಂಹರು ಇತರ ರಾಜಪುತ್ರರೊಡನೆ ಸೇರಿ ಸುಲ್ತಾನನ ಮಾರ್ಗವನ್ನು ನಿರೀಕ್ಷಿಸುತ್ತಿದ್ದರು. ಸುಲ್ತಾನನು ಒಂದು ಕುಳಿತನು. ಬಳಿಕ ಮಹಾರಾಣನು ಸುಲ್ತಾನನನ್ನು ಕುರಿತು "ಡಿಲ್ಲೀಶ್ವರರೇ! ತಾವು ಧರ್ಮಭಗಿನಿಯೆಂದು ಭಾವಿಸಿರುವ ಪದ್ಮಿನಿಯ ಮುಖದರ್ಶನದಿಂದ ಸಂತೋಷಿತರಾಗಿದ್ದೀರಲ್ಲವೇ?" ಎಂದು ಕೇಳಿದನು. ಬಾದಲಸಿಂಹನು ಸುಲ್ತಾನನ್ನು ಕುರಿತು——"ತಮ್ಮ ಪಾಪವು ನಾಶವಾಗಿರಬಹುದಲ್ಲವೇ?" ಎಂದನು.

ಆಗ ಸುಲ್ತಾನನು "ನನಗುಂಟಾದ ಸಂತೋಷವನ್ನು ವರ್ಣಿಸಲು ಶಕ್ತನಲ್ಲ. ತಮ್ಮ ಔದಾರ್ಯ ಮತ್ತು ಕೃಪೆಯ ದೆಸೆಯಿಂದ ಬಹುದಿನಗಳಿಂದ ಬಯಸಿದ ಇಷ್ಟವು ಈಗ ಸಫಲವಾಯಿತು. ಇದಕ್ಕೆ ನಾನು ಕೃತಜ್ಞನಾಗಿದ್ದೇನೆ. ನನ್ನನ್ನು ಮನ್ನಿಸಿರಿ. ಎಂದು ಸ್ಪಷ್ಟವಾಗಿ ಹೇಳುತ್ತೇನೆ. ಪದ್ಮಿನಿಯಂತಹ ಸೌಂದರ್ಯಸಂಪನ್ನಳಾದ ಸ್ತ್ರೀಯು ಈ ಪೃಥ್ವಿಯಲ್ಲಿರುವಳೋ, ಇಲ್ಲವೋ, ಎಂದು ಶಂಕಿಸುತ್ತೇನೆ. ಇಂತಹ ರತ್ನವು ಈ ಭೀಮಸಿಂಹರಿಗೆ ದೊರಕಿರುವುದಕ್ಕಾಗಿ, ನಾನು ಧನ್ಯವಾದ ಕೊಡುವೆನು! ತಮ್ಮ ಸುಖವು ಸ್ಥಿರವಾಗಿರಲಿ!! ಪದ್ಮಿನಿಯನ್ನು ನಾನು ಧರ್ಮಭಗಿನಿಯೆಂದು ತಿಳಿದಿದ್ದೇನೆಂಬೊಂದಭಿಪ್ರಾಯದಿಂದ ಈ ನಾಲ್ಕು ರತ್ನಗಳನ್ನು ಆಕೆಗೆ ದಯವಿಟ್ಟು ಕೊಡಬೇಕು. ಇದನ್ನು ಸ್ವೀಕರಿಸಿದಲ್ಲಿ ನಾನು ಧನ್ಯನೆಂದು ತಿಳಿಯುವೆನು" ಎಂದು ಬಾದಷಹನು ಬಹಿರಂಗದಲ್ಲಿ ಶಾಂತಿಯನ್ನೂ, ಮೃದುತ್ವವನ್ನೂ ಧರಿಸಿ ನಾಲ್ಕು ರತ್ನಗಳನ್ನು ಭೀಮಸಿಂಹನ ಪಾದದ ಹತ್ತಿರ ಇಟ್ಟನು. ಇವನ ಮಧುರವಾಣಿಯನ್ನು ಕೇಳಿ ನಿಷ್ಕಪಟಿಗಳಾದ ರಾಜಪುತ್ರರು ಅವನನ್ನು ತಮ್ಮ ಮಿತ್ರನೆಂದು ತಿಳಿದರು. ರಾಜಕೀಯ ಪ್ರಕರಣದಲ್ಲಿ ಮಿತ್ರತ್ವವಿಲ್ಲವೆಂಬ ವಿಷಯವನ್ನು ರಾಜಪುತ್ರರು ಮರೆತರು. ಸಾಯಂಕಾಲದಲ್ಲಿ ರಾಣನು ಸುಲ್ತಾನನಿಗೆ ಔತಣ ಮಾಡಿಸಿದನು. ಸುಲ್ತಾನನು ಪ್ರಯಾಣ

ನೋಡುವ ಸಂಗತಿಯನ್ನು ಪ್ರಕಟಿಸಿದನು. ಆದರೆ, ಆ ರಾತ್ರಿ ಅಲ್ಲಿಯೇ ಇರಬೇಕೆಂದು ರಾಣನೂ, ಭೀಮಸಿಂಹನೂ ಒತ್ತಾಯ ಮಾಡಿದ್ದರಿಂದ ಅಲ್ಲಿರಲು ಒಪ್ಪಿದನು. ಆದರೆ ಸುಲ್ತಾನನು ರಾತ್ರಿ ಪಾಳಯಕ್ಕೆ ಬರುವುದಿಲ್ಲವೆಂದೂ, ಏನೂ ಯೋಚಿಸಬೇಕಾಗಿಲ್ಲವೆಂಬ ಒಂದು ಸಂದೇಶವನ್ನೂ ರಾಜಪುತ್ರರರಿಯದಂತೆ ಏನೋ ಒಂದು ಅಂತರಂಗವಾರ್ತೆಯನ್ನೂ ಆಜ್ಞಾಪಿಸಿ ದೂತನನ್ನು ಕಳುಹಿಸಿದನು. ರಾಜಪುತ್ರರಿಗಿದು ಗೊತ್ತಾಗಲಿಲ್ಲ. ಹಾಗೆ ತಿಳಿದಿದ್ದಲ್ಲಿ ಮುಂದಾಗುವ ಭಯಂಕರವಾದ ವಿಪತ್ತುಗಳಿಗಾಸ್ಪದವಾಗುತ್ತಿರಲಿಲ್ಲ. ಸುಲ್ತಾನನಿಗೆ ಅಲ್ಲಿಯೇ ಅಂತ್ಯವಾಗುತ್ತಿತ್ತು. ಆದರೆ ಭವಿಷ್ಯದ್ವಿಪತ್ತನ್ನು ಯಾರು ನಿಲ್ಲಿಸುವರು? ರಾಜಪುತ್ರರು ಸ್ವಸ್ಥರಾಗಿ ಕುಳಿತರು. ಸುಲ್ತಾನನ ಅಂಗರಕ್ಷಕನು ಆ ಸಂದೇಶದೊಡನೆ ಹೊರಟುಹೋದನು.

ತೃತೀಯ ಖಣ್ಡಂ.

ಪ್ರಕರಣ 25.

ಪಿತನೂ ಕನ್ಯೆಯೂ.

ಚಿತ್ತೂರು ರಾಣನ ಆಶ್ರಯದಲ್ಲಿದ್ದ ರೋಷನ್ನಳು ತನ್ನ ಮಂದಿರದಲ್ಲಿಯೇ ಚಿಂತಾಸಾಗರದಲ್ಲಿ ಮುಳುಗಿ ಕುಳಿತಿದ್ದಂತೆ ಕಾಣಿಸಿತು. ಎಲ್ಲಿಯವರೆಗೆ ಗುಲಾಬಸಿಂಹನ ಸ್ವಭಾವವು ಆ ಬಾಲೆಗೆ ಪರಿಚಯವಾಗಲಿಲ್ಲವೋ ಅಲ್ಲಿಯವರೆಗೆ ಆಕೆಯು ಮನಸ್ಸಿನಲ್ಲಿ ವಿಕಾರರಹಿತಳಾಗಿದ್ದಳು. ಆದರೆ ಹೇಗೆ ಹೇಗೆ ಗುಲಾಬಸಿಂಗನ ಶೌರ್ಯೌದಾರ್ಯಾದಿ ಗುಣಗಳು ಆಕೆಗೆ ಅಧಿಕವಾಗಿ ಪರಿಚಯವಾಯಿತೋ, ಹಾಗೆ ಹಾಗೆ ಆಕೆಯ ಮನಸ್ಸಿನಲ್ಲಿ ತದ್ವಿಷಯಕ ಪ್ರೇಮವಿಕಾರವು ಸಂಚರಿಸಲಾರಂಭಿಸಿತು. ಅಜ್ಞಾನದಿಂದ ಆಕೆಯು ತನ್ನ ನೈಸರ್ಗಿಕ ಯೌವನಧರ್ಮಕ್ಕೆ ವಶಳಾಗಿ ಹೋದಳು. ಗುಲಾಬಸಿಂಗನ ಸೌಂದರ್ಯ ಮತ್ತು ಸದ್ಗುಣಗಳನ್ನು ನೋಡಿ ಆಕೆಯ ಮನದಲ್ಲಿ ಬೇರೊಂದು ಭಾವನೆಯುಂಟಾಯಿತು. ಪ್ರಥಮದಲ್ಲಿ ಹಿಂದೂ ಮತ್ತು ಮುಸಲ್ಮಾನ್ ಜಾತಿ ಭೇದವು ಆಕೆಯ ಮನದಲ್ಲಿ ಉದ್ಭವಿಸಿತು. ಆದರೆ ಅವರ್ಣನೀಯವಾದ ಪ್ರೇಮಬಲದ ಬೆಸೆಯಿಂದ ತನ್ನ ಪಕ್ಷಕ್ಕೇ ಈ ಭೇದವು ಲೋಪಿಸಿತು. ಪ್ರೇಮಮಯ ಜಗತ್ತಿನಲ್ಲಿ ಈ ನಿಯಮನಿಬಂಧವುಂಟಾಗಲಿಲ್ಲ. ಪ್ರೇಮದ ಸ್ಥಳದಲ್ಲಿ ಭೇದವಿದ್ದರೂ ಫಲವೇನು? ಈ ವಾಕ್ಯದ ಸತ್ಯದ ಅನುಭವವು ಆಕೆಗೆ ಉಂಟಾಯಿತು. ಈ ಕಾಲದಲ್ಲಿ ಆಕೆಯು ಗುಲಾಬಸಿಂಗನ ವಿಚಾರದಲ್ಲಿ ಲೀನಳಾಗಿ ತನ್ನಲ್ಲಿ ತಾನೆ,— ರಾಜಪುತ್ರರು ಎ

ಪತಿವ್ರತಸ್ಥರು. ತಮ್ಮ ಧರ್ಮದಲ್ಲಿ ಪರ್ವತದಂತೆ ಅಚಲರಾಗಿರುತ್ತಾರೆ. ಇದರಿಂದ ಗುಲಾಬಸಿಂಗನು ನನ್ನ ಪ್ರೇಮವನ್ನು ಸ್ವೀಕರಿಸಿ ನನ್ನ ಜೀವನವನ್ನು ಸುಖರೂಪದಿಂದ ಇಡುವನೆಂಬ ಆಶೆಯು ವ್ಯರ್ಥವಾದದ್ದು. ಎಲೈ, ನಿಶ್ಚಲಮನಸ್ಸೇ! ನೀನು ಕೂಡ ಇಂತಹ ಅಪ್ರಾಪ್ತವಸ್ತುವಿನಲ್ಲಿ ಆಶೆಮಾಡುವುದರಿಂದ ನಿನಗೆಂದಿಗೂ ಅದು ಪ್ರಾಪ್ತವಾಗದು. ರಮಣೀಯವಾದ ಮನೋಹರವಾಗಿರುವ ಪ್ರೇಮೋದ್ಯಾನದಲ್ಲಿ ನಿರಾಶೆ ವಿನಾ ಇನ್ನಾವ ಫಲವೂ ಪ್ರಾಪ್ತವಾಗದು. ಅಂತಃಕರಣವೇ! ನೀನು ಉದಾಸೀನವಾಗಿರು! ಈ ಸಂಸಾರ ಸುಖದಿಂದ ವಿರಕ್ತವಾಗು! ಈ ದುರ್ಭಾಗ್ಯಳಾದ ರೋಷನ್ನಳ ಹಣೆಯಲ್ಲಿ ಸುಖವೆಂಬುದು ಬರೆಯಲ್ಪಟ್ಟಿಲ್ಲವೆಂಬುದು ಸ್ಪಷ್ಟವಾಗಿರುತ್ತದೆ. ಹೀಗಿದ್ದೂ ನನ್ನ ಮನಸ್ಸು ನಿರ್ಲಜ್ಜೆಯಿಂದ ಅದರಲ್ಲಿ ಆಶೆಯನ್ನಿಟ್ಟಿರುತ್ತದೆ; ಇದೊಂದು ಭಯಂಕರವಾದ ಮೂರ್ಖತೆಯಲ್ಲವೇ? ಅವಶ್ಯವಾಗಿಯೂ ಮೂರ್ಖತೆಯೇ ಸರಿ. ನಾನು ಮೂರ್ಖಳು. ಮಾಡುವುದೇನು? ಮನಸ್ಸನ್ನು ಹೇಗೆ ಶಾಂತಪಡಿಸಲಿ? ಗುಲಾಬಸಿಂಗನನ್ನು ಮರೆಯಬೇಕಾಗಿ ಎಷ್ಟೋ ಪ್ರಯತ್ನಿಸಿದೆನು. ಆದರೆ, ಅವನ ಸ್ಮರಣೆಯು ವಿಶೇಷವಾಗಿ ಸ್ಥಿರಪಟ್ಟಿತು. ಇದಕ್ಕೆ ಕಾರಣವೇನಿರಬಹುದೋ ದೇವರೇ ಬಲ್ಲನು.''—ಎಂದು ಹೇಳಿಕೊಳ್ಳುತ್ತ ವಿಚಾರಗಳಲ್ಲಿ ಲೀನಳಾಗಿದ್ದಳು.

ಇಷ್ಟರಲ್ಲೇ ಆಕೆಯ ತಂದೆಯು ಹೊರಗಣಿಂದ ಕೊಠಡಿಯೊಳಕ್ಕೆ ಬಂದನು. ಆದ್ದರಿಂದ ಆಕೆಯ ವಿಚಾರಕ್ಕೆ ಭಂಗವುಂಟಾಯಿತು. ಆಗ ಆಕೆಯು ಎದ್ದು ನಿಂತು ವಿನಯದಿಂದ ತಂದೆಯನ್ನು ಕುರಿತು ಆಜ್ಞೆಯೇನೆಂದು ಕೇಳಿದಳು. ಆಗ ತಂದೆಯು ಮಗಳನ್ನು ಕುರಿತು—„ರೋಷನ್ನಳೇ! ಅಲ್ಲಾವುದ್ದೀನನು ಚಿತ್ತೂರು ಕಿಲ್ಲೆಯೊಳಗಿರುವುದು ನಿನಗೆ ತಿಳಿದಿದೆಯಷ್ಟೆ! ಆದರೆ, ನಾಳೆ ಉದಯಕಾಲದಲ್ಲಿ ಆತನು ತನ್ನ ಪಾಳೆಯಕ್ಕೆ ಬರುವನಂತೆ. ಅವನನ್ನು ಸಾಗಕಳುಹಿಸಲು ಭೀಮಸಿಂಗನು ಸೇನೆಯೊಡನೆ ಸ್ವಲ್ಪದೂರ ಹೋಗುವನಂತೆ. ಸುಲ್ತಾನನು ವಿಶ್ವಾಸಘಾತಕಿಯಾಗಿಯೂ, ಕ್ರೂರಿಯಾಗಿಯೂ ಇರುವುದರಿಂದ ನನಗೆ ಭೀತಿಯುಂಟಾಗಿದೆ. ಯಾವುದಾದರೊಂದು ವಿಪರೀತ ಪ್ರಸಂಗವು ಉಂಟಾದೀತು. ಬಳಿಕ ಏನುಮಾಡಬೇಕೆಂದು ಯೋಚಿಸುತ್ತಿದೇನೆ. ನನಗೆ ಆವ ಉಪಾಯವೂ ಸೂಚಿಸಲಿಲ್ಲ. ಆದ್ದರಿಂದ ನಿನ್ನೊಡನೆ ಆಲೋಚಿಸುವುದಕ್ಕಾಗಿ ಬಂದೆನು.'' ಎಂದು ನಸರುದೀನನು ಹೇಳಿದನು. ಆಗ ರೋಷನ್ನಳು, „ಜನಕನೇ? ಇಂತಹ ರಾಜಕೀಯ ಕಾರ್ಯಗಳ ವಿಷಯದಲ್ಲಿ ನಾನು ತಮಗೆ ಯಾವ ಉಪಾಯವನ್ನು ಸೂಚಿಸಿಕೊಟ್ಟೇನು? ನಾನು ಹೆಣ್ಣುಮಗಳಲ್ಲವೇ? ಗಂಡುಮಗನಾಗಿದ್ದಲ್ಲಿ ಇಂತಹ ಸಮಯದಲ್ಲಿ ತಮಗೆ ಸಹಾಯವಾಗಿ, ರಣರಂಗಕ್ಕೆ ಸಾಯುಧಳಾಗಿ ಜನ್ಮದಾತನಾದ ಜನಕನ ಉಪಯೋಗಕ್ಕೆ ಒದಗುತ್ತಿದ್ದೆನು. ಆದರೆ, ಈಶ್ವರನು ನನಗೆ ಸ್ತ್ರೀಜನ್ಮವನ್ನು ಕೊಟ್ಟಿದ್ದರಿಂದ ನಾನು ನಿಮಗೆ ಉಪಯೋಗಿಯಾಗಲು ಶಕ್ತಳಲ್ಲ. ಇದಕ್ಕಾಗಿ ದುಃಖಿಸುವೆನು.'' ಎಂದು ನಿರ್ಬಲತೆಯನ್ನು ಸೂಚಿಸಿದಳು.

ನಸರುದೀನನು ರೋಷನ್ನಳನ್ನು ಕುರಿತು, "ಮಗಳೇ! ಈವರೆಗೆ ನಾನು ನಿನ್ನನ್ನು ಕನ್ಯೆಯೆಂದು ತಿಳಿದಿದ್ದೆನು. ಆದರೆ ಯಾವಾಗ ನೀನು ಕಿಲ್ಲೆಯಮೇಲೆ ನಿಂತು ನುಸರತಖಾನನಂತಹ ವೀರನನ್ನು ಹೊಡೆದು ಗಾಯಪಡಿಸಿದೆಯೋ ಅದನ್ನು ನೋಡಿ ಅಂದಿನಿಂದ ನಾನು ನಿನ್ನನ್ನು ಶೂರನಾದ ವೀರಪುತ್ರನೆಂದು ತಿಳಿದಿರುವೆನು. ನೀನು ಆ ಕಾಲದಲ್ಲಿ ಪುರುಷವೇಷದಲ್ಲಿದ್ದುದರಿಂದ ಯಾರೂ ನಿನ್ನನ್ನು ಗುರ್ತಿಸಲಿಲ್ಲ; ಆದರೆ ಗುಲಾಬಸಿಂಗನಿಗೆ ಮಾತ್ರ ನಿನ್ನಲ್ಲಿ ಸಂಶಯವಾಗಿದೆ." ಎಂದು ಕಾಣುತ್ತೆ. ರಾಣಾನು "ಆ ನುಸರತಖಾನನನ್ನು ಗಾಯಪಡಿಸಿದವನಾರು? ಅವನನ್ನು ಶೋಧಿಸಿರಿ" ಎಂದು ಹೇಳಿದನು. ಆಗ ಗುಲಾಬಸಿಂಗನು ನನ್ನ ಹತ್ತಿರ ಬಂದು ನನ್ನನ್ನು ಕುರಿತು,—"ನನ್ನ ಕಿಲ್ಲೆಯ ಮೇಲೆ ನಿಂತು ನುಸರತನನ್ನು ಹೊಡೆದವಳು ರೋಷನ್ನಳು ಅಲ್ಲವೇ? ಆಕೆಯೇ ಆದರೆ, ಜನ್ಮದಾತರಾದ ನಿಮ್ಮನ್ನು ವಂದಿಸುವೆನು." ಎಂದನು. "ಮಗಳೇ! ಪುತ್ರನನ್ನಪೇಕ್ಷಿಸುವ ಜನರಿಗೆ ದೇವರು ನಿನ್ನಂಥಾ ಪುತ್ರಿಯನ್ನೇ ಕೊಡಬೇಕು" ಎಂದು ನಸರುದೀನನು ಸಂತೋಷದಿಂದ ಹೇಳಿದನು. ತಂದೆ ಮಕ್ಕಳ ನೇತ್ರಗಳಿಂದ ಆನಂದಾಶ್ರುವು ಹರಿಯಲಾರಂಭಿಸಿತು. ಸ್ವಲ್ಪ ಹೊತ್ತು ಇಬ್ಬರೂ ನಿಶ್ಶಬ್ದರಾಗಿದ್ದರು. ಬಳಿಕ ರೋಷನ್ನಳು— "ಗುಲಾಬಸಿಂಗನಿಗೆ ವೇಷ ಪರಿಚಯವಾಗಿರುವದು ನಾನು ಇಚ್ಛಯಿಸುವುದಿಲ್ಲ." ಎಂದಳು. ಅದಕ್ಕೆ ನಸರುದೀನನು— "ಪರಿಚಯವಾದರೆ ಬಾಧಕವೇನು? ನಿನ್ನ [illegible] ವಾಗುವದಿಲ್ಲ. ಈಗ ನಾನು ಭೀಮಸಿಂಗನನ್ನು ನೋಡಲು ಹೋಗುವೆನು. ನಾನು ಬರುವುದು ತಾವಕಾಶವಾದರೆ ಯೋಚಿಸಬೇಡ." ಎಂದು ಹೇಳಿ ಹೊರಟುಹೋದನು.

ತಂದೆಯು ಹೋದಬಳಿಕ ರೋಷನ್ನಳ ಮನದಲ್ಲಿ ಗುಲಾಬಸಿಂಗನ ವಿಚಾರವು ಪುನಃ ಪ್ರಜ್ವಲಿಸಿತು. ಗುಲಾಬಸಿಂಗನು ತನ್ನ ತಂದೆಯೊಡನೆ ಸ್ತುತಿಸಿದ್ದನ್ನು ಕೇಳಿ ಗುಲಾಬಸಿಂಗನಲ್ಲಿ ಮತ್ತಷ್ಟು ಪ್ರೀತಿಯುಂಟಾಯಿತು. ಒಂದು ಜಾವವಾದ ಮೇಲೆ ದಾಸಿಯೊಬ್ಬಳು ಬಂದು ಗುಲಾಬಸಿಂಗನು ಬಂದ ವೃತ್ತಾಂತವನ್ನು ಅವಳಿಗೆ ತಿಳಿಸಿದಳು. ಬಳಿಕ [illegible] ಹೇಳಿದನು. ಯವನ ಸ್ತ್ರೀಯರಲ್ಲಿ ಘೋಷಾ ಪದ್ಧತಿ ಇದ್ದರೂ ಗುಲಾಬಸಿಂಗನಿಗೆ ಆಕೆಯನ್ನು ನೋಡಿ ಹೋಗಲು ನಿರ್ಬಂಧವಿಲ್ಲ. ಏಕೆಂದರೆ ರಾಜಪುತ್ರನ ಪತಿವ್ರತೆಯು ಆಕೆಗೆ ತಿಳಿದಿತ್ತು. ಗುಲಾಬಸಿಂಗನು ಬಂದ ಬಳಿಕ ಆಕೆಯು ಪೀಠದಿಂದೆದ್ದು ಅವನೆದುರಿಗೆ ಹೋದಳು. ಗುಲಾಬಸಿಂಗನು ಆಸನದಲ್ಲಿ ಕುಳಿತಬಳಿಕ ಆಕೆಯು ಅಧೋಮುಖಿಯಾಗಿ ನಮ್ರತೆಯಿಂದ [illegible],—"ಏಕೆ ಆಗಮನವು?" ಎಂದು ಕೇಳಿದಳು. ಗುಲಾಬಸಿಂಗನು,—"ರೋಷನ್ನಾ! ನಿನ್ನ ತಂದೆಯೊಡನೆ ಅತ್ಯಾವಶ್ಯಕ ವಿಷಯದಲ್ಲಿ ಮಾತಾಡಬೇಕೆಂದು ಈಗ ಬಂದೆನು. ಆದರೆ, ದಾಸಿಯ ಮುಖದಿಂದ ನಿನ್ನ ತಂದೆಯು ಹೊರಟುಹೋದನೆಂದು ಕೇಳಿ ನಿನ್ನನ್ನು ನೋಡಿ ಹೋಗಬೇಕೆಂದು ಬಂದೆನು. ನಾನು ಬಂದದ್ದರಿಂದ ತೊಂದರೆಯಾಯಿತೇ?"

ಎಂದು ಕೇಳಿದನು. ರೋಷನ್ನಳು ಅಧೋಮುಖಿಯಾಗಿಯೇ,—“ ಉಪಚಾರ ಕರ್ತರೂ, ಉದಾರಿಗಳೂ, ಮನೋಹರ ಮೂರ್ತಿಗಳೂ, ಇದವರನ್ನು ನೋಡುವುದರಿಂದ ಯಾವ ಅಭಾಗ್ಯಳಿಗೆ ತೊಂದರೆಯಾದೀತು? ನಾನು ನಿಜವಾಗಿ ಹೇಳುವುದೇನಂದರೆ, “ ತಮ್ಮ ಚಂದ್ರನಂತಿರುವ ಮುಖದರ್ಶನದಿಂದ ಈ ದಾಸಿಯ ಅಂತಃಕರಣವು ಆವರ್ಣನೀಯಾನಂದದಿಂದ ತುಂಬಿಹೋಗುವುದು. ” ಎಂದಳು.

ಗುಲಾಬಸಿಂಗ:—ರೋಷನ್! ನೀನು ನನ್ನುಪಕಾರವನ್ನು ನೆನೆದು ನನ್ನೆದುರಿನಲ್ಲಿ ಇದನ್ನು ಹೇಳುವುದರಿಂದ ನನಗೆ ನಾಚಿಕೆಯಾಗುವುದು. ನಾನು ನಿನಗಾವ ಉಪಕಾರವನ್ನೂ ಮಾಡಲಿಲ್ಲ. ನನ್ನ ಕರ್ತವ್ಯವನ್ನು ನಾನು ಮಾಡಿದೆನು. ವೀರನು ತಾನು ಮಾಡಿದುಪಕಾರವರ್ಣನೆಯನ್ನು ಸ್ವಲ್ಪವೂ ಕೇಳಲಿಚ್ಛಿಸುವುದಿಲ್ಲ. ದಯವಿಟ್ಟು ಇನ್ನೂಮೇಲೆ ಈ ವಾರ್ತೆಯನ್ನುಚ್ಚರಿಸದಿರು. ಈ ವಿನಂತಿಯನ್ನು ಅವಮಾನ್ಯ ಮಾಡಿದರೆ ನಾನು ಈ ಕಡೆಗೆ ಬರುವುದನ್ನೇ ಮುಕ್ತಾಯಮಾಡುವೆನು

ರೋಷನ್:—ಈ ನನ್ನ ಉದ್ಗಾರದಿಂದ ತಮಗೆ ದುಃಖವಾಗಿದ್ದರೆ ಈ ದಾಸಿಯನ್ನು ಕ್ಷಮಿಸಿರಿ. ತಮ್ಮ ಚಿತ್ತಕ್ಕೆ ದುಃಖವನ್ನುಂಟುಮಾಡಬೇಕೆಂಬ ಹೇತುವು ನನಗಿಲ್ಲ. ಯಾರು ಉಪಕಾರ ಮಾಡುವರೋ ಅವರಲ್ಲಿ ಕೃತಜ್ಞತೆಯನ್ನು ತೋರಿಸುವುದು ಈ ಜಗದ ನಿಯಮವಾಗಿದೆ. ಅಂತಹದ ಬಾಯಿಯಿಂದ ಸಹಜವಾಗಿ ಇಂತಹ ಉದ್ಗಾರವು ಹೊರಡುವುದು. ನನ್ನಂತಃಕರಣದಲ್ಲಿಂಟಾದ ಖೇದಪರಿಹಾರಗೈಯಲು ಮಾರ್ಗವು ನನಗೆ ದೊರೆಯುವುದಿಲ್ಲ

ಗುಲಾಬಸಿಂಗ:—ಆದರೆ, ನಿನಗೆ ಸಂಕೋಚವಿಲ್ಲದಿದ್ದರೆ ದಯವಿಟ್ಟು ನಿನ್ನ ಖೇದವಾವುದೆಂಬುದನ್ನು ಹೇಳಬೇಕು. ತಮ್ಮ ಪ್ರಿಯಜನರಿಗೆ ಹೃದಯದ ಗುಪ್ತವಾರ್ತೆಯನ್ನು ಹೇಳುವುದರಿಂದ ದುಃಖವು ಕಮ್ಮಿಯಾಗುವಮಾರ್ಗವು ಸಿಕ್ಕುವುದು. ಇದನ್ನು ನೀನ ತಿಳಿದಿದ್ದೀಯೆ; ನಾನು ಹೇಳಬೇಕಾಗಿಲ್ಲ

ರೋಷನ್:—ಈಗ ಇಲ್ಲಿ ತಾವು ಒಬ್ಬರೇ ನನಗೆ ಪ್ರಿಯರಾಗಿದ್ದೀರಿ. ತಮ್ಮ ಹೊರತು ನನಗೆ ಹಿತೇಚ್ಛುಗಳಾರೂ ಇಲ್ಲ. ನೀವು ನನ್ನ ದುಃಖವನ್ನು ಪರಿಹರಿಸಲು ಶಕ್ತರೆಂದು ನಿಜವಾಗಿ ತಿಳಿದಿದೇನೆ. ಆ ದುಃಖ ಪರಿಹಾರಕ್ಕಾಗಿ ತಾವು ದೃಢವಾಗಿ ಇಚ್ಛೆಯುಳ್ಳವರಾಗಿಬೇಕು.

ಗುಲಾಬಸಿಂಗ:—ಏನು? ಈಗಲೂ ನಿನಗೆ ನನ್ನ ದೃಢೇಚ್ಛೆಯ ವಿಷಯದಲ್ಲಿ ಸಂದೇಹವಿದೆಯೆ? ಹಾಗಿದ್ದರೆ ಅದು ವ್ಯರ್ಥವಾದದ್ದು. “ ನಾನು ನಿನಗೆ ನನ್ನಿಂದಾದಷ್ಟು ಪ್ರಯತ್ನದಿಂದ ಮಾನಸಿಕ ಶಾರೀರಕ ದುಃಖಗಳನ್ನು ಶಮನ ಮಾಡಲು ಪ್ರಯತ್ನಿಸುತ್ತೇನೆ.” ಎಂದು ಮಾತು ಕೊಡುತ್ತೇನೆ. ಆದ್ದರಿಂದ ಆ ದುಃಖವಾವುದು? ಅದನ್ನು ಹೇಳಬೇಕೆಂದು ನಿನ್ನನ್ನು ಪಟ್ಟದಿಂದ ಆಶ್ವಾಸನ ಕೊಡುತ್ತೇನೆ. ನಿನ್ನ ಖೇದವನ್ನು ತಿಳಿಯುವ ಇಚ್ಛೆಯು ಅತಿಯಾಗಿದೆ. ಹೇಳು!

ರೋಷನ್:—ಬೇಡ! ಬೇಡ! ಮಾತು ಕೊಡಬೇಕಾಗಿಲ್ಲ. ತಮ್ಮ ಮಾತಿನಲ್ಲಿ ನಂಬಿಕೆ ಇದೆ. ಈ ದಾಸಿಗೆ ಅನಂತೋಪಕಾರಗಳಾಗಿವೆ; ಅದಲ್ಲದೆ, ನಿತ್ಯವೂ ಆಗುತ್ತಿವೆ. ಆದರೆ, ಪ್ರತ್ಯುಪಕಾರವನ್ನು ಯಾವ ರೀತಿಯಿಂದ ಮಾಡಿ ಮುಕ್ತಳಾಗಬೇಕೆಂದು ಸರ್ವದಾ ಯೋಚಿಸುತ್ತೇನೆ. ಇದರಿಂದಲೇ ನನಗೆ ಅತ್ಯಂತ ಖೇದವಾಗುತ್ತಿದೆ. ಇದಕ್ಕೆ ಮಾರ್ಗದರ್ಶಕರಾದಪಕ್ಷದಲ್ಲಿ ತಮ್ಮ ಉಪಕಾರವು ವೃದ್ಧಿಯಾದೀತು. ಇದೇ ಖೇದಕಾರಣ.

ಗುಲಾಬ:-ರೋಷನ್! ನಾನು ಪ್ರತ್ಯುಪಕಾರಪೇಕ್ಷೆಯಿಂದ ಸ್ವಲ್ಪವೂ ಉಪಕಾರ ಮಾಡತಕ್ಕವನಲ್ಲವೆಂದು ಎಷ್ಟೋಸಾರಿ ಹೇಳಿರುತ್ತೇನೆ. ನನ್ನ ಉಪಕಾರಕ್ಕೆ ಪ್ರತ್ಯುಪಕಾರವಾಯಿತೆಂದು ತಿಳಿದಿದೇನೆ. ನಿನ್ನಂತಃಕರಣದಲ್ಲುಂಟಾಗಿರುವ ಖೇದವು ನಿರರ್ಥವಾದದ್ದು. ಇದನ್ನು ಅಂತಃಕರಣದಿಂದ ತೆಗೆದು ಹಾಕಿ ಆ ಸ್ಥಳದಲ್ಲಿ ಆನಂದದ ಉದಯವನ್ನುಂಟುಮಾಡಿಕೊಳ್ಳಬೇಕು.

ರೋಷನ್:-ನೀವು ಹೇಳಿದುದು ನಿಜ; ಆದರೆ, ಇದರಿಂದ ನನ್ನ ಚಿತ್ತಕ್ಕೆ ಸಂತೋಷವಾಗುವ ಸಂಭವವು ಪ್ರಾಯಶಃ ಕಮ್ಮಿಯಾಗಿದೆ. ನಾನು ತಮ್ಮ ಉಪಕಾರಕ್ಕೆ ಪ್ರತ್ಯುಪಕಾರ ಮಾಡುವವರೆಗೂ ನನ್ನ ಚಿತ್ತಕ್ಕೆ ಸಂತೋಷವುಂಟಾಗಲಾರದು.

ಗುಲಾಬ:—ಹಾಗೆ ಇಚ್ಛೆಯಿದ್ದರೆ ನನ್ನ ಉಪಕಾರಕ್ಕಾಗಿ ಯಾವ ವಸ್ತುವನ್ನಾದರೂ ಕೊಡುವುದಾದರೆ, ಆನಂದದಿಂದ ಅದನ್ನು ಸ್ವೀಕರಿಸುತ್ತೇನೆ. ಹೃದಯ ಭಾರವು ಅದರಿಂದ ಕಮ್ಮಿಯಾಗುವ ಹಾಗಿದ್ದರೆ ಆಗಲಿ.

ಗುಲಾಬಸಿಂಗನ ಈ ಮಾತನ್ನು ಕೇಳಿ ಆಕೆಯ ಮುಖದಲ್ಲಿ ಲಜ್ಜೆಯುದಯಿಸಿತು. ಬಹಳ ಹೊತ್ತು ಯಾವ ಮಾತನ್ನೂ ಆಡಲಿಲ್ಲ. ಬಳಿಕ ಲಜ್ಜೆಯಿಂದ ಅಧೋಮುಖಿಳಾಗಿ, “ಗುಲಾಬಸಿಂಗರೇ! ನನ್ನಲ್ಲಿ ಧನವಿಲ್ಲವಾದ್ದರಿಂದ ಧನವನ್ನು ಕೊಟ್ಟು ಪ್ರತ್ಯುಪಕಾರ ಮಾಡಲು ನನಗೆ ಶಕ್ತಿಯಿಲ್ಲ. ಆದರೆ, ಜನ್ಮಾವಧಿ ತಮ್ಮ ಸೇವೆಯನ್ನು ಮಾಡುತ್ತಿರುತ್ತೇನೆ. ಅದರಿಂದಲೇ ಸಂತೋಷಿಸಬೇಕು. ಈ ಸೇವೆಯನ್ನು ತಾವು ಸ್ವೀಕರಿಸಿದರೆ ನಾನು ಭಾಗ್ಯವಂತಳೆಂದು ತಿಳಿದೇನು. ಅದರಿಂದ ನನ್ನ ದುಃಖನಿವಾರಣೆಯಾಗುವುದು.” ಎಂದು ಅಂತರಂಗವನ್ನ ವ್ಯಕ್ತಪಡಿಸಿದಳು.

ಇಷ್ಟನ್ನು ಹೇಳುತ್ತಿರುವಾಗಲೇ ಗುಲಾಬಸಿಂಗನು ವಿಚಾರತರಂಗದಲ್ಲಿ ಬಿದ್ದನು. ರೋಷನ್ನಳ ಮಾತಿನ ಭಾವಾರ್ಥ ತಿಳಿಯದೆ ಸ್ಪಷ್ಟವಾಗಿ ತಿಳಿಯುವದಕ್ಕಾಗಿ ರೋಷನ್ನಳನ್ನು ಕುರಿತು,—“ನೀನು ಶರೀರ ಮತ್ತು ಮನಸ್ಸುಗಳಿಂದ ನನ್ನನ್ನು ಸೇವಿಸುತ್ತೇನೆಂದು ಹೇಳುವ ಮಾರ್ಮಿಕಹೇತುವು ನನಗೆ ತಿಳಿಯಲಿಲ್ಲ. ಸ್ಪಷ್ಟವಾಗಿ ಹೇಳಬೇಕು.” ಎಂದನು.

ಅದಕ್ಕೆ ಪ್ರತ್ಯುತ್ತರವಾಗಿ ರೋಷನ್ನಳು “ಸ್ವಾಮಿ! ತಮ್ಮಂತಹ ಚತುರರು ಅತುಲಬುದ್ಧಿಶಾಲಿಗಳೂ ಆದ ಪುರುಷರಿಗೆ ನನ್ನಂತಹ ಅಲ್ಪಬುದ್ಧಿಯುಳ್ಳ ಅಬಲೆಯು

ದ್ದೇನೆ. ನನ್ನ ಕೈಯಿಂದಲೇ ನರಕದ್ವಾರವನ್ನು ತೆರೆದಿದ್ದೇನೆ. ನನ್ನ ಅಪರಾಧವು ನನ್ನೆದುರಿಗೆ ಬಂದು ನಿಲ್ಲುತ್ತಿದೆ. ದೇವರಲ್ಲಿ ನನ್ನ ತಪ್ಪುಗಳನ್ನು ಕ್ಷಮಿಸಬೇಕಾಗಿ ಬೇಡುತ್ತೇನೆ. ಈಗ ತಮ್ಮ ಪುಣ್ಯಪ್ರತಾಪದಿಂದ ಈ ಮಾರ್ಗವು ನನಗೆ ಸಿಕ್ಕಿತು. ಇದಕ್ಕಾಗಿ ನಾನು ತಮಗೆ ಕೃತಜ್ಞನಾಗಿದ್ದೇನೆ.

ಗುಲಾಬಸಿಂಗನು ಮಧ್ಯದಲ್ಲಿ—“ಸುಲ್ತಾನ್ ಸಾಹೇಬರೇ! ಹಿಂದೆ ನಡೆಸಿದ್ದಕ್ಕೆ ಪಶ್ಚಾತ್ತಾಪ ಪಡುವುದರಿಂದ ಏನೂ ಫಲವಿಲ್ಲ. ಇನ್ನು ಮೇಲೆ ತಾವು ಸನ್ಮಾರ್ಗ ಮತ್ತು ನೀತಿಯಿಂದ ನಡೆದು ಯಾರಿಗೂ ದುಃಖಕೊಡದೆ, ತಮ್ಮ ಸತ್ಕರ್ಮದಿಂದ ಜನರ ಆಶೀರ್ವಾದವನ್ನು ಸ್ವೀಕರಿಸಿದರೆ, ತಮ್ಮ ಪರಿತಾಪ ಬಾಧರೂಪವಾದ ಕೃಷ್ಣಮೇಘವು ಒಡೆದುಹೋಗಿ ಕೀರ್ತಿಚಂದ್ರನ ಪ್ರಕಾಶವು ಪ್ರಪಂಚದಲ್ಲಿ ಹರಡೀತು. ಅಂತಃಕರಣ ಪೂರ್ವಕವಾಗಿ ಪಶ್ಚಾತ್ತಾಪ ಪಡುವುದರಿಂದ ಹೃದಯವ್ಯಥೆಯು ಕಮ್ಮಿಯಾಗುತ್ತದೆ. ಇದು ಸತ್ಯವು. ಪಶ್ಚಾತ್ತಾಪದಂತೆ ತಮ್ಮ ವರ್ತನವೂ ಇರಬೇಕು. ಹೀಗಿದ್ದರೆ, ತಮಗೆ ಲಾಭವಾದೀತು. ಇಲ್ಲದಿದ್ದರೆ, ಇಲ್ಲ. ಯವನರು ಹಿಂದುಗಳನ್ನು ಕಾಫರರೆಂದು ತಿಳಿದು ತಾವು ಮಾತ್ರ ಪರಮೇಶ್ವರನ ಮಕ್ಕಳೆಂದು ಹೇಳುವರು. ಇದು ಯೋಗ್ಯವಲ್ಲ; ಪರಮಾತ್ಮನನ್ನು ಹಿಂದುಗಳು ಪ್ರತಿಮೆಗಳದ್ವಾರ ದರ್ಶನ ಮಾಡಿಕೊಳ್ಳುತ್ತಾರೆ. ಅಗ್ನಿಪೂಜಕರು ಅಗ್ನಿ ರೂಪದಿಂದ ಅವನನ್ನು ಸ್ತುತಿಸುವರು. ನಿರೀಶ್ವರವಾದಿಗಳೂ ಅವನನ್ನ ಗುರ್ತಿಸಿದ್ದಾರೆ. ಇದರಿಂದ ಯಾರೂ ಅವನನ್ನು ತಿಳಿದಿರಲು ಶಕ್ತರು. ಹೀಗಿರುತ್ತಾ ಪ್ರತ್ಯೇಕಧರ್ಮಾವಲಂಬಿಗಳು ತಮ್ಮ ಧರ್ಮವನ್ನು ಉತ್ಕೃಷ್ಟವೆಂದೂ ಪರಧರ್ಮೀಯರನ್ನು ಪಾಷಂಡಿಗಳೆಂದು ತಿಳಿದು ಕಲಹವಾಡುವರು. ಇದೊಂದು ಪ್ರಮಾದವಲ್ಲವೇ? ಈಶಕೃಪೆಯಿಂದ ಈ ಪ್ರಮಾದವು ಪರಿಹಾರವಾಗಲಿ! ಸರ್ವತ್ರ ಐಕ್ಯವೂ ಶಾಂತಿಯೂ, ಮೈತ್ರಿಯೂ ಹಬ್ಬಲಿ.” ಎಂದು ಧರ್ಮೈಕಸ್ವರೂಪವನ್ನು ವ್ಯಕ್ತಗೊಳಿಸಿದನು.

ತೀವ್ರದೃಷ್ಟಿಯುಳ್ಳ ಅಲ್ಲಾವುದ್ದೀನನು ಗುಲಾಬಸಿಂಗನನ್ನು ಪೂರ್ಣವಾಗಿ ಗುರ್ತಿಸಿದ್ದನು. ದೆಹಲಿಯಲ್ಲಿ ಸನ್ಯಾಸಿವೇಷದಿಂದ ಅಲ್ಲಾವುದ್ದೀನನ್ನು ವಂಚಿಸಿ ಬಂದದ್ದು ವಾಚಕರಿಗೆ ನೆನಪಿರಬಹುದು. ಸುಲ್ತಾನನು ಪ್ರಸಂಗಾವಧಾನದಿಂದ ದಿಂದ,—“ರಾಜಪುತ್ರವೀರನೇ! ಇಂತಹ ಉಪದೇಶವನ್ನು ನೀನು ನನಗೆ ದಿಲ್ಲಿಯಲ್ಲಿ ಮಾಡಿದ್ದರೆ ಈರೀತಿಯಾದ ಪ್ರಾಣಹಾನಿಯಾಗುತ್ತಿರಲಿಲ್ಲ.” ಎಂದನು.

ಆಗ ಗುಲಾಬಸಿಂಗನು “ನೀವು ತಪ್ಪಿದಿರಿ ತಮ್ಮ ಸ್ವಭಾವವು ಆಗ ಹೀಗಿರಲಿಲ್ಲ. ಆಗ ಇಂತಹ ಉಪದೇಶಮಾಡಿದ್ದರೆ ನೀವು ಇಲ್ಲಿಗೆ ಬರುತ್ತಲೇ ಇರಲಿಲ್ಲ. ಆದರೆ, ಈಗ ‘ವಿಘ್ನ’ವೇನಿದೆ? ಎಚ್ಚರಹೊಂದಿ ಪ್ರಾತಃಕಾಲವೆಂದು ತಿಳಿದಮೇಲೆ ಅಡ್ಡಿಯಿಲ್ಲ. ಇದರಲ್ಲಿ ಬಹು ರಹಸ್ಯವಿದೆ.” ಎಂದು ಮರ್ಮಯುಕ್ತವಾದ ವಾಕ್ಪ್ರಹಾರ ಮಾಡಿದನು.

ಈ ಮಾತಿನಿಂದ ಸುಲ್ತಾನನು ಚಿತ್ತದಲ್ಲಿ ತಳಮಳಿಸಿದನು. ಆದರೆ ಬಾಯಿಯಿಂದ ಏನನ್ನೂ ಹೇಳದೆ ಮುಗುಳುನಗೆಯಿಂದಲೇ ಕಾಲಕಳೆದನು. ಪ್ರಯಾಣಕಾಲ ಸಮೀಪಿಸಿತು. ಸುಲ್ತಾನನು ಆಸನದಿಂದ ಎದ್ದ ಕೂಡಲೆ ಸಭಾಜನರೆಲ್ಲರೂ ಎದ್ದರು. ಮಹಾರಾಣನು ಸಭಾಗೃಹದ್ವಾರದವರೆಗೆ ಬಂದನು. ಮತ್ತು ಸಭಾಗೃಹಕ್ಕೆ ಹಿಂತಿರುಗಿದನು. ಏಕೆಂದರೆ, ಭೀಮಸಿಂಗನು ಚಿತ್ತೂರಿನ ಗಡಿಯವರೆಗೆ ಸುಲ್ತಾನನನ್ನು ಸಾಗಕಳುಹಿಸಲು ಹೊರಟನು. ಗುಲಾಬಸಿಂಗನೂ ಬೇರೆ ಸಾಕ್ಕಾರು ಜನರೂ ಭೀಮಸಿಂಗನೊಡನೆ ಹೊರಡುವುದಾಗಿ ತಿಳಿಸಿದರು. ಇದನ್ನು ಕೇಳಿ ಭೀಮಸಿಂಗನು,—“ನನ್ನ ಪ್ರಿಯವೀರರೇ! ನೀವೆಲ್ಲಿಯೇ ನಿಲ್ಲಿ. ನನಗೆ ಅಪಾಯ ಉಂಟಾಗುವುದೆಂದು ಚಿಂತಿಸದಿರಿ. ಸುಲ್ತಾನನು ನಮ್ಮಲ್ಲಿ ವಿಶ್ವಾಸವಿಟ್ಟು ನಾಲ್ಕೈದು ಜನರೊಡನೆ ಇಲ್ಲಿಗೆ ಬಂದಿರುವನು. ನಾನೂ ನಾಲ್ಕೈದು ಜನರೊಡನೆ ಸುಲ್ತಾನನ ಸಂಗಡ ಹೋದರೆ ಅವಿಶ್ವಾಸ ಪ್ರದರ್ಶನವಾಗುವುದು. ಇದು ಒಳ್ಳೆಯದಲ್ಲ. ನಾನು ಹಾಗೆ ನಡೆದರೆ ಕ್ಷತ್ರಿಯವೀರರು ವಿಶ್ವಾಸಹೀನರು ನಿರ್ದಾಕ್ಷಿಣ್ಯಪರರೆನ್ನುವರು. ಈ ಅಸಮಾಧಾನವನ್ನು ನಾವು ಸಹಿಸಲು ಆಗುವುದಿಲ್ಲ. ಇದಕ್ಕಾಗಿ ನೀವು ನನ್ನ ಆಜ್ಞೆಯನ್ನು ಅನಾದರಿಸಬೇಡಿರಿ.” ಎಂದನು.

ಯೋಧರೆಲ್ಲರೂ ನಿರುತ್ಸಾಹಿಗಳಾದರು. ಭೀಮಸಿಂಗನು ಇಬ್ಬ ಸೇವಕನೊಡನೆ ಅಲ್ಲಾವುದೀನನ ಸಂಗಡ ಹೊರಟನು. ಸುಲ್ತಾನನು ಭೀಮಸಿಂಗನ ಅತುಲಸಾಹಸವನ್ನೂ ವಿಶ್ವಾಸವನ್ನೂ ಸ್ತುತಿಸಿದನು. ಅವರು ಆ ದುರ್ಗದ— “ರಾಮಪೋಳ” ಎಂಬ ಸಿಂಹದ್ವಾರದಿಂದ ಹೊರಗೆ ಹೊರಟು, ಪರ್ವತದಿಂದ ಇಳಿದು ಬಂದರು. ಆ ಉಚ್ಚಸ್ಥಳದಲ್ಲಿ ನಿಂತರೆ, ಮೇವಾಡದ ಸಹಜವಾಗಿರುವ ಉತ್ತಮ ಸೌಂದರ್ಯವು ದೃಗ್ಗೋಚರವಾಗುವುದು. ಆ ನಿಸರ್ಗಸೌಂದರ್ಯವನ್ನು ನೋಡುತ್ತಾ ಅನ್ಯರಾಜಕೀಯ ವಿಷಯಗಳನ್ನು ಚರ್ಚಿಸುತ್ತಾ ಮಾರ್ಗಕ್ರಮಣ ಮಾಡುತ್ತಿದ್ದರು. ಆ ದುರ್ಗದ ಕೆಳಭಾಗದಲ್ಲಿ ಸುಲ್ತಾನನಿಗಾಗಿ ಒಂದು ಕುದುರೆಯು ಸಿದ್ಧವಾಗಿತ್ತು. ಆದರೆ ಅವನು ಕುದುರೆಯನ್ನು ಹತ್ತದೆ ಪಾದಚಾರಿಯಾಗಿಯೇ ತನ್ನ ಪಾಳೆಯಕ್ಕೆ ಹೋಗಬೇಕಾಗಿ ಯೋಚಿಸಿದನು. ಸಂಭಾಷಣಾಲಹರಿಯಿಂದ ಭೀಮಸಿಂಗನು ತನ್ನ ಗಡಿಯನ್ನು ಬಿಟ್ಟು ಬಹುದೂರ ಬಂದನು. ಅವರಿಬ್ಬರೂ ಸುಲ್ತಾನನ ಪಾಳೆಯದವರೆಗೆ ಹೋದರು. ಅಲ್ಲಿಂದ ಭೀಮಸಿಂಗನು ಹಿಂತಿರುಗಲು ಸಿದ್ಧನಾಗಲು ಸುಲ್ತಾನನು,—“ಭೀಮಸಿಂಗರೇ! ಆಕಸ್ಮಾತ್ತಾಗಿ ತಾವು ನಮ್ಮ ಪಾಳೆಯದವರೆಗೆ ಬಂದಿರಿ. ಈಗ ಮಧ್ಯಾಹ್ನಕಾಲವಾಗಿದೆ; ಆದ್ದರಿಂದ ನಮ್ಮ ಗುಡಾರದಲ್ಲಿ ಸ್ವಲ್ಪಕಾಲ ವಿಶ್ರಾಂತಿಹೊಂದಿ ಸಂಧ್ಯಾಕಾಲಕ್ಕೆ ಹಿಂದಿರುಗಿ ಹೋಗಬಹುದು. ನನ್ನ ಆದರಾತಿಥ್ಯವನ್ನು ಸ್ವೀಕರಿಸಿ ನನ್ನನ್ನು ಕೃತಾರ್ಥನನ್ನಾಗಿ ಮಾಡಿರಿ. ಇಷ್ಟೇ ನನ್ನ ಆಶೆ.” ಎಂದನು.

ಭೀಮಸಿಂಗನು ಅವನ ವಿನಂತಿಯನ್ನು ಸ್ವೀಕರಿಸಿದನು. ಮತ್ತು ಅವನ ಹಿಂದೆಯೇ ಅವನ ಡೇರೆಗೆ ಹೋಗಿ ಕುಳಿತನು. ಬಳಿಕ ಸುಲ್ತಾನನು ಸ್ನಾನಮಾ-

ಪುರ ನಿಮಿತ್ತವನ್ನು ತೋರಿಸಿ ಅಲ್ಲಿಂದ ಹೊರಟುಹೋದನು. ಅವನು ಹೋದ ಕೂಡಲೆ, ಯವನಸೈನಿಕರು ಆ ಡೇರೆಯನ್ನು ಮುತ್ತಿ ಭೀಮಸಿಂಗನು ಅಜಾಗರೂಕನಾಗಿದ್ದಾಗ ಅವನ ಮೇಲೆ ಬಿದ್ದು ಹಿಡಿದು ಕೈಕಾಲುಗಳಿಗೆ ಭದ್ರವಾಗಿ ಸಂಕೋಲೆ ಹಾಕಿದರು. ಈ ವಿಲಕ್ಷಣರೀತಿಯನ್ನು ನೋಡಿ ಭೀಮಸಿಂಗನು ಮಹದಾಶ್ಚರ್ಯದಿಂದ ದಿಙ್ಮೂಢನಾದನು. ಮೊದಲು ಅವನ ಬಾಯಿಯಿಂದ ಯಾವ ಶಬ್ದವೂ ಹೊರಡಲಿಲ್ಲ. ಆಗ ಸುಲ್ತಾನನು ಕೆಂಗಣ್ಣುಳ್ಳವನಾಗಿ ಅಲ್ಲಿಗೆ ಬಂದು ಮೀಸೆಯನ್ನು ತೀಡುತ್ತಾ ಭೀಮಸಿಂಗನನ್ನು ಕುರಿತು—“ಮಹಾರಾಣಾ ಭೀಮಸಿಂಗನೆ! ಈ ಆದರಾತಿಥ್ಯದಿಂದ ನಿಮಗೆ ಸಂತೋಷವಾಗಲಿಲ್ಲವೇ? ಈ ಜಗಜ್ಜೇತನಾದ ಸುಲ್ತಾನನ ಇಚ್ಛೆಯು ಪೂರ್ಣವಾಗದೇ ಇದ್ದುದಕ್ಕಾಗಿ ಈ ಪರಿಣಾಮವಾಗಿದೆ. ಈಗ ಲಕ್ಷ್ಯಕ್ಕೆ ಬಂತೆ!” ಎಂದನು.

ಭೀಮಸಿಂಗ:— ಅದ್ಯಾಪಿ ಲಕ್ಷ್ಯಕ್ಕೆ ಬರಲಿಲ್ಲ. ಸರ್ಪ ಸ್ವಭಾವವೂ ತಿಳಿದಿದ್ದರೂ ಮತ್ತೆಮತ್ತೆ ವಿಶ್ವಾಸವಿಟ್ಟುದರಿಂದ ಈ ಪರಿಣಾಮವಾಗಿದೆ. ಚಿತ್ತೂರು ದುರ್ಗದಲ್ಲಿ ಅಮೃತದಂತಿರುವ ಮಾತನ್ನಾಡಿ ಇಲ್ಲಿ ವಿಶ್ವಾಸಘಾತ ಮಾಡುವವನು ಅಲ್ಲಾವುದೀನನೇ? ಅಥವಾ ಅನ್ಯನೇ! ನನಗೆ ತಿಳಿಯದು. ದುಷ್ಟಾ! ನಿನ್ನ ಶೌರ್ಯಸಮಾವೇಶವು ಇಂತಹ ವಿಶ್ವಾಸಘಾತದಲ್ಲಿ ವರ್ತಿಸಿತೇ?

ಸುಲ್ತಾನ್:—ಇದು ವಿಶ್ವಾಸಘಾತವಲ್ಲ; ರಾಜನೀತಿಯಾಗಿದೆ. ವೈರಿಯ ವಚನದಲ್ಲಿ ವಿಶ್ವಾಸವಿಡುವುದು ಮೂರ್ಖತನವಾಗಿದೆ.

ಭೀಮಸಿಂಗ:—ವಚನಭಂಗಮಾಡಿಕೊಳ್ಳುವುದು ಅವಮಾನಕರ. ಪಾಪಿಯೇ! ಈವರೆಗೆ ನಿನ್ನ ಪ್ರಾಣವು ನಮ್ಮ ಕೈಯಲ್ಲಿತ್ತು. ಆದರೆ, ನಾವು ನಿನ್ನನ್ನು ಜೀವಸಹಿತ ಬಿಟ್ಟುದಕ್ಕೆ ಈ ಪ್ರತಿಫಲ ಉಂಟಾಯಿತೇ? ನಿನ್ನಂತಹ ಚಂಡಾಲನಿರುವುದರಿಂದಲೇ ಮುಸಲ್ಮಾನ್ ಜಾತಿಯು ಈಗ ನಿಂದೆಗೆ ಪಾತ್ರವಾಗಿದೆ. ಈಗ ನನ್ನನ್ನು ಬಿಡುಗಡೆ ಮಾಡಿದರೆ, ನೀನೊಂದು ವಿಘಳಿಗೆಯಾದರೂ ಜೀವಿಸಿರುವೆಯಾ?

ಸುಲ್ತಾನ್:—ನನಗೊಂದು ವಸ್ತುವನ್ನು ಕೊಟ್ಟರೆ ನಾನು ನಿನ್ನನ್ನು ಮುಕ್ತನನ್ನಾಗಿ ಮಾಡಲು ಸಿದ್ಧನಾಗಿದೇನೆ.

ಭೀಮ:—ಯಾವ ವಸ್ತು?

ಸುಲ್ತಾನ್:—ನಿನ್ನ ಪತ್ನಿಯಾದ ‘ಪದ್ಮಿನಿ’

ಭೀಮಸಿಂಗನು—“ಚಂಡಾಲಾ! ಸುಮ್ಮನಿರು!” ಎಂದು ಗರ್ಜಿಸಿ ಕೈಗಳಲ್ಲಿ ಬೇಡಿ ಇದ್ದರೂ ಸುಲ್ತಾನನ ಮೇಲೆ ಬೀಳಹೋಗಲು ಸುಲ್ತಾನನ ಸೈನಿಕರು ಅವನನ್ನು ಹಿಡಿದರು. ಆಗ ಅಲ್ಲಾವುದೀನನು ಸೈನಿಕರನ್ನು ಕುರಿತು “ಈ ಅಭಿಮಾನಿಯಾದ ರಾಜಪುತ್ರನನ್ನು ಸೆರೆಯಲ್ಲಿಟ್ಟು, ಪಹರೆಯೊಡನೆ

ಕಾದಿರಿ. ಇವನು ಓಡಿಹೋದರೆ, ನಿಮ್ಮ ತಲೆಗಳನ್ನು ಕಡಿಸುವೆನು ಲಕ್ಷ್ಯದಲ್ಲಿಡಿ." ಎಂದನು.

ಸುಲ್ತಾನನಾಜ್ಞೆಯಂತೆ ಸೈನಿಕರು ಭೀಮಸಿಂಗನನ್ನು ಕರೆದುಕೊಂಡು ಹೋದರು. ಸುಲ್ತಾನನು ತನ್ನ ದಳಪತಿಯನ್ನು ಕರೆದು, ಸೇನೆಯನ್ನು ಸಿದ್ಧಪಡಿಸೆಂದು ಹೇಳಿ ಚಿತ್ತೂರು ರಾಜನಿಗೆ ಒಂದು ಕಾಗದವನ್ನು ಬರೆದು ಕಳುಹಿಸಿದನು. ಹೇಗೆಂದರೆ,—

"ಚಿತ್ತೂರು ಮಹಾರಾಣಾ ಲಕ್ಷ್ಮಣಸಿಂಹರ ಸೇವೆಗೆ ವಿಶೇಷ ವಿನಂತಿ. ನಿಮ್ಮ ಪಿತೃವ್ಯರಾದ ಭೀಮಸಿಂಗರು ನಮ್ಮ ಛಾವಣಿಯಲ್ಲಿ ಬಂದಿವಾನರಾಗಿದ್ದಾರೆ. ನನ್ನ ಮನಸ್ಸನ್ನೆಷ್ಟು ತಡೆದರೂ ಪದ್ಮಿನಿಯ ಸೌಂದರ್ಯದ ಮೋಹವು ಸ್ವಲ್ಪವೂ ದೂರವಾಗಲಿಲ್ಲ. ನೀವು ಪದ್ಮಿನಿಯನ್ನು ನನ್ನ ಸ್ವಾಧೀನ ಮಾಡಲು ಸಿದ್ಧರಾದರೆ ಭೀಮಸಿಂಗರಿಗೆ ಬಿಡುಗಡೆಯಾಗುವದು. ನನ್ನ ಈ ಇಚ್ಛೆಗೆ ವಿರುದ್ಧವಾಗಿ ನಡೆದರೆ, ಭೀಮಸಿಂಗರ ಪ್ರಾಣವನ್ನು ನಾಶಮಾಡುವೆನು. ಇಂಥಹ ಅತುಲ ಪರಾಕ್ರಮಿಯ ಪ್ರಾಣವು ಪದ್ಮಿನಿಗಿಂತಲೂ ಕಮ್ಮಿ ಎಂದು ನೀವು ತಿಳಿಯಲಾರಿರಿ ಎಂದು ನಾನು ಖಂಡಿತವಾಗಿ ತಿಳಿದಿದ್ದೇನೆ. ನಿಮಗೆ ಚಿಕ್ಕಪ್ಪನಾಶೆಯಿದ್ದರೆ ಪದ್ಮಿನಿಯನ್ನು ನನ್ನ ಪಾಳೆಯಕ್ಕೆ ಕಳುಹಿಸಿ, ಚಿಕ್ಕಪ್ಪನನ್ನು ಕರೆದುಕೊಂಡು ಹೋಗಬಹುದು. ಎರಡು ದಿನಗಳಲ್ಲಿ ಪ್ರತ್ಯುತ್ತರ ದೊರೆಯದಿದ್ದರೆ ಭೀಮಸಿಂಗನನ್ನು ಕೊಲ್ಲಿಸಿ ಚಿತ್ತೂರಿಗೆ ಪುನಃ ದಂಡೆತ್ತಿ ಬರುವೆನು. ಯುದ್ಧಕ್ಕೆ ಸಿದ್ಧರಾಗಿರಿ.

ಇತಿ,

ರಾತಿಮ್ ಅಲ್ಲಾವುದ್ದೀನ್ ಸುಲ್ತಾನ್."

ಈ ಪತ್ರವನ್ನು ಯಾವ ದೂತನೊಡನೆ ಕಳುಹಿಸದೆ ಭೀಮಸಿಂಗನೊಡನೆ ಬಂದಿದ್ದ ಸೇವಕನ ಕೈಯಲ್ಲಿ ಕೊಟ್ಟು ಕಳುಹಿಸಿದನು. ಆ ಬಡ ಸೇವಕನು ಅತಿ ದುಃಖದಿಂದ ಚಿತ್ತೂರಿಗೆ ರಾತ್ರಿ ಒಂದು ಜಾವದಮೇಲೆ ಬಂದು ಸೇರಿ ಗುಲಾಬಸಿಂಗನ ಕಯ್ಯಲ್ಲಿ ಆ ಪತ್ರವನ್ನು ಕೊಟ್ಟು ರಾಣಾರಿಗೆ ಕೊಡುವಂತೆ ಹೇಳಿ ತನ ಹೊಟ್ಟೆಗೆ ತಟ್ಟನೆ ಚುಚ್ಚಿ ಕಠಾರಿಯನ್ನಿರಿದುಕೊಂಡು ಮೃತನಾದನು. ಗುಲಾಬಸಿಂಗನೂ ಸರ್ವರೂ ಆಶ್ಚರ್ಯದಿಂದ ಅವನನ್ನು ನೋಡುತ್ತಿದ್ದರು.

ಪ್ರಕರಣ 27

ಶೋಕೋನ್ಮಾದ.

ಸುಲ್ತಾನನು ಭೀಮಸಿಂಗನನ್ನು ವಿಶ್ವಾಸಘಾತದಿಂದ ಸೆರೆಯಲ್ಲಿಟ್ಟಿರುವನೆಂಬ ವಾರ್ತೆಯು ಹಾ! ಹಾ! ಎನ್ನುತ್ತಾ ಚಿತ್ತೂರಲ್ಲೆಲ್ಲಾ ಹರಡಿತು. ಭೀಮಸಿಂಗನು ಸುಲ್ತಾನನೊಡನೆ ಹೋದಂದಿನಿಂದ ಪದ್ಮಿನಿಯು ಚಿಂತಾರ್ಣವ ಮಗ್ನಳಾಗಿ ಪತಿಯ ಮಾರ್ಗವನ್ನು ನಿರೀಕ್ಷಿಸುತ್ತಿದ್ದಳು. ಆದಿನ ಆಕೆಯ ಬಲಗಣ್ಣದುರಿತು; ಅದರಿಂದ ಆಕೆಗೆ ಭೀತಿಯುಂಟಾಯಿತು. ಆಕೆಯು ಮಾನಸಿಕ ಯಾತನೆಯನ್ನು ನಿವಾರಿಸುವುದಕ್ಕಾಗಿ ಒಂದು ಪುಸ್ತಕವನ್ನೋದಲಾರಂಭಿಸಿದಳು ಆದರೆ ಅದರಲ್ಲಿ ಆಕೆಯ ಚಿತ್ತವು ರಮಣವಾಗದಿದ್ದರಿಂದ ಆ ಪುಸ್ತಕವನ್ನೆಸೆದಳು. ಗೆಳತಿಯರ ಹಾಸ್ಯ ವಿನೋದಾದಿಗಳು ಈ ದಿನ ಆಕೆಗೆ ವಿಷದಂತಾದವು. ಅಂತಃಕರಣದಲ್ಲಿ ಅಸ್ವಸ್ಥತೆಯುಂಟಾದ್ದರಿಂದ ತನ್ನ ಪ್ರಿಯಕರ ದಾದಿಯನ್ನು ಕರೆದು—“ಅಮ್ಮಾ! ಪ್ರಾಣನಾಥರೇಕೆ ಬರಲಿಲ್ಲ? ಹಗಲು ಕಳೆದು ರಾತ್ರಿಯಾಯಿತು. ಅವರ ಸುಳಿವೇ ಇಲ್ಲ ಕಾರಣವೇನಿರಬಹುದು? ನನ್ನ ಬಲಗಣ್ಣು ಈ ದಿನ ಪ್ರಾತಃಕಾಲದಿಂದಲದುರುತ್ತಿದೆ. ಇದರಿಂದ ನನ್ನ ಮನದಲ್ಲಿ ತರ್ಕವಿತರ್ಕಗಳುಂಟಾಗುತ್ತಿವೆ. ಈಶ್ವರಾ! ನನ್ನ ಸೌಭಾಗ್ಯ ರಕ್ಷಣೆಯಲ್ಲಿ ನೀನೇ ಶಕ್ತನಾಗಿದ್ದಿ! ನಿನಗೆ ನಾನು ಇನ್ನೇನು ಹೇಳಲಿ? ಎಂದಳು.

ದಾಸಿ:—ಮಹಾರಾಣಿಯವರೇ! ಇಂತಹ ಅಸ್ವತವಾದ ತರ್ಕವಿತರ್ಕವನ್ನು ಚಿತ್ರವಿಚಿತ್ರ ಸಂಶಯದಿಂದ ಚಿತ್ತವನ್ನು ಶೋಕಸಾಗರದಲ್ಲಿ ಮುಳುಗಿಸದಿರಿ

ಭೀಮಸಿಂಗನು ಸುಲ್ತಾನನೊಡನೆ ಮಾತಾಡುತ್ತಾ ಕುಳಿತಿರಬಹುದು. ಬಳಿಕ ಸುಲ್ತಾನನು ಆದರಾತಿಥ್ಯ ಮಾಡಿಸಬೇಕೆಂದು ನಿಲ್ಲಿಸಿಕೊಂಡಿರಬಹುದು. ಆದ್ದರಿಂದ ವಿಳಂಬವಾಗಿರಬಹುದು. ಇಷ್ಟರಲ್ಲೇ ಬಂದಾರೆಂದು ತಿಳಿಯುತ್ತೇನೆ.

ಆಗ ಒಬ್ಬ ದಾಸಿಯು ಓಡುತ್ತಾ ಆ ಸ್ಥಳಕ್ಕೆ ಗಾಬರಿಯಿಂದ ಬಂದಳು. ಆಕೆಯು ದೀರ್ಘವಾದ ನಿಟ್ಟುಸಿರನ್ನು ಬಿಟ್ಟು ನಿಂತಳು; ಬೆವರಿನಿಂದ ನೆನೆದ ಬಟ್ಟೆಯುಳ್ಳವಳಾಗಿದ್ದಳು. ಬಂದೊಡನೆಯೇ, ಆಕೆಯ ಬಾಯಿಯಿಂದಾವ ಮಾತೂ ಹೊರಡಲಿಲ್ಲ. ವಿಸ್ಮಯಚಕಿತವಾದ ಮುದ್ರೆಯಿಂದ ಪದ್ಮಿನಿಯನ್ನು ನೋಡುತ್ತಿದ್ದಳು. ನೋಡುತ್ತಲಿದ್ದ ಕಣ್ಣಿನಿಂದ ಅಶ್ರುವರ್ಷಕ್ಕಾರಂಭವಾಯಿತು. ಆಕೆಯ ಈ ಅವಸ್ಥೆಯನ್ನು ನೋಡಿ ಪದ್ಮಿನಿಯು ಗಾಬರಿಯಿಂದ ಕಂಪಿತಳಾಗಿ ದಾಸಿಯನ್ನು ವಿಚಾರಿಸಲಾರಂಭಿಸಿದಳು. “ಅಮ್ಮಾ! ಏನು ದುಃಖದಾಯಕವಾದ ವಾರ್ತೆ

ಯಲ್ಲವಷ್ಟೆ? ಇಷ್ಟು ಗಾಬರಿಯಾಗಲೇಕೆ? ಏನಾದರೂ ಆಗಲಿ: ಅದನ್ನು ಸ್ಪಷ್ಟೀಕರಿಸು. ಅಶುಭವಾರ್ತೆಯನ್ನಾದರೂ ಕೇಳಲು ಸಿದ್ಧಳಾಗಿದ್ದೇನೆ.'' ಎಂದಳು. ಆಗ ದಾಸಿಯು,—“ನಾನು ತಂದವಾರ್ತೆಯು ಭಯಂಕರವಾದುದು. ಶುಭವೋ ಅಶುಭವೋ ನನಗೆ ತಿಳಿಯುವದಿಲ್ಲ.'' ಎಂದಳು.

ಪದ್ಮಿನಿಯು ಶೋಕದಿಂದ,—“ಅದು ಯಾವದು? ಸ್ಪಷ್ಟವಾಗಿ ಹೇಳು. ನಿನ್ನ ದೋಷವನ್ನೆಣಿಸುವುದಿಲ್ಲ.'' ಎಂದು ಪ್ರಶ್ನೆ ಮಾಡಿದಳು.

ದಾಸಿ:—ಮಹಾರಾಣಾ ಭೀಮಸಿಂಗರನ್ನು ಅಲ್ಲಾವುದೀನನು ಸೆರೆಯಲ್ಲಿಟ್ಟಿರುವ ದುಃಖವಾರ್ತೆಯನ್ನು ತರಬೇಕಾದ ಕಾರ್ಯವು ನನ್ನ ಪಾಲಿಗೆ ಬಂತು.

ಪದ್ಮಿನಿ:—ಯಾರು ಈ ವಾರ್ತೆಯನ್ನು ಹೇಳಿದರು?

ದಾಸಿ:—ನನ್ನ ಪತಿಯು ದ್ವಾರಪಾಲಕನೆಂಬುದು ತಮಗೆ ವಿದಿತವಿದೆಯಷ್ಟೆ. ನಾನು ಆತನಿಗೆ ಆಹಾರವನ್ನು ತೆಗೆದುಕೊಂಡು ಹೋಗಿದ್ದೆನು. ಭೀಮಸಿಂಗರೊಡನೆ ಹೋಗಿದ್ದ ಅನುಚರನು ಅಲ್ಲಿಗೆ ಒಂದು ಗುಲಾಬಸಿಂಗನ ಕೈಯಲ್ಲಿ ಒಂದು ಪತ್ರವನ್ನು ಕೊಟ್ಟು ಕಠಾರಿಯಿಂದಿರಿದುಕೊಂಡು ಸತ್ತನು. ಗುಲಾಬಸಿಂಗನ ಬಾಯಿಯಿಂದ “ಭೀಮಸಿಂಗನನ್ನು ಸುಲ್ತಾನನು ಸೆರೆಯಲ್ಲಿಟ್ಟನೇ?'' ಎಂಬ ಶಬ್ದವು ಹೊರಟಿತು. ಇಷ್ಟೇ ನಾನು ತಿಳಿದಿರುವುದು.

ಪದ್ಮಿನಿ:—ಆ ದೂತನೇಕೆ ಆತ್ಮಹತ್ಯ ಮಾಡಿಕೊಂಡನು?

ದಾಸಿ:—ಆತನ ಮರಣಕಾಲದ ಉದ್ಗಾರದಿಂದ; ಮಹಾರಾಣರೊಡನಿದ್ದೂ ಅವರನ್ನು ಬಿಡುಗಡೆ ಮಾಡಲಿಲ್ಲವೆಂದು ಆತ್ಮಹತ್ಯ ಮಾಡಿಕೊಂಡ ಹಾಗೆ ತಿಳಿಯಿತು,

೨ ನೇ ದಾಸಿ:—ಆ ಕಿಂಕರನೇ ಧನ್ಯನು! ಇಂತಹ ಪುತ್ರನನ್ನು ಪಡೆದ ಆತನ ತಾಯಿಯೇ ಧನ್ಯಳು.

ಪದ್ಮಿನಿ:—ಆ ದೂತನು ತಂದ ಪತ್ರದಲ್ಲಿ ಏನು ಬರೆದಿರುವದೆಂಬ ವಾರ್ತೆಯಿದೆ?

ದಾಸಿ:—ಆ ವಿಷಯ ನನಗೆ ತಿಳಿಯದು. ಆ ಪತ್ರವಾಚನೆಯಿಂದ ಗುಲಾಬಸಿಂಗನು ಭೀತನಾಗಿ ಮಹಾರಾಣಾ ಲಕ್ಷ್ಮಣಸಿಂಹರ ಸಮೀಪಕ್ಕೆ ಓಡುತ್ತ ಹೋದನು. ಇಷ್ಟನ್ನು ನೋಡಿ ಬಂದೆನು.

ಪದ್ಮಿನಿ:—ನೀನು ಮಹಾರಾಣರ ಹತ್ತಿರಕ್ಕೆ ಹೋಗಿ ವಿಶೇಷ ವಾರ್ತೆಯನ್ನು ತಿಳಿದು ಬಾ!

ಆಕೆಯು ಹೊರಟುಹೋದಳು. ಬಳಿಕ ಪದ್ಮಿನಿಯು ಮತ್ತೊಬ್ಬ ದಾಸಿಯನ್ನು ಕುರಿತು,—“ನಾನು ಪ್ರಾಣನಾಥರಿಗೆ ಬಹಳವಾಗಿ ಹೇಳಿದೆ. ಯವನರು ವಿಶ್ವಾಸಘಾತಕಿಯಾದ ಸರ್ಪದಂತಿದ್ದಾರೆ. ಸ್ವಪ್ನದಲ್ಲೂ ಅವರನ್ನು ನಂಬಬಾರದೆಂದು ಅನೇಕಬಾರಿ ಹೇಳಿದೆನಾದರೂ ಸಾತ್ವಿಕವಾದ, ನಿಷ್ಕಪಟವಾದ ಸ್ವಭಾವದ ಸ್ವಾಮಿಯು ನಾನು ಹೇಳಿದ್ದನ್ನು ಲಕ್ಷಿಸದೆ, ಸುಲ್ತಾನನಲ್ಲಿ ವಿಶ್ವಾಸವಿಟ್ಟು

ಕೊನೆಗೆ ಅವನ ಬಲೆಯಲ್ಲಿ ಸಿಕ್ಕಿದರು. ಇನ್ನು ಯಾವ ಅಶುಭವಾರ್ತೆಯನ್ನು ಕೇಳಬೇಕಾಗಿದೆಯೋ ಈಶ್ವರನೇ ಬಲ್ಲನು. ದೂರದೃಷ್ಟಿಯುಳ್ಳ ರಾಜನೀತಿಜ್ಞನಾದ ಲಕ್ಷ್ಮಣಸಿಂಹನು ಜ್ಞಾನಿಯಾದರೂ ನನ್ನ ಪ್ರಾಣನಾಥನನ್ನು ಒಬ್ಬನನ್ನೇ ಶತ್ರುಪಾಳಯಕ್ಕೆ ಹೇಗೆ ಕಳುಹಿಸಿದನು! ಇದರಲ್ಲಿ ಯಾವ ಅರ್ಥವನ್ನು ತಿಳಿಯಬೇಕು?" ಎಂದು ದುಃಖಿಸಿದಳು.

ದಾಸಿ:—ಮಹಾರಾಣಿಯವರೇ! ರಾಜಪುತ್ರರು ತಮ್ಮಂತೆ ಎಲ್ಲರೂ ಧರ್ಮಪರರಾಗಿಯೂ ವಿಶ್ವಾಸಪಾತ್ರರೆಂಬುದಾಗಿಯೂ ತಿಳಿದಿದ್ದಾರೆ. ಸುಲ್ತಾನನು ನಾಲ್ಕೈದು ಜನರೊಡನೆ ನಮ್ಮ ದುರ್ಗಕ್ಕೆ ಬಂದಿದ್ದರೂ ರಾಜಪುತ್ರರು ಅವನಲ್ಲಿ ಕಪಟವನ್ನು ಮಾಡದೆ, ಸುಖದಿಂದ ಅವನನ್ನು ಹಿಂದಿರುಗಿ ಕಳುಹಿಸಿದರಷ್ಟೆ! ಆದರಂತೆ ಅವನೂ ತಮ್ಮಲ್ಲಿ ನಡೆದಾನೆಂದು ತಿಳಿದು ಭೀಮಸಿಂಗರನ್ನು ಅವರ ಛಾವಣಿಗೆ ಕಳುಹಿಸಿದರೆಂದು ತೋರುವದು. ಇಂಥಹ ವಿಪರೀತವಾದ; ಪರಿಣಾಮವಾಗುವುದೆಂಬ ಕಲ್ಪನೆಯುಂಟಾಗಿದ್ದರೆ, ಮಹಾರಾಣಾನೆಂದಿಗೂ ಭೀಮಸಿಂಗರೊಬ್ಬರನ್ನೇ ಕಳುಹಿಸುತ್ತಿರಲಿಲ್ಲ.

ಪದ್ಮಿನಿಯು ಅತಿದುಃಖದಿಂದ,—"ನೀನು ಹೇಳಿದುದು ನಿಜ. ನನಗೇಕೆ ಸಮಾಧಾನವಾಗುವದಿಲ್ಲ? ನನಗೆ ತಿಳಿಯದು. ನನ್ನ ಸೌಭಾಗ್ಯವು ಸ್ಥಿರವಾಗಿರುವುದೇ ಇಲ್ಲವೇ? ಎಂಬ ಶಂಕೆ ಬಲವಾಗಿದೆ. ಹೃದಯವು ಕಂಪಿಸುತ್ತದೆ.' ಎಂದು ಹೇಳಿ, "ಈಶ್ವರನೇ! ಸ್ವಾಮಿಯು ಸಂಕಟವನ್ನು ನನ್ನ ಶಿರದಲ್ಲಿ ಬರುವಂತೆಮಾಡು. ನನ್ನ ಪ್ರಾಣನಾಥರಿಗೆ ಅಕ್ಷಯ ಸುಖವನ್ನು ಕೊಡಬೇಕೆಂದು ಬೇಡುತ್ತೇನೆ. ಆಕಾಶಸ್ಥತಾರೆಗಳೇ! ನೀವು ಪಾಷಾಣವರ್ಷದಿಂದ ವಿಶ್ವಾಸಘಾತಕಿಗಳಾದ ಯವನರನ್ನು ಸಂಹರಿಸಿರಿ!! ನಭೋಮಂಡಲವೇ! ನೀನು ನಮ್ಮ ಶತ್ರುಗಳಮೇಲೆ ಬಿದ್ದು ನಾಶಮಾಡು!! ನಾವು ನಿರಪರಾಧಿಗಳಾಗಿದ್ದರೆ, ಆ ಅಪರಾಧಿಗಳಾದ ವೈರಿಗಳ ಗುಂಪನ್ನು ನಿನ್ನ ಭಾರದಿಂದ ಒತ್ತಿ ಕೊಲ್ಲು! ಪೃಥ್ವೀಮಾತೆ? ಈ ಪಾಪಿಗಳನ್ನು ನೀನು ನಿನ್ನುದರದಲ್ಲಿ ಒತ್ತಿಹಾಕು!! ನಮ್ಮ ತಲೆಯ ಮೇಲೆ ಬಿದ್ದ ಭಾರವನ್ನು ಕಮ್ಮಿಮಾಡು!!" ಎಂದು ಅಸ್ವಸ್ಥ ಚಿತ್ತದಿಂದ ಪ್ರಭುವನ್ನು ಪ್ರಾರ್ಥಿಸಿದಳು. ಇಷ್ಟರಲ್ಲೇ ವರ್ತಮಾನವನ್ನು ತಿಳಿಯುವುದಕ್ಕೆ ಹೋದ ದಾಸಿಯು ಬಂದು ಕೈಜೋಡಿಸಿ,—"ಮಹಾರಾಣಿಯವರೇ! ಅಲ್ಲಿನವಾರ್ತೆಯೂ ಭಯಂಕರವಾಗಿವೆ. ತಮಗೆ ತಿಳಿಸುವದಕ್ಕಾಗಿ ಸ್ವಲ್ಪಕಾಲದಲ್ಲೇ ಮಹಾರಾಣಾ ಲಕ್ಷ್ಮಣಸಿಂಹರು ದಯಮಾಡಿಸುವದಾಗಿ ಅಪ್ಪಣೆ ಕೊಡಿಸಿದರು." ಎಂದು ಬಿನ್ನಹಮಾಡಿದಳು.

ಪದ್ಮಿನಿ—ಒಳ್ಳೆಯದು. ಈ ಭಯಂಕರವಾರ್ತೆಯು ಇಂಥಹದೆಂದು ನನಗೆ ತಿಳಿದೇ ಇದೆ. ಇದರಲ್ಲಿ ಆಶ್ಚರ್ಯವಿಲ್ಲ. ಶಿವಶಿವಾ! ರಾಜಪುತ್ರರಲ್ಲಿ ಸ್ವಾರ್ಥಪರಾಯಣತೆಯೂ ಸ್ವಪ್ರಾಣರಕ್ಷಣೇಚ್ಛೆಯೂ ವಾಸಿಸುತ್ತಿರುವುದನ್ನು ಈವರೆಗೆ ನಾನು ತಿಳಿದಿರಲಿಲ್ಲ. ನನ್ನ ಪ್ರಾಣನಾಥರ ಶೌರ್ಯ ಮತ್ತು ವಿಶ್ವಸ್ತತೆಯು

ಓಹೋ! ಹಿಂದಲ್ಲಿ ಅಸೂಯಾಪರರಾದ ಜನರು ಕೇಳಿದರು ಈರ್ಷೆಯನ್ನು ಮಾಡುತ್ತಿರುವರು. ಕಾರ್ಯಭಾಗವೆಲ್ಲಾ ಅಪ್ರಯತ್ನವೇ ಆಗಿದೆ. ಅನೇಕ ಸಾಸಿರ ಶತ್ರುಗಳೊಡನೆ ಕಾದಿ ವ್ಯಸನವಾದ ಪತಿಯನ್ನು ನೋಡಿದ್ದರೆ ಸಹಗಮನಮಾಡುವುದಕ್ಕಾನಂದಪಡುತ್ತಿದ್ದೆನು; ಆದರೆ ಈಗ ಪ್ರಾಣಪತಿಯು ತನ್ನ ಬಾಹುಬಲವನ್ನು ತೋರಿಸದೆ, ಸೆರೆಯಲ್ಲಿ ಪ್ರಾಣಬಿಡುವುದನ್ನು ಕೇಳಿ ನನ್ನ ಹೃದಯವು ವಿದೀರ್ಣವಾಗುತ್ತಿದೆ. ವಿಧಾತನೇ! ನೀನೂ ಎಂದೂ ಕೇಳದಿರುವ ವಾರ್ತೆಯು ನನಗೆ ಈಗ ಕೇಳಿಬರುವುದು. ಸಿಂಹಿಯು ಕ್ರೂರಿಯಾದ ಕೋತಿಯನ್ನು ಜೊತೆ ಮಾಡಲು ತತ್ಪರವಾಗಿದೆ! ನಕ್ಷತ್ರಗಳು ನಿಶಾಪತಿಯಾದ ಚಂದ್ರನಪ್ರಕಾಶವನ್ನು ಬಿಡಿಸಿ ತಮ್ಮ ತೇಜಸ್ಸನ್ನು ಹೆಚ್ಚಿಸಿಕೊಂಡಿವೆ. ರಾಕ್ಷಸನು ದೇವನನ್ನು ಭಕ್ಷಿಸಲು ಸಿದ್ಧನಾಗಿದ್ದಾನೆ. ಆದರೆ ನಾನು ಯಾರು? ಭೀಮಸಿಂಗನ ಅರ್ಧಾಂಗಿಯಲ್ಲವೇ? ಪತಿಯು ದುಃಖಿಸುತ್ತಿರಲು ಪತ್ನಿಯು ಆನಂದಹೊಂದಲು ಶಕ್ತಳೇ? ನಾನು ಪತಿಯ ಸಹಾಯಾರ್ಥವಾಗಿ ಹೋಗಬೇಕಾಗಿದೆ. ನಾನು ಯಾವ ಸಹಾಯವನ್ನು ಹೇಗೆ ಮಾಡಲಿ? ಏನುಮಾಡಲಿ? ಹಾರಿಹೋಗಲೇ? ಇರಲಿ; ನಾನು ತಿಳಿದೆನು. ಪರಮೇಶ್ವರನೂ ನನ್ನ ಶತ್ರುವಾಗಿದ್ದಾನೆ. ಶತ್ರುವಿಗೆ ಮಿತ್ರನಾಗಿ ನನ್ನ ಪ್ರಾರ್ಥನೆಯನ್ನು ಕೇಳುವುದನ್ನೇ ಮರೆತಿದ್ದಾನೆ!!" ಎಂದು ಹೇಳುತ್ತಾ ಆಕೆಯು ಉನ್ಮತ್ತದಾವಸ್ಥೆ ಹೊಂದಿ ಮೂರ್ಛೆಯಿಂದ ನಿಶ್ಚೇಷ್ಟಳಾಗಿ ನೆಲದಲ್ಲಿ ಬಿದ್ದಳು. ರಾಜಸದನದಲ್ಲಿ 'ಹಾ! ಹಾ!' ಕಾರವೆದ್ದಿತು. ದಾಸಿಯರೆಲ್ಲರೂ ಒಟ್ಟು ಸೇರಿದರು. ಕೆಲವರು ವ್ಯಜನವನ್ನು ಬೀಸಿದರು. ಕೆಲವರು ನೀರನ್ನು ಸಿದ್ಧಪಡಿಸಿದರು. ಕೆಲವರು ಕೈಕಾಲುಗಳನ್ನು ಒತ್ತಿದರು. ಆದರೂ ಸಫಲವಾಗಲಿಲ್ಲ. ಪದ್ಮಿನಿಗೆ ಎಚ್ಚರವಾಗಲಿಲ್ಲ. ಗುಲಾಬಸಿಂಗನು ನಸರುದೀನ್, ಗೋರಾಸಿಂಹ, ಬಾದಲಸಿಂಹರೊಡನೆ ಭೀಮಸಿಂಗನ ಬಿಡುಗಡೆಗೆ ಯಾವ ಮಾರ್ಗವನ್ನು ಅವಲಂಬಿಸಬೇಕೆಂದು ವಿಚಾರಮಾಡುತ್ತಾ ಕುಳಿತಿದ್ದನು. ಈ ವಾರ್ತೆಯನ್ನು ಕೇಳಿದಕೂಡಲೇ ಎಲ್ಲರೂ ಆ ಪದ್ಮಿನಿಯ ಮಹಲಿಗೆ ಬಂದರು. ರಾಜವೈದ್ಯನನ್ನು ಕರೆಸಿದನು. ಅವನು ಬಂದು, "ದುಃಖ ಮತ್ತು ಕ್ರೋಧಗಳಿಂದ,—ಮಹಾರಾಣಿಯವರಿಗೆ ಈ ಅವಸ್ಥೆಯುಂಟಾಗಿದೆ. ನಾನು ಔಷಧದಿಂದ ಸಮಾಧಾನಪಡಿಸುವೆನು. ಆದರೆ, ಕೋಪ ವೃದ್ಧಿಯಾಗದಂತೆ ಸಮಾಧಾನವಾಗಿರಬೇಕು; ಈ ವಿಷಯದಲ್ಲಿ ಎಚ್ಚರವಾಗಿರಬೇಕು." ಎಂದು ಹೇಳಿದನು. ಕೆಲವ ಔಷಧವನ್ನು ಕೊಟ್ಟು ಸುಗಂಧಯುತ ತೈಲವನ್ನು ಶಿರಸ್ಸಿಗೆ ಹಚ್ಚಿದನು. ಇದನ್ನೆಲ್ಲರೂ ನೋಡುತ್ತಿದ್ದರು. ಸ್ವಲ್ಪಕಾಲದಮೇಲೆ ಆ ಸಾಧ್ವಿಯು ಹಸ್ತವನ್ನು ಅಲ್ಲಾಡಿಸಿದಳು. ಆಕೆಯ ನೇತ್ರಗಳು ತೆರೆಯಲ್ಪಟ್ಟವು. ಆಕೆಯು ತನ್ನ ಸುತ್ತಲೂ ಪುರುಷರನೇಕರೂ ದಾಸಿಯರೂ ನೇರಿರುವುದನ್ನು ನೋಡಿ ಆಶ್ಚರ್ಯಪಟ್ಟಳು. ಮೊದಲು ಆಕೆಗೆ ನಾಚಿಕೆಯುಂಟಾಯಿತು. ಆದರೆ, ಅದನ್ನು ಬಿಟ್ಟು ಮಹಾರಾಣನನ್ನು ಕುರಿತು ಗಂಭೀರವಾಗಿ,—"ಮಹಾರಾ

ನಾರೇ! ನನ್ನ ಸೌಭಾಗ್ಯವೆಲ್ಲಿದೆ? ತೋರಿಸಬೇಕು! ಬೇಗ ತೋರಿಸಬೇಕು! ನನ್ನ ಚಿತ್ತದಲ್ಲಿ ಎದ್ದಿರುವ ಅಗ್ನಿಜ್ವಾಲೆಗೆ ನನ್ನ ಪ್ರಾಣನಾಥರ ದರ್ಶನರೂಪವಾದ ಜಲಸಿಂಚನದಿಂದ ಸಮಾಧಾನಪಡಿಸಿರಿ! ನನ್ನ ದುಃಖವನ್ನು ನಿವಾರಿಸಿರಿ!—'' ಎಂದಳು.

ಗೋರಾಸಿಂಹ:—ಭಗಿನೀ! ನೀವು ಕ್ಷತ್ರಿಯಕನ್ಯೆಯಾಗಿಯೂ ಕ್ಷತ್ರಿಯಪತ್ನಿಯಾಗಿಯೂ ಇದ್ದು ಸ್ವಲ್ಪ ಸಂಕಟಕ್ಕಾಗಿ ಗಾಬರಿಯಾಗಬಾರದು. ಶ್ರೀ ಏಕಲಿಂಗಸ್ವಾಮಿಯು ನಿಮ್ಮ ಸೌಭಾಗ್ಯವನ್ನು ಅಕ್ಷಯವಾಗಿ ರಕ್ಷಿಸುವನು. ಈ ಗೋರಾಸಿಂಹ ಬಾದಲಸಿಂಹರು ಜೀವಿಸಿರುವವರೆಗೆ ಆ ವಿಶ್ವಾಸಘಾತಕಿಯಾದ ಶತ್ರುವಿಗೆ ಅವನ ಪಾಪಕೃತ್ಯಕ್ಕೆ ತಕ್ಕ ಪ್ರತೀಕಾರಮಾಡದೆ ಇರಲಾರೆವು. ಶಾಂತರಾಗಿರಿ. ಮತ್ತು ನಮಗೆ ಉತ್ಸಾಹ ಕೊಡಿರಿ.

ಗೋರಾಸಿಂಹ ಬಾದಲಸಿಂಹರು ಪದ್ಮಿನಿಯನ್ನು ಸಮಾಧಾನಮಾಡಿದರು. ರಾಜವೈದ್ಯರೂ ದಾಸಿಯರೂ ಸ್ವಸ್ಥಾನಕ್ಕೆ ಹೋದರು. ಬಳಿಕ ಮಹಾರಾಣನು ಗೋರಾಸಿಂಹನ ಸಹಚರರೊಡನೆ, 'ಭೀಮಸಿಂಗನ ಬಿಡುಗಡೆಗೆ ಯಾವ ಉಪಾಯ ಮಾಡಬೇಕು?' ಎಂದು ವಿಚಾರ ಮಾಡಿದನು. ಗೋರಾಸಿಂಹನ ಮಾತಿನಿಂದ ಪದ್ಮಿನಿಯು ಶಾಂತಚಿತ್ತಳಾದಳು.

ಪ್ರಕರಣ 28.

ಗುಪ್ತಾಲೋಚನೆ.

ಕೋಽಹಂ ಕೌ ದೇಶಕಾಲೌ ಸಮವಿಷಮಗುಣಾಃ | ಕೇಽರಯಃ ಕೇ ಸಹಾಯಾಃ |
ಕಾ ಶಕ್ತಿಃ ಕೋಽಭ್ಯುಪಾಯಃ ಫಲಮಿಹ ಚ ಕಿಯತ್ ಕೀದೃಶೀ ದೈವಸಂಪತ್ ||
ಸಂಚಿಂತ್ಯೈಕೋ ನಿಬಂಧ ಪ್ರವಿದಿತವಚನಸ್ಯೋತ್ತರಂ ಕಿನ್ನು ಮೇ ಸ್ಯಾತ್ |
ನಿಶ್ಚಿತ್ಯೇವಂ ಕಾರ್ಯಸಿದ್ಧ್ಯೈ ಪ್ರಮುದಿತಮನಸೋ ಹಸ್ತಗಾಃ ಸಂಪದಸ್ಸ್ಯುಃ ||

ರಾಜನೀತಿ.

ಮಹಾರಾಣ:—ಗೋರಸಿಂಹ ಬಾದಲಸಿಂಹರೇ! ಮೊದಲು ನಿಮ್ಮಿಬ್ಬರ ಅಭಿಮತವೇನು? ತಿಳಿಸಿರಿ. ನನ್ನ ಪಿತೃವ್ಯನೂ, ನಿಮ್ಮ ಭಗಿನೀಪತಿಯೂ ಆದ ಭೀಮಸಿಂಹರನ್ನು ಅಲ್ಲಾವುದ್ದೀನನು ದವಡೆಯಿಂದ ತಪ್ಪಿಸಲು ಯಾವ ಮಾರ್ಗವನ್ನವಲಂಬಿಸಬೇಕು? ಅಲ್ಲಾವುದ್ದೀನನು ಏನನ್ನು ಕೇಳುವನೋ ಅದು ನಮಗೆ ತಿಳಿದೇ ಇದೆ, ಈಗ ಕರ್ತವ್ಯವೇನು?

ಗೋರಾಸಿಂಹ:—ನನ್ನಭಿಮತವೇನೆಂದರೆ:—ಸರ್ವ ಸೇನೆಯೊಡನೆ ಹೋಗಿ ಸುಲ್ತಾನನ ಡೇರೆಯನ್ನು ಮುತ್ತಿ ಯುದ್ಧ ಮಾಡಿ ಭೀಮಸಿಂಗನನ್ನು ಬಿಡುಗಡೆ ಮಾಡಿಸಬೇಕು. ಇದೇ ನನ್ನಭಿಮತವು

ಬಾದಲಸಿಂಹ :—ನನ್ನಭಿಪ್ರಾಯವೂ ಇದೇ. ನಾವು ಈಗಲೇ ಯುದ್ಧಕ್ಕೆ ಹೋಗಬೇಕು

ಮಹಾರಾಣಾ :—ಗುಲಾಬಸಿಂಗನೇ ! ನಿನ್ನಭಿಮತವೇನು ?

ಗುಲಾಬಸಿಂಗ :—ಮಹಾರಾಣರೇ ! ಗೋರಸಿಂಹ ಬಾದಲಸಿಂಹರು ವ್ಯಕ್ತಪಡಿಸಿದಭಿಮತವು ವೀರನರರಿಗೆ ಶೋಭಾಯಮಾನವಾಗಿದೆ. ಆದರೆ, ಈ ಕಾರಣದಲ್ಲಿ ಯುದ್ಧ ಮಾಡುವುದರಿಂದ ಲಾಭವಾಗುವದೆಂದು ತೋರುವದಿಲ್ಲ. ವಿಪರೀತ ಪ್ರಸಂಗವು ಒದಗಿರುವುದು. ಈಗ ಶಕ್ತಿಗಿಂತ ಯುಕ್ತಿಯನ್ನೂ ಬುದ್ಧಿಯನ್ನೂ ಸಾಧಿಸಬೇಕು. ಏಕೆಂದರೆ—ಭೀಮಸಿಂಗನು ಶತ್ರುವಿನ ಶಿಬಿರದಲ್ಲಿ ಬಂದಿಯಾಗಿದ್ದಾನೆ. ನಾವು ಆತನ ಶಿಬಿರವನ್ನು ಮುತ್ತಿದ ವಾರ್ತೆಯನ್ನು ಸುಲ್ತಾನನು ತಿಳಿದರೆ, ಭೀಮಸಿಂಗನ ಪ್ರಾಣವನ್ನು ತೆಗೆದಾನು ; ಯುದ್ಧ ಮಾಡುವುದರಿಂದ ಭೀಮಸಿಂಗನು ನಾಶವಾದಾನು, ಅದ್ದರಿಂದ ಲಾಭವಿಲ್ಲ ಯುದ್ಧಮಾಡಿ ಸಾವಿರಾರು ಮಂದಿ ಶತ್ರುಗಳನ್ನು ಸಂಹರಿಸಿದರೂ ಫಲವೇನು ? ಭೀಮಸಿಂಗನು ಸಿಕ್ಕುವನೇ ? ಇಲ್ಲ. ಯುಕ್ತಿಯಿಂದ ಭೀಮಸಿಂಹನನ್ನು ಬಿಡುಗಡೆ ಮಾಡಿ ಬಳಿಕ ಭಯಂಕರವಾದ ಯುದ್ಧ ಮಾಡಿ ಸುಲ್ತಾನನ ವಿಶ್ವಾಸಘಾತಕ್ಕೆ ಪ್ರತೀಕಾರ ಮಾಡಬೇಕು ಮತ್ತು ಕ್ಷತ್ರಿಯರ ತೇಜಸ್ಸನ್ನು ತೋರಿಸಬೇಕು.

ಮಹಾರಾಣಾ :—ನಸರುದೀನ್ ಖಾನ್‌ರೇ ! ನಿಮ್ಮಭಿಮತವೇನು ?.

ನಸರುದೀನ್ :—ಮಹಾರಾಣರವರೇ ! ನಾನು ಅನ್ಯಮತಸ್ಥನಾದರೂ ಈ ಮಹಾಕಾರ್ಯಾಲೋಚನೆಯಲ್ಲಿ ನನ್ನಭಿಮತವನ್ನು ಕೇಳಿದ ತಮ್ಮ ಗುಣಗ್ರಾಹಕತೆಯನ್ನು ಎಷ್ಟು ಪ್ರಶಂಸೆ ಮಾಡಿದರೂ ಸ್ವಲ್ಪವೇ ಸರಿ. ಆದರೆ, ತಮ್ಮಂತೆ ಸರ್ವರೂ ಇರುವರೆಂದು ತಿಳಿಯುವುದರಿಂದ ಹಾನಿಯೇ ಸಂಭವಿಸುವುದು ಹೆಚ್ಚು. ಹೇಗೆಂದರೆ—ಹಸ್ತದಲ್ಲಿರುವ ಬೆರಳುಗಳೆಲ್ಲವೂ ಒಂದೇ ಸಮವಾಗಿಲ್ಲ. ಅದ್ದರಿಂದ ಎಲ್ಲರಲ್ಲೂ ವಿಶ್ವಾಸವಿಡಬಾರದು. ಹೀಗೆ ವಿಶ್ವಾಸವಿಟ್ಟುದರಿಂದಲೇ ತಮಗೆ ಈ ವಿಪತ್ತುಂಟಾಗಿದೆ ಆಗ ಗುಲಾಬಸಿಂಗರು ಹೇಳಿದಂತೆಯೇ ಬುದ್ಧಿಶಕ್ತಿಯನ್ನು ಪ್ರಯೋಗಿಸಬೇಕೆಂಬುವುದೇ ನನ್ನಭಿಮತವು. ಅಲ್ಲಾವುದೀನನ ಸ್ವಭಾವವು ದುಷ್ಟವಾದದ್ದು. ಅವನು ಕುಡಿಯುವುದಿಲ್ಲವೆನ್ನುತ್ತ ಕುಟಿಲದಿಂದ ಗ್ರಹಿಸುವನು ! ಪದ್ಮಿನಿಯು ಲಭಿಸಲಿಲ್ಲ ; ಪ್ರಾರಂಭಿಸಲ್ಪಟ್ಟಿತು ; ಆದರೆ ಆ ಪಾಪಿಯು ಭೀಮಸಿಂಗನ ಪ್ರಾಣವನ್ನು ನಾಶಮಾಡಿಯಾನು ! ಇದಕ್ಕಾಗಿ ಯುದ್ಧಮಾಡದೆ ಭೀಮಸಿಂಗನ ಬಿಡುಗಡೆಯೋಜನೆಗೆ ಹೇಗಾದರೂ ಒಂದು ಯುಕ್ತಿಯನ್ನು ತೆಗೆಯುವುದು ಉತ್ತಮವಾಗುವುದು.

ಮಹಾರಾಣಾ :—ಗುಲಾಬಸಿಂಗ್, ನಸರುದೀನ್ ಖಾನರೇ ! ನಿಮ್ಮಭಿಮತವು ಮಾನ್ಯವಾಗಿದೆ. ಆದರೆ, ಇದರಲ್ಲಿ ತೊಂದರೆ ಏನೆಂದರೆ,—“ಪದ್ಮಿನಿಯನ್ನು ತನ್ನ ವಶಕ್ಕೊಪ್ಪಿಸಿದರೆ, ಭೀಮಸಿಂಗರನ್ನು ಬಿಡುತ್ತೇನೆ. ಈ ವಿಷಯಕ್ಕೆ ಪ್ರತ್ಯುತ್ತರ ಕೊಡಿರಿ” ಎಂದು ಕೇಳಿದ ಸುಲ್ತಾನನಿಗೆ ಯಾವ ಪ್ರತ್ಯುತ್ತರ ಕೊಡಬೇಕೆಂಬುದು ನನಗೆ ತಿಳಿಯುವುದಿಲ್ಲ. ಪದ್ಮಿನಿಯನ್ನು ಕಳುಹಿಸುತ್ತೇವೆಂದು ನಾವು ಒಪ್ಪಬೇಕೇ ? ಹೇಗೆ? ಈ ನೀಚತನವನ್ನು ಸ್ವೀಕರಿಸುವುದು ಕ್ಷತ್ರಿಯ ಕುಲಕ್ಕೆ ಗೌರವವೇ ? ಎರಡನೆಯ ರೀತಿಯನ್ನು ಆ ಕಪಟಿಯಾದ ಸುಲ್ತಾನನು ಕೇಳುವನೆಂದು ತೋರುವುದಿಲ್ಲ. ನಾವು ದೊಡ್ಡ ವಿಪತ್ತಿನಲ್ಲಿ ಬಿದ್ದಿದ್ದೇವೆಯಲ್ಲವೇ ?

ಗುಲಾಬಸಿಂಗ :—ಮಹಾರಾಣರೇ ! ಈಗ ತಾವು ರಾಜನೀತಿಯನ್ನವಲಂಬಿಸಬೇಕು. ಒಂದು ಧರ್ಮಕಾರ್ಯಕ್ಕಾಗಿ ಸುಳ್ಳು ಹೇಳುವುದರಿಂದ ಕ್ಷತ್ರಿಯರ ಗೌರವವು ನಾಶವಾಗುವುದಿಲ್ಲ. ಧರ್ಮಶಾಸ್ತ್ರದಲ್ಲಿಯೂ ಮನುವು ಬರೆದಿರುವುದೇನೆಂದರೆ :—

“ವಿವಾಹಕಾಲೇ ರತಿಸಂಪ್ರಯೋಗೇ ಪ್ರಾಣಾತ್ಯಯೇ ಸರ್ವಧನಾಪಹಾರೇ |
ಧರ್ಮಸ್ಯ ಚಾರ್ಥೇ ಹ್ಯನೃತಂ ವದೇಯುಃ ಪಂಚಾನೃತಾನ್ಯಾಹುರಪಾತಕಾನಿ” ||

ಎಂದರೆ, ವಿವಾಹಕಾಲದಲ್ಲಿಯೂ, ರತಿಕಾಲದಲ್ಲಿಯೂ, ಪ್ರಾಣಹೋಗುವ ಕಾಲದಲ್ಲಿಯೂ, ಸರ್ವಧನಾಪಹಾರವಾಗುವ ಕಾಲದಲ್ಲಿಯೂ, ಧರ್ಮರಕ್ಷಣ ಸಮಯದಲ್ಲಿಯೂ ಅಸತ್ಯವನ್ನು ಹೇಳುವುದರಿಂದ ಪಾತಕವಿಲ್ಲ. ಈ ಧರ್ಮಕ್ಕನುಸಾರವಾಗಿ ಭಾರತ ಯುದ್ಧದಲ್ಲಿ ಧರ್ಮರಾಯನು ಅಶ್ವತ್ಥಾಮನೆಂಬ ಆನೆ ಸತ್ತದ್ದಕ್ಕಾಗಿ ಸಂದಿಗ್ಧವಾಗಿ ಉತ್ತರ ಕೊಟ್ಟನು. ಹೇಗೆಂದರೆ,—“ಅಶ್ವತ್ಥಾಮನು ಸತ್ತದ್ದು ನಿಜ ; ಆದರೆ, “ನರೋವಾ ಕುಂಜರೋವಾ” ಎಂದರೆ, ಮನುಷ್ಯನೋ ? ಆನೆಯೋ ? ತಿಳಿಯದು, ಎಂದನು. ಆದ್ದರಿಂದ ತಾವು ಈ ಆಪತ್ಕಾಲದಲ್ಲಿ ಈ ನೀತಿಯ ಆಧಾರದಿಂದ ಅನೃತ ಹೇಳುವುದು ಅಪ್ರಶಸ್ತವಾಗುವುದಿಲ್ಲ. ಅದರಿಂದ ಪಾಪಸಂಘಟನೆಗಿಂತಲೂ ಪುಣ್ಯವು ಅಧಿಕವಾಗಿಯೇ ಇರುತ್ತದೆ,” ಎಂದು ಗುಲಾಬಸಿಂಗನು ಶಾಸ್ತ್ರೀಯವಾಗಿ ಪ್ರಮಾಣೀಕರಿಸಿದನು. ಆಗ ಮಹಾರಾಣನು ಗುಲಾಬಸಿಂಗನನ್ನು ಕುರಿತು —“ನೀವು ಹೇಳುವುದು ನಿಜ. ಆದರೆ, ಪದ್ಮಿನಿಯಭಿಪ್ರಾಯವೇನೆಂಬುದನ್ನು ತಿಳಿಯಬೇಕಾಗಿದೆ” ಎಂದು ಹೇಳಿ ಪದ್ಮಿನಿಯನ್ನು ಕುರಿತು,—“ಮಾತೃಶ್ರೀಯವರೇ ! ಮರ್ಯಾದೋಲ್ಲಂಘನವಾಗುವುದಾದರೂ ಮನ್ನಿಸಿರಿ. ಆದರೆ ಈ ಕಾಲದಲ್ಲಿ ಈ ಪ್ರಶ್ನೆಯನ್ನು ವಿಚಾರಿಸಿದ ವಿನಹಾ ಬಿಡುಗಡೆಯಿಲ್ಲ. ಪ್ರಿಯಪಿತೃವ್ಯರ ಬಂಧವಿಮೋಚನೆಗಾಗಿ ಅಲ್ಲಾವುದ್ದೀನನು ತಮ್ಮನ್ನು ಕಳುಹಿಸಬೇಕೆಂದು ಪ್ರಾರ್ಥಿಸಿದ್ದಾನೆ. ಈ ವಿಷಯದಲ್ಲಿ ತಾವೇನು ಹೇಳುವಿರಿ ?” ಲೇಶವೂ ಸಂಕೋಚಪಡದೆ ಕೃಪೆಯಿಟ್ಟು ಹೇಳಬೇಕು.” ಎಂದನು.

ಪದ್ಮಿನಿ—ನಾನು ಹೇಳುವುದೇನೆಂದರೆ—“ ಈಗ ಧರ್ಮಯುದ್ಧವಲ್ಲ. ಇದಕ್ಕೆ ತಾವು ಯಾವುದಾದರೂ ಒಂದು ಉಪಾಯವನ್ನು ಯೋಚಿಸಬೇಕಾಗಿದೆ. ನಾನು ಹೋಗುವುದರಿಂದ ಪ್ರಾಣನಾಥರ ಬಿಡುಗಡೆಯಾಗುವುದಾದರೆ ಶತ್ರು ಶಿಬಿರಕ್ಕೆ ನಾನು ಹೋಗಲು ಸಿದ್ಧಳಾಗಿದೇನೆ. ಕೂಡಲೆ ತಕ್ಕ ವ್ಯವಸ್ಥೆಮಾಡಿ.” ಎಂದಳು.

ಪದ್ಮಿನಿಯು ಈ ಉತ್ತರವನ್ನು ಕೇಳಿ, ಸರ್ವರೂ ಸ್ತಂಭಿತರಾಗಿ, ಆಶ್ಚರ್ಯ ಮುದ್ರೆಯಿಂದ ಒಬ್ಬರನ್ನೊಬ್ಬರು ನೋಡಲಾರಂಭಿಸಿದರು. ಸ್ವಲ್ಪ ಕಾಲದ ಮೇಲೆ ಗುಲಾಬಸಿಂಗನು ವಿಸ್ಮಿತಾಂತಃಕರಣದಿಂದ—“ ಮಾತೃಶ್ರೀಯವರೇ ? ತಾವು ಏನು ಹೇಳಿದಿರಿ ? ತಾವು ಈಗ ಶುದ್ಧವಾದ ಜ್ಞಾನವುಳ್ಳವರಾಗಿದ್ದೀರಾ ? ಹಾಗಿಲ್ಲವೆಂದು ತೋರುತ್ತದೆ. ದಯವಿಟ್ಟು ಪುನಃ ಇಂತಹ ಶಬ್ದವನ್ನುಚ್ಚರಿಸದಿರಿ. ಇಂತಹ ಶಬ್ದೋಚ್ಚಾರದಿಂದ ಕ್ಷತ್ರಿಯ ವೀರಪತ್ನಿಯರ ಬುದ್ಧಿಗೆ ಕಲಂಕವುಂಟಾದೀತು ” ಎಂದನು.

ಪದ್ಮಿನಿ :—ಗುಲಾಬಸಿಂಗನೇ ! ನಾನು ಶುದ್ಧಚಿತ್ತದಿಂದಲೇ ಸುಲ್ತಾನನ ಶಿಬಿರದ ಕಡೆಗೆ ಹೋಗಬೇಕೆಂದು ದೃಢ ನಿಶ್ಚಯ ಮಾಡಿದ್ದೇನೆ. ಈಗ ಇದರಲ್ಲಿರುವ ರಹಸ್ಯವನ್ನು ನಾನು ಮುಖದಿಂದ ಹೇಳುವುದಿಲ್ಲ ಏಕೆಂದರೆ— ‘ ಗೋಡೆಗಳಿಗೆ ಕೂಡಾ ಕಿವಿಗಳಿವೆ ’ ಎಂಬದಾಗಿದೆ. ನಾನು ಗುಪ್ತಾಲೋಚನೆಮಾಡಿದ್ದೇನೆ. ಇದು ಫಲಕಾರಿಯಾದದ್ದು. ನನ್ನ ಗುಪ್ತಹೇತುವನ್ನು ಮಹಾರಾಣರಿಗೆ ಪತ್ರದಲ್ಲಿ ಬರೆದು ತಿಳಿಸುತ್ತೇನೆ. ಆಗ ನಾನು ಹೋಗುವುದರಲ್ಲಿ ಅಡ್ಡಿಯೇನೂ ಇಲ್ಲವೆಂದಾರು.

ಎಂದು—ಪದ್ಮಿನಿಯು ಎದ್ದು ತನ್ನ ದಿವಾನಖಾನೆಗೆ ಹೋದಳು. ಬಳಿಕ ಮಹಾರಾಣನು,—“ ಸ್ತ್ರೀಬುದ್ಧಿಃ ಪ್ರಳಯಾಂತಕಃ ” ಎಂದು ಹೇಳುವುದು ಸುಳ್ಳಲ್ಲ. ಪದ್ಮಿನಿಯಂತಹ ಸ್ತ್ರೀಯ ಮುಖದಿಂದ ಹೊರಟ ಶಬ್ದವನ್ನು ಕೇಳಿ ನಾನು ಆಶ್ಚರ್ಯಚಕಿತನಾಗಿದ್ದೇನೆ. ಸ್ತ್ರೀಯರೆಲ್ಲರೂ ಒಂದೇ ! ಇವರಲ್ಲಿ ಒಬ್ಬಳನ್ನಾದರೂ ಪವಿತ್ರಳೆಂದು ತಿಳಿಯಲು ಶಕ್ಯವಲ್ಲ—“ ಎಂದು ನಿಶ್ಚೈಸುತ್ತೇನೆ. ”

ಗುಲಾಬಸಿಂಗನು :—ಮಹಾರಾಣರೇ ! ಸ್ತ್ರೀಸಂಬಂಧವಾದ ಅಭಿಪ್ರಾಯವನ್ನು ದೃಢೀಕರಿಸುವ ಸಾಹಸ ಮಾಡಬೇಡಿರಿ.

ಸ್ತ್ರಿಯಶ್ಚರಿತ್ರಂ ಪುರುಷಸ್ಯಭಾಗ್ಯಂ | ದೇವೋ ನಜಾನಾತಿ ಕುತೋ ಮನುಷ್ಯಾಃ ||

ಹೆಂಗಸಿನ ಚರಿತ್ರೆಯನ್ನೂ ಪುರುಷನ ಭಾಗ್ಯವನ್ನೂ ದೇವನೇ ತಿಳಿಯಲಾರನು. ಮನುಷ್ಯನು ಹೇಗೆ ತಿಳಿದಾನು !

ಆದುದರಿಂದ ತಾವು ತಿಳಿವುದು ಹೇಗೆ? ಸ್ತ್ರೀಯರು ಅಯೋಗ್ಯಕಾರ್ಯದಲ್ಲಿ ಹೇಗೆ ತಮ್ಮ ಬುದ್ಧಿಪ್ರಭಾವದನ್ನು ತೋರಿಸಲು ಶಕ್ತರೋ ಹಾಗೆಯೇ ಯೋಗ್ಯಕಾರ್ಯಗಳಲ್ಲಿಯೂ ರಾಜಕೀಯಕಾರ್ಯಗಳಲ್ಲಿಯೂ ಪ್ರಭಾವವನ್ನು ತೋರಿಸಲು ಶಕ್ತರಾಗಿದ್ದಾರೆ. ಸಾಧಾರಣವಾಗಿ ಸ್ತ್ರೀಯರನ್ನು ಅಬಲೆಯರೆನ್ನು

ಗಳನ್ನೂ ನಿರಸನ ಮಾಡ್ಯಾನು! ವೀರಪತ್ನಿಯಾಗಿಯೂ ವೀರಕನ್ಯೆಯಾಗಿಯೂ, ಇರುವ ತಮಗೆ ಹೀಗೆ ದುಃಖಿಸುವುದು ಭೂಷಣವಲ್ಲ. ಧೈರ್ಯ ಹೊಂದಿರಿ. ಧೈರ್ಯ, ಧರ್ಮ, ಮಿತ್ರ, ಮತ್ತು ಸ್ತ್ರೀಪರೀಕ್ಷೆಯು ಅಲ್ಪಕಾಲದಲ್ಲೇ ಆಗುತ್ತಿರುತ್ತದೆ. ಧೈರ್ಯದಿಂದ, ಶೋಕವನ್ನು ಬಿಡಿರಿ'' ಎಂದು ಸಮಾಧಾನಮಾಡಿದಳು.

ಆಗ ರಾಣಿಯು ಆ ದಾಸಿಯನ್ನು ಕುರಿತು—"ನಿನ್ನುಪದೇಶವು ಸತ್ಯವು ಆದರೆ ಉಪದೇಶವೂ ದುಃಖವೂ ಬೇರೆಬೇರೆಯಾಗಿದೆ. ಒಂದೊಂದು ಕಾಲದಲ್ಲಿ ಉಪದೇಶದಿಂದ ದುಃಖವು ಶಮನವಾಗುವುದು. ಮನುಷ್ಯನು ಅನ್ಯರಿಗೆ ಉಪದೇಶ ಮಾಡುವುದರಲ್ಲಿ ಅಗ್ರೇಸರನಾಗಿದ್ದಾನೆ. ಆದರೆ, ತನಗೆ ಅಂತಹ ಪ್ರಸಂಗ ಬಂದರೆ, ಆಗ ಅವನು ಗರ್ಭಗಳಿತನಾಗುವನು. ಆದುದರಿಂದಲೇ, 'ಪರೋಪ ದೇಶೇಪಾಂಡಿತ್ಯಂ' ಎಂಬದಾಗಿ ಹೇಳಲ್ಪಟ್ಟಿದೆ. ನನ್ನ ದುಃಖನಿವಾರಣೆಯು ಸಹಜವಾಗಿ ಆಗುವಂತಿಲ್ಲ.'' ಎಂದು ಹೇಳಿ ದಾಸಿಯನ್ನು ಅಲ್ಲಿಂದ ಹೊರಗೆ ಕಳುಹಿಸಿದಳು.

ಇಷ್ಟರಲ್ಲಿ ಬೇರೆ ದಾಸಿಯೊಬ್ಬಳು ಬಂದು "ಮಹಾರಾಣಿಯವರೇ! ಏಕಿಷ್ಟು ದುಃಖಿಸುವಿರಿ? ನಾವು ಇಲ್ಲದಿದ್ದರೆ ತಾವು ಬಹಳವಾಗಿ ಶೋಕಿಸು ತ್ತಿದ್ದಿರಿ.'' ಎಂದಳು.

ಪದ್ಮಿನಿಯು:—"ದಾಸಿಯೇ, ಈ ಸಂಸಾರದಲ್ಲಿ ತನ್ನ ಸ್ವಾಮಿಯು ಸುಖಿಯಾ ಗಿಯೂ, ಸಂತುಷ್ಟನಾಗಿಯೂ ಇರುವಂತೆ ಮಾಡುವುದಕ್ಕಾಗಿಯೇ ಸ್ತ್ರೀಜನ್ಮವು ಸೃಜಿಸಲ್ಪಟ್ಟಿದೆ; ಆದರೆ, ನನ್ನ ಸ್ವಾಮಿಯು ಈಗ ಸಂಕಟ ಸಾಗರದಲ್ಲಿ ಮುಳುಗುವ ಕಾಲ ಒದಗಿದೆ. ಇದಕ್ಕಾಗಿ ನನಗೆ ಅನಿವಾ ರ್ಯಶೋಕವು ಉಂಟಾಗಿದೆ.'' "ಭಾರ್ಯಾರೂಪವತೀ ಶತ್ರುಃ'' ಎಂಬ ವಾಕ್ಯಾರ್ಥವು ಸತ್ಯವೆಂದು ನನ್ನ ಲಕ್ಷ್ಯದಲ್ಲಿ ಬಂದಿದೆ. ಮೊದಲು ನಾನು ಈ ವಾಕ್ಯವನ್ನು ಒಂದು ಗ್ರಂಥದಲ್ಲಿ ಓದಿ ಹೇಗೆಯೋ ತಿಳಿದಿದ್ದೆನು. ನಾನು ಇಷ್ಟು ಸೌಂದರ್ಯವತಿಯಾಗಿದ್ದುದರಿಂದಲೇ ನನ್ನ ನಾಥನು ಯವನರ ಕಾರಾಗೃಹದಲ್ಲಿ ವಾಸಿಸಬೇಕಾಗಿ ಬಂದಿದೆ! ನಾನು ಅವನ ಅರ್ಧಾಂಗಿಯಾಗಿದ್ದೂ ಈಗ ಅವನ ವೈರಿಯಾಗಿದ್ದೇನೆ. ಈ ಸರ್ವ ವಿಚಾರವೂ ಉಂಟಾದರೆ, ನನ್ನ ಹೃದಯದಲ್ಲಿ ಭಯಂಕರಾಘಾತ ಉಂಟಾ ಗುತ್ತಿದೆ. ನನ್ನ ಪ್ರಾಣವಲ್ಲಭನ ಚರಣಸೇವೆಯ ಲಾಭವುಂಟಾಗುವು ದಾದರೆ, ನನ್ನ ದುಃಖವು ಕಮ್ಮಿಯಾಗುವುದು. ನಿಮ್ಮ ಉಪದೇಶವು ವ್ಯರ್ಥವು. ಪಾಂಡಿತ್ಯವು ಅಕಾರಣವಾದುದು'' ಎಂದು ತನ್ನ ದುಃಖ ವನ್ನು ವಿಶೇಷವಾಗಿ ಸ್ಪಷ್ಟಮಾಡಿದಳು.

ಇಷ್ಟರಲ್ಲೊಬ್ಬ ದಾಸಿಯು ಬಂದು ಯವನಬಾಲೆಯಾದ ರೋಷನ್ನಳು ಬಂದಿರುವುದಾಗಿ ಹೇಳಿದಳು. ಆಕೆಯನ್ನೊಳಕ್ಕೆ ಕಳುಹಿಸೆಂದು ಪದ್ಮಿನಿಯು ಹೇಳಿದಳು, ಬಳಿಕ ರೋಷನ್ನಳು ಬಂದಳು. ಆಕೆಯ ಸ್ವಾಗತವಾದಮೇಲೆ

ಪದ್ಮಿನಿಯು ಶೋಕವನ್ನು ಮುಚ್ಚಿಕೊಂಡು ಬಾಹ್ಯಾನಂದವನ್ನು ತೋರಿಸುತ್ತಾ „ ರೋಷನ್‌ಬೀಬಿಯೇ ! ಆನಂದದಿಂದಿರುವಿರಾ ? ಈ ದಿನ ರಾಣಿಯಲ್ಲಿ ದಯವಿಟ್ಟು ಅಕಸ್ಮಾತ್ತಾಗಿ ಬರಲು ಕಾರಣವೇನು ? '' ಎಂದಳು.

ರೋಷನ್ :—ಮಹಾರಾಣಿಯವರೇ ! ನನಗೆ ಈಗ ತಮ್ಮ ಉಡಿಗೆ ತೊಡಿಗೆಗಳು ಅತ್ಯಾವಶ್ಯಕವಾಗಿ ಬೇಕಾಗಿವೆ. ರಾಜಪುತ್ರಸ್ತ್ರೀಯರು ಹೊದೆಯುವ ವಸ್ತ್ರವೂ, ಕುಪ್ಪುಸವೂ, ಸೀರೆಯೂ ಬೇಕಾಗಿವೆ. ಇವುಗಳನ್ನು ನನಗೆ ಕೊಟ್ಟರೆ ಉಪಕಾರವಾದೀತು. ಅದರಲ್ಲಿಯೂ ತಮ್ಮ ಉಡಿಗೆ ತೊಡಿಗೆಗಳೇ ನನಗೆ ಬೇಕಾಗಿವೆ.

ಪದ್ಮಿನಿ :—ಒಳ್ಳೆಯದು. ಏಕೆ? ಯವನನ ಸಹವಾಸ ಬಿಟ್ಟಮೇಲೆ ಆ ಉಡಿಗೆ ತೊಡಿಗೆಗಳನ್ನು ತ್ಯಾಗಮಾಡಲು ಇಚ್ಛೆಯುಂಟಾಗಿದೆಯೇ ?

ರೋಷನ್ :—ಹಾಗಲ್ಲ. ಇದರಲ್ಲೊಂದು ಗುಪ್ತರಹಸ್ಯವಿದೆ. ಸ್ವಲ್ಪಕಾಲ ಮಾತ್ರ ರಾಜಪುತ್ರಸ್ತ್ರೀಯಾಗಲು ಇಚ್ಛೆಯುಂಟಾಗಿದೆ.

ಪದ್ಮಿನಿ :—ನೀವು ನಿಜವಾಗಿ ರಾಜಪುತ್ರಸ್ತ್ರೀಯಾಗಿದ್ದ ಪಕ್ಷದಲ್ಲಿ ಎಷ್ಟೋ ಒಳ್ಳೇದಾಗುತ್ತಿತ್ತು !

ರೋಷನ್ನಳು :—„ ಆದರೆ ನನ್ನ ದೌರ್ಭಾಗ್ಯದಿಂದ ನಾನು ಯವನಜನ್ಮದಲ್ಲಿ ಜನಿಸಿದ್ದೇನೆ ! '' ಎಂದು ದೀರ್ಘನಿಶ್ವಾಸವಂ ಬಿಟ್ಟಳು.

ಪದ್ಮಿನಿಯು ತನ್ನ ಅಮೂಲ್ಯವಾದ ಉಡಿಗೆತೊಡಿಗೆಗಳನ್ನು ಆಕೆಗೆ ಕೊಟ್ಟಳು. ರೋಷನ್ನಳು ಅದನ್ನು ತೆಗೆದುಕೊಂಡು ವಿದ್ಯುಲ್ಲತೆಯಂತೆ ಹೊರಟು ಹೋದಳು. ಪದ್ಮಿನಿಯು ಆಕೆಯ ರಹಸ್ಯವನ್ನು ವಿಚಾರಿಸಲಿಲ್ಲ. ರಹಸ್ಯಕಲ್ಪನೆಯನ್ನೂ ಮಾಡಲಿಲ್ಲ.

ಪ್ರಕರಣ 29.

A prison is a house of care,
A place where none can thrive,
A touch-stone true to try a friend,
A grave for one alive;
Sometimes a place of right,
Sometimes a place of wrong,
Sometimes a place of rogues and thieves,
And honest men among.

Inscription on Edinburgh old Tolboth.

ಚಿತ್ತೂರು ನಿವಾಸಿಗಳಿಗೆ ಈಶ್ವರನಂತೆ ಪೂಜ್ಯನಾದ ಚಿತ್ತೂರು ಮಹಾರಾಣನ ಪಿತೃವ್ಯನಾದಂತಹ ಪದ್ಮಿನೀಪತಿಯಾದ ಭೀಮ ಈಗ ದುರದೃಷ್ಟದಿಂದ ಯವನಸಮ್ರಾಟನಾದ ಅಲ್ಲಾವುದ್ದೀನನ ಕಾರಾಗೃಹಸಿಂಗನು ಮಧ್ಯದಲ್ಲಿ ಬಂದು ಬಿದ್ದಿದ್ದನು. ಆತನು ತನಗೆ ಲೋಹದ ಸಂಕೋಲೆಯು ಹಾಕಲ್ಪಟ್ಟಿರುವ ದೌರ್ಭಾಗ್ಯಕ್ಕೆ ದೋಷ ಕೊಡುತ್ತಾ ಡೇರೆಯ ಮಧ್ಯದಲ್ಲಿ ಮ್ಲಾನವದನನಾಗಿ ಕುಳಿತಿದ್ದನು. ಅವನ ಹತ್ತಿರ ನೀರಿನ ಪಾತ್ರೆಯೂ ಕುಡಿಯುವ ಪಾತ್ರೆಯೂ ಅಲ್ಲದೆ ಇನ್ನಾವ ವಿಲಾಸವಸ್ತುಗಳೂ ಇರಲಿಲ್ಲ. ರಾಜಬಂದಿಗಳ ವಿಷಯದಲ್ಲಿ ಸ್ವತಂತ್ರಯುಕ್ತವಾದ ಸನ್ಮಾನಮಾಡುವಿಕೆಯು ಔದಾರ್ಯವು ಅಲ್ಲಾವುದ್ದೀನನಲ್ಲಿರಲಿಲ್ಲ. ಅವನು ಗರ್ವಾಂಧನಾಗಿದ್ದನು. ಅವನಿಗೆ ಈ ಶಿಷ್ಟಾಚಾರವು ಹೇಗೆ ರುಚಿಸೀತು? ಈಗ ಎರಡು ದಿನಗಳಾದವು. ಭೀಮಸಿಂಗನು ಅನ್ನ ನೀರನ್ನು ಸ್ವಲ್ಪವೂ ಮುಟ್ಟಲಿಲ್ಲ. ಮಧ್ಯಾಹ್ನಕಾಲವಾಗಿತ್ತು; ಕಾವಲುಗಾರರು ಪಹರೆ ಕೊಡುತ್ತಿದ್ದರು. ರಾಣನು ಶೋಕಯುಕ್ತಾಂತಃಕರಣದಿಂದ ಕುಳಿತಿದ್ದನು. ಅಕಸ್ಮಾತ್ತಾಗಿ ಶೋಕವೇಗವು ವೃದ್ಧಿಸಿ ಶಬ್ದರೂಪವಾಗಿ ಹೊರಟಿತು.

“ಹರಹರಾ! ಶತ್ರುವಿನಲ್ಲಿ ವಿಶ್ವಾಸವಿಟ್ಟದರಿಂದ ಎಂತಹ ವಿಪತ್ತಿನಲ್ಲಿ ಬಿದ್ದೆನು! ಈ ಪಿಶಾಚದ ದುಷ್ಕಾರ್ಯವನ್ನು ನೋಡಿದೊಡನೆ ನನ್ನ ಹೃದಯವು ದಗ್ಧವಾಗುತ್ತಿದೆ. ಈಶ್ವರನೇ! ನಾನು ನಿನಗೆ ಎಂತಹ ಅಪರಾಧ ಮಾಡಿದ್ದೆನೋ ಅದರ ಫಲವನ್ನು ನನಗೆ ಭೋಗಿಸಲು ಹಚ್ಚಿದ್ದೀಯೆ. ಸೂರ್ಯನಾರಾಯಣನೇ! ನಿನ್ನ ವಂಶಸ್ಥರ ಈ ದುರ್ದಶೆಯನ್ನು ನೋಡಿ ನಿನಗೆ ಸ್ವಲ್ಪವೂ ಲಜ್ಜೆಯಾಗುವುದಿಲ್ಲವೇ? ಇಲ್ಲ: ಇಲ್ಲ; ಮಹಾ ಪ್ರತಾಪಿಯಾದ ಸೂರ್ಯನಾರಾಯಣನು ತಮ್ಮ ವಂಶಸ್ಥರ ಗೌರವವನ್ನು ಅವಶ್ಯವಾಗಿ ರಕ್ಷಿಸ್ಯಾನು! ದೇವಿ, ಪದ್ಮಿನಿ; ನನ್ನ ಪ್ರಾಣಕಾಂತನ ಪತಿತಾವಸ್ಥೆಯನ್ನು ಅವಲೋಕಿಸು. ನಿನ್ನ ಉಪದೇಶವನ್ನು ಮನ್ನಿಸಲಿಲ್ಲ. ಅದರ ಫಲವೇ ಇದಲ್ಲವೇ? ಪ್ರಿಯತಮಳೇ! ಈ ಲೋಕದಲ್ಲಿ ಪುನಃ ನಿನ್ನೊಡನೆ ಸಂಯೋಗವು ಘಟಿಸಲಾರದಿದ್ದರೂ ನನ್ನ ಅಪರಾಧವನ್ನು ಮನ್ನಿಸು. ಹಾ! ಇಂತಹ ಅವಮಾನವನ್ನು ಈ ಭೀಮಸಿಂಗನು ಹೇಗೆ ಸಹಿಸ್ಯಾನು!” ಎಂದು ಹೇಳುತ್ತಾ ಭೀಮಸಿಂಗನು ಮೂರ್ಛಿತನಾಗಿ ಬಿದ್ದನು. ಇಷ್ಟರಲ್ಲೇ. ಇಬ್ಬರು ಕಿಂಕರರೊಡನೆ ಅಲ್ಲಾವುದ್ದೀನನು ಅಲ್ಲಿಗೆ ಬಂದನು. ಅವನು ಈ ಭೀಮಸಿಂಗನಿಗೆ ಮೂರ್ಛೆ ತಿಳಿಯಲು ಪ್ರಯತ್ನ ಮಾಡುವಂತೆ ಆಜ್ಞಾಪಿಸಿದನು. ಆದರೆ ಅವನ ಸ್ಪರ್ಶವಾಗುವ ಪೂರ್ವವೇ ಭೀಮಸಿಂಗನು ಎಚ್ಚರಹೊಂದಿದನು. ಈ ವಿಶ್ವಾಸಘಾತಕಿಯಾದ ಸುಲ್ತಾನನ್ನು ಎದುರಿನಲ್ಲಿ ನೋಡಿ ತಿರಸ್ಕಾರಸೂಚಕಸ್ವರದಿಂದ ಹೇಳಲಾರಂಭಿಸುತ್ತಿದ್ದನು. ಆದರೆ ಇಷ್ಟರಲ್ಲೇ ಅಲ್ಲಾವುದ್ದೀನನು ಸ್ಮಿತಹಾಸ್ಯದಿಂದ ಹೇಳಿದನು:—

"ಮಹಾರಾಣಾಸಾಹೇಬರೇ! ಅದ್ಯಾಪಿ ತಮ್ಮ ಮನದಲ್ಲಿ ಪದ್ಮಿನಿಯ ಸ್ಮರಣವಿದೆಯೇ? ಹಾಗಿದ್ದರೆ, ಈಗ ಅದನ್ನು ಮರೆತುಬಿಡಿರಿ. ಪದ್ಮಿನಿಯಾದರೋ ಈಗ ನಮ್ಮ ರಾಣಿವಾಸದ ಬೇಗಂ ಆಗತಕ್ಕವಳಾಗಿದ್ದಾಳೆ. ತಮ್ಮ ಜನರು ಕ್ಷತ್ರಿಯಧರ್ಮಪಾಲನೆಯನ್ನು ಬಹಳ ಉತ್ತಮರೀತಿಯಿಂದ ಮಾಡುತ್ತಾರಲ್ಲವೇ? ಕ್ಷತ್ರಿಯ ವೀರರು ತಮ್ಮ ಪತ್ನಿಯರಿಗಾಗಿ ಪ್ರಾಣವನ್ನರ್ಪಿಸುತ್ತಾರೆಂದು ಕೇಳಿದ್ದೆ. ಈ ತಮ್ಮ ವರ್ತನೆಯು ನಿಜವೆಂದು ನಿಶ್ಚೈಸಲ್ಪಟ್ಟಿತು! ಇಲ್ಲ; ನಾನು ಮರೆತಿದ್ದೆನು ರಘುವಂಶೀಯರಾದ ತಾವು ಪ್ರಾಣಬಿಡುವ ಪದ್ಧತಿ ಇರಲಾರದು. ಛೀ! ಛೀ! ಛೀ! ರಜಪೂತ್ರ! ತಾವು ಮಹಾ ವೀರಶ್ರೇಷ್ಠರಲ್ಲವೇ? ವೀರರಾಗಿದ್ದೂ ಅಧೀರರಾಗುವಿರೇಕೆ? ಸಿಂಹಸದೃಶರಾದ ತಾವು ನರಿಯಂತೆ ಏಕೆ ವರ್ತಿಸುವಿರಿ?" ಎಂದನು.

ಈ ಸುಲ್ತಾನನ ವಾಕ್ಯವನ್ನು ಕೇಳಿ ಭೀಮಸಿಂಗನು ಕ್ರೋಧಯುಕ್ತನಾಗಿಯೂ ರಕ್ತನೇತ್ರನಾಗಿಯೂ ಆತನನ್ನು ಕುರಿತು—"ವಿಶ್ವಾಸಘಾತಕಿಯೇ! ಯವನ ಧರ್ಮದಲ್ಲಿ ಹೀಗೆಯೇ ಹೇಳಿದೆಯೇ? ಕ್ಷತ್ರಿಯ ವೀರರು ನಿನಗೆ ಯಾವ ಸತ್ಕಾರ ಮಾಡಿದರೋ ನೋಡು, ಅವರಲ್ಲಿ ನೀನು ನಡೆಸುವ ಅಧರ್ಮವರ್ತನವು ಹೇಗಿದೆ ನೋಡು. ನಿನ್ನಲ್ಲಿ ಮನುಷ್ಯತ್ವದ ಅಲ್ಪಾಂಶವಾದರೂ ಇದ್ದಲ್ಲಿ ಆತ್ಮಹತ್ಯ ಮಾಡಿಕೊಂಡು ಸಾಯಿ! ನರಪಿಶಾಚಿಯೇ! ನಿನ್ನಲ್ಲಿ ಎಷ್ಟು ವಿಶ್ವಾಸಘಾತಕತನವಿದೆ! ಪಾಪಿಯೇ! ನಿನ್ನ ಮುಖದರ್ಶನದಿಂದುಂಟಾಗುವ ಪಾತಕ ನಿವಾರಣೆಗೆ ಪ್ರಾಯಶ್ಚಿತ್ತವಿಲ್ಲ! ನೀನು ನನ್ನ ಪರಮಸಾಧ್ವಿಯಾದ ಕಾಂತೆಯನ್ನು ಮರೆಯುವ ಹಾಗೆ ನನಗೆ ಹೇಳುತ್ತೀಯೆ! ಆದರೆ ನನ್ನ ಜನ್ಮಾವಧಿ ಅರ್ಧಾಂಗಿಯ ವಿಸ್ಮರಣೆಯಾಗಲಾರದು! ದೇವಿಯೇ! ಈ ಅಭಾಗ್ಯನಿಂದ ನೀನೆಷ್ಟು ಕಷ್ಟವನ್ನು ಸಹಿಸಬೇಕಾಗಿ ಬಂದಿದೆಯೋ? ಈಶ್ವರನು ಬೇಗನೆ ನಿನ್ನ ದರ್ಶನವನ್ನು ಮಾಡಿಸಲಿ!" ಎಂದನು!

ಆಗ ಸುಲ್ತಾನನು—"ಭೀಮಸಿಂಗನೇ! ನೀನು ಬುದ್ಧಿವಂತನಾಗಿಯೂ ದೀರ್ಘದೃಷ್ಟಿಯುಳ್ಳವನಾಗಿಯೂ ಇದ್ದೀಯೆ. ಆದರೆ, ನಿನ್ನ ಈ 'ಆಕ್ರೋಶವನ್ನು ಕೇಳಿ ನಿನ್ನಂಥಾ ಮೂರ್ಖ ಮತ್ತು ಮಂದಮತಿಯು ಈ ಲೋಕದಲ್ಲಿ ಯಾರೂ ಇಲ್ಲವೆಂದು ತಿಳಿಯುತ್ತೇನೆ. ಒಬ್ಬ ಅಬಲೆಯಂತೆ ಏಕೆ ರೋದಿಸುತ್ತೀಯೇ? ಪದ್ಮಿನಿಯನ್ನು ನನ್ನ ಸ್ವಾಧೀನ ಮಾಡು. ಮತ್ತು ನೀನು ಮುಸಲ್ಮಾನನಾಗು. ಇದರಲ್ಲಿ ನಿನಗೆ ಲಾಭವಿದೆ. ಚಿತ್ತೂರು ರಾಜ್ಯವನ್ನು ನಿನ್ನ ಸ್ವಾಧೀನ ಮಾಡುತ್ತೇನೆ" ಎಂದು ನೀಚತನದ ಸೀಮೆಯನ್ನು ಉಲ್ಲಂಘಿಸಿ ಹೇಳಿದನು.

"ಸುಮ್ಮನಿರು! ಸುಮ್ಮನಿರು; ನೀಚನೇ!" ಎಂದು ಭೀಮಸಿಂಗನು ಗರ್ಜಿಸಿ "ದುಷ್ಟನೇ ನನ್ನ ಕೈಯಲ್ಲಿ ಒಂದು ಕಠಾರಿಯನ್ನು ಕೊಟ್ಟು ನನ್ನೊಡನೆ ಕಾದು. ನಿನಗೆ ಯಾವ ಕೈಯಲ್ಲಿ ಶಕ್ತಿಯಿದೆ ನೋಡೋಣ! ಸ್ವಲ್ಪ ನಿಲ್ಲು. ಈಶ್ವರನು ನಿನ್ನ ದುಷ್ಕೃತ್ಯಫಲವನ್ನು ಜಾಗ್ರತೆಯಾಗಿ ಕೊಟ್ಟಾನು! ನಾನು

ಕಾರಾಗೃಹದಲ್ಲಿ ಸಿಕ್ಕಿದ್ದೇನೆಂದು ನಿನ್ನಿಚ್ಛಾನುಸಾರ ಎಲ್ಲವೂ ನಿದ್ಧಿಸೀತೆಂದು ಹೇಗೆ ತಿಳಿಯುತ್ತಿ ? ಹಾಗೆ ತಿಳಿವುದು ನಿನ್ನ ತಪ್ಪಾಗಿದೆ. ಕ್ಷತ್ರಿಯ ವೀರರು ತಮ್ಮ ದೇಹದಲ್ಲಿ ರಕ್ತದ ಒಂದು ಹನಿಯು ಇರುವವರೆಗೂ ಯವನರಿಗಧೀನರಾಗುವುದಿಲ್ಲ. ಕ್ಷತ್ರಿಯರು ತಮ್ಮ ಧರ್ಮದಂತೆ ವರ್ತಿಸುತ್ತಾರೆ. ಕ್ಷತ್ರಿಯರು ಶಸ್ತ್ರಹೀನರಾದ ನಿರ್ಬಲ ಮತ್ತು ನಿರ್ವೀರ್ಯರಾದ ವೈರಿಗಳಲ್ಲಿ ಕೈಮಾಡುವುದಿಲ್ಲ. ನಿನ್ನ ಉದಾಹರಣೆಯನ್ನೇ ತೆಗೆದುಕೊ. ನೀನು ಯಾವ ಅವಸ್ಥೆಯಲ್ಲಿ ದುರ್ಗದೊಳಕ್ಕೆ ಬಂದಿದ್ದೆಯೋ ಆಗ ಕತ್ರಿಯರು ನಿನ್ನಲ್ಲಿ ಹೇಗೆ ನಡೆದರು. ? ನಿನ್ನನ್ನು ಬಂದಿಯನ್ನಾಗಿ ಮಾಡದೆ ಸಾತ್ವಿಕವೃತ್ತಿಯಿಂದ ಔದಾರ್ಯ ತೋರಿಸಿದ್ದಕ್ಕಾಗಿ ನೀನು ಒಳ್ಳೇ ಕುಟಿಲತೆಯನ್ನು ತೋರಿಸಿದೆ. ನಡೆ. ಈಕಡೆಯಿಂದ ನಡೆ! ನನಗೆ ನೀನು ನಿನ್ನ ಮುಖ ತೋರಿಸಲು ನಾಚಿಕೆಯಿಲ್ಲವೇ ? ನಾನು ನಿಸ್ಸಹಾಯನಾಗಿರುವುದನ್ನು ನೋಡಿ ಹೀಗೆ ವಿಶ್ವಾಸಘಾತಮಾಡುವಿಯಾ ? " ಎಂದನು.

ಸುಲ್ತಾನನು :—" ಹಾ ! ಮಹಾರಾಣನೇ ! ನೀನು ಕ್ಷತ್ರಿಯಧರ್ಮದ ವಿವೇಚನೆಯನ್ನು ಮಾಡಿದೆ. ನಿಮ್ಮ ಧರ್ಮ ಹೇಗಿದೆ ಎಂದು ವಿಚಾರಮಾಡಿದೆಯಾ ? " ಎಂದನು.

ಭೀಮಸಿಂಗನು ಅವನನ್ನು ಕುರಿತು—' ಕ್ಷತ್ರಿಯಕುಲಲಲನೆಯರ ಧರ್ಮವು ನಿನಗೆ ಪರಿಚಿತವಾಗಿದೆಯೇ ? ಎಲ್ಲಿಂದ ಪರಿಚಿತವಾದೀತು ? " ಕತ್ತೆಬಲ್ಲುದೆ ಜೆಲ್ಲದ ಸವಿಯಂ " ಎಂಬಂತೆ ಕಮ್ಮಿ ತಿಳಿವಳಿಕೆಯುಳ್ಳ ನರನೆ! ಕ್ಷತ್ರಿಯ ಸ್ತ್ರೀಯರು ಪ್ರಾಣಹೋದರೂ ತಮ್ಮ ಪಾತಿವ್ರತ್ಯಚ್ಯುತರಾಗುವುದಿಲ್ಲ. ಸ್ವಪ್ನದಲ್ಲಿಯೂ ಪರಪುರುಷರನ್ನು ಧ್ಯಾನಿಸರು. ಪತಿಯೇ ಅವರಿಗೆ ಈಶ್ವರನು ; ಪತಿಸೇವೆಯೇ ಅವರ ಧರ್ಮ. ಪತಿ ಮರಣಾನಂತರ ಚಿತಿಯಲ್ಲಿ ಬಿದ್ದು ಸುಟ್ಟು ಬೂದಿಯಾಗುವುದೇ ಅವರ ಅಂತ್ಯಾಲೋಚನೆಯಾಗಿದೆ. ಕ್ಷತ್ರಿಯಸ್ತ್ರೀಯರಂತಹ ಸ್ತ್ರೀಯರು ಸಿಕ್ಕುವುದು ಅಶಕ್ಯವಾಗಿದೆ! ಕ್ಷತ್ರಿಯಸ್ತ್ರೀಯರನ್ನು ಇಚ್ಛಿಸುವುದರಿಂದ ನೀನು ಮೂರ್ಖನೇ ಸರಿ." ಎಂದನು.

ಸುಲ್ತಾನನು !—" ನಿನ್ನ ಸ್ತ್ರೀಯಾದ ಪದ್ಮಿನಿಯು ಅಂತಹ ಸ್ತ್ರೀರತ್ನಗಳಲ್ಲಿ ಒಬ್ಬಳೆನ್ನುವಿಯಾ ? " ಎಂದು ಮೀಸೆಯಮೇಲೆ ಕೈಯಾಡಿಸಿದನು.

ಭೀಮಸಿಂಗನು ಶುದ್ಧಚಿತ್ತದಿಂದ ಪದ್ಮಿನಿಯನ್ನು ಪ್ರಶಂಸಿಸಿ ಸುಲ್ತಾನನಂ ಕುರಿತು—" ಇದರಲ್ಲಿ ಸಂದೇಹವೇನು ? ಮೇರುಪರ್ವತವು ಚಲಿಸಿದರೂ ಪದ್ಮಿನಿಯಂಥ ಸ್ತ್ರೀಯು ಹಿಂದೆ ಹುಟ್ಟಲಿಲ್ಲ. ಮುಂದೆ ಹುಟ್ಟುವದೂ ಇಲ್ಲ! ನೀನು ಪದ್ಮಿನಿಯಲ್ಲಾಸಕ್ತನಾಗಿದ್ದಿ ; ಆದರೆ, ನಿನ್ನ ಪ್ರಾಣ ಹೋದರೂ ಪದ್ಮಿನಿಯ ನೆರಳಾದರೂ ನಿನಗೆ ದೊರೆಯಲಾರದು. ಇದು ನಿಜವಾದದ್ದಾಗಿದೆ." ಎಂದನು.

ಸುಲ್ತಾನನು :—" ಭೀಮಸಿಂಗನೇ ! ನೀನು ಪೂರ್ಣವಾಗಿ ವಂಚಿತನಾಗಿದ್ದಿ ! ಸ್ತ್ರೀಯು ಯಾರಿಗೂ ನಂಬಿಕೆಯಾಗಿಲ್ಲ; ಮತ್ತು ಇರುವುದೂ ಇಲ್ಲ! ನಿನ್ನ ಪದ್ಮಿನಿಯ ವಿಷಯವಾದ ಅಭಿಮಾನವು ವ್ಯರ್ಥವು. ಯಾವ ಪುರು

ಷನಲ್ಲಿ ಬಲವೂ ಸುಖವನ್ನುಂಟುಮಾಡುವ ಶಕ್ತಿಯೂ ಇರುವುದೋ, ಯಾವನಲ್ಲಿ ಲಕ್ಷ್ಮಿಯು ಸದಾ ವಾಸಿಸುವಳೋ ಅಂತಹ ಪುರುಷನಲ್ಲಿ ಸ್ತ್ರೀಯರು ಲುಬ್ಧರಾಗುವರು. ಇದು ಸ್ತ್ರೀಯರ ಸಹಜಗುಣವು. ಆದ್ದರಿಂದ ಪದ್ಮಿನಿಯು ಹೇಗೆ ಅಪವಾದದೂಷಿತಳಾದಾಳು? ನಿನಗೆ ಇಷ್ಟವಿರಲಿ; ಇಲ್ಲದಿರಲಿ; ನೀನು ಹೀನಭಾಗ್ಯನಾದ್ದರಿಂದ ಪದ್ಮಿನಿಯು ನನ್ನನ್ನು ಲಗ್ನಮಾಡಕೊಳ್ಳಲು ಸಿದ್ಧಳಾಗಿದ್ದಾಳೆ. ಈ ಆನಂದವಾರ್ತೆಯನ್ನು ನಿನಗೆ ತಿಳಿಸುವುದು ಅಗತ್ಯವೆಂದು ನಾನು ಇಲ್ಲಿಗೆ ಬಂದೆ. ಸ್ವಲ್ಪ ಕಾಲಕ್ಕೆ ಮುಂಚೆ ಆ ಸ್ತ್ರೀಯಿಂದ ಪತ್ರವನ್ನು ತೆಗೆದುಕೊಂಡು ಒಬ್ಬ ದೂತನು ಬಂದಿದ್ದನು. ಆ ಪತ್ರವನ್ನೋದಿ ನನಗೆ ಅತ್ಯಾನಂದವುಂಟಾಗಿದೆ! ದಾಸಿಯರೊಡನೆ ಬರಬೇಕಾಗಿ ನಾನು ಅವಳಿಗೆ ಬರೆದಿದ್ದೇನೆ. ಮತ್ತು ಈ ಆನಂದದ ಪ್ರಸಂಗಕ್ಕಾಗಿ ಪಾಳೆಯದಲ್ಲಿ ಉತ್ಸವ ಮಾಡಬೇಕಾಗಿ ಆಜ್ಞಾಪಿಸಿದ್ದೇನೆ ನಿನ್ನ ವಿಚಾರವು ಉದಯಕಾಲಕ್ಕೆ ಹೇಗೆ ರೂಪಾಂತರವಾಗುವುದೋ ಅದನ್ನು ನೋಡು! ನಿನ್ನ ದುರ್ಭಾಗ್ಯವನ್ನು ನಿಂದಿಸಿಕೊಳುತ್ತಾ ಜನ್ಮಾವಧಿ ಅಳುತ್ತಾ ಕೂತುಕೋ!" ಎಂದು ನಗುತ್ತಾ ಹೇಳಿದನು.

ಆಗ ರಾಣನು—"ಚಂಡಾಲನೇ? ಸುಮ್ಮನಿರು. ಈ ಶೃಂಖಲವಿಲ್ಲದಿದ್ದರೆ ಹರಟುವ ನಿನ್ನ ನಾಲಿಗೆಯನ್ನು ಕಿತ್ತು ತೆಗೆಯುತ್ತಿದ್ದೆನು." ಎಂದು ಹೇಳಿ, ಕ್ರೋಧದಿಂದ ಎಚ್ಚರ ತಪ್ಪಿದವನಾಗಿ ಸುಲತ್ತಾನನ ಕಿಂಕರನು ರಾಣನನ್ನು ಹಿಡಿದುಕೊಳ್ಳದಿದ್ದರೆ, ಕೈ ಬೇಡಿಯಿಂದ ಸುಲತ್ತಾನನ್ನು ಪ್ರಹರಿಸುತ್ತಿದ್ದನು.

ಸೇವಕರು ಭದ್ರವಾಗಿ ಹಿಡಿದುಕೊಂಡನಂತರ ಸುಲತ್ತಾನನು ಗಾಂಭೀರ್ಯದಿಂದ "ಭೀಮಸಿಂಗನೇ! ನಿರಾಶೆಯಿಂದ ನೀನು ಶುದ್ಧ ಹುಚ್ಚನಾಗಿದ್ದೀಯೆ. ನಿನ್ನ ಅಪರಾಧವನ್ನು ಮನ್ನಿಸುತ್ತೇನೆ. ಏಕೆಂದರೆ, ನಿನ್ನಲ್ಲಿ ದಯೆಯನ್ನು ತೋರಿಸುವ ಸ್ಥಿತಿಯುಂಟಾಗಿದೆ. ನನ್ನಲ್ಲಿ ನಿನಗೆ ನಂಬಿಕೆ ಇಲ್ಲದಿದ್ದರೆ ಗೋರಾಸಿಂಹನ ಕೈಕಾಗದದಲ್ಲಿ ಬರೆದಿರುವ ಪದ್ಮಿನಿಯ ವಿಷಯವನ್ನು ಓದು. ನಿನಗೆ ನಿಶ್ಚಯವುಂಟಾದೀತು." ಎಂದು ಹೇಳಿ ಆ ಪತ್ರವನ್ನು ಭೀಮಸಿಂಗನ ಮೈಮೇಲೆ ಎಸೆದನು. ಭೀಮಸಿಂಗನು ಲಕ್ಷ್ಯಪೂರ್ವಕವಾಗಿ ಓದಲಾರಂಭಿಸಿದನು. ಬಳಿಕ ಸುಲತ್ತಾನನು "ಈಗ ನಿಶ್ಚಯವಾಯಿತೇ?" ಎಂದು ಕೇಳಿದನು

ಭೀಮಸಿಂಗನು—"ಈ ಕಾಗದವು ಕೃತ್ರಿಮತೆಯಲ್ಲವೆಂಬುದು ಹೇಗೆ? ನನ್ನ ಪ್ರಿಯಪತ್ನಿಯು ಇಂತಹ ಪಾಪಮಯವಾದ ಪತ್ರವನ್ನು ಬರೆದು ತನ್ನ ಹಸ್ತವನ್ನು ಪಾಪವುಳ್ಳದ್ದನ್ನಾಗಿ ಮಾಡಿಕೊಂಡಳೆಂದು ನನಗೆ ಸ್ವಲ್ಪವೂ ನಂಬಿಕೆಯಿಲ್ಲ. ನೀನು ಅಸತ್ಯಾವಲಂಬಿಯು. ಕೃತ್ರಿಮಿಯು! ನಿನ್ನ ಯಾವ ಕೃತ್ಯವನ್ನೂ ನಂಬಲು ಶಕ್ಯವಲ್ಲ." ಎಂದು ಹೇಳಿ ಆ ಪತ್ರವನ್ನು ಚೂರುಚೂರುಮಾಡಿ ಕಾಲಿನಿಂದ ತುಳಿದನು.

ಸುಲ್ತಾನನು—“ಅಡ್ಡಿಯಿಲ್ಲ. ನಿನಗೆ ಈ ಪತ್ರವು ಸ್ಪಷ್ಟನೆಯಾಗಿ ಕಾಡೀತು! ಉದಯಕಾಲಕ್ಕೆ ಸತ್ಯದ ಅನುಭವವು ನಿನಗೆ ಉಂಟಾದೀತು!! ಹಸ್ತಕಂಕಣಕ್ಕೆ ಕನ್ನಡಿಯು ಆವಶ್ಯಕವಿಲ್ಲ. ರಾಜಪುತ್ರರು ಶೂರರೆಂದು ಒಪ್ಪುತ್ತೇನೆ; ಆದರೆ ಅವರ ವಿಷಯದಲ್ಲಿ ವಿಚಾರ ಮಾಡಲಾಗಿ ಮಹತ್ವವು ಏನೂ ಕಂಡುಬರುವುದಿಲ್ಲ. ಅವರು ಎಷ್ಟು ಶೂರರಾಗಿದ್ದಾರೆಂಬುದು ಈ ಪತ್ರದಿಂದಲೇ ತಿಳಿಯುತ್ತದೆ. ಆದರೆ, ಈಗ ನಿನಗೆ ಬುದ್ಧಿ ಭ್ರಮೆಯುಂಟಾಗಿದೆ. ಈಗ ನಾನು ಇಲ್ಲಿರುವುದಿಲ್ಲ. ಉದಯಕಾಲಕ್ಕೆ ಪದ್ಮಿನಿಯೊಡನೆ ನಿನ್ನ ದರ್ಶನಕ್ಕೆ ಬಂದೇನು.” ಎಂದು ಹೇಳಿ ತನ್ನ ಅನುಚರರೊಡನೆ ಹೊರಟು ಹೋದನು.

ಆ ಪತ್ರವನ್ನೋದಿ ಭೀಮಸಿಂಗನು ಹುಚ್ಚನಂತಾದನು. ಒಳಿಕ ತನ್ನಲ್ಲಿಯೇ ಹೇಳಿಕೊಂಡದ್ದೇನೆಂದರೆ:—“ಹಾ! ಇಷ್ಟು ಅಪಮಾನವನ್ನು ಸಹಿಸಿಯೂ ನನಗೇಕೆ ಅಂತ್ಯಕಾಲ ಬರುವುದಿಲ್ಲ? ನನ್ನ ಪವಿತ್ರಸ್ತ್ರೀಯು ಕ್ಷತ್ರಿಯಕುಲ ಸಂಹಾರಕಳಾಗಬಹುದೇ? ಎಲೌ, ಜನ್ಮಭೂಮಿಯೇ! ನನ್ನ ಕಡೆಯಿಂದ ನಿನಗೆ ಬಹಳ ಅಪ್ರತಿಷ್ಠೆಯುಂಟಾಗಿದೆ. ಇದಕ್ಕಾಗಿ ನನ್ನನ್ನು ಮನ್ನಿಸು. ನಿನ್ನ ಪುತ್ರರಲ್ಲಿ ನನ್ನಂತಹ ಭಾಗ್ಯಹೀನನು ಯಾರೂ ಇರಲಾರನು! ನಾನು ಸ್ವಕುಲಕಲಂಕನಾಗಿದ್ದೇನೆ. ನನ್ನ ಸ್ತ್ರೀಯು ಶ್ರೀರಾಮಚಂದ್ರನ ನಿರ್ಮಲವಾದ ಕುಲದ ಕೀರ್ತಿರೂಪವಾದ ನಾವೆಯನ್ನು ಅಪಕೀರ್ತಿ ಎಂಬ ಸಮುದ್ರದಲ್ಲಿ ಮುಳುಗಿಸಿಬಿಟ್ಟಿದ್ದಾಳೆ!! ಹಾ! ಇಂತಹ ಸ್ತ್ರೀಗೂ ಈ ಸ್ತ್ರೀಯ ಪತಿಯಾದ ಷಂಡನಿಗೂ ಧಿಕ್ಕಾರವಿರಲಿ! ಹಾ! ಧಿಕ್!! ಧಿಕ್!! ಈ ಕಪ್ಪಾಗಿರುವ ಮುಖವನ್ನು ತೋರಿಸುವುದಕ್ಕಿಂತ ಈ ಲೋಕದಲ್ಲಿ ಇಲ್ಲದಂತಾಗುವುದೇ ಒಳ್ಳೆಯದಲ್ಲವೇ? ಆ ದುಷ್ಟಯವನನ ಕೈಯಿಂದ ಮೃತನಾಗುವುದಕ್ಕಿಂತಲೂ ಆತ್ಮಹತ್ಯ ಮಾಡಿಕೊಳ್ಳುವುದು ಒಳ್ಳೇದು!” ಎಂದು ಕೂಗುತ್ತ ಆತ್ಮಹತ್ಯಕ್ಕೆ ತಕ್ಕ ಸಾಧನವನ್ನು ಹುಡುಕಿದನು. ದೊರೆಯದುದರಿಂದ ಸಿಟ್ಟಿನಿಂದ ತನ್ನ ಲೋಹ ಸಂಕಲೆಯಿಂದ ತಲೆಯ ಮೇಲೆ ಹೊಡೆದುಕೊಂಡನು. ಇದರಿಂದ ಅವನ ಮಸ್ತಕದಲ್ಲಿ ರಕ್ತವು ಸುರಿಯಲಾರಂಭಿಸಿತು. ಇದರಿಂದ ಅವನು ಸಾಯಲಿಲ್ಲ; ಆದರೆ ಶಕ್ತಿಹೀನನಾಗಿ ಮೂರ್ಛಿತನಾದನು.

ಭೀಮಸಿಂಗನು ನೆಲದಲ್ಲಿ ಅಚೇತನನಾಗಿ ಬಿದ್ದು, ಕಣ್ಣು ಮುಚ್ಚಲು ಒಂದು ಅದ್ಭುತವಾದ ಸ್ವಪ್ನವನ್ನು ಕಂಡನು. ಸ್ವಪ್ನದಲ್ಲಿ ಸಾಕ್ಷಾತ್ ಜಗದಂಬೆಯು ಅವನ ಕಿವಿಯಲ್ಲಿ ಈ ರೀತಿ ಉಪದೇಶಿಸಿದಂತೆ ಆಯಿತು:—

“ವೀರಶಿರೋಮಣಿ, ಭೀಮ, ನಿನ್ನಲ್ಲಿ ಸಂಕಟಕ್ಕೆ ಹೆದರಿ ಆತ್ಮಹತ್ಯ ಮಾಡಿಕೊಳ್ಳಬೇಡ!! ವೀರರು ಆತ್ಮಹತ್ಯ ಮಾಡಿದರೆ ಅವನಿಗೆ ಪಶ್ಚಾತ್ತಾಪವಾಗುವುದು. ಇದೇ ಧೈರ್ಯದ ಪರೀಕ್ಷೆಯ ಸಮಯವು. ಆದರೆ ಈ ಸಿದ್ಧಿಯನ್ನು ಬಿಡಬೇಡ; ನನ್ನ ಈ ಉಪದೇಶವನ್ನು ಸತ್ಯವೆಂದು ತಿಳಿ. ನಿನಗೆ ಈ ಕಾರಾಗೃಹದಿಂದ ನಾಳೆ ಉದಯಕಾಲದಲ್ಲಿ ಬಿಡುಗಡೆಯಾಗುವುದು. ವಿದ್ಯೆ, ಕುಲ, ಧರ್ಮ, ಬುದ್ಧಿ, ವಿವೇಕ, ಧೃಢತೆ, ವೀರತ್ವಗಳನ್ನು ಅವಲಂಬಿಸಿದವರಿಗೆ ಸಂಕಟ

ಪರಿಹಾರವಾದೀತು. ಯಾವನು ಧರ್ಮವನ್ನು ರಕ್ಷಿಸುವನೋ ಅವನನ್ನು ಪರಮೇಶ್ವರನು ರಕ್ಷಿಸುವನು. ಈ ನಿನ್ನ ವಂಶದ ಮಂತ್ರವನ್ನು ಮರೆಯಬೇಡ. [illegible] ಮಾಡಿಕೊಳ್ಳುವದರಿಂದ ನಿನಗೆ ಕಲ್ಯಾಣವುಂಟಾಗದು. ಈಶ್ವರನಲ್ಲಿ ಶ್ರದ್ಧೆಯಿಟ್ಟರೇ ನಿನ್ನ ಪ್ರಾಣ ಮಾನಗಳ ರಕ್ಷಣೆಯಾದೀತು. ನಿನ್ನ ಕರ್ತವ್ಯವನ್ನು ನೀನು ಮರೆಯಬೇಡ. ಕೈಯಲ್ಲಿ ಖಡ್ಗವನ್ನು ಧರಿಸಿ ವೈರಿಗಳನ್ನು ಸಂಹರಿಸು. ನಿನ್ನ ಜನ್ಮಭೂಮಿಯನ್ನು ರಕ್ಷಿಸು. ಜನರಿಗುಂಟಾದ ತೊಂದರೆಗಳನ್ನು ನಿವಾರಿಸು. ನಾನು ನಿನ್ನನ್ನು ಆಶೀರ್ವದಿಸುತ್ತೇನೆ. ಈಶ್ವರನು ನಿನಗೆ ಸಹಾಯಕನಾದಾನು. ಚಿಂತಿಸದಿರು."

ಸ್ವಲ್ಪ ಕಾಲದಲ್ಲಿಯೇ ಭೀಮಸಿಂಗನು ಕಣ್ದೆರೆದನು. ಆ ಸುಖಕರವಾದ ಸ್ವಪ್ನದ ಸ್ಮರಣೆಯಿಂದ ಅವನ ಮುಖಮಂಡಲದಲ್ಲಿ ಆನಂದವೂ ತೇಜಸ್ಸೂ ಪ್ರಸ್ಫುರಿತವಾದವು. ಆಗ ಅವನು ಆಶ್ಚರ್ಯಚಕಿತನಾಗಿ ಹೇಳಿದುದು ಏನೆಂದರೆ—"ಇದು ಏನು? ನನಗೆ [illegible]ಮೃತವನ್ನು ಪ್ರಾಶನಮಾಡಿಸಿದ ಹಾಗಾಯಿತಲ್ಲಾ? ಛೀ! ಇಲ್ಲ [illegible] ಇದೇನು ಸ್ವಪ್ನವೇ! [illegible] ಸ್ವಪ್ನವೇ [illegible] ಈ ದುಷ್ಟ ಯವನನಿಗೆ ಹೆದರಲೇ? ಛೀ! ಎಂದಿಗೂ ಆಗಲಾರದು. ಕ್ಷತ್ರಿಯನಿಗೆ ಭಯವೆಲ್ಲಿ? ಭೀತಿ ಎಂಬ ಶಬ್ದವು ಕ್ಷತ್ರಿಯರ ಕೋಶದಲ್ಲಿ ಸಿಕ್ಕುವದು ಅಶಕ್ಯವೇ ಸರಿ. ಕ್ಷತ್ರಿಯನು ಮನಸ್ಸುಮಾಡಿದರೆ ಸಾಕ್ಷಾತ್ ಯಮರಾಜನೊಡನಾದರೂ ಕಾದಲು ಸಿದ್ಧನಾದಾನು; ಆದರೆ ಈ ಯವನರನ್ನು ಸೋಲಿಸುವುದೇನು ದೊಡ್ಡದು? ನನ್ನ ಹತ್ತಿರ ಶಸ್ತ್ರವಿಲ್ಲ. ಆದರೆ ಶಸ್ತ್ರದ ಆವಶ್ಯಕತೆ ಏಕೆ? ಬಲವಾದ ಬಾಹುಗಳೇ ನನಗೆ ಶಸ್ತ್ರದಂತಿವೆ. ವಜ್ರದಂತಹ ಮುಷ್ಟಿಯೇ ನನಗೆ ಢಾಲಿನಂತಿವೆ; ಇದರಿಂದ ಹೊಡೆವುದೇ ಬಂದೂಕಿನ ಗುಂಡುಗಳಾಗಿವೆ. ನನ್ನ ಎದುರಿಗೆ [illegible] ಯಾರಿದ್ದಾರೆ? [illegible] ನನು ಈಗ ನನ್ನ ದೃಷ್ಟಿಗೆ ಬಿದ್ದರೆ, ಅವನ ದುಷ್ಕೃತ್ಯಗಳ ಫಲವನ್ನು ಅವನಿಗೆ ತಿಳಿಸುವುದು. ಪದ್ಮಿನಿಯು ಪಾತಿವ್ರತ್ಯಭ್ರಷ್ಟಳಾಗಿದ್ದಲ್ಲಿ ಭೀಮನು ಕೀಚಕನನ್ನು ತನ್ನ ಮುಷ್ಟಿಯಿಂದ ಹತಿಸಿದಂತೆ ಸಂಹರಿಸುವೆನು.' ಎಂದು ಕೈಗಳನ್ನು ಜೋರಾಗಿ ಝಾಡಿಸಲು ಅವನ ಕೈಬೇಡಿಯು ಹರಿದುಹೋಯಿತು. ಬಳಿಕ ಕಾಲಿನ ಸಂಕಲೆಯನ್ನೂ ಮುರಿದನು. ಬಂಧಮುಕ್ತನಾದ ಬಳಿಕ ಕಾರಾಗೃಹದಿಂದ ಹೊರಬಿದ್ದನು. ಒಬ್ಬ ಯವನಕಿಂಕರನನ್ನು ಯಮಸದನಕ್ಕೆ ಕಳುಹಿಸಿದನು. ಉನ್ಮತ್ತನಾದ ಮೃಗರಾಜನಂತೆ ಅಲ್ಲಾವುದ್ದೀನನ ಪಾಳಯದಲ್ಲಿ ತಿರುಗುತ್ತಾ ಇದ್ದನು. ಪಾಳಯದಲ್ಲಿ 'ಹಾ! ಹಾ!' ಕಾರವುಂಟಾಯಿತು. ಅವನನ್ನು ಹಿಡಿಯಬೇಕೆಂಬ ಪ್ರಯತ್ನವು ವ್ಯರ್ಥವಾಯಿತು. ಆದರೆ, ಅವನ ಮನಸ್ಸಿನಲ್ಲಿರುವುದು ಯಾರಿಗೆ ತಿಳಿದೀತು? ಅವನು ಪುನಃ ಕಾರಾಗೃಹದೊಳಕ್ಕೆ ಹೋಗಿ ಕುಳಿತನು. ಬಳಿಕ ಅವನ ಗೊಡವೆಗೆ ಯಾರೂ ಹೋಗಲಿಲ್ಲ.

ಪ್ರಕರಣ 30.

ಉದ್ಧಾರ.

ಸುಲ್ತಾನ್ ಅಲ್ಲಾವುದೀನ ಪಾಳಯದಲ್ಲಿ ಈ ದಿನ ಮಹೋತ್ಸವ ಚಿಹ್ನೆಯು ದೃಗ್ಗೋಚರವಾಗುತ್ತಿತ್ತು. ಕಾರಣವೇನೆಂದರೆ— ಪದ್ಮಿನಿಯ ಆಗಮನದಿವಸವಾದ್ದರಿಂದ ಸರ್ವತ್ರ ಆನಂದೋತ್ಸವವನ್ನು ಮಾಡಬೇಕೆಂದು ಸುಲ್ತಾನನು ಆಜ್ಞಾಪಿಸಿದನು. ಸುಲ್ತಾನನ ಸೈನಿಕರು ಆನಂದೋತ್ಸವ ಮಗ್ನರಾಗಿದ್ದರು. ಇದರಲ್ಲಿ ಅತಿಶಯವೇನೂ ಇರಲಿಲ್ಲ. ಅವರಿಗೆ ಇಂಥಾ ಪ್ರಸಂಗವು ಬಹು ಸ್ವಲ್ಪವೇ ಉಂಟಾಗುತ್ತಿತ್ತು. ಇಂತಹ ಆನಂದಪ್ರಸಂಗದಲ್ಲಿ ಯವನಸೈನಿಕರು ಸುರಾಪಾನದಿಂದ ಮತ್ತರಾಗಿದ್ದರು. ಅವರಿಗೆ ಶರೀರದಮೇಲೆ ಜ್ಞಾನವಿರಲಿಲ್ಲ. ಯಾವ ಪದ್ಮಿನಿಗೋಸುಗವಾಗಿ ಯುದ್ಧಮಾಡಲ್ಪಟ್ಟಿತೋ, ಆ ಪದ್ಮಿನಿಯೇ ಈ ದಿನ ಸ್ವತಃ ಬರತಕ್ಕವಳಾಗಿದ್ದಾಳೆ; ಮತ್ತು ಸುಲ್ತಾನನ ಇಷ್ಟಾರ್ಥವು ಸಿದ್ಧಿಸುವ ಸಮಯವಾಗಿತ್ತು. ಈ ಕಾರಣದಿಂದ ಯವನರಿಗೆ ಆನಂದವಾಗುವುದು ಸಹಜವಾಗಿತ್ತು. ಪ್ರಾತಃಕಾಲದಲ್ಲಿ ಅಲ್ಲಾವುದೀನನು ಸ್ನಾನಮಾಡಿ ಅಮೂಲ್ಯವಸ್ತ್ರಧಾರಿಯಾಗಿ ಪದ್ಮಿನಿಯ ದರ್ಶನೋತ್ಸುಕನಾಗಿ ಅನುಚರರೊಡನೆ ಇಷ್ಟಕಥಾಲಾಪಮಾಡುತ್ತಾ ಡೇರೆಯಲ್ಲಿ ಕುಳಿತಿದ್ದನು. ವಿಲಂಬವಾದ ಹಾಗೆಲ್ಲಾ ಅಧೀರನಾಗುತ್ತಿದ್ದನು. ಇಷ್ಟರಲ್ಲೇ ಅನುಚರನೊಬ್ಬನು ಬಂದು—“ಷಹಾನ್‌ಷಹಅಲೀಜಾಹ! ಚಿತ್ತೂರು ಸೇನಾಪತಿಯಾದ ಗೋರಾಸಿಂಹನು ಬಂದು ತಮ್ಮ ದರ್ಶನವನ್ನು ಇಚ್ಛಿಸುತ್ತಿರುವನು.” ಎಂದು ಬಿನ್ನವಿಸಿದನು. “ಅವನನ್ನು ಬೇಗ ಒಳಕ್ಕೆ ಕರೆದುಕೊಂಡು ಬಾ.” ಎಂದು ಆತುರದಿಂದ ಸುಲ್ತಾನನು ಆಜ್ಞಾಪಿಸಿದನು. ಪಹರೆಯವನು ಗೋರಾಸಿಂಹನನ್ನು ಒಳಕ್ಕೆ ಕರೆತಂದು ಬಿಟ್ಟು ಮುಜರೆ ಮಾಡಿ ಹೊರಟುಹೋದನು. ಸುಲ್ತಾನನು ಗೋರಾಸಿಂಹನಿಗೆ ಮರ್ಯಾದೆ ಮಾಡಿ ತನ್ನ ಸಮೀಪದಲ್ಲಿಯೇ ಪೀಠದಲ್ಲಿ ಕುಳ್ಳಿರಿಸಿ ಆತನನ್ನು ಕುರಿತು—“ಗೋರಾಸಿಂಹರೇ! ಆನಂದದಿಂದಿರುವಿರಾ?” ಎಂದು ಕೇಳಿದನು.

ಗೋರಾಸಿಂಹ:—ಆನಂದವಿಷಯವನ್ನು ವಿಚಾರಿಸಲೇಬೇಡಿರಿ. ತಮ್ಮಂತಹ ಚಕ್ರವರ್ತಿಗಳೊಡನೆ ಸಂಬಂಧವು ಒದಗಿದುದರಿಂದ ಯಾರಿಗೆತಾನೆ ಆನಂದ ಉಂಟಾಗದು? ಸುಲ್ತಾನ್ ಸಾಹೇಬರೇ! ನಾನು ತಮ್ಮಲ್ಲೊಂದು ಪ್ರಾರ್ಥನೆ ಮಾಡಲಿಕ್ಕಾಗಿ ಬಂದಿದೇನೆ. ಅದನ್ನು ಸ್ವೀಕರಿಸುವಿರಾ?

ಸುಲ್ತಾನ್ :—ನೀವು ಸಂಶಯಪಡದೆ ನಿಮ್ಮ ಇಷ್ಟವನ್ನು ತಿಳಿಸಿರಿ. ನಿಮ್ಮ ಪ್ರತಿ ವಿನಂತಿಯನ್ನೂ ಸ್ವೀಕರಿಸುವೆನು.

ಗೋರಾಸಿಂಹ:—ಪದ್ಮಿನಿಯು ಈಗಲೇ ಬಂದು ತಮ್ಮಲ್ಲಿಯೇ ಇರತಕ್ಕವಳಾಗಿ ದ್ದಾಳೆ; ಆದರೆ, ಒಂದು ಬಾರಿ ತನ್ನ ಪತಿಯ ಕೊನೆಯ ದರ್ಶನವನ್ನು ಮಾಡಬೇಕೆಂದಿಚ್ಛಿಸುತ್ತಾಳೆ. ಈಕೆಯ ಪ್ರಾರ್ಥನೆಯನ್ನು ತಿರಸ್ಕರಿಸಬಾರದು. ದಂಪತಿಗಳ ದರ್ಶನಕಾಲದಲ್ಲಿ ಆ ಸ್ಥಳದಲ್ಲಿ ಯಾರೂ ಇರಬಾರದು. ಏಕೆಂದರೆ,—ಘೋಷಾ ಪದ್ಧತಿಗೆ ಭಂಗವುಂಟಾಗುವ ಸಂಭವವಿದೆ.

ಸುಲ್ತಾನ್ :—ಈ ವಿಷಯದಲ್ಲಿ ನನ್ನ ಅಡ್ಡಿಯಿಲ್ಲ. ನಾನು ಈಗಲೇ ಹಾಗೆ ವ್ಯವಸ್ಥೆ ಮಾಡುವೆನು. ಆದರೆ ಪದ್ಮಿನಿಯು ಬರುವುದಕ್ಕೆ ಇಷ್ಟು ವಿಳಂಬವಾಗಲು ಕಾರಣವೇನು ?

ಗೋರಾಸಿಂಹ :—ಇನ್ನು ಸ್ವಲ್ಪವೂ ವಿಳಂಬವಿಲ್ಲ. ಆಕೆಯು ದಾಸಿಯರೊಡನೆ ಇಷ್ಟರಲ್ಲೇ ಬಂದಾಳು.

ಅಲ್ಲಾವುದೀನನು ಕಾರಾಗೃಹದ ಪಹರೆಯವರನ್ನು ದೂರವಿರುವಂತೆ ಆಜ್ಞಾಪಿಸಿದನು. ಪದ್ಮಿನಿ ಭೀಮಸಿಂಗರ ಸಂದರ್ಶನಕ್ಕೆ ವ್ಯವಸ್ಥೆ ಮಾಡಿಕೊಟ್ಟನು. ಸ್ವಲ್ಪ ಕಾಲದಲ್ಲೇ ಪದ್ಮಿನಿಯು ತನ್ನ ದಾಸಿಯರೊಡನೆ ಅಲ್ಲಿಗೆ ಬಂದಳು. ಭೀಮಸಿಂಗನನ್ನು ಸೆರೆಯಲ್ಲಿಟ್ಟಿದ್ದ ಡೇರೆಯ ಹತ್ತಿರದಲ್ಲಿ ಏಳುನೂರು ವಿಚಿತ್ರ ಬಣ್ಣಗಳುಳ್ಳ ಪಲ್ಲಕ್ಕಿಗಳು ಇಳಿಸಲ್ಪಟ್ಟುವು. ಆ ಪಾಲಕಿಗಳೆಲ್ಲವೂ ಪರದೆಗಳಿಂದ ಮುಚ್ಚಲ್ಪಟ್ಟಿದ್ದುವು. ಆ ಪಾಲಕಿಗಳ ಮಧ್ಯದಲ್ಲಿ ಮನೋಹರವಾದ ಪಾಲಕಿಯೊಂದಿತ್ತು. ಅದಕ್ಕೆ ರಾಜಪುತ್ರರ ಪದ್ಮಿನಿಯ ಪಾಲಕಿಯೆಂದು ಗುರುತುಮಾಡಲ್ಪಟ್ಟಿತ್ತು. ಆ ಸ್ತ್ರೀಯ ರಕ್ಷಣೆಗಾಗಿ 100 ಜನ ಸಶಸ್ತ್ರರಾದ ಕುದುರೆಯ ಸವಾರರೂ ನೂರುಜನ ಪದಾತಿಗಳೂ ಬಂದಿದ್ದುವು. ಅವರೆಲ್ಲರೂ ಪಙ್ಕ್ತಿಬದ್ಧರಾಗಿ ನಿಂತಿದ್ದರು. ಈಗಲೂ ಅಲ್ಲಾವುದೀನನು ತನ್ನ ಕಪಟವಿದ್ಯೆಯ ಪ್ರಯೋಗಮಾಡುವುದಕ್ಕೆ ತಪ್ಪಲಿಲ್ಲ. ಮಹಾರಾಣನಿಗೆ ಸುಲ್ತಾನನು ಬರೆದ ಪತ್ರದಲ್ಲಿ ಪದ್ಮಿನಿಯನ್ನು ನನ್ನ ಸ್ವಾಧೀನ ಮಾಡಿದೊಡನೆಯೇ ಭೀಮಸಿಂಗನನ್ನು ಬಿಡುವೆನೆಂದು ಬರೆದಿದ್ದರೂ ಅವನನ್ನು ಜೀವಸಹಿತವಾಗಿ ಬಿಡಲು ಇಚ್ಛಿಸಲಿಲ್ಲ. ಇದಕ್ಕಾಗಿ ಪದ್ಮಿನಿಯು ಬಂದನಂತರ ನುಸರತ್‌ಖಾನನಿಗೆ ಆಜ್ಞಾಪಿಸಿದ್ದೇನೆಂದರೆ—“ ಛಾವಣಿಯ ಸುತ್ತಲೂ ಸೇನೆಯೊಡನೆ ಸಿದ್ಧನಾಗಿರು ; ಮತ್ತು ಭೀಮಸಿಂಗ, ಗೋರಸಿಂಹರನ್ನೂ ಬಂದ ರಾಜಪುತ್ರ ಸೇನೆಯನ್ನೂ ಚಿತ್ತೂರಿಗೆ ಪುನಃ ಹೋಗದಂತೆ ಜಾಗರೂಕತೆಯಿಂದ ಪ್ರತಿಬಂಧಿಸು. ಎಚ್ಚರ ತಪ್ಪದಿರು.” ಪದ್ಮಿನಿಯದೆಂದು ಗುರ್ತುಮಾಡಿದ ಪಾಲಕಿಯಿಂದ ಡೇರೆಯವರೆಗೂ ಬೀದಿಯಲ್ಲಿ ಪರದೆಯನ್ನು ಬಿಟ್ಟಿದ್ದರು. ಬಳಿಕ ಆ ಪಾಲಕಿಯಿಂದ ಸ್ತ್ರೀಯರಿಬ್ಬರು ಹೊರಹೊರಟರು. ಭೀಮಸಿಂಗನ ಡೇರೆಯೊಳಕ್ಕೆ ಹೋದರು. ಬಳಿಕ ಒಬ್ಬ ಸ್ತ್ರೀಯು ಹೊರಗೆ ಬಂದು ನಿಂತಿದ್ದಳು. ಆಗ ಭೀಮಸಿಂಗನು ಪುಸ್ತಕಹಸ್ತನಾಗಿ ವಿಸ್ತಾರಶೋಕ

ಜಾಗರಮಗ್ನನಾಗಿದ್ದನು. ಆ ಸ್ತ್ರೀಯು ಮುಖದ ವಸ್ತ್ರವನ್ನು ತೆಗೆದು ದೂರ ಮಾಡಿ ಆ ರಾಣಾನ ಶೋಕಾಸಿಯಾವಸ್ಥೆಯನ್ನು ನೋಡಿ ರೋದಿಸಲಾರಂಭಿಸಿದಳು. ಅವಳೇ ಪದ್ಮಿನಿಯು. ಆಕೆಯು ಮಧುರಸ್ವರದಿಂದ—“ ಪ್ರಾಣನಾಥನೇ ! ಶೋಕನಿದ್ರೆಯ ದೆಸೆಯಿಂದ ಜಾಗರೂಕನಾಗು. ಶೌರ್ಯವನ್ನು ಹೊಂದು.” ಎಂದಳು. ಪದ್ಮಿನಿಯ ಕಂಠರವವನ್ನು ಕೇಳಿ ಭೀಮಸಿಂಗನು ಕಣ್ದೆರೆದು ಆಶ್ಚರ್ಯ ಮತ್ತು ಶೋಕಯುಕ್ತದೃಷ್ಟಿಯಿಂದ ತನ್ನ ಪತ್ನಿಯ ಕಡೆಗೆ ನೋಡಲಾರಂಭಿಸಿದನು. ಸುಲ್ತಾನನು ಕಳುಹಿಸಿದ ಪತ್ರದ ವಾರ್ತೆಯಿಂದ ಉಂಟಾದ ಕ್ರೋಧವು ಅವನ ಅಂತಃಕರಣದಲ್ಲಿ ವಿಸ್ಮರಣವಾಯಿತು. ಪದ್ಮಿನಿಯ ನಿಷ್ಕಲಂಕಪ್ರಭಾವದ ದೆಸೆಯಿಂದ ಅಂತಃಕರಣದಲ್ಲಿ ಪ್ರೇಮ ಸಂಚಾರವಾಯಿತು. ಆತನು ಕಣ್ಣಿನಲ್ಲಿ ನೀರು ತುಂಬಿಕೊಂಡು ಗದ್ಗದ ಸ್ವರದಿಂದ ಹೇಳಿದ್ದೇನೆಂದರೆ—“ ಪ್ರಾಣೇಶ್ವರಿ ! ನಾನು ನಿದ್ರಾವಸ್ಥೆಯಲ್ಲಿದ್ದೇನೆಯೋ ? ಜಾಗೃತಾವಸ್ಥೆಯಲ್ಲಿದ್ದೇನೆಯೋ ? ನನಗೆ ಪುನಃ ನಿನ್ನ ದರ್ಶನವಾದದ್ದು ನಿಜವೇ ? ಇಲ್ಲ ! ಇಲ್ಲ ! ನನಗೆ ಇದೊಂದು ಭ್ರಮೆಯೇ ಸರಿ ನನ್ನ ಅಸ್ವಸ್ಥಚಿತ್ತದ ಪರಿಣಾಮವೇ ಇದು ! ನನ್ನ ಭಾಗ್ಯದಲ್ಲಿ ಪೌರ್ಣಿಮಾಚಂದ್ರನ ದರ್ಶನವು ಬರೆಯಲ್ಪಟ್ಟಿಲ್ಲ ! ಇದೆಲ್ಲವೂ ಭ್ರಮೆಯೇ ಸರಿ ! ನನಗೆ ಇದು ಕೃತ್ರಿಮವೆಂದು ತೋರುತ್ತದೆ.” ಎಂದು ಭೀಮಸಿಂಗನು ಮೂರ್ಛಿತನಾಗಿ ಬಿದ್ದನು.

ಪದ್ಮಿನಿಯು ತನ್ನ ಪದ್ಮಹಸ್ತದಿಂದ ಆತನನ್ನು ಹಿಡಿದೆತ್ತಿ ಮೃದು ಮಧುರ ವಾಣಿಯಿಂದ—“ ಪ್ರಾಣನಾಥನೇ ! ಇದೇನು ? ನಿಮ್ಮ ಹೃದಯವು ಇಷ್ಟು ಅಸ್ವಸ್ಥತೆಯಿಂದ ವಿಹ್ವಲವಾಗಿದೆಯೆಂದು ನಾನು ತಿಳಿದಿಲ್ಲ. ಕಣ್ದೆರೆದು ನೋಡಿರಿ ; ನಿಮ್ಮ ಈ ಹೃದಯವಲ್ಲಭೆಯಾದ ಪದ್ಮಿನಿಯು ತನ್ನ ಮುಖದಿಂದಲೇ ಮಧುರವಾಣಿಯನ್ನು ಶ್ರವಣಮಾಡಿಸುವುದಕ್ಕೋಸ್ಕರ ಆತುರಳಾಗಿ ನಿಂತಿರ್ಪಳೆ ಇಂಥ ಸಂಕಟಕಾಲದಲ್ಲಿ ಧೈರ್ಯವೊಂದಿರಲು ವಿಜಯವು ಹೇಗಾದೀತು ? ಪ್ರಿಯನಾಥನೇ ! ಒಂದು ಬಾರಿ ತಮ್ಮ ಕೃಪಕಟಾಕ್ಷದಿಂದ ಈ ದಾಸಿಯ ಚಿತ್ತವೃತ್ತಿಯನ್ನು ಪ್ರಫುಲ್ಲವಾಗುವಂತೆ ಮಾಡಿರಿ” ಎಂದು ಹೇಳಿ ಪದ್ಮಿನಿಯು ಭೀಮಸಿಂಗನ ಕಪೋಲವನ್ನು ಚುಂಬಿಸಿದಳು.

ಪದ್ಮಿನಿಯ ಅಧರ ಸ್ಪರ್ಶಸುಖದಿಂದ ಭೀಮಸಿಂಗನ ಶೋಕನಿದ್ರೆಯು ಲೋಪವಾಯಿತು. ಎಚ್ಚರಗೊಂಡು ಆಶ್ಚರ್ಯಚಕಿತನಾಗಿ ಪದ್ಮಿನಿಯನ್ನು ಕುರಿತು—“ ಈ ಅನ್ಯಸ್ತ್ರೀಯನ್ನು ಗೃಹದೊಳಗಾರು ? ನನ್ನ ದುರ್ದಶೆಯನ್ನವಲೋಕಿಸಿದ ದೇವಲೋಕದ ಸುಂದರಿಯ ಚಿತ್ತಮಧ್ಯದಲ್ಲಿ ನನ್ನ ವಿಷಯವಾಗಿ ದಯೆ ಉಂಟಾಯಿತೇನು ? ಆಕೆಯು ನನ್ನನ್ನು ಕೃತಾರ್ಥನನ್ನಾಗಿ ಮಾಡುವುದಕ್ಕೋಸ್ಕರ ಇಲ್ಲಿ ಬಂದಳೋ ಏನು ?” ಎಂದನು.

ಈಗ ಮಾತ್ರ ರಾಣಾನು ಪದ್ಮಿನಿಯನ್ನು ಗುರುತಿಸಿದನು. ಆದ್ದರಿಂದ ಪೂರ್ವಕ್ಕಿಂತಲೂ ಆಶ್ಚರ್ಯಚಕಿತನಾಗಿ “ ಏನು ? ನನ್ನ ಪ್ರಾಣವಲ್ಲಭೆಯ ಬಳಿಯಲ್ಲಿ ನಾನು

ನಿಜವಾಗಿ ವಿರಾಜಮಾನನಾಗಿದ್ದೇನೆಸೇ? ಪ್ರಾಣಪ್ರಿಯೆ! ನಾನು ಅತ್ಯಂತ ಅಪರಾಧಿಯು!" ಎಂದನು. ಇಷ್ಟು ಹೇಳ್ಪಾಗಿ ಹೇಳಲಾರದೆ ಹೋದನು. ಆಗ ದಂಪತಿಗಳ ಪರಸ್ಪರ ದರ್ಶನದಿಂದ ಪ್ರೇಮಾಶ್ರುವು ವರ್ಷಿಸಿತು. ಮತ್ತು ಸ್ವರ್ಗ ಸುಖವಾಗಿ ಕಾಣಿಸಿತು. ನಾಲ್ಕು ಕ್ಷಣಕಾಲ ಮಾತ್ರ ಸ್ತಬ್ಧರಾಗಿದ್ದರು. ಬಳಿಕ ಭೀಮಸಿಂಗನು—"ಪ್ರಿಯೆ! ನೀನು ಆ ಅಧಮನಾದ ಅಲ್ಲಾವುದೀನನನ್ನು ವಿವಾಹವಾಗಲು ಸಿದ್ಧಳಾಗಿದ್ದೀಯೆಂದು ಕೇಳಿದೆನು, ಇದು ನಿಜವೇ?" ಎಂದು ಕೇಳಿದನು.

ಪದ್ಮಿನಿ:—ಈ ಮಾತು ಮರ್ಮವುಳ್ಳದ್ದು; ರಾಮಾಯಣಕಥೆಯಂತೆ ಬಹಳ ದೊಡ್ಡದಾಗಿದೆ. ಆದ್ದರಿಂದ ಚಿತ್ತೂರನ್ನು ಪ್ರವೇಶಿಸಿದನಂತರ ವೃತ್ತಾಂತವೆಲ್ಲವನ್ನೂ ಹೇಳುವೆನು. ಈಗ ತಾವು ಇಲ್ಲಿಂದ ಪಲಾಯನವಾಗಲು ಸಿದ್ಧರಾಗಬೇಕೆಂದು ಬೇಡುವೆನು.

ಭೀಮಸಿಂಗ:—ಏನು? ನಾನು ಓಡಿಹೋಗಲೆ? ಹೀಗೆ ಓಡುವುದು? ಕ್ಷತ್ರಿಯ ಕುಲಕ್ಕೆ ಕಳಂಕಕಾರಕವಾದ ಕೃತ್ಯವಲ್ಲವೇ?

ಪದ್ಮಿನಿ:—ನಾಥನೇ! ನನ್ನ ವಿನಂತಿಯನ್ನು ಸ್ವೀಕರಿಸಿರಿ. ಈಗ ಬೇರೆ ಉಪಾಯವಿಲ್ಲ. ಪಾಪಿಯಾದ ಸುಲ್ತಾನನು ವಿಶ್ವಾಸಘಾತ ಮಾಡಿದ್ದಾನೆ. ಆದ್ದರಿಂದ ಬಂಧಮುಕ್ತರಾಗುವುದು ಕಳಂಕವಲ್ಲ.

ಭೀಮಸಿಂಗನು ಯಾವ ಮಾತನ್ನೂ ಹೇಳದೆ ಪದ್ಮಿನಿಯ ಇಚ್ಛೆಗಧೀನನಾದನು. ದಂಪತಿಗಳು ಫರದೆಯೊಳಗಿನಿಂದ ಹೋಗಿ ಪಾಲಕಿಯಲ್ಲಿ ಕುಳಿತರು. ಬಳಿಕ ಗೋರಾಸಿಂಹನು ಸುಲ್ತಾನನನ್ನು ಕಂಡು ಪ್ರಾರ್ಥಿಸಿ "ಷಹಾನ್ ಷಹರೆ! ಈಗ ಕೆಲವರು ದಾಸಿಯರು ಪುನಃ ಚಿತ್ತೂರಿಗೆ ಹೋಗತಕ್ಕವರಾಗಿದ್ದಾರೆ. ಅವರಿಗೆ ಹೋಗುವುದಕ್ಕೆ ದಯಮಾಡಿ ಅನುಜ್ಞೆ ಕೊಡಿಸಿರಿ; ತಮ್ಮ ಸೈನಿಕರು ಅವರಿಗೆ ಉಪದ್ರವ ಕೊಡದಂತೆ ಆಜ್ಞಾಪಿಸಿರಿ. ಉಳಿದ ದಾಸಿಯರು ತಮ್ಮೊಡನೆ ದೆಹಲಿಗೆ ಬರತಕ್ಕವರಾಗಿದ್ದಾರೆ; ಆದ್ದರಿಂದ ಯೋಗ್ಯವ್ಯವಸ್ಥೆ ಮಾಡಿಸಿರಿ." ಎಂದು ಪ್ರಾರ್ಥಿಸಿದನು.

ಕಾಮಾಂಧಸುಲ್ತಾನನು ವಿಚಾರಮಾಡದೆ, ಗೋರಾಸಿಂಹನು ಹೇಳಿದಂತೆ ವ್ಯವಸ್ಥೆ ಮಾಡಿಸಿದನು. ಸ್ವಲ್ಪ ಕಾಲದಲ್ಲೇ ಕೆಲವರು ದಾಸಿಯರೊಡನೆ ಆನಂದದಿಂದ ದಂಪತಿಗಳು ನಿರ್ವಿಘ್ನವಾಗಿ ಪಾಳೆಯದಿಂದ ಹೊರಬಿದ್ದರು. ಆ ಸ್ಥಳದಲ್ಲಿ ಬೈರು ವೇಗಶಾಲಿಗಳಾದ ಅಶ್ವಪಾಲಕರು ಅಶ್ವಗಳೊಡನೆ ಸಿದ್ಧರಾಗಿದ್ದರು. ಅವುಗಳ ಮೇಲೆ ಕುಳಿತು ಆ ದಂಪತಿಗಳು ಚಿತ್ತೂರಿಗೆ ಪ್ರಯಾಣ ಮಾಡಿದರು. ಹೀಗೆ ಸಕಲಕಾರ್ಯ ನಿಶ್ಚಯವಾದ ಬಳಿಕ ಗೋರಾಸಿಂಹನು ಸುಲ್ತಾನನು ಕಂಡು "ಅಲಿಜಹಾ! ... ಈಗ ತಾವು ಮಹಾರಾಣಾ ಭೀಮಸಿಂಗನಿದ್ದ ಡೇರೆಯಲ್ಲಿ ತಮ್ಮ ದಾರಿಯನ್ನು ನೋಡುತ್ತಿರುವ ಪದ್ಮಿನಿಯನ್ನು ಹಸ್ತಗತಳನ್ನಾಗಿ ಮಾಡಿಕೊಂಡು ತಮ್ಮ ಮಾತಿನಂತೆ ಭೀಮಸಿಂಗನನ್ನು ಬಂಧಮುಕ್ತನನ್ನಾಗಿ

ಮಾಡಿರಿ ಅವನೊಡನೆ ನಾವು ಚಿತ್ತೂರಿಗೆ ಪ್ರಯಾಣ ಮಾಡುವೆವು " ಎಂದು ಬಿನ್ನವಿಸಿದನು.

ಸುಲ್ತಾನನು ಇದನ್ನು ಕೇಳಿ ತಮ್ಮ ಇಚ್ಛೆಯಂತಾಗಲೆಂದು ಹೇಳಿ ಪದ್ಮಿನಿಯ ದರ್ಶನೋತ್ಸುಕನಾಗಿ ಭೀಮಸಿಂಗನ ಕಾರಾಗೃಹದ ಕಡೆಗೆ ಹೊರಟನು; ಬಳಿಕ ಗೋರಾಸಿಂಹನು ಹಾಸ್ಯಮಾಡಿ ಪಾಲಕಿಗಳನ್ನು ಹೊತ್ತ ಬೋಯಿಗಳ ವೇಷಧಾರಿಗಳಾದ ರಾಜಪುತ್ರ ಸೈನಿಕರಿಗೆ ಜಾಗರೂಕರಾಗಿರುವಂತೆ ಸೂಚಿಸಿದನು

ಪ್ರಕರಣ 31.

ಪಾಪಕ್ಕೆ ಪ್ರಾಯಶ್ಚಿತ್ತ.

ಆನಂದಾಂತಃಕರಣದಿಂದ ಸುಲ್ತಾನನು ಆ ಡೇರೆಯೊಳಕ್ಕೆ ಹೋದನು. ಕನ್ನಡಿಯಿಂದ ಪ್ರತಿಬಿಂಬದ್ವಾರ ಯಾವ ವಸ್ತ್ರಭೂಷಣಗಳಿಂದ ಭೂಷಿತಳಾದ ಪದ್ಮಿನಿಯನ್ನು ನೋಡಿದ್ದನೋ ಅದೇ ವಸ್ತ್ರಭೂಷಣಗಳಿಂದ ಭೂಷಿತಳಾದ ವನಿತೆಯೊಬ್ಬಳು ಒಂದು ಸ್ಥಳದಲ್ಲಿ ಕುಳಿತಿದ್ದಳು. ಆದರೆ, ಆಕೆಯು ತನ್ನ ಮುಖವನ್ನು ವಸ್ತ್ರದಿಂದುಚ್ಛಾಸಿದ್ದಳು. ಸುಲ್ತಾನನು ಆಕೆಯನ್ನು ಪದ್ಮಿನಿಯೆಂದು ತಿಳಿದನು. ಮದನಬಾಧೆಯಿಂದ ಉನ್ಮತ್ತನಾಗಿ ಆ ಸ್ಥಳದಲ್ಲಿ ಭೀಮಸಿಂಗನು ಇರುವನೇ ಇಲ್ಲವೇ ಎಂಬುದನ್ನು ಕೂಡ ನೋಡಲಿಲ್ಲ. ಕಾಮುಕರಿಗೆ ಕಣ್ಣಿಲ್ಲವಲ್ಲವೆ? ಎಚ್ಚರ ತಪ್ಪಿ ಆ ವನಿತೆಯನ್ನು ಮೃದುವಾಣಿಯಿಂದ ಮಾತನಾಡಿಸತೊಡಗಿದನು. "ಜಗರಾಜಾನ್ ಪದ್ಮಿನಿಯೆ! ಈಗ ನೀನು ನಿನ್ನ ಮುಖವಸ್ತ್ರವನ್ನು ತೆಗೆ. ಇಲ್ಲಿ ಯಾರೂ ಇಲ್ಲ. ನೀನು ಆನಂದ ಹೊಂದು. ಏಕೆಂದರೆ ಜಹಾಂಗೀರ್ ಸುಲ್ತಾನ್ ಅಲ್ಲಾವುದೀನನು ನಿನ್ನನ್ನು ತನ್ನ ಹೃದಯಸ್ಥಾನದಲ್ಲಿರಿಸಲು ಇಚ್ಛಿಸುತ್ತಿರುವನು." ಎಂದನು

ಆ ಸ್ತ್ರೀಯು ಯಾವ ಉತ್ತರವನ್ನೂ ಕೊಡಲಿಲ್ಲ. ಆಗ ಅಧೀರನಾಗಿ ಪುನಃ ಹೇಳಿದ್ದೇನೆಂದರೆ,—"ರಮಣಿಯೇ! ಲಜ್ಜೆಯಿಂದ ನೀನು ಮಾತಾಡುವುದಿಲ್ಲವೆಂದು ತಿಳಿಯುತ್ತೇನೆ. ನಿನ್ನ ಸಂಬಂಧವು ದೃಢವಾಗಬೇಕಾಗಿದೆ; ಆದುದರಿಂದ ನಾಚಬೇಡ. ಸ್ತ್ರೀಯಿಂದಲೇ ಪುರುಷನಿಗೆ ಶೋಭೆಯುಂಟಾಗುವುದು. ಪರಮೇಶ್ವರನು ಆದಿಯಿಂದಲೂ ಸ್ತ್ರೀಪುರುಷರಲ್ಲಿ ಪ್ರೇಮಸಂಬಂದವನ್ನು ನಿರ್ಮಿಸಿದ್ದಾನೆ. ಆದ್ದರಿಂದ ಲಜ್ಜೆಪಡಬಾರದು." ಎಂದು ಸುಲ್ತಾನನು ಪ್ರಾರ್ಥಿಸಿದನು. ಆದರೂ ಪ್ರತ್ಯುತ್ತರ ಬರಲಿಲ್ಲ. ಆದ್ದರಿಂದ ಬಹು ವ್ಯಾಕುಲಹೊಂದಿ ಸಮೀಪಗತನಾಗಿ—"ಸ್ತ್ರೀ ಪ್ರಭಾವವು ಲಜ್ಜಾಯುಕ್ತವಾದುದೆಂದು ಕೇಳಿದ್ದೆನು:

ಇದರ ಅನುಭವವು ಈಗ ನನಗಾಯಿತು. ಆದರೆ ಚಿನ್ತೆಯಿಲ್ಲ. ನಾನು ಅನೇಕ ದುರ್ಗಗಳನ್ನು ಜಯಿಸಿರುತ್ತೇನೆ ಆದರೆ, ಈ ಲಜ್ಜಾರೂಪಿಯಾದ ದುರ್ಗವನ್ನು ಗೆಲ್ಲಲು ಎಷ್ಟು ಕಾಲ ಬೇಕಾಗುವುದು ?'' ಎಂದು ಹೇಳಿ ಆಕೆಯನ್ನು ತಟ್ಟನೆ ಮುಟ್ಟಲು ಯತ್ನಿಸಿದನು. ಆದರೆ, ಹೆಣ್ಣು ಸಿಂಹದಂತೆ ಸರಸಿಯಾದ ಆ ಸ್ತ್ರೀಯು ತನ್ನ ಮುಖವಸ್ತ್ರವಂ ತೆಗೆದು ಕೈಯಲ್ಲಿ ಖಡ್ಗವಂ ಧರಿಸಿ—'' ಎಚ್ಚರಿಕೆ! ಚಂಡಾಲನೆ! ಹತ್ತಿರ ಬಂದರೆ, ಸತ್ತಿಯೆಂದು ತಿಳಿ.'' ಎಂದು ಘರ್ಜಿಸಿದಳು. ಪದ್ಮಿನಿಯ ಸ್ಥಳದಲ್ಲಿ ಆಕೆಯ ವಸ್ತ್ರಭೂಷಣಗಳನ್ನು ಧರಿಸಿದ ಆ ಸ್ತ್ರೀಯನ್ನು ನೋಡಿ ಸುಲ್ತಾನನು ಆಶ್ಚರ್ಯಚಕಿತನಾದನು. ಅವನ ಮುಖದಿಂದೊಂದುಮಾತೂ ಹೊರಡಲಿಲ್ಲ. ಬಳಿಕ ಇವಳನ್ನು ನಸರುದೀನ್‌ಖಾನನ ಮಗಳೆಂದು ಗುರ್ತಿಸಿ ಘರ್ಜಿಸಿ ಹೇಳಿದನು—'' ರೋಷನ್ ! ನೀನು ಬದುಕಬೇಕೆಂಬಾಶೆಯಿದ್ದರೆ, ನಿಜವಾದ ವೃತ್ತಾಂತವನ್ನು ಹೇಳು. ಪದ್ಮಿನಿಯು ಇಲ್ಲಿ ಬಂದಿದ್ದಳೇ ? ನೀನು ಆದಿಯಿಂದಲೂ ಕಪಟ ನಾಟಕವನ್ನು ಅಭಿನಯಿಸುತ್ತಿರುತ್ತಿ !'' ರೋಷನ್ನಳು '' ಸುಲ್ತಾನನೇ ! ಪದ್ಮಿನಿಯು ಸ್ವತಃ ಇಲ್ಲಿಗೆ ಬಂದು ನಿನ್ನಂತಹ ಕಾಮಾಂಧನ ಕಣ್ಣಿಗೆ ಮಣ್ಣೆರಚಿ ತನ್ನ ಪತಿಯ ಬಂಧವಿಮೋಚನೆ ಮಾಡಿಸಿಕೊಂಡು ಚಿತ್ತೂರಿಗೆ ಹೊರಟುಹೋದಳು. ಪಾಪಿಯೇ! ರಾಜಪುತ್ರರಮಣಿಯು ಎಷ್ಟು ಶೂರಳು ! ನೋಡು ! ನಿನ್ನ ಪುರುಷತ್ವಕ್ಕೆ ನಾಚಿಕೆಹೊಂದು. ಎಂದು ತಿರಸ್ಕರಿಸಿದಳು.

ಅಲ್ಲಾವುದೀನನು ಕೆಂಗಣ್ಣುಳ್ಳವನಾಗಿ—'' ಯಾವಳೋ ಒಬ್ಬ ಸ್ತ್ರೀಯು ನನ್ನೊಡನೆ ಇಷ್ಟು ಜಾಣತನವನ್ನು ತೋರಿಸಬೇಕೇ ? ಆಶ್ಚರ್ಯ ! ರಾಜಪುತ್ರರು ಏಕವಾಕ್ಯವುಳ್ಳವರೆಂದು ಈವರೆಗೆ ತಿಳಿದಿದ್ದೆನು. ನನ್ನ ಈ ಭಾವನೆಯು ಸುಳ್ಳೆಂದು ನಿಶ್ಚಯವಾಯಿತು ಅವರು ಪೂರ್ಣವಾದ ಕಪಟಿಗಳಾಗಿದ್ದಾರೆ. ಏಕವಾಕ್ಯವುಳ್ಳವರಾಗಿದ್ದಲ್ಲಿ ಹೀಗೆ ಕೃತ್ರಿಮವನ್ನೆಂದಿಗೂ ಮಾಡುತ್ತಿರಲಿಲ್ಲ. ಈ ಕೃತ್ರಿಮಕ್ಕೆ ಪ್ರತೀಕಾರ ಮಾಡದಿರೆನು !'' ಎಂದು ಹೇಳಿದನು.

ಬಳಿಕ ರೋಷನ್ನಳು—'' ಪಾಪಿಯಾದ ನರಪಿಶಾಚಿಯೇ ! ಮೋಸಗಾರರು ರಾಜಪುತ್ರರೋ ? ನೀನೋ ? ಮೈತ್ರಿಯ ನೆವದಿಂದ ವಿಶ್ವಾಸಘಾತವನ್ನು ತೋರಿಸಿ ಭೀಮಸಿಂಗನನ್ನು ಸೆರೆ ಹಿಡಿದೆ! ಇದು ಕೃತ್ರಿಮವಲ್ಲವೇ ? ಯಾವ ತಪ್ಪೂ ಇಲ್ಲದ ಹಿಂದುಗಳನ್ನು ಸಂಹರಿಸುವುದು ಮೋಸಗಾರಿಕೆಯ ಲಕ್ಷಣವಲ್ಲವೇ ? ಪದ್ಮಿನಿಯು ನಿನ್ನ ಕಾರಾಗೃಹದಿಂದ ಪತಿಯನ್ನು ಉಪಾಯದಿಂದ ಮುಕ್ತನನ್ನಾಗಿ ಮಾಡಿದಳು. ಇದಕ್ಕೆ ನೀನು ಕೃತ್ರಿಮವೆನ್ನುವಿಯಾ ? ನೀಚನೇ ! ಹಿಂದುಗಳ ಶೌರ್ಯ, ಧರ್ಮಭೀರುತ್ವ, ವಿಶ್ವಾಸಪ್ರಿಯತೆ, ಇವುಗಳನ್ನು ವಿಚಾರಿಸು ! ನಾಚಿಕೆ ಹೊಂದು ! ಈಗ ನಿನಗೆ ಬೇಕಾದಷ್ಟು ಜನ ಸಹಾಯಕರನ್ನು ಕರೆಸಿಕೊ ; ನಿನ್ನ ಪ್ರಾಣರಕ್ಷಣೆಗೆ ಯತ್ನಿಸು. ನೀನು ನಿನ್ನನ್ನು ರಕ್ಷಿಸಿಕೊ ! ನನ್ನನ್ನು ನೋಡಿದರೆ ನೀನು ಎಂತಹ ಚಕ್ರವರ್ತಿಯಾಗಿರುವಿಯೆಂದು ಆಲೋಚಿಸು. ಈಗ ಮಾತ್ರ, ನನಗೆ ಖೇದವಾಗುತ್ತಿದೆ. ನನ್ನಲ್ಲಿ ಶಸ್ತ್ರವಿಲ್ಲ. ಇಲ್ಲದಿದ್ದರೆ ಈ ಕ್ಷಣದಲ್ಲಿಯೇ

ಮರಣಕ್ಕೆ ಮುಂಚಿತವಾಗಿಯೇ ಭಯದಿಂದ ಅನೇಕಬಾರಿ ಮರಣಮಾರ್ಗವನ್ನು ಹಿಡಿಯುವರು. ಕ್ಷತ್ರಿಯ ಸೈನ್ಯಮಧ್ಯದಲ್ಲಿ ಭೀರುಪುರುಷನೊಬ್ಬನೂ ಇಲ್ಲ ಯಾವನು ಹೆದರಿ ಓಡ್ಯಾನು? ನೀನು ಇಷ್ಟು ನಿರಪರಾಧಿಗಳ ರಕ್ತವನ್ನು ನಿಂಪಡಿ ಸಿದ್ದೀಯೆ. ಇದರ ಪ್ರತಿರೋಧಮಾಡುವುದು ನನ್ನ ಕರ್ತವ್ಯವಾಗಿದೆ. ಸ್ವತಃ ನೀನು ರಣರಂಗಕ್ಕೆ ಬಂದದ್ದು ಒಳ್ಳೆಯದಾಯಿತು. ಕಾಲವು ನಿನ್ನನ್ನು ಎಳೆದು ಕೊಂಡು ಬಂದಿರುವುದು!''

ಆಗ ಸುಲ್ತಾನನು,—''ಮಜ, ಭಾಪು! ನಿಮ್ಮನ್ನು ವೀರರೆಂದು ಮೆಚ್ಚುವೇ ಸರಿ. ನೀವು ಅದ್ವಿತೀಯರವೇಲೆ ಬೀಳುತ್ತಿರುವಿರಿ ನಿಮಗೆ ಶಕ್ತಿಯಿ ದ್ದರೆ ದ್ವಂದ್ವಯುದ್ಧಕ್ಕೆ ಬನ್ನಿರಿ. ನಿಮ್ಮ ಸೇನೆಗೆ ವಿನೋದವನ್ನು ನೋಡುತ್ತಿ ರುವಂತೆ ಹೇಳಿರಿ.'' ಎಂದನು. ಸುಲ್ತಾನನ ಇಚ್ಛೆಯಂತಾಗಲೆಂದು ಕ್ಷತ್ರಿಯರು ದ್ವಂದ್ವಯುದ್ಧಕ್ಕೆ ಸಿದ್ಧರಾಗಿದ್ದಾರೆನ್ನುತ್ತಾ ಗೋರಾಸಿಂಹನು ಸುಲ್ತಾನನೊಡನೆ ಕಾದಲು ಸಿದ್ಧನಾದನು. ಇಬ್ಬರೂ ತಮ್ಮ ಸೇನೆಗಳಿಗೆ ಯುದ್ಧಮಾಡಬಾರದೆಂ ದಾಜ್ಞಾಪಿಸಿದರು. ಈ ಇಬ್ಬರೂ ದ್ವಂದ್ವಯುದ್ಧ ಮಾಡಲಾರಂಭಿಸಿದರು. ಗೋರಾಸಿಂಹನು ಸುಲ್ತಾನನಮೇಲೆ ಬಿದ್ದು ಹತ್ತು ಹನ್ನೆರಡು ಗಾಯಗಳನ್ನು ಮಾಡಿದನು. ಅವನ ಶರೀರದಿಂದ ರಕ್ತಪ್ರವಾಹಕ್ಕಾರಂಭವಾಯಿತು; ಈಗ ಗೋರಾಸಿಂಹನು ತನ್ನಶ್ವವನ್ನು ಸುಲ್ತಾನನ ತುರಂಗದಮೇಲೆ ಬಿಟ್ಟು ಸುಲ್ತಾನನು ವೇಗದಿಂದ ಸಂಹರಿಸುವುದಕ್ಕೆ ಸಿದ್ಧನಾದನು. ಇದನ್ನು ನೋಡಿ ನುಸರತ್ ಖಾನನು ಸಮಯವರಿತು, ತನ್ನ ಭಲ್ಲೆಯಿಂದ ಇರಿದು ಗೋರಾಸಿಂಹನ ಅಶ್ವವನ್ನು ಪ್ರಹರಿಸಿ ನಿರುಪಯೋಗವುಳ್ಳದ್ದನ್ನಾಗಿ ಮಾಡಿದನು. ಇಷ್ಟರಲ್ಲೇ ಮತ್ತೊಂದಡೆ ಯಲ್ಲಿ ಅಲಫ್ ಖಾನನು ಕುದುರೆಯಿಂದ ಬೀಳುತ್ತಿರುವ ಗೋರಾಸಿಂಹನ ಬೆನ್ನಿನ ಮೇಲೆ ಕಠಾರಿಯಿದರಿದು ಗಾಯಹೊಂದಿದ ಸುಲ್ತಾನನ್ನು ಒಂದುಕುದುರೆಯ ಮೇಲೆ ಕೂರಿಸಿಕೊಂಡು ಹೊರಟುಹೋದನು. ಅಲ್ಲಿದ್ದ ಸ್ವಲ್ಪ ಸೇನೆಯು ಜೀವ ದೊಡನೆ ಓಡಿಹೋಯಿತು. ರಾಜಪುತ್ರರು ಗಾಯಹೊಂದಿದ ಗೋರಾಸಿಂಹ ನನ್ನು ದುರ್ಗದೊಳಕ್ಕೆ ಕಳುಹಿಸಿ, ಯವನರ ಬೆನ್ನಹತ್ತಿದರು. ಕೆಲ ಯವನರು ಸತ್ತರು ಕೆಲವರು ಬಂದಿವಾಸರಾದರು. ಭೀಮಸಿಂಗನು ಜನಹೀನವಾದ ಸುಲ್ತಾ ನನು ಛಾವಣಿಯನ್ನು ಲೂಟಿ ಮಾಡಿಸಿ; ಅದಕ್ಕೆ ಬೆಂಕಿ ಹತ್ತಿಸಿದನು. ವಿಜಯ ಪ್ರಾಪ್ತಿಯಿಂದ ರಾಜಪುತ್ರಸೈನಿಕರು ಎಷ್ಟು ಎಷ್ಟು ಆನಂದಿತರಾದರೋ ಅದನ್ನು ಪ್ರಿಯವಾಚಕರೇ ಊಹಿಸಿರಿ. ಆ ಪ್ರಸಂಗದ ಯಥಾರ್ಥ ವರ್ಣನೆ ಮಾಡಲು ಶಕ್ತಿಯು ಈ ಲೇಖನಿಯಲ್ಲಿ ಇಲ್ಲ. ಸುಲ್ತಾನನ ಸೇನೆಯನ್ನು ಸೋಲಿಸಿ ಅವನ ಪಾಳ ಯವನ್ನು ಸುಟ್ಟು ವಿಜಯವಾದ್ಯದೊಡನೆ ಜಯವಾದ ಮಾಡುತ್ತಾ ಹರ್ಷಪೂ ರ್ಣಹೃದಯದಿಂದ ಚಿತ್ತೂರನ್ನು ಪ್ರವೇಶಿಸಿದರು. ರಾಜಪುತ್ರವೀರರು ದುರ್ಗ ದ್ವಾರಕ್ಕೆ ಪ್ರವೇಶಿಸುತ್ತಿರುವಾಗ ನಾಗರೀಕ ನಾರಿಯರು ಅವರಮೇಲೆ ಮುತ್ತು ಗಳನ್ನೂ ಪುಷ್ಪಗಳನ್ನೂ ವರ್ಷಿಸಿದರು ಈ ವಿಜಯವಾರ್ತೆಯನ್ನು ಕೇಳಿ ಪದ್ಮಿ

ನಿಗೆಷ್ಟು ಹರ್ಷವಾಯಿತೋ ಅದು ಭಾವನಾತೀತವಾಗಿದೆ. ಆಕೆಯು ಚಾತಕ ಪಕ್ಷಿಯಂತೆ ತೃಷಾತುರಳಾಗಿ ಕಣ್ಣುಗಳಿಂದ ತನ್ನ ಪತಿಯ ಆಗಮನದ ಮಾರ್ಗವನ್ನು ಪ್ರತೀಕ್ಷಿಸುತ್ತಿದ್ದಳು. ದುರ್ಗದ್ವಾರ ಮಧ್ಯದಲ್ಲಿ ತನ್ನ ಪಿತೃವ್ಯನನ್ನು ಗೌರವಿಸುವ್ರಕ್ಕಾಗಿ ಮಹಾರಾಣಾ ಲಕ್ಷ್ಮಣಸಿಂಹನು. ಎಲ್ಲರೂ ಭೀಮಸಿಂಗನನ್ನು ಗೌರವಿಸಿದರು. ಸುಲ್ತಾನನ ಪಾಪಕ್ಕೆ ತಕ್ಕ ಪೂರ್ಣಪ್ರಾಯಶ್ಚಿತ್ತವು ದೊರೆಯಿತು.

ಪ್ರಕರಣ 32.

ರೋಷನ್ನಳ ಅಂತ್ಯ.

ಅಲ್ಲಾವುದೀನನೊಡನೆ ರಾಜಪುತ್ರರಿಗೆ ಯುದ್ಧವು ಸಮಾಪ್ತಿಯಾಯಿತು. ಚಿತ್ತೂರು ವಾಸಿಗಳ ಕಂಠದಲ್ಲಿ ವಿಜಯಲಕ್ಷ್ಮಿಯು ಮಾಲೆಯನ್ನು ಹಾಕಿದಳು. ಯವನರು ಇಷ್ಟು ಅತ್ಯಾಚಾರಮಾಡಿದರೂ ರಾಜಪುತ್ರರು, ಔದಾರ್ಯವನ್ನು ಬಿಡಲಿಲ್ಲ. ಸೆರೆಹಿಡಿದ ಯವನ ಸೈನಿಕರನ್ನು ಅವರಿಂದ ಮೋಸಮಾಡುವುದಿಲ್ಲವೆಂದು ಖುರಾನಿನಮೇಲೆ ಪ್ರಮಾಣಮಾಡಿಸಿಕೊಂಡು ದಾರಿಯ ಖರ್ಚಿಗೆ ಕೂಡಾ ಕೊಟ್ಟು ಕಳುಹಿಸಿದರು. ಮಹಾರಾಣನು ಈ ಆನಂದಕ್ರಿಯಾದರ್ಶನಾರ್ಥವಾಗಿ ಒಂದು ಸಭೆಯನ್ನು ಸೇರಿಸಿ ಎಲ್ಲರನ್ನೂ ಗೌರವಿಸಿದನು. ಈ ಯುದ್ಧದಲ್ಲಿ ಗೋರಾಸಿಂಹ, ಶೂರಸೇನರಿಬ್ಬರು ಮೃತರಾದರು. ಗೋರಾಸಿಂಹನ ಶವದೊಡನೆ ಅವನ ಸತಿಯು ಸಹಗಮನ ಮಾಡಿದಳು. ಶೂರಸೇನನು ಸತ್ತ ಬಳಿಕ ರಾಮಸಿಂಗನು ರಾಣಾನಿಗೆ ಅವನ ಜನ್ಮಕಾಲದ ವೃತ್ತಾಂತವನ್ನು ಕಥನ ಮಾಡಿದನು. ಇದನ್ನು ಕೇಳಿ ಭೀಮಸಿಂಗನೂ, ರಾಣನೂ, ಗುಲಾಬಸಿಂಗನೂ ವ್ಯಸನಹೊಂದಿದರು! ಆ ಶೂರಸೇನನು ಗುಲಾಬಸಿಂಗನ ಸಹೋದರನೂ ರಾಣನ ದೂರಬಂಧುವೂ ಆಗಿದ್ದನು. ಅವನ ಪರಿಚಯವನ್ನು ಅವನಜೀವಿತಕಾಲದಲ್ಲಿಯೇ ತಿಳಿಸದೆಬಿಟ್ಟಿದ್ದರಿಂದ ರಾಣನು ರಾಮಸಿಂಗನಲ್ಲಿ ಬಹಳ ಸಂತಾಪವುಳ್ಳವನಾದನು. ಕಳೆದುಹೋದ ಮಾತಿಗೆ ಫಲವಿಲ್ಲವೆಂದು ತಿಳಿದು ರಾಣನು ವಿಜಯೆಯನ್ನು ತನ್ನ ಮಗಳಂತೆ ರಕ್ಷಿಸುವುದಾಗಿ ನಿಶ್ಚಯಮಾಡಿದನು. ರಾಜಪುತ್ರರ ಪ್ರತಿಷ್ಠೆಯ ರಕ್ಷಣೆಗಾಗಿ ಇಬ್ಬರು ಮೃತರಾದರೆಂದು ಅತ್ಯಂತ ದುಃಖ ಹೊಂದಿದರು. ಸ್ವಲ್ಪಕಾಲದಲ್ಲಿಯೇ ಯುದ್ಧವಾರ್ತೆಯು ಹಳೆಯದಾಯಿತು. ಚಿತ್ತೂರಲ್ಲಿ ಶಾಂತಿಯು ಸ್ಥಾಪಿತವಾಯಿತು. ವಿಜಯಪ್ರಾಪ್ತಿಯಿಂದ ಚಿತ್ತೂರಿನಲ್ಲಿ ನರನಾರಿಯರೆಲ್ಲರೂ ಆನಂದಿತರಾದರು. ಆದರೆ, ದುರ್ಭಾಗ್ಯಳಾದ ಒಬ್ಬ ಅಬಲೆಯ ಭಾಗ್ಯದಲ್ಲಿ ಮಾತ್ರ ನಿರಾಶೆಯು ಬರೆಯಲ್ಪಟ್ಟು ದುಃಖವುಂಟಾಗಿತ್ತು.

ಆ ಅಬಲೆಯು ತಮ್ಮ ಪೂರ್ವಪರಿಚಿತಳಾದ ರೋಷನ್ನಳೇ! ಕದನ ಮುಗಿದ ಬಳಿಕ ಒಂದು ಬಾರಿ ಗುಲಾಬಸಿಂಗನಲ್ಲಿ ಪುನಃ ಪ್ರೇಮವನ್ನು ಯಾಚಿಸಿದಳು; ಆದರೆ, ಆಶಾಜನಕವಾದ ಉತ್ತರ ಬಾರದ್ದರಿಂದ ವಿಹ್ವಲಳಾಗಿದ್ದಳು. ಪ್ರೇಮಕ್ಕೆ ನಿರಾಶೆಯಾದ್ದರಿಂದ ಅನ್ನಪಾನಾದಿಗಳನ್ನು ಬಿಟ್ಟುಬಿಟ್ಟಳು. ಇದರಿಂದಾಕೆಯ ದೇಹವು ಕೃಶವಾಗುತ್ತ ಬಂತು. ತನ್ನ ಮನಸ್ಸನ್ನು ಬೇರೆ ವಿಷಯದಲ್ಲಿರಿಸಬೇಕೆಂದು ಬಹಳವಾಗಿ ಪ್ರಯತ್ನಿಸಿದಳು. ಆದರೆ, ವ್ಯರ್ಥವಾಯಿತು. ಚಿತ್ತವ್ಯಥೆಯು ವೃದ್ಧಿಯಾಯಿತು. ಈಕೆಯು ಆಗಾಗ್ಗೆ ರಾತ್ರಿಯಲ್ಲಿ ಪುರುಷವೇಷದಿಂದ ಬನಾಸನದೀ ತೀರದಲ್ಲಿ ತಿರುಗುತ್ತಿದ್ದಳು. ಈ ದಿನ ಆಕೆಯ ಚಿತ್ತವು ಅಸ್ವಸ್ಥವಾದ್ದರಿಂದ ಊಟಮಾಡಿ ತನ್ನ ತಂದೆಯು ನಿದ್ರಿತನಾದ ಬಳಿಕ ಪುರುಷ ವೇಷದಿಂದ ನದೀತೀರದಲ್ಲಿ ಚರಿಸುತ್ತಿದ್ದಳು. ದ್ವಾರಪಾಲಕರು ಈಕೆಯ ಪರಿಚಯ ಬಲ್ಲವರಾದ್ದರಿಂದ ದುರ್ಗದಿಂದ ಈಕೆಯು ಹೊರಡುವುದಕ್ಕೂ ಬರುವುದಕ್ಕೂ ಅಡ್ಡಿಮಾಡುತ್ತಿರಲಿಲ್ಲ. ನಿತ್ಯದಂತೆ ಆಕೆಯು ನದೀತೀರಕ್ಕೆ ಬಂದು ಒಂದು ಕಲ್ಲಿನ ಮೇಲೆ ಕುಳಿತಿದ್ದಳು. ಆಗ ಗಾಢಾಂಧಕಾರವಾಗಿತ್ತು. ಹಿಂಸಕಮೃಗಗಳು ಆಹಾರಾರ್ಥವಾಗಿ ತಿರುಗಾಡುತ್ತಿದ್ದುವು. ಆದರೂ ರೋಷನ್ನಳು ಹೆದರಲಿಲ್ಲ. ಪ್ರಾಣದಲ್ಲೂ ಲಕ್ಷ್ಯವಿಟ್ಟಿರಲಿಲ್ಲ; ಬಹುಕಾಲ ಸ್ತಂಭಿತಳಾಗಿದ್ದು ಆತ್ಮಗತಳಾಗಿ,—“ಪತಿಯಿಲ್ಲದ ಸ್ತ್ರೀಯ ಜನ್ಮವು ವ್ಯರ್ಥವು. ಭೂಮಿ ಫಲವತ್ತಾಗಿದ್ದರೂ ಅದಕ್ಕೆ ಯೋಗ್ಯನಾದ ಬೇಸಾಯಗಾರನು ದೊರೆಯದಿದ್ದರೆ ಸ್ವಲ್ಪವೂ ಉಪಯೋಗವಾಗುವುದಿಲ್ಲ; ಅದರಂತೆಯೇ ಲಲನೆಯು ಅತಿ ಲಾವಣ್ಯವತಿಯಾಗಿಯೂ ಇದ್ದರೂ ಯೋಗ್ಯಭೋಕ್ತೃವಿಲ್ಲದೆ ಇದ್ದರೆ ಆಕೆಯ ಸೌಂದರ್ಯ ಲಾವಣ್ಯಗಳು ಕವಡೆಗಿಂತಲೂ ಕಮ್ಮಿ ಬೆಲೆಯುಳ್ಳದ್ದಾಗುವುದು. ಈ ಅಂಧಕಾರಮಯವಾದ ರಾತ್ರಿಯಲ್ಲಿ ನನ್ನ ಪ್ರಿಯರಿಲ್ಲದೆ ಯಾವಸ್ಥಿತಿಯುಂಟಾಗಿದೆಯೋ ಆ ಅವಸ್ಥೆಯು ವಲ್ಲಭನಿಲ್ಲದ ವನಿತೆಗೇ ತಿಳಿವುದಾಗಿದೆ! ಎಲೈ ಪಾಪಿ ಮನವೇ! ಈಗ ನೀನು ಸಂಸಾರದ ಆಶೆಯನ್ನು ಬಿಡು; ಪರಲೋಕದಲ್ಲಿ ಪ್ರೀತಿ ಇಡು. ಏಕೆಂದರೆ, ಗುಲಾಬಸಿಂಗನು ನಿನ್ನ ಆಶಾಪೂರ್ಣಮಾಡುವುದಿಲ್ಲ. ಗುಲಾಬಸಿಂಗನೇ! ನನ್ನ ಚಿತ್ತವು ಚಂಚಲವಾಗಿದೆ. ಆದರೆ, ಏಕಪತ್ನೀವ್ರತವುಳ್ಳವನಾಗಿಯೂ ಕರ್ಮಬಂಧನವುಳ್ಳವನಾಗಿಯೂ ಸ್ವಕರ್ತವ್ಯದಿಂದ ಭ್ರಷ್ಟನಾಗಲಿಚ್ಛಿಸುವುದಿಲ್ಲವೆಂದು ತಿಳಿಯುತ್ತೇನೆ. ಇದರಿಂದ ನಾನು ಇರುವುದು ತಮಗೆ ಅಡ್ಡಿಯಾಗಿದೆ. ಆದರೆ, ಇನ್ನು ಮುಂದೆ ನಾನು ನನ್ನ ಉಪಕಾರ ಕರ್ತನಿಗೆ ಸಂಕಟವನ್ನುಂಟುಮಾಡಲು ಇಚ್ಛಿಸುವುದಿಲ್ಲ. ನಾನು ಈಗ ಈ ದೇಹವನ್ನು ಬಿಡಬೇಕಾಗಿದೆ” ಎಂದು ಹೇಳಿಕೊಂಡಳು. ಆವಾಗ ಹತ್ತಿರದಲ್ಲಿದ್ದ ಮರದ ಬುಡದಲ್ಲಿ ಯಾವನೋ ಒಬ್ಬ ಪುರುಷನು ನಿಂತಿರುವಂತೆ ಕಾಣಿಸಿತು. ಈಕೆಯು ಆಕಡೆಗೆ ನೋಡುತ್ತಿದಳು. ಆ ಕ್ಷಣಕಾಲದಲ್ಲೇ ಆ ವ್ಯಕ್ತಿಯು ಅದೃಶ್ಯವಾಯಿತು. ಆಗ ತನ್ನಲ್ಲಿಯೇ ಸಮಾಧಾನಮಾಡಿಕೊಂಡು,—“ಇದು ಸ್ಮಶಾನಭೂಮಿಯಾದ್ದರಿಂದ

ಒಂದು ಘೋಷಣೆಯೇಷ್ಟೆ ಇರಬಹುದು; ಇಂತಹ ಭಯಂಕರಸ್ಥಾನದಲ್ಲಿ ರಾತ್ರಿಯ ಕಾಲ ಯಾವ ಮನುಷ್ಯನೂ ಬರಲು ಧೈರ್ಯಹೊಂದಲಾರನು. ಅಥವಾ ಮನುಷ್ಯನಿದ್ದರೂ ಏನಾಯಿತು? ಅವನಿಂದ ತೊಂದರೆಯೇನು? ನನ್ನಲ್ಲಿ ಶಸ್ತ್ರವಿರುವುದರಿಂದ ನನ್ನನ್ನು ಬಲಾತ್ಕರಿಸಲು ಯಾರಿಗೆ ಶಕ್ತಿಯಿದೆ? ನಡೆ. ಈಗ ವಿಳಂಬ ಮಾಡುವುದರಿಂದ ಉಪಯೋಗವಿಲ್ಲ.'' ಎಂದು ಹೇಳಿಕೊಂಡು ಮೇಲಕ್ಕೆದ್ದು ನದೀತೀರದಲ್ಲಿ ನಿಂತು ಜಲಪ್ರವಾಹವನ್ನು ಅವಲೋಕಿಸುತ್ತಿದ್ದಳು. ಪುನಃ ಗುಲಾಬಸಿಂಗನ ಸ್ಮರಣೆಯಾಗಲು,

"ಭಲಾ ಈಸೇನ ಆಯಿಕೋಜಬಾಪರನಾಮ ಅಮೃತಕಾ;
ನಹೋಕ್ಯೋನೆಕಿಯೋಸೆ ಚಿಕೂಸುಬಹೋ ಶಾಮಅಮೃತಕಾ;
ಜಿಲಾನಾ ಓರಯೋಖುದ ಮರಕೇಯೇಹಯಕಾಮ ಅಮೃತಕಾ;
ಬಮಾಂಗೀ ಮಯಭೀಷ್ಯಾರೇ! ತೇರಖಾತಿರ ಜಾಮ ಅಮೃತಕಾ''

ಎಂದು ಉಚ್ಚರಿಸಿ ಕೂಡಲೆ, ಆಕೆಯು ಆ ಪ್ರವಾಹದಲ್ಲಿ ಹಾರಿಬಿದ್ದಳು ಯಾವುದೋ ಒಂದು ಮಾನವೀಪ್ರಾಣಿಯು ನೀರಿನಲ್ಲಿ ಬಿದ್ದ ಶಬ್ದವನ್ನು ಕೇಳಿ ಆ ಸ್ಥಳಕ್ಕೆ ಒಬ್ಬ ಪುರುಷನು ಅಕಸ್ಮಾತ್ತಾಗಿ ಓಡಿಬಂದು ಆ ನದಿಯಲ್ಲಿ ಹಾರಿದನು. ಆ ವ್ಯಕ್ತಿಯು ಗುಲಾಬಸಿಂಗನೆಂದು ನಾವು ಊಹಾಪೋಹ ವಿಚಾರಜ್ಞರಾದ ವಾಚಕರಿಗೆ ಹೇಳಬೇಕಾಗಿಲ್ಲ ಗಾಢಾಂಧಕಾರವಾದ್ದರಿಂದ ಬಹುಕಾಲ ರೋಷನ್ನಳು ಸಿಕ್ಕಲಿಲ್ಲ. ಕೊನೆಗೆ ಅವನ ಪ್ರಯತ್ನಕ್ಕೆ ಯಶಸ್ಸುಬಂದಿತು. ಆಕೆಯು ಉದ್ದವಾದ ಕೇಶಕಲಾಪವು ಅವನ ಕೈಗೆ ಸಿಕ್ಕಿತು. ಅದನ್ನು ಹಿಡಿದು ಆಕೆಯನ್ನು ದಡಕ್ಕೆ ತಂದು ಮಲಗಿಸಿದನು ಆದರೆ, ಆಕೆಯು ಬದುಕುವ ಆಶೆಯು ಕಾಣೆಸಲಿಲ್ಲ. ಆಕೆಯು ಹಾರಿದಸ್ಥಳದ ನೀರಲ್ಲಿ ಒಂದು ಬಂಡೆಇದ್ದುದ್ದರಿಂದ ಆ ಕಲ್ಲುತಗುಲಿ ತಲೆಯೊಡೆದು ರಕ್ತವು ಹರಿಯುತ್ತಿತ್ತು. ಆಕೆಯ ಉದರದಲ್ಲಿ ಬಹಳ ನೀರು ಹೋಗಿತ್ತು. ಇಂತಹ ರಾತ್ರಿಯಲ್ಲಿ ಈ ನಿರ್ಜನ ಪ್ರದೇಶದಲ್ಲಿ, ಇಂತಹ ಕಾಲದಲ್ಲಿ, ಅವನಿಗೆ ಸಹಾಯಕರು ಸಿಕ್ಕುವುದು ಹೇಗೆ? ಆಪುರುಷನು ತಲೆಯನ್ನು ಹೊಡೆದುಕೊಂಡು ನಿರಾಶೆಯಿಂದ,—"ರೋಷನ್! ಈ ಆತ್ಮಹತ್ಯಕ್ಕೆ ಏಕೆ ಸಾಹಸಪಟ್ಟೆ?'' ಎಂದು ಕೇಳಿದನು.

ರೋಷನ್ನಳು ಕ್ಷೀಣಸ್ವರದಿಂದ ತಮಗೆ ಸುಖಮಾಡುವದಕ್ಕೂ ನನ್ನನ್ನು ನಾನು ದುಃಖಮುಕ್ತಳನ್ನಾಗಿ ಮಾಡಿಕೊಳ್ಳುವುದಕ್ಕೂ ಯತ್ನಿಸಿದೆನೆಂದು ಹೇಳಿದಳು.

ಗುಲಾಬಸಿಂಗ:—ಈ ವಾರ್ತೆಯನ್ನು ನಿನ್ನ ತಂದೆಯು ಕೇಳಿದರೆ, ಅವನ ಅವಸ್ಥೆ ಏನಾಗುವುದು? ಇದನ್ನೇಕೆ ವಿಚಾರಿಸಲಿಲ್ಲ?

ರೋಷನ್:—(ಕ್ಷೀಣಸ್ವರದಿಂದ) ನಿಜ; ನನ್ನ ಪಿತೃವಿನ ದುಃಖವು ನನಗೆ ನೆನಪಿಸಲ್ಲಿರಲಿಲ್ಲ; ಆದರೆ, ಈಗ ದುಃಖಿಸಿ ಫಲವಿಲ್ಲ ನನ್ನ ಆಯುಷ್ಯರೂಪವಾದ ದಾರವು ಒಂದೆರಡು ಗಳಿಗೆಯಲ್ಲೇ ಹರಿದುಹೋದೀತು!

ನನಗಾಗಿ ನೀವು ನನ್ನ ಕ್ಷಮೆಯನ್ನು ತಂದೆಯವರಲ್ಲಿ ಪ್ರಾರ್ಥಿಸಿರಿ. ಗುಲಾಬಸಿಂಗರೇ ! ನನ್ನಲ್ಲಿ ಪ್ರೇಮವಿದ್ದದಾದರೆ, ನನ್ನ ವೃದ್ಧನಾದ ತಂದೆಯನ್ನು ರಕ್ಷಿಸಿರಿ. ನಾನು ತಮ್ಮನ್ನು ಸ್ವರ್ಗದಲ್ಲಾದರೂ ನೆನೆದೇನು!

ಗುಲಾಬಸಿಂಗ:—ರೋಷನ್! ಈ ವಿಷಯದಲ್ಲಿ ಸ್ವಲ್ಪವೂ ಚಿಂತಿಸದಿರು. ನಿನ್ನ ತಂದೆಯನ್ನು ನಾನು ನನ್ನ ತಂದೆಯಂತೆ ಮನಸದಿಂದ ನನ್ನ ಮರಣಾವಧಿ ರಕ್ಷಿಸುವೆನು. ಆದರೆ, ರೋಷನ್ ! ಮರಣಾವಧಿ ನಿನ್ನನ್ನು ನಾನು ಮರೆಯೆನು. ನಿನ್ನ ಸ್ಮರಣೆಯು ನನಸಹ್ಯವಾದೀತು. ಜೀವಿಸಿದ್ದೂ ಸತ್ತಂತೆ ನನ್ನ ಸ್ಥಿತಿಯಾದೀತು !

ರೋಷನ್‌ಳು:—"ಸಾಕು ! ಸಾಕು ! ಗುಲಾಬಸಿಂಗರೇ ! ಈ ನನ್ನ ಆತ್ಮವು ಆನಂದ ಹೊಂದಿತು. ಈಶ್ವರನಲ್ಲಿ ನನ್ನ ಪ್ರಾರ್ಥನೆ ಏನೆಂದರೆ:—ಹಿಂದೂ ಧರ್ಮದಲ್ಲಿ ನಾನು ಜನಿಸಿದ್ದರೆ, ನನಗೆ ಗುಲಾಬಸಿಂಗನನ್ನೇ ಪತಿಯನ್ನಾಗಿ ಕೊಡು. ಈ ಜನ್ಮದಲ್ಲಿ ನನ್ನ ಆಶೆಯೆಲ್ಲವೂ ಲೋಪವಾಯಿತು. ಆದರೆ ಮುಂದಿನ ಜನ್ಮದಲ್ಲಾದರೂ ನನ್ನಿಷ್ಟವು ಪೂರ್ಣವಾಗಲಿ! ಹೀಗೆ ಉಚ್ಚರಿಸುತ್ತಿರುವಾಗಲೇ ಆತ್ಮವು ಹೊರಟುಹೋಯಿತು !

ಗುಲಾಬಸಿಂಗನು ಅವಿರಳವಾಗಿ ಸುರಿಸಿದನು. ಉಷಃಕಾಲವಾಗುತಾ ಬಂದಿತು. ಕೆಲವರ ರೈತರು ಹೊಲಕ್ಕೆ ಕೆಲಸಮಾಡುವುದಕ್ಕೋಸ್ಕರವಾಗಿ ಹೋಗುತ್ತಿದ್ದರು. ಅವರಲ್ಲಿ ನಾಲ್ವರನ್ನು ಕರೆದು ರೋಷನ್ನಳ ಪ್ರೇತವನ್ನು ಚಿತ್ತೂರು ದುರ್ಗದೊಳಕ್ಕೆ ತೆಗೆಸಿಕೊಂಡು ಹೋದನು. ನಸರುದೀನ್‌ಖಾನನು ಮಗಳ ಶವವನ್ನು ನೋಡಿದೊಡನೆ ದುಃಖದಿಂದ ಹುಚ್ಚನಂತಾದನು. ಈತನಿಗೂ ಸನ್ನಿಪಾತವುಂಟಾಗಿ ಮಧ್ಯಾಹ್ನದೊಳಗಾಗಿಯೇ ಮೃತನಾದನು. ಇವರಿಬ್ಬರ ಶವಗಳನ್ನೂ ಗೋರಿಗಳನ್ನಾಗಿ ಮಾಡಿಳರು. ಮೂರು ದಿನಗಳವರೆಗೆ ನಗರವಾಸಿಗಳೆಲ್ಲರೂ ದುಃಖಿಸಿದರು ಗುಲಾಬಸಿಂಗನ ಪ್ರಾರ್ಥನೆಯಂತೆ ಆ ಶವಗಳನ್ನು ಹೂತಸ್ಥಳದಲ್ಲಿ ಅಂದವಾದ ಗೋರಿಯನ್ನು ಕಟ್ಟಿಸಿ ಶಿಲೆಯಲ್ಲಿ ಅವರ ಕೀರ್ತಿವಿಷಯಗಳನ್ನು ಬರೆಯಿಸಿದರು. ಈಗಲೂ ಅಲ್ಲಿನ ಮುಸಲ್ಮಾನರು ಅವುಗಳಿಗೆ ಆದರದಿಂದ ಮರ್ಯಾದೆಯನ್ನು ಮಾಡುವರು. ಈ ಶೋಕಕಾರಕಘಟನೆಯಾದ ಬಳಿಕ ಚಿತ್ತೂರು ದುರ್ಗದಲ್ಲಿ ಶಾಂತತೆಯು ಹರಡಿತು. ರಾಣನೂ ರಾಜರೂ ಆನಂದವಾಗಿದ್ದರು. ಭೀಮಸಿಂಗ ಪದ್ಮಿನಿಯರೂ ಆನಂದದಿಂದ ಕಾಲಕಳೆಯುತ್ತಿದ್ದರು. ಅಲ್ಲಾವುದೀನನಂಥಾ ಬಲವಾದ ವೈರಿಯ ವಿಚಾರವನ್ನೇ ರಾಜಪುತ್ರರು ಮರೆತುಬಿಟ್ಟರು ರಾಜಪುತ್ರವೀರರು ರಣಶೂರರಾದ್ದರಿಂದ ಶತ್ರುಭೀತಿಯು ಅವರ ಅಂತಃಕರಣದಲ್ಲಿ ಸ್ವಲ್ಪವೂ ಇರುತ್ತಿರಲಿಲ್ಲ. ಇದು ಸಹಜವಾದುದಾಗಿದೆ.

ಪ್ರಕರಣ 33.

ಪುನರಾಕ್ರಮಣ.

ಹಿಂದೆ ಹೇಳಿದಂತೆ ಸಾಹಸಿಗಳಾದ ರಾಜಪುತ್ರ ಯೋಧರು ಅಲ್ಲಾವುದೀನನಂತಹ ಕೊಲೆಗಾರನಾದ ವೈರಿಯನ್ನು ಮರೆತು ಹೋದರು. ಆದರೆ ಅಲ್ಲಾವುದೀನನು ಸರ್ಪದಂತೆ ಹಗೆತನವನ್ನಿಡತಕ್ಕ ಲೋಭಿಷ್ಟನಾಗಿದ್ದುದರಿಂದ ರಾಜಪುತ್ರರಿಂದಾದ ಅಪಮಾನವನ್ನು ಕ್ಷಣವಾದರೂ ಮರೆಯಲಿಲ್ಲ. ಮೇವಾಡದ ರಣಭೂಮಿಯಿಂದ ಪರಾಜಯಹೊಂದಿ ದೆಹಲಿಗೆ ಹೋದನು. ಅವನ ಚಿತ್ತದಲ್ಲಿ ವೈರ ರೂಪವಾದ ಪ್ರಬಲ ಅಗ್ನಿಯು ಜಾಗೃತವಾಯಿತು. ಆದ್ದರಿಂದ ಸೇನೆಯನ್ನು ಹೆಚ್ಚಿಸಿ ಚಿತ್ತೂರು ದುರ್ಗಕ್ಕೆ ದಂಡೆತ್ತುವುದಕ್ಕೆ ಸಿದ್ಧನಾದನು. ಒಂದು ವರ್ಷದಲ್ಲೇ ಅವನು ಪುನಃ ಚಿತ್ತೂರಿಗೆ ಹೊರಟನು. ಈಗ ರಾಜಪುತ್ರರು ಪ್ರಮಾದ ವಶರಾದರು. ಅಲ್ಲಾವುದೀನನ ಸೇನೆಯು ಚಿತ್ತೂರಿನ ಗಡಿಯವರೆಗೆ ಬಂದರೂ ರಾಜಪುತ್ರರಿಗೆ ಇವನ ಸಂಬಂಧವಾದ ಯಾವ ವಾರ್ತೆಯೂ ಇರಲಿಲ್ಲ. ಆದ್ದರಿಂದ ರಾಜಪುತ್ರರು ಯುದ್ಧಕ್ಕೆ ಸಿದ್ಧರಾಗುವುದಕ್ಕೆ ಅವಧಿ ದೊರೆಯಲಿಲ್ಲ. ಕೊನೆಗೆ ಉಪಾಯವಿಲ್ಲದೆ ದುರ್ಗದ್ವಾರವನ್ನು ಬಂಧನ ಮಾಡಿದರು. ನಿರ್ವಾಹವಿಲ್ಲದೆ ದುರ್ಗದಲ್ಲಿದ್ದೇ ಯುದ್ಧ ಮಾಡಬೇಕಾಗಿ ನಿರ್ಧರಿಸಿದರು. ದುರ್ಗದ ಮಧ್ಯದಲ್ಲಿ ಆಹಾರ ಸಾಮಗ್ರಿಗಳು ಹೆಚ್ಚಾಗಿದ್ದುದ್ದರಿಂದ ದುರ್ಗದೊಳಗೇ ಇದ್ದು ಕಾದಲು ಅಷ್ಟು ತೊಂದರೆ ಇರಲಿಲ್ಲ. ಸುಲ್ತಾನನ ಸೇನೆಯು ದುರ್ಗವನ್ನು ನಾಲ್ಕು ಕಡೆಗಳಲ್ಲೂ ಮುತ್ತಿಕೊಂಡು ಪಾಳಯವನ್ನು ಹಾಕಿಕೊಂಡು. ಈ ಮುತ್ತಿಗೆಯು ಸನ್ 1304 ನೆಯ ಇಸವಿಯ ಮಧ್ಯದಲ್ಲಿ ನಡೆಯಿತು. ಅಲ್ಲಾವುದೀನನು ಬಾಣಕ್ಕೆ ಒಂದು ಕಾಗದವನ್ನು ಕಟ್ಟಿ ಕೋಟೆಯೊಳಕ್ಕೆ ಕಳುಹಿಸಿದನು. ಅದರಲ್ಲಿ ಬರೆದಿದ್ದುದೇನೆಂದರೆ:—

"ಚಿತ್ತೂರಿನ ಮಹಾರಾಣಾ ಸಾಹೇಬರೇ!

ನೀವು ಗತವರ್ಷದಲ್ಲಿ ನನಗೆ ಅವಮಾನ ಮಾಡಿದ್ದಿರಿ; ಅದರ ಫಲವನ್ನು ಭೋಗಿಸಲು ಈಗ ಸಿದ್ಧರಾಗಿರಿ. ನಿಮಗೆ ಶೌರ್ಯವಿದ್ದರೆ ದುರ್ಗದ್ವಾರವನ್ನು ತೆರೆದು ಕದನಕ್ಕೆ ಹೊರಗೆ ಬನ್ನಿರಿ. ಆಗ ನನ್ನ ವಿಚಾರವು ಪದ್ಮಿನಿಯನ್ನು ಮಾತ್ರ ತೆಗೆದುಕೊಂಡು ಹೋಗಬೇಕೆಂದು ಇಚ್ಛಿಸಿದ್ದಿತು. ಈಗಲಾದರೋ, ರಾಜಪುತ್ರ ಸ್ತ್ರೀಯರೆಲ್ಲರನ್ನೂ ನನ್ನ ಸಿಪಾಯಿಗಳ ಹೆಂಡತಿಯರನ್ನಾಗಿ ಮಾಡಿ ಮದೋನ್ಮತ್ತರಾದ ರಾಜಪುತ್ರರನ್ನು ನನ್ನ ಗುಲಾಮರನ್ನಾಗಿ ಮಾಡಿಕೊಂಡು ನರ್ತನವನ್ನು

ಕಲಿಸಿ ಕುಣಿಸಬೇಕೆಂದು ದೃಢನಿಶ್ಚಯ ಮಾಡಿದ್ದೇನೆ. ಆದರೆ, ನೀವು ಮರೆಹೊಕ್ಕರೆ, ಯಾವರೀತಿಯಿಂದಾದರೂ ಸ್ವಲ್ಪ ದಯವನ್ನು ತೋರಿಸಬಹುದು. ಯುದ್ಧಕ್ಕೆ ಸಿದ್ಧರಾದರೆ ನಿಮ್ಮನ್ನು ನಾಯಿಗಳೂ ತಿನ್ನಲಾರವು. ಇದನ್ನು ಲಕ್ಷ್ಯದಲ್ಲಿಡಿ. ಸುಲ್ತಾನ್ ಅಲ್ಲಾವುದೀನನ್ನ ಎಂದಿಗೂ ಪರಾಜಯ ಹೊಂದಲಿಲ್ಲ. ಮುಂದೆಯೂ ಹೊಂದುವುದಿಲ್ಲ. ನಿಮ್ಮಿಚ್ಛೆ ಏನು? ಅದನ್ನು ಕೂಡಲೇ ತಿಳಿಸತಕ್ಕದ್ದು; ಅಥವಾ ಮರಣಕ್ಕೆ ಸಿದ್ಧರಾಗಿರತಕ್ಕದ್ದು.

ಸುಲ್ತಾನ್ ಅಲ್ಲಾವುದೀನ್"

ಈ ರೀತಿಯಾಗಿ ಬರೆದ ಪತ್ರಕ್ಕೆ ರಾಣನು ಬಾಣ ದ್ವಾರದಿಂದಲೇ ಪ್ರತ್ಯುತ್ತರವನ್ನು ಕಳುಹಿಸಿದನು. ಅದರ ಸಾರಾಂಶವೇನೆಂದರೆ:—

"ಕೊಲೆಗಾರನಾದ ಅಲ್ಲಾವುದೀನನೇ! ನೀನು ಎರಡು ವೇಳೆಯಲ್ಲಿ ಪರಾಜಯ ಹೊಂದಿದರೂ ನಾವು ನಿನ್ನನ್ನು ಜೀವಸಹಿತವಾಗಿ ಬಿಟ್ಟುಬಿಟ್ಟೆವು. ಇದು ನಮ್ಮ ದೊಡ್ಡ ತಪ್ಪು. ನೀನು ದೆಹಲಿಯ ಚಕ್ರವರ್ತಿಯಾಗಿರುವುದರಿಂದ ನಿನ್ನಲ್ಲಿ ಔದಾರ್ಯವೂ ಸದ್ಗುಣವೂ ಇರಬಹುದೆಂದು ತಿಳಿದಿದ್ದೆವು. ಆದರೆ, ನೀನು ನೀಚನಾದ ಸಂಕೋಚವೃತ್ತಿಯ ನರಪಿಶಾಚಿಯಾಗಿರುವೆಯೆಂದು ನಮ್ಮ ಮನೋದೇವತೆಯು ನಮಗೆ ಹೇಳುವುದು ಯುದ್ಧದಲ್ಲಿ ನಮಗೆ ಏನಾದರೂ ಆಗಲಿ! ರಾಜಪುತ್ರ ವೀರರೆಂದಿಗೂ ವೈರಿಗೆ ಶರಣಾಗತರಾಗಲಿಲ್ಲ; ಮುಂದೆ ಆಗುವದೂ ಇಲ್ಲ. ನಾವು ದುರ್ಗದೊಳಗೇನೆ ಇದ್ದು ಕಾದಿ ನಮ್ಮ ಭಾಗ್ಯವನ್ನು ಪರೀಕ್ಷಿಸಿ ನೋಡುವೆವು. ಏನಾಗುವದೋ ನೋಡು ಬಾ! ಈಶ್ವರನ ಚಿತ್ತದಲ್ಲಿದ್ದರೆ, ನೀನು ಎರಡು ವೇಳೆ ಕರಿಮುಖದೊಡನೆ ಹೇಗೆ ಓಡಿ ಹೋದೆಯೋ ಹಾಗಿಯೇ ಈ ಮೂರನೆಯ ಬಾರಿಯೂ ಓಡಿಹೋಗುವ ಭಾಗವು ಬಂದೀತು! ಅಥವಾ ಯುದ್ಧಭೂಮಿಯಲ್ಲಿ ಸ್ವಪ್ರಾಣಾಹುತಿಯನ್ನು ಕೊಡುವಂತಾದೀತು.

ಭೀಮಸಿಂಗ್"

ಪತ್ರವನ್ನೋದಿದೊಡನೆಯೇ ಸುಲ್ತಾನನಿಗೆ ನಖಶಿಖಪರ್ಯಂತವೂ ಬೆಂಕಿ ಹತ್ತಿಸಿದಂತಾಯಿತು. ಅವನು ರಾತ್ರಿಯಲ್ಲಿ ಒಂದು ಜಾವವಾದ ಬಳಿಕ ಹಲ್ಲಾ ಹತ್ತಬೇಕೆಂದು ಅಜ್ಞಾಪಿಸಿದನು ಆ ದಿವಸ ರಾತ್ರಿಯಲ್ಲಿ ಹಲ್ಲಾ ಹತ್ತಲಾರಂಭಿಸಿದರು. ಚಿತ್ತೂರು ದುರ್ಗದಮೇಲೆ ಮಹಾರಾಣನೂ, ಭೀಮಸಿಂಗ ಗುಲಾಬಸಿಂಗ ಬಾದಲಸಿಂಗ ಮುಂತಾದವರೆಲ್ಲರೂ ತಮ್ಮ ಸೇನೆಯೊಡನೆ ಯುದ್ಧಕ್ಕೆ ಸಿದ್ಧರಾದರು ಯವನರ ಬಾಣವು ಬಿಡಲ್ಪಟ್ಟಿತು. ಪ್ರತ್ಯುತ್ತರವಾಗಿ ರಾಜಪುತ್ರರೂ ಬಾಣವನ್ನು ಬಿಟ್ಟರು, ರಾಜಪುತ್ರವೀರನೊಬ್ಬನು ಹತ್ತು ಜನ ಯವನ ಸೇನಿಕರನ್ನು ಸಂಹರಿಸಲಾರಂಭಿಸಿದನು. ಯುದ್ಧವು ಈರೀತಿಯಾಗಿ ಆರುತಿಂಗಳು ನಡೆಯುತಿತ್ತು. ಆದರೆ, ಪರಿಣಾಮವು ಗೊತ್ತಾಗಲಿಲ್ಲ. ಶುಕ್ಲಪಕ್ಷದಲ್ಲಿ ರಾತ್ರಿಯಲ್ಲೂ ಯುದ್ಧವಾಗುತ್ತಿತ್ತು. ಕೃಷ್ಣಪಕ್ಷದಲ್ಲಿ ಮಾತ್ರ ಹಗಲುಕಾದುತ್ತಾ ರಾತ್ರಿಯಲ್ಲಿ ವಿರಾಮಹೊಂದುತಿದ್ದರು. ಯುದ್ಧದಲ್ಲಿ ರಾಜಪುತ್ರರಿಗೆ ವಿಶೇಷ ಹಾನಿಯಾಗಿರ

ಲಿಲ್ಲ. ಆದರೆ ಕಿಲ್ಲೆಯೊಳಗಿರುವ ಆಹಾರಾದಿ ಸಾಮಗ್ರಿಗಳು ಇನ್ನು ಮುಂದೆ ಹೆಚ್ಚು ದಿನಗಳವರೆಗೆ ಸಾಕಾಗುವಂತಿರಲಿಲ್ಲ. ಇದರಿಂದ ರಾಜಪುತ್ರರಿಗೆ ಯೋಚನೆಗಾಸ್ಪದವಾಯಿತು. ಹೊರಗಿನಿಂದ ಅನ್ನಸಾಮಗ್ರಿಗಳು ಬಾರದಂತೆ ಯವನ ಸೇನೆಯು ನಾಲ್ಕು ಕಡೆಗಳಲ್ಲೂ ಪ್ರತಿಬಂಧಿಸಿತ್ತು. ಹೊರಗೆ ಬಂದು ಯುದ್ಧಮಾಡಿದ ವಿನಹಾ ರಾಜಪುತ್ರರಿಗೆ ಬೇರೆಮಾರ್ಗವಿರಲಿಲ್ಲ. ಆ ಕಾಲದ ರಾಜಸ್ಥಾನದ ಇತಿಹಾಸದಲ್ಲಿ 'ಚಾರಣರಾಮಸಾಥರತ್ನ' ನಿಂದ ಬರೆಯಲ್ಪಟ್ಟಿರುವುದೇನೆಂದರೆ :—

ಶಿಶೋದಯಮನೆತನದವರು ದುರ್ಗದೊಳಗಿದ್ದು ಕಾದಿದ್ದುದು ಒಂದು ದೊಡ್ಡ ತಪ್ಪು. ಈ ತಪ್ಪು ಇವರ ಅನಂತರ ಮಹಾರಾಣಾ ಪ್ರತಾಪಸಿಂಹನವರೆಗೂ ಮಾಡಲ್ಪಟ್ಟಿತು. ಇದರಿಂದ ಯವನರಿಗೆ ವಿಶೇಷವಾಗಿ ವಿಜಯವಾಗುತ್ತಿತ್ತು. ದುರ್ಗದೊಳಗೇ ಇದ್ದು ಕಾದಿದುದರಿಂದ ರಾಜಪುತ್ರರು ವೈರಿಸೇನೆಯಿಂದ ಮುತ್ತಿಸಿಕೊಳ್ಳಲ್ಪಟ್ಟರು. ಹೀಗೆಯೇ ದೇಶಗಳೆಲ್ಲವೂ ವೈರಿಗಳ ವಶವಾದವು. ಶತ್ರುಗಳ ಬಲಾತ್ಕಾರದದೆಸೆಯಿಂದ ಜನರಿಗೆ ರಕ್ಷಣೆಯುಂಟಾಗುತ್ತಿರಲಿಲ್ಲ. ಶತ್ರುಸೇನೆಗಳಿಗೆ ಸರ್ವಸಾಧನಗಳೂ ಅನುಕೂಲವಾಗಿದ್ದುವು. ಶತ್ರುಗಳು ದುರ್ಗದೊಳಕ್ಕೆ ಆಹಾರ ಸಾಮಗ್ರಿಗಳು ಹೋಗದಿರುವಂತೆ ಜಾಗರೂಕತೆಯಿಂದ ನೋಡಿಕೊಳ್ಳುತ್ತಿದ್ದರು. ಇದರಿಂದ ಅನ್ನಾದಿ ಸಾಮಗ್ರಿಗಳಿಗಾಗಿ ರಾಜಪುತ್ರರಿಗೆ ದುರ್ಭಿಕ್ಷವುಂಟಾದ್ದರಿಂದ ದುರ್ಗದ್ವಾರವನ್ನು ತೆರೆದು ನಿರುಪಾಯದಿಂದ ಯುದ್ಧರಂಗಕ್ಕೆ ಬಂದು ಜೀವದಮೇಲೆ ಲಕ್ಷ್ಯವಿಡದೆ ಕಾದಿದರು ; ಆದರೂ ಇವರಿಗೆ ಕೀರ್ತಿಯುಂಟಾಗಲಿಲ್ಲ. ಮುಸಲ್ಮಾನರಾದರೋ ಅವರ ಪಕ್ಕದ ಗಡಿನಾಡಿ ಸಾಯುತ್ತಿದ್ದರು. ಇಂತಹ [illegible] ಕ್ಷತ್ರಿಯರು ತಮ್ಮ ನಾರಿಯರನ್ನು ಕೊಂದು [illegible] ಬಿಟ್ಟು ಕಾದಿ ಅಲ್ಲಿ ಜಯಹೊಂದಿದರೂ ಸಂಸಾರದ ಆಶೆ ಇಲ್ಲದ್ದರಿಂದ ತಮ್ಮ ತಮ್ಮಲ್ಲಿಯೇ ಕಾದಿ ಸಾಯುತ್ತಿದ್ದರು. ದುರ್ಗದಲ್ಲಿದ್ದು ಕಾದುವದರ ದೆಸೆಯಿಂದ ರಾಜಸ್ಥಾನದ ರಾಣಾ (ರಾಜ) ರೆಲ್ಲರೂ ಡಿಲ್ಲೀ ಚಕ್ರವರ್ತಿಯಿರಿದ ಪರಾಜಿತರಾಗಬೇಕಾಗಿಬಂತು. ಮಹಾರಾಣಾ ಪ್ರತಾಪಸಿಂಹನು ಈ ಯುದ್ಧಪದ್ಧತಿಯನ್ನು ಬಿಟ್ಟುದರಿಂದಲೇ ಅಕ್ಬರನಂತಹ ಮಹಾಚಕ್ರವರ್ತಿಯೂ ಇವನನ್ನು ಪರಾಭವ ಹೊಂದಿಸಲು ಶಕ್ತನಾಗಲಿಲ್ಲ.''

ಆರುತಿಂಗಳವರೆಗೂ ನಿಸ್ಸೀಮಸಾಹಸದಿಂದ ರಾಜಪುತ್ರರು ಕಾದಿದರು. ಆದರೂ ಅಲಾವುದ್ದೀನನು ಜಗ್ಗಲಿಲ್ಲ. ರಾಜಪುತ್ರರಿಗೆ ಅನ್ನಪಾನಾದಿಗಳ ಅಭಾವವುಂಟಾಯಿತು. ಇದರಿಂದ ಮಹಾರಾಣಾ ಲಕ್ಷ್ಮಣಸಿಂಹನ ಹೃದಯದಲ್ಲಿ ನಿರಾಶೆಯು ಸಂಚಾರವಾಯಿತು. ಇತರ ಯೋಧರೂ ಹತಾಶರಾದರು. ಎಲ್ಲಾ ರಾಜಪುತ್ರರೊಡನೆ ಚಿತ್ತೂರು ನಾಶವಾಗುವುದೆಂದು ನಿಶ್ಚಯಮಾಡಿಕೊಂಡನು. ಒಂದು ರಾತ್ರಿ ಲಕ್ಷ್ಮಣಸಿಂಹನಿಗೆ ಒಂದು ಭಯಂಕರಸ್ವಪ್ನವುಂಟಾಯಿತು. ಮನಸ್ಸ್ವಸ್ಥತೆಯಿಲ್ಲದ್ದರಿಂದ ಈ ಸ್ವಪ್ನವಾಗಿರಬಹುದೆಂದು ನಿಶ್ಚೈಸಿ ಯಾವ ವಿಚಾರವನ್ನೂ ಮಾಡಲಿಲ್ಲ. ಕರ್ತವ್ಯವನ್ನು ಬಿಡಲಿಲ್ಲ. ಎರಡನೆಯದಿನವೂ ಆ ಸ್ವಪ್ನವನ್ನೇ

ಕಂಡನು. ಈಗ ಮಾತ್ರ ರಾಣನು ಗಾಬರಿಯಾದನು. ಮನಸ್ಸನ್ನು ಸರಿಯಾಗಿಟ್ಟುಕೊಳ್ಳಲು ಶಕ್ತನಾಗಲಿಲ್ಲ. ಆವನು ಪ್ರಾತಃಕಾಲದಲ್ಲಿ ಸರ್ವಸಾಮಂತರನ್ನೂ ಆಪ್ತರಿಷ್ಟರನ್ನೂ ಕರೆಯಿಸಿ ಸಭೆ ಸೇರಿಸಿದನು. ಆ ದಿನ ಅವರಿಗೆ ಅನ್ನಪಾನಗಳ ಸ್ಮರಣೆಯೇ ಇರಲಿಲ್ಲ. ಅನನ ಚಿತ್ತವು ಭ್ರಮಿಷ್ಠವಾಗಿತ್ತು.

ಪ್ರಕರಣ 34.

ದ್ವಾದಶ ರಾಜಪುತ್ರರ ಬಲಿ.

ಸಭಾಗೃಹವು ಕ್ಷತ್ರಿಯ ಯೋಧರಿಂದ ತುಂಬಲ್ಪಟ್ಟಿತ್ತು. ಆದರೆ, ಕ್ಷತ್ರಿಯರ ಸ್ವಾಭಾವಿಕತೆಜಸ್ಸು ಈದಿನ ದೃಗ್ಗೋಚರವಾಗಲಿಲ್ಲ. ಉದಾಸೀನತೆಯಿಂದ ಸರ್ವರ ಮುಖವೂ ಚಿನ್ತಾವಗ್ನವಾಗಿದ್ದಂತೆ ಕಾಣುತ್ತಿತ್ತು. ಇವರ ಮಲಿನತೆಯು ಸಭಾಗೃಹ ಮಧ್ಯದಲ್ಲಿ ಪ್ರತಿಛಾಯೆಯ ರಭಸದಿಂದ ಬಿದ್ದು ಸಭಾಗೃಹವು ಶೂನ್ಯವಾಗಿ ಕಾಣುತ್ತಿತ್ತು. ಮಹಾರಾಣನು ಬಂದೊಡನೆಯೇ ಯೋಧರೆಲ್ಲರೂ ಎದ್ದುನಿಂತು ರಾಣನು ಸಿಂಹಾಸನಾರೂಢನಾದ ಬಳಿಕ ತಮ್ಮ ಸ್ಥಾನಗಳಲ್ಲಿ ಕುಳಿತರು. ಬಳಿಕ ಮಹಾರಾಣನು ಸಭಿಕರನ್ನುದ್ದೇಶಿಸಿ:—“ನನ್ನ ರಣಭೂಷಣರಾದ ಕ್ಷತ್ರಿಯ ವೀರರಿರಾ! ನೀವು ರಣರಂಗದಲ್ಲಿ ಈವರಿಗೆ ನಿಮ್ಮ ಅಪ್ರತಿಮ ಶೌರ್ಯವನ್ನು ತೋರಿಸಿದ್ದೀರಿ. ಈ ನಿಮ್ಮ ಶೌರ್ಯ ಪ್ರಶಂಸೆ ಮಾಡಲು ಸಾಮರ್ಥ್ಯವು ನನ್ನ ಶಕ್ತಿ ಹೀನವಾದ ವಾಣಿಯಲ್ಲಿಲ್ಲ. ಆದರೆ, ತಮ್ಮ ಇಷ್ಟುಶ್ರಮವೂ ವ್ಯರ್ಥವಾಗಿ, ತಮ್ಮ ಪ್ರಿಯಕರವಾದ ಚಿತ್ತೂರು ಭೂಮಿಯ ಸುಖವು ನಾಶವಾಗುವ ಕಾಲವು ಪ್ರಾಪ್ತವಾಗಿದೆ. ಈ ಅಶುಭ ವಾರ್ತೆಯನ್ನು ತಮಗೆ ಹೇಳುವಾಗ ನನ್ನ ಹೃದಯವು ವಿದೀರ್ಣವಾಗುತ್ತಿದೆ. ಹಾಗೆ ಮಾಡಿದ ವಿನಹಾ ಬಿಡುಗಡೆಯಾಗುವುದಿಲ್ಲ. ಮೊನ್ನೆಯ ಸ್ವಪ್ನದಲ್ಲಿ ನಮ್ಮ ಕುಲಸ್ವಾಮಿಯು ದರ್ಶನಕೊಟ್ಟು ಹೇಳಿದ್ದೇನಂದರೆ:—“ಎಲೈ ಚಿತ್ತೂರಿನ ರಾಣನೆ! ನಾನು ಬಹಳ ಹಸಿದಿದ್ದೇಣೆ. ಆ ಕ್ಷುಧಾಶಮನ ಮಾಡಲು ರಾಜತನುಗಳನ್ನು ಭಕ್ಷಿಸಬೇಕೆಂದು ಇಚ್ಛೆಯುಂಟಾಗಿದೆ. ನಾನು ನಿನಗೆ ಸ್ಪಷ್ಟವಾಗಿ ಹೇಳುವುದೇನೆಂದರೆ,—ಯಾವಾಗ ನಿನ್ನ ಹನ್ನೆರಡು ಪುತ್ರರು ರಣಕ್ಷೇತ್ರದಲ್ಲಿ ತಮ್ಮ ಪ್ರಾಣಗಳನ್ನು ಆಹುತಿ ಕೊಡುವರೊ, ಆ ಸಮಯದಲ್ಲಿ ನಿನ್ನ ವಂಶೀಯರಿಗೆ ಸುಖವೂ ಯಶಸ್ಸೂ ಉಂಟಾದೀತು.” ಶ್ರೀ ದೇವಿಯ ಈ ಶಬ್ದಗಳನ್ನು ಕೇಳಿ ಇದು ಕೇವಲ ಭ್ರಮೆಯೆಂದು ತಿಳಿದಿದ್ದೆನು ಆದರೆ, ನಿನ್ನೆ ರಾತ್ರಿಯಲ್ಲೂ ಪುನಃ ಈ ಸ್ವಪ್ನವೇ ಬಿದ್ದುದರಿಂದ ಸುತ್ತನುತ್ತಲೂ ಉಂಟಾಗಿರುವ ಸ್ಥಿತಿಯನ್ನು ವಿಚಾರಿಸಲು ಹೀಗೆಯೇ ಆಗುವದರಲ್ಲಿ ಸಂಶಯವೇ ಇಲ್ಲವೆಂದು

ನನ್ನ ಮನೋದೇವತೆಯು ನನಗೆ ಹೇಳುತ್ತಿದೆ. ಕೊನೆಗೆ ದೇವಿಯು ನಿನ್ನ ಹನ್ನೆರಡು ಜನ ಪುತ್ರರಿಗೂ ರಾಜ್ಯಾಭಿಷೇಕವಾಗಿದ್ದೇ ಆದರೆ, ಭವಿಷ್ಯಕಾಲದ ಚಿತ್ತೂರಿನ ಅಭ್ಯುದಯ ಉಂಟಾದೀತೆಂದೂ ಹೇಳಿದಳು. ಈಗ ನಾನು ಇಷ್ಟೇ ವಿಚಾರಿಸತಕ್ಕದ್ದಾಗಿದೆ. ಈ ವಿಷಯದಲ್ಲಿ ತಮ್ಮ ಅಭಿಪ್ರಾಯವೇನು? ಅದನ್ನು ಸಂಕೋಚಪಡದೆ ಹೇಳಬೇಕು. ನನ್ನ ಪ್ರಜೆಗಳಿಗೆ ಹಿತವಾಗುವದಾದರೆ ಧರ್ಮ ಮತ್ತು ದೇಶದ ರಕ್ಷಣೆಯಾಗುವದಾದರೆ, ಅದಕ್ಕಾಗಿ ನನ್ನ ಪುತ್ರರ ಪ್ರಾಣಗಳನ್ನು ಆಹುತಿಕೊಡಲು ಸಿದ್ಧನಾಗಿದ್ದೇನೆ'' ಎಂದನು. ಮಹಾರಾಣನ ಈ ವಾಕ್ಯವನ್ನು ಕೇಳಿದೊಡನೆಯೇ ಮೊದಲಿನಿಂದಲೂ ಚಿಂತಾಕ್ರಾಂತರಾಗಿದ್ದುದರಿಂದ ಅವರ ಮುಖಚರ್ಯೆಯಲ್ಲಿ ಉದಾಸೀನತೆಯು ಕಾಣುತ್ತಿತ್ತು. ಯಾರೂ ರಾಣನ ಪ್ರಶ್ನೆಗೆ ಉತ್ತರ ಕೊಡಲಿಲ್ಲ.

ಕೊನೆಗೆ ಮನಸ್ಸನ್ನು ದೃಢಮಾಡಿ ಗುಲಾಬಸಿಂಗನು ಎದ್ದುನಿಂತು ಆವೇಶದಿಂದ "ಮಹಾರಾಣರವರೇ! ತಾವು ಇದೇನು ಹೇಳುವಿರಿ? ದೇವಿಯು ತಮ್ಮ ಪುತ್ರರನ್ನು ಭಕ್ಷಿಸಲು ಇಚ್ಛಿಸಿದ್ದಲ್ಲಿ ದೇವಿಯ ಮತಿಯು ಭ್ರಮೆಯಿಂದ ಕೂಡಿದ್ದಾಗಿರಬೇಕು. ತಮ್ಮ ಮತ್ತು ತಮ್ಮ ಪುತ್ರರ ಪ್ರಾಣಗಳು ಎಷ್ಟು ಬೆಲೆಯುಳ್ಳದ್ದಾಗಿದೆಯೋ ನಮ್ಮ ಪ್ರಾಣಗಳು ಅಷ್ಟು ಬೆಲೆಯುಳ್ಳವುಗಳಾಗಿಲ್ಲ. ನಮ್ಮಂತಹ ಕಿಂಕರರೇ ರಣರಂಗಕ್ಕೆ ಎಲ್ಲಿಯವರೆಗೆ ಹೋಗಲು ತಪ್ಪರರಾಗಿರುವರೋ ಅಲ್ಲಿಯವರೆಗೆ ತಾವೂ ತಮ್ಮ ಪುತ್ರರೂ ರಣಕ್ಷೇತ್ರಕ್ಕೆ ಗಮನಿಸುವದು ಸ್ವಲ್ಪವೂ ಅವಶ್ಯಕವಿಲ್ಲ. ನಮಗೆ ಅಪ್ಪಣೆ ಕೊಡಿರಿ. ನಾವು ಈ ಕಾಲದಲ್ಲೇ ಶೌರ್ಯದಿಂದ ಕಾದಿ ಪ್ರಾಣಾಹುತಿಕೊಡುತ್ತೇವೆ; ಮತ್ತು ಶ್ರೀ ದೇವಿಯ ಕ್ಷುಧೆಯನ್ನು ಶಾಂತಿಮಾಡುವೆವು.'' ಎಂದನು.

ಕ್ಷತ್ರಿಯರೆಲ್ಲರೂ ಗಗನಭೇದಕವಾದ ಘರ್ಜನೆಮಾಡಿ, ಗುಲಾಬಸಿಂಗನ ಮಾತನ್ನೆ ಪುಷ್ಟೀಕರಿಸಿದರು. "ನಾವೂ ಗುಲಾಬಸಿಂಗನು ಹೇಳಿದುದನ್ನೇ ಒಪ್ಪಿಕೊಳ್ಳುವೆವು!'' ಎಂದರು. ಕ್ಷತ್ರಿಯರ ಸ್ವಾಮಿ ನಿಷ್ಠೆಯ ಈ ಪ್ರದರ್ಶನವನ್ನು ನೋಡಿ ರಾಣನ ಹೃದಯವು ಆನಂದಪುಳಕಿತವಾಯಿತು. ಅವನು ಶೋಕವನ್ನು ಬಿಟ್ಟು ಗಂಭೀರತೆಯನ್ನು ಹೊಂದಿ, "ಕ್ಷತ್ರಿಯವೀರರೇ! ನೀವು ಧನ್ಯರಾಗಿದ್ದೀರಿ! ನಿಮ್ಮ ಮುಖದಿಂದ ಇಂತಹ ಉದ್ಗಾರವೇ ಹೊರಡತಕ್ಕದ್ದು. ಆದರೆ, ನಾನು ಹೇಳುವುದೇನೆಂದರೆ!—"ಪ್ರಖ್ಯಾತವಾದ ಜನ್ಮಭೂಮಿಯ ಸ್ವತಂತ್ರತೆಗಿಂತ ರಾಜನ ಅಥವಾ ರಾಜಪುತ್ರರ ಬೆಲೆಯು ಅಧಿಕವಾದ್ದಲ್ಲ. ಆದ್ದರಿಂದಲೇ ದೇಶಹಿತಕ್ಕಾಗಿ ನನ್ನ ಪುತ್ರರನ್ನು ಬಲಿಕೊಡಬೇಕಾಗಿದೆ. ದೇವರು ಒಪ್ಪದಿದ್ದರೂ ಒಂದುವೇಳೆ ನನ್ನಿಂದ ದೇಶಕ್ಕೆ ವಿಪರೀತ ದೆಶೆಯು ಪ್ರಾಪ್ತವಾದರೆ ನನ್ನ ತಲೆಯಲ್ಲಿ ಕ್ರೂರಕಲಂಕವು ನಿಂತೀತು. ಮತ್ತು ನನ್ನ ಗತಿಯೂ ಚೆನ್ನಾಗಿರದು. ಈ ವಿಷಯವನ್ನು ವಿಚಾರಿಸುವುದು ನನ್ನ ಕರ್ತವ್ಯವಾಗಿದೆ. ಕ್ಷತ್ರಿಯವೀರರಾದ ತಾವೆಲ್ಲರೂ ಸ್ವಾಮಿನಿಷ್ಠರೂ ಖಡ್ಗಧಾರಿಗಳೂ ಆಗಿರುವುದರಿಂದ ತಾವು

ನನ್ನಾಜ್ಞೆಯನ್ನುಲ್ಲಂಘಿಸಲಾರಿರಿ" ಎಂದು ತಿಳಿದಿದ್ದೇನೆ. ನಾನು ಈ ದಿನ ನನ್ನ ಜ್ಯೇಷ್ಠಪುತ್ರನಿಗೆ ರಾಜ್ಯಾಭಿಷೇಕಮಾಡಿ ರಣರಂಗಕ್ಕೆ ಕಳುಹಿಸುವೆನು. ಮತ್ತು ಪರಿಣಾಮವನ್ನೆದುರುನೋಡುವೆನು." ಎಂದು ಹೇಳಿ: ಹಿರಿಯ ಮಗನಾದ ಅರಿಸಿಂಹ (ಉರುಸಿಂಹ) ನನ್ನು ಸಭೆಗೆ ಕರೆಸಿ, ಅವನಿಗೆ ಸಂಗತಿಗಳೆಲ್ಲವನ್ನೂ ತಿಳಿಸಿದನು. ಆಗಲೇ ರಣರಂಗಕ್ಕೆ ಹೋಗುವುದಾಗಿ ಆ ವೀರಪುತ್ರನು ತನ್ನ ಇಚ್ಛೆಯನ್ನು ಪ್ರಕಟಮಾಡಿದನು ಆತನಿಗೆ ಪಟ್ಟಾಭಿಷೇಕವಾಯಿತು. ಆ ಕ್ಷಣವೇ ದುರ್ಗದ್ವಾರವನ್ನು ತೆರೆದು ರಣರಂಗಕ್ಕೆ ಕಳುಹಿಸಿದನು. ಸಾಯಂಕಾಲದಲ್ಲಿಯೇ ಆತನು ರಣರಂಗದಲ್ಲಿ ಕಾದಿ ಮೃತನಾದ ವಾರ್ತೆಯು ಬಂದಿತು. ಆದರೂ ರಾಣನು ಸ್ವಲ್ಪವೂ ದುಃಖಿಸಲಿಲ್ಲ. ಬಳಿಕ ಲಕ್ಷ್ಮಣಸಿಂಹನ ದ್ವಿತೀಯ ಕುಮಾರನಾದ ಅಜಯಸಿಂಹ (ಅಜಿತಸಿಂಗ) ನಿಗೆ ರಾಜ್ಯಾಭಿಷೇಕ ಮಾಡಿಸಿ ರಣಭೂಮಿಗೆ ಕಳುಹಿಸುವದತ್ಯವಶ್ಯಕವಾಗಿಯಿತ್ತು. ಆದರೂ ಅಜಿತಸಿಂಗನಲ್ಲಿ ರಾಣನಿಗೆ ಅತ್ಯಂತ ಪ್ರೇಮವಿದ್ದುದರಿಂದ ಅವನನ್ನು ಹತ್ತಿರ ಕರೆದು; "ಅಜಯಸಿಂಹನೇ! ಈ ರಾಜ್ಯಾಭಿಷೇಕದ ಕ್ಷಣಿಕ ಸುಖವು ಪ್ರಾಪ್ತವಾದ ಬಳಿಕ ನೀನು ನಿನ್ನ ಎರಡನೆಯ ಸಹೋದರನಸ್ಥಿತಿಯು ಏನಾಗುವುದೋ ಅದನ್ನು ನೋಡದ ಬಳಿಕ ಮೃತ್ಯುಮುಖಕ್ಕೆ ಹೋಗು." ಎಂದು ಹೇಳಿದನು. ಆ ಅಜಯಸಿಂಹನು ತನಗಿಚ್ಛೆಯಿಲ್ಲದಿದ್ದರೂ ತಂದೆಯ ವಾತ್ಸಲ್ಯವನ್ನು ನೋಡಿ ಅವನಪ್ಪಣೆಯನ್ನು ಮೀರಲಿಲ್ಲ. ಅಲ್ಲಿಯೇ ನಿಂತನು. ಬಳಿಕ ಹತ್ತು ದಿನಗಳಲ್ಲಿ ಹತ್ತು ಜನ ಕುಮಾರರು ರಣಕ್ಷೇತ್ರದಲ್ಲಿ [illegible] ಜಯವಾಗಲಿಲ್ಲ. ಬಳಿಕ ರಾಣನು [illegible] ನಿಂದ,—"ನನ್ನ ರಣಶೂರರಾದ ಯೋಧರೇ! ನನ್ನ ಏಕಾದಶ ಕುಮಾರರನ್ನು ಬಲಿಗೊಟ್ಟರೂ ಯಶಸ್ಸಿನ ಚಿಹ್ನೆಯು ಗೋಚರಿಸಲಿಲ್ಲ. ಇದನ್ನು ನೀವು ನೋಡಿದ್ದೀರಿ. ಈಗ ಏನುಮಾಡಬೇಕು? ನಿಮ್ಮಿಚ್ಛೆಯೇನು?" ಎಂದು ಕೇಳಿದನು. ಯೋಧರೆಲ್ಲರೂ "ತಮ್ಮ ಇಚ್ಛೆಯೇ ನಮ್ಮ ಇಚ್ಛೆ" ಎಂದು ಗಟ್ಟಿಯಾಗಿ ಹೇಳಿದರು.

ರಾಣನು "ಕ್ಷತ್ರಿಯ ವೀರರೇ! ಈಗ ಹೆಚ್ಚು ವಿಚಾರ ಮಾಡುವ ಸಮಯವಿಲ್ಲ. ಈಗ ಮುಸಲ್ಮಾನನಾದ ಸುಲ್ತಾನನಿಗೆ ಅಧೀನವಾಗಲು ಒಪ್ಪುವುದು, ಅಥವಾ ರಣರಂಗದಲ್ಲಿ ಶೌರ್ಯವನ್ನು ತೋರಿಸಿ ಪ್ರಾಣ ಬಿಡುವುದು, ಎಂಬೆರಡು ಮಾರ್ಗಗಳಿವೆ. ಇವುಗಳಲ್ಲಿ ಯಾವುದು ಶ್ರೇಷ್ಠವೋ ಅದನ್ನು ನಾವು ಅವಲಂಬಿಸಬೇಕು." ಎಂದು ಹೇಳಿದನು.

ಪ್ರಜೆಗಳು :—ತಮ್ಮ ಇಚ್ಛೆಯಾವುದು ?

ಮಹಾರಾಣ :—ಪ್ರಾಣತ್ಯಾಗ ಮಾಡುವದೇ ನನ್ನ ಇಚ್ಛೆಯಾಗಿದೆ.

ಸರ್ವಸಾಮಂತರು :—ನಿಮ್ಮಿಚ್ಛೆಯು ಬೇರೆಯಾಗಲು ಶಕ್ಯವಲ್ಲ. ನಾವು ಕ್ಷತ್ರಿಯರಾಗಿದ್ದು ಮೃತ್ಯುಭೀತಿಯಿಂದ ನಮ್ಮ ಪ್ರಾಣಾಧಿಕವಾದ ಸ್ವತಂತ್ರತೆ

ಯನ್ನು ಯವನರಿಗೆ ಮಾರೋಣವೇ? ಈ ಪ್ರಾಣವು ಯಾವಾಗಲಾದರೂ ಹೋಗಲಿ! ನಮಗೆ ನಮ್ಮ ಧರ್ಮಕ್ಕಿಂತಲೂ ಸ್ವಾತಂತ್ರ್ಯಕ್ಕಿಂತಲೂ ಶ್ರೇಷ್ಠವಾದುದು ಯಾವುದೂ ಇಲ್ಲ.

ಮಹಾರಾಣಾ:—ನಿಮಗೆ ಇಂತಹ ಇಚ್ಛೆಯಿದ್ದರೆ, ಸಿದ್ಧರಾಗಿರಿ! ಪುನಃ ಒಂದು ಬಾರಿ ನಿಮ್ಮ ಖಡ್ಗವನ್ನು ಒರೆಯಿಂದ ಹೊರಗೆ ತೆಗೆಯಿರಿ. ಸೇನೆಯ ಮಧ್ಯಭಾಗವನ್ನು ಹೊಕ್ಕು ಕ್ಷತ್ರಿಯರ ಪ್ರಾಣವು ಎಷ್ಟು ಬೆಲೆಯುಳ್ಳದ್ದಾಗಿದೆ; ಮತ್ತು ಅದನ್ನು ದೊರಕಿಸಿಕೊಳ್ಳಲು ಎಷ್ಟು ಪ್ರಾಣಗಳ ಆಹುತಿಯು ಕೊಡಲ್ಪಡುವುದೆಂಬುವದನ್ನು ಯವನರಿಗೆ ನಿದರ್ಶನಕ್ಕೆ ತರುವವರಾಗಿರಿ ಎಂದನು.

ಯೋಧರೆಲ್ಲರೂ ತಮ್ಮ ತಮ್ಮ ಕತ್ತಿಗಳನ್ನು ಒರೆಯಿಂದ ಹೊರಕ್ಕೆ ತೆಗೆದರು. "ಶ್ರೀ ಏಕಲಿಂಗಜಿಕೀಜಯು!" ಎಂದು ಯುದ್ಧಸೂಚಕ ಧ್ವನಿಯನ್ನು ಮಾಡಿದರು. ಇಷ್ಟರಲ್ಲೇ ಮಹಾರಾಣನು ಒಂದು ವಿಚಾರವನ್ನು ಯೋಚಿಸಿ ಗಂಭೀರಸ್ವರದಿಂದ,—"ವೀರಪುಂಗವರೇ! ನಮಗೆ ಯಾವಾಗ ವಿಜಯದ ಆಶೆಯಿಲ್ಲವೋ ಆಗ ನಾವು ಜೋಹರನ್ನು ಮಾಡಿ ಪ್ರಾಣದಮೇಲಾಶೆಯಿಡದೆ ಶತ್ರುಸೇನೆಯಮೇಲೆ ಬಿದ್ದು ನಾವಾಗಿಯೇ ನಾಶವನ್ನುಂಟುಮಾಡಿಕೊಳ್ಳಬೇಕು. ಕ್ಷತ್ರಿಯರಾದ ನಮಗೆ ಇದು ವಂಶಪಾರಂಪರ್ಯವಾಗಿ ಬಂದ ಪದ್ಧತಿಯಾಗಿದೆ. ಈಗಲೂ ನಾವು ಜೋಹರನ್ನು ಮಾಡಬೇಕು. ಆದರೆ ಯುದ್ಧಕ್ಕೆ ಹೋದರೆ ನಮ್ಮ ಮರಣಾನಂತರ ನಮ್ಮ ಲಲನೆ, ಸುತೆ, ಜನನಿಯರೇ ಮುಂತಾದ ಸ್ತ್ರೀಯರು ಯವನರ ವಶರಾಗಿ ಭ್ರಷ್ಟರಾದರೆ ನಾವು ಸತ್ತುದರ ಫಲವೇನು? ಆದ್ದರಿಂದ ನನ್ನ ವಿಚಾರವೇನೆಂದರೆ,—"ನಾವು ಸಮರಯಜ್ಞದಲ್ಲಿ ನಮ್ಮ ಪ್ರಾಣಾಹುತಿ ಕೊಡುವುದಕ್ಕೆ ಮೊದಲೇ ಈಗ ಅತ್ಯಗತ್ಯದ ಮತ್ತು ಪರಮಾಭಿಮಾನದ ಒಂದು ಕೃತ್ಯವನ್ನು ಮಾಡಬೇಕು. ಅಂದರೆ ನಮ್ಮ ಸ್ತ್ರೀ ಸಮಾಜವನ್ನು ಅಗ್ನಿಪ್ರವೇಶ ಮಾಡಿಸಬೇಕು. ಈ ವಿಷಯದಲ್ಲಿ ತಾವು ಹೇಳುವುದೇನು?" ಎಂದು ರಾಣನು ಕೇಳಿದನು.

"ಯಾವುದು ತಮಗೆ ಇಷ್ಟವೋ ಅದೇ ನಮ್ಮ ಇಷ್ಟವಾಗಿದೆ! ನಮ್ಮ ಅಭಿಮತವನ್ನು ಸ್ವಲ್ಪವೂ ವಿಚಾರಿಸುವದವಶ್ಯವಿಲ್ಲ." ಎಂದು ಸರ್ವರೂ ತಮ್ಮ ಅನುಮತಿಯನ್ನು ಕೊಟ್ಟರು. ಚಿತ್ತೂರು ದುರ್ಗಮಧ್ಯದಲ್ಲಿ ಒಂದು ವಿಶಾಲ ಗುಹೆಯುತ್ತು, ಅದರಲ್ಲಿ ಕಟ್ಟಿಗೆ, ಬೆರಣಿ ಮುಂತಾದುವನ್ನು ತುಂಬಿಸಿ, ತುಪ್ಪ, ಕರ್ಪೂರ ಚಂದನ ಮುಂತಾದ ಅಗ್ನಿವರ್ಧಕ ವಸ್ತುಗಳನ್ನು ಸಿದ್ಧವಾಗಿಡುವಂತೆ ರಾಣನು ತನ್ನ ಅನುಚರರಿಗೆ ಆಜ್ಞಾಪಿಸಿ ಸರ್ವರನ್ನೂ ಉದ್ದೇಶಿಸಿ ಹೇಳಿದ್ದೇನೆಂದರೆ:—"ವೀರಶ್ರೇಷ್ಠರೇ! ಈಗ ನೀವು ನಿಮ್ಮ ನಿಮ್ಮ ಮನೆಗಳಿಗೆ ಹೋಗಿ ನಿಮ್ಮ ಸ್ತ್ರೀ, ಮಾತೆ, ಮಕ್ಕಳು ಮುಂತಾದ ಪರಿವಾರದವರನ್ನು ಸಂದರ್ಶಿಸಿ; ಅವರನ್ನು ಗುಹೆಯ ಹತ್ತಿರಕ್ಕೆ ಕರೆದುಕೊಂಡು ಬನ್ನಿರಿ. ನಾಳೆ ಪ್ರಾತಃಕಾಲದಲ್ಲಿ

ಸರ್ವ ಸ್ತ್ರೀಯರ ಶರೀರಗಳನ್ನೂ ಅಗ್ನಿ ನಾರಾಯಣನಿಗೆ ಸಮರ್ಪಿಸಿ, ನಾವೆಲ್ಲರೂ ಯುದ್ಧರಂಗಕ್ಕೆ ಹೋಗೋಣ!" ಮಹಾರಾಣನ ಆಜ್ಞೆಯನ್ನು ವಂದಿಸಿ ರಾಜಪುತ್ರ ಯೋಧರೆಲ್ಲರೂ ತಮ್ಮ ತಮ್ಮ ಮನೆಗಳಿಗೆ ಹೊರಟು ಹೋದರು.

ಪ್ರಕರಣ 35

ಚಿತ್ತೂರು ಮೊದಲನೇ ಜೋಹರ್.

"ವಿಧಾತನೇ! ಇಷ್ಟು ಪ್ರಾಣಿಗಳನ್ನು ಆಹುತಿ ತೆಗೆದುಕೊಂಡು 'ಪಾಪಿ' ಎಂಬ ಪದದಿಂದ ದೂಷಿತಳಾಗಿರುವದಕ್ಕೋಸ್ಕರವೇ ನನಗೆ ಸೌಂದರ್ಯವನ್ನು ಕೊಟ್ಟೆಯಾ? ನನ್ನ ಈ ಕ್ಷಣಭಂಗುರವಾದ ಲಾವಣ್ಯದಿಂದ ಈ ಎಷ್ಟು ದೊಡ್ಡ ಅನರ್ಥವೂ ರಕ್ತಪಾತವೂ ಆಗುತ್ತಾ ಇದೆ! ಶಿವ, ಶಿವ! ಈಗ ನಾನಿದನ್ನು ನೋಡುವುದಿಲ್ಲ ಈ ಅನರ್ಥವನ್ನು ಸಮಾಪ್ತಿಮಾಡು! ಇಲ್ಲದಿದ್ದರೆ, ಪಾಪಿಯಾದ ನನ್ನ ಪ್ರಾಣವನ್ನಾದರೂ ನಾಶಮಾಡು!" ಎಂದು ಮಹಾರಾಣಿಯಾದ ಪದ್ಮಿನಿಯು ಶ್ವೇತವಸ್ತ್ರಧಾರಿಣಿಯಾಗಿ ಸನ್ಯಾಸಿನಿಯಂತೆ ತನ್ನ ಅದೃಷ್ಟವನ್ನು ನಿಂದಿಸಿಕೊಳ್ಳುತ್ತಾ ಕೂತಿದ್ದಳು. ಸಂಧ್ಯಾಕಾಲ ಸಮಯವಾಯಿತು. ಇಷ್ಟರಲ್ಲೇ ಭೀಮಸಿಂಗನು ಅಲ್ಲಿಗೆ ಬಂದು ತನ್ನ ಪತ್ನಿಯ ಕೊನೆಯ ವಾಕ್ಯವನ್ನು ಅನುಕರಿಸಿ,—"ಮಹಾರಾಣಿಯೇ! ಈಗ ನಿಮ್ಮ ಮತ್ತು ನನ್ನ ಪ್ರಾಣನಾಶ ಕಾಲವು ಬಂದೇ ಇದೆ. ನಿನ್ನ ಮಾತು ಸಫಲವಾಗಲಿ." ಎಂದನು ಪತಿಯ ಈ ಉದ್ಗಾರವನ್ನು ಕೇಳಿದ ಪದ್ಮಿನಿಯು ಗರ್ಭಗಳಿತಳಂತಾಗಿ ಆಶ್ಚರ್ಯ ಚಕಿತ ಮುದ್ರೆಯಿಂದ, "ಪ್ರಾಣೇಶ್ವರನೆ! ಈ ದಿನ ತಾವು ಇಂತಹ ಶಬ್ದವನ್ನು ಏಕೆ ಉಚ್ಚರಿಸಿದಿರಿ? ಇದು ನನಗೆ ತಿಳಿಯಲಿಲ್ಲ. ನನ್ನ ಮುಖದಿಂದ ಒಬ್ಬಾನೊಬ್ಬ ಭಯಚಕಿತ ಸ್ತ್ರೀಯಂತೆ ಉದ್ಗಾರವು ಹೊರಟಿತೆಂದು ಈ ದಾಸಿಯನ್ನು ತಾವು ಉಪಹಾಸ ಅಥವಾ ತಿರಸ್ಕಾರ ಮಾಡುತ್ತಾ ಇರುವಿರಲ್ಲವೇ?" ಎಂದಳು.

ಭೀಮಸಿಂಗನು—"ಇಲ್ಲ! ಪ್ರಾಣೇಶ್ವರೀ! ಇಲ್ಲ! ಈಗ ಉಪಹಾಸಿಸುವ ಕಾಲವಲ್ಲ. ನನ್ನ ಮಾತು ಸತ್ಯವು. ನಮ್ಮ ಜೀವನ ಸೂರ್ಯನು ನಾಳೆ ಸೂರ್ಯೋದಯವಾದೊಡನೆಯೇ ಅಸ್ತವಾಗುವನು" ಎಂದು ದೀರ್ಘವಾದ ನಿಟ್ಟುಸಿರನ್ನು ಬಿಟ್ಟು ಹೇಳಿದನು.

ಪದ್ಮಿನಿಯ ಅಂತಃಕರಣವು ವ್ಯಾಕುಲಿತವಾಯಿತು. ಆಕೆಗೆ ಪತಿಯ ಮಾತು ಸತ್ಯವಾಗಿ ತೋರಿತು. ಆಕೆಯು ಗಾಂಭೀರ್ಯದಿಂದ ಸಮ್ಮತಿಯುಳ್ಳವಳಾಗಿ "ಹೃದಯವಲ್ಲಭನೇ! ಈ ದಾಸಿಯು ತಮ್ಮ ಸುಖ ದುಃಖದ ಭಾಗಸ್ಥ

ಳಾಗಿಯೂ, ಅರ್ಧಾಂಗಿ ಎಂದು ತಿಳಿಯೋಣವಾಗಿಯೂ ಇದ್ದಲ್ಲಿ ತಮ್ಮ ಅಂತಃಕರಣದಲ್ಲಿ ಗುಟ್ಟನ್ನಿಡಬೇಡಿ. ಸಂಗತಿಯೆಲ್ಲವನ್ನೂ ಈ ದಾಸಿಗೆ ತಿಳಿಸೋಣಾಗಬೇಕು. ಏಕೆಂದರೆ, ತಮ್ಮ ಸಂದಿಗ್ಧವಚನದಿಂದ ನನಗೆ ಶಂಕೆಯುಂಟಾಗಿದೆ. ಮತ್ತು ನಿರಾಶೆಯಿಂದ ನನ್ನ ಚಿತ್ತವೃತ್ತಿಯು ಭ್ರಮಿತವಾಗಿದೆ " ಎಂದಳು.

ಪದ್ಮಿನಿಯನ್ನು ಸಮಾಧಾನ ಮಾಡುವುದಕ್ಕಾಗಿ ಭೀಮಸಿಂಗನು ನಿಟ್ಟುಸಿರನ್ನು ಬಿಟ್ಟು ನಿರಾಶೆ ಸೂಚಕ ಸ್ವರದಿಂದ—" ಪ್ರಾಣೇಶ್ವರಿಯೇ ! ಯಾರಿಗೆ ದೈವವು ಪ್ರತಿಕೂಲವಾಗಿರುವುದೋ ಅವರಿಗೆ ವಿಜಯದ ಆಶೆಯಿಲ್ಲ. ನಾವು ಅನೇಕ ಯುದ್ಧಗಳಲ್ಲಿ ಜಯಹೊಂದಿದ್ದೇವೆ. ಕ್ಷತ್ರಿಯ ವೀರರ ಕೀರ್ತಿ ದುಂದುಭಿಯು ಜಗತ್ತಿನಲ್ಲೆಲ್ಲಾ ನಾದವನ್ನುಂಟುಮಾಡಿದೆ. ಆದರೆ, ಈ ಕ್ಷತ್ರಿಯರ ಅಸ್ತಕಾಲ ಬಂದೊದಗಿದೆ. ನಾವು ಇಂತಹ ಘೋರವಿಪತ್ತಿನಲ್ಲಿ ಬೀಳುವೆವೆಂದು ಯಾರು ತಿಳಿದಿದ್ದರು ? ಈ ದುರ್ಗದಲ್ಲಿ ಅನ್ನ ಮತ್ತು ನೀರಿನ ದುರ್ಭಿಕ್ಷವುಂಟಾದೀತೆಂದು ಯಾರಿಗೆ ತಿಳಿದಿತ್ತು ? ಅನ್ನ ನೀರುಗಳನ್ನು ಹೊರಗಿನಿಂದ ದೊರಕಿಸಲು ಉಪಾಯವಿಲ್ಲದ್ದರಿಂದ ದುರ್ಗದೊಳಗಿದ್ದು ಕಾದುವದು ಶಕ್ಯವಲ್ಲ. ಮೇವಾಡದ ವೀರಪುರುಷರೂ, ವೀರಸ್ತ್ರೀಯರೂ ತಮ್ಮ ಶಕ್ತಿ ಮೀರಿ ಶೌರ್ಯವನ್ನು ತೋರಿಸಿದ್ದಾರೆ. ಸಂಕಟಪಂಕದಲ್ಲಿಯೂ ಧೈರ್ಯ ತೋರಿಸಿದ್ದಾರೆ. ಅನೇಕರು ಉಪವಾಸವಿದ್ದು ಹಗೆಗಳೊಡನೆ ಕಾದುವುದಕ್ಕೆ ರಣರಂಗಕ್ಕೆ ಹೋಗುತ್ತಿದ್ದಾರೆ. ವೀರನಾರಿಯರು ತಮ್ಮ ಪತಿ, ಪುತ್ರ ಸಹೋದರರಿಗೋಸ್ಕರವಾಗಿ ತಾವು ಉಪವಾಸವಿದ್ದು ತಮ್ಮ ಭಾಗದ ಅನ್ನವನ್ನು ಯುದ್ಧರಂಗಕ್ಕೆ ಕಳುಹಿಸಿದರು. ಇಷ್ಟೇ ಅಲ್ಲ. ಅಲ್ಪವಯಸ್ಕರಾದ ಬಾಲಕರು ಅರೆಹೊಟ್ಟೆಯುಂಡು ತಮ್ಮ ಅನ್ನದಲ್ಲಿ ಅರ್ಧವನ್ನು ರಣರಂಗಕ್ಕೆ ಯೋಧರುಗಳಿಗೋಸ್ಕರ ಕಳುಹಿಸಿ ಅವರ ಕರ್ತವ್ಯ ಪರಾಯಣತೆಗೆ ಹಿಂತೆಗೆಯುವಂತೆ ಮಾಡಲಿಲ್ಲ. " ಎಂದನು.

" ವೀರಪುರುಷರಿರಾ ! ವೀರಸ್ತ್ರೀಯರಿರಾ ! ನೀವೇ ಧನ್ಯರು ! ನಿಮ್ಮ ಸ್ವದೇಶಾಭಿಮಾನವು ಧನ್ಯವಾದದ್ದು ! ನೀವು ಸ್ವದೇಶರಕ್ಷಣೆಗಾಗಿ ಈ ಸಾಹಸವನ್ನು ಪ್ರದರ್ಶಿಸಿರುವುದರಿಂದ ನಿಮ್ಮ ಕೀರ್ತಿಯು ವೃದ್ಧಿಯಾಗುತ್ತಿದೆ. ನಿಮ್ಮ ಸ್ವರ್ಗಸ್ಥ ಪಿತೃಗಣವು ತೃಪ್ತಿಹೊಂದಿದೆ. ಪೃಥ್ವಿಯಲ್ಲಿ ಕ್ಷತ್ರಿಯ ಧರ್ಮದ ಗೌರವವೆಂಬ ಪ್ರಖ್ಯಾತವಾದ ದಂಡಕವೆಂಬ ವಾದ್ಯವು ಬಾರಿಸಲ್ಪಡುತ್ತಿದೆ! ಆದರೆ, ಕ್ಷತ್ರಿಯ ವೀರರು ತೋರಿಸಿದ ಶೌರ್ಯವು ನಿಷ್ಫಲವಾಗಿದೆ. ಇದಕ್ಕೋಸ್ಕರ ದುಃಖವಾಗುತ್ತಿದೆ. ಮಹಾರಾಣನು ತನ್ನ ಏಕಾದಶ ಕುಮಾರರನ್ನು ಬಲಿಗೊಡ್ಡಿದರೂ ಜಯಚಿಹ್ನೆಯು ಗೋಚರಿಸಲಿಲ್ಲ." ಎಂದೂ ಪುನಃ ದುಃಖದಿಂದಲೂ ಧೈರ್ಯದಿಂದಲೂ, " ಆದುದರಿಂದಲೇ ಜೋಹರನ್ನು ಮಾಡಲು ಸರ್ವರೂ ನಿಶ್ಚಯಿಸಿರುತ್ತಾರೆ. ನಮ್ಮ ಜೀವನವನ್ನು ನಾವು ರಣರಂಗದಲ್ಲರ್ಪಿಸುವೆವು. ಆದರೆ, ಕ್ಷತ್ರಿಯಕುಲಲಲನೆಯರ ಪ್ರತಿಷ್ಠೆಯನ್ನೂ ಗೌರವವನ್ನೂ ಯಾರು ರಕ್ಷಿಸುವರು ? ಇದಕ್ಕಾಗಿ ನನಗೆ ದೊಡ್ಡ ಚಿಂತೆಯುಂಟಾಗಿದೆ " ಎಂದನು. ಪದ್ಮಿನಿಯು,—

“ತಾವು ನಮ್ಮ ರಕ್ಷಣೆಗಾಗಿ ಸ್ವಲ್ಪವೂ ಚಿಂತಿಸದಿರಿ. ನಮ್ಮ ರಕ್ಷಣೆಯನ್ನು ಸ್ವತಃ ಅಗ್ನಿನಾರಾಯಣನಲ್ಲಿ ನಾವು ಮಾಡಿಕೊಳ್ಳುವೆವು. ಕ್ಷತ್ರಿಯಕುಲಲಲನೆಯರು ಆತ್ಮಾನಂದದಿಂದ ಅಗ್ನಿಪ್ರವೇಶಮಾಡಿ ನಶ್ವರವಾದ ಸಂಸಾರದ ವಿಪತ್ತಿನಿಂದ ಮುಕ್ತರಾಗುವರು. ಯವನರು ಅತ್ಯಾಚಾರದಿಂದ ವೀರನಾರಿಯರ ಶರೀರವನ್ನು ಸ್ಪರ್ಶಮಾಡಲು ಸಹಾ ಅಶಕ್ಯವೇನರಿ. ಈ ವಿಷಯದಲ್ಲಿ ನಿಶ್ಚಿಂತರಾಗಿರಿ!” ಎಂದು ಅದ್ಭುತವಾದ ಶೌರ್ಯವನ್ನು ತೋರಿಸಿ ಹೇಳಿದಳು.

ಭೀಮಸಿಂಗ:—ಧನ್ಯೇ! ವೀರಪತ್ನಿಯೇ! ಧನ್ಯೆ! ಈ ನಿನ್ನ ವಚನದಿಂದ ನನ್ನ ಮುಖಕ್ಕೆಷ್ಟು ಶೋಭಾಯಮಾನವಾಗಿದೆ? ಕ್ಷತ್ರಿಯ ನಾರಿಯರು ಮರಣಪರಿಯಂತರವೂ ಯವನರಿಂದ ಸ್ಪರ್ಶಿತರಾಗಿ ಭ್ರಷ್ಟರಾಗುವುದಿಲ್ಲವೆಂದು ತಿಳಿದಿದ್ದೇನೆ. ಆದರೆ ನಮ್ಮ ಮರಣಾನಂತರ ಯವನರು ಕೋಟೆಯೊಳಕ್ಕೆ ಪ್ರವೇಶಿಸುವರು. ಮತ್ತು ನೀವು ಚಿತಾಪ್ರವೇಶಮಾಡುವುದಕ್ಕೆ ಸಿದ್ಧರಾಗುವಷ್ಟರಲ್ಲೇ ಒಬ್ಬಾನೊಬ್ಬ ವೀರಕನ್ಯೆಯ ಅಥವಾ ವೀರಮಾತೆಯ ಅಥವಾ ವೀರನಾರಿಯ ಪಾತಿವ್ರತ್ಯ ಭಂಗವಾದರೆ, ನಮ್ಮ ಹಿಂದಿನ ಇಪ್ಪತ್ತೊಂದು ತಲೆಯವರು ನರಕದಲ್ಲಿ ಬಿದ್ದಾರು! ಇದಕ್ಕಾಗಿ ನಿಶ್ಚಯಿಸಿರುವುದೇನೆಂದರೆ:—“ನಾವು ರಣರಂಗಕ್ಕೆ ಹೋಗುವುದಕ್ಕೆ ಪೂರ್ವವೇ ನಮ್ಮ ಕೈಯಿಂದಲೇ ನಮ್ಮ ಸ್ತ್ರೀಯರನ್ನು ಅಗ್ನಿನಾರಾಯಣನ ಸ್ವಾಧೀನಮಾಡುವೆವು. ಇದರಿಂದ ನಮ್ಮಲ್ಲಿ ಚಿಂತೆಯ ಒಂದು ಬಿಂದುವೂ ಉಳಿಯದು! ಪ್ರಾಣೇಶ್ವರಿ! ನಿನ್ನಭಿಮತವೇನು? ನಿನ್ನ ಇಚ್ಛೆಯನ್ನು ಪ್ರಕಟಿಸು.

ಪದ್ಮಿನಿಯು ಸಂತೋಷದಿಂದ “ಪ್ರಾಣನಾಥರ ಅಭಿಮತವೇ ನನ್ನಭಿಮತವು! ತಮ್ಮ ಆಜ್ಞೆಯನ್ನು ಪಾಲಿಸುವುದೇ ನಮ್ಮ ಧರ್ಮವಾಗಿದೆ ತಮ್ಮ ಚಿಂತೆಯನ್ನು ಈ ಕ್ಷಣದಲ್ಲಿಯೇ ನಿರ್ಮೂಲಮಾಡಲು ಚಿತಾಪ್ರವೇಶದಲ್ಲಿ ತತ್ಪರರಾಗಿದ್ದೇವೆ. ತಮ್ಮ ಪತಿಯ ಎದುರಿನಲ್ಲೇ ಪ್ರಾಣತ್ಯಾಗ ಮಾಡುವುದು ಸ್ತ್ರೀಯರಾದ ನಾರಿಯರಿಗೆ ಆತ್ಮಾನಂದ ಸಮಯವಾಗಿದೆ! ಪ್ರಾಣನಾಥನೇ! ಚಿತಿಯು ಸಿದ್ಧವಾಗಿದ್ದಲ್ಲಿ ಈ ದಾಸಿಯು ತಮ್ಮ ಚರಣವನ್ನು ನೆನೆದು ಅದರಲ್ಲಿ ಪ್ರವೇಶಿಸಲು ಸಿದ್ಧಳಾಗಿಧಾಳೆ.” ಎಂದು ವಿಕಸಿತ್ಮತೆಯಿಂದ ಉತ್ತರ ಕೊಟ್ಟಳು.

ಭೀಮಸಿಂಗನು “ಹೃದಯೇಶ್ವರಿ! ಚಿತಿಯನ್ನು ಸಿದ್ಧಪಡಿಸಲು ಆಜ್ಞೆಕೊಟ್ಟಿದೆ. ಪ್ರಾತಃಕಾಲಕ್ಕೆ ಆ ವಿಶಾಲ ಗುಹೆಯ ಹತ್ತಿರ ಚಿತ್ತೂರಿನ ಸ್ತ್ರೀಯರೆಲ್ಲರೂ ಸೇರುವರು. ಯಾರ ಚಿತ್ತದಲ್ಲಿ ತತ್ತರಿಸುವ ಭೀತಿಯುತಿಯಾಗಿರುವುದೋ ಅದನ್ನು ನಿರ್ಮೂಲ ಮಾಡಿ ಉತ್ಸಾಹವನ್ನು ಹೆಚ್ಚಿಸುವುದು ನಮ್ಮ ಕರ್ತವ್ಯವಾಗಿದೆ ನೀವೆಲ್ಲರೂ ಪರಲೋಕಗತರಾದ ಬಳಿಕ ನಾವೂ ರಣರಂಗಕ್ಕೆ ಪ್ರಯಾಣ ಮಾಡುವೆವು. ಇದಕ್ಕೋಸ್ಕರ ಈ ರಾತ್ರಿಯಲ್ಲಿ ಆನಂದಸಂದೋಹರಾಗಿ ಕಾಲ

ಕಳೆಯುವ! ಮತ್ತು ಸ್ವಲ್ಪಕಾಲದಲ್ಲಿಯೇ ಶೋಕವನ್ನು ತ್ಯಾಗಮಾಡುವ!'' ಎಂದು ಹೇಳಿದನು.

ಭೋಜನೋತ್ತರ ರಾತ್ರಿಯ ಶೇಷವನ್ನು ನಿದ್ರಾಸುಖದಲ್ಲಿ ಕಳೆದು, ಪ್ರಾತಃಕಾಲಕ್ಕೆ ಪೂರ್ವವೇ ಪದ್ಮಿನಿಯು ಸ್ನಾನಮಾಡಿ, ಷೋಡಶಶೃಂಗಾರಭೂಷಿತಳಾಗಿ ಚಿತಾಪ್ರವೇಶಕ್ಕೆ ಸಿದ್ಧಳಾದಳು; ಸೂರ್ಯೋದಯವಾದೊಡನೆಯೇ ಚಿತ್ತೂರು ದುರ್ಗಮಧ್ಯದಲ್ಲಿರುವ ವಿಶಾಲವಾದ ಗುಹಾದ್ವಾರದಲ್ಲಿ ವೀರವೇಷಭೂಷಿತನಾದ ಮಹಾರಾಣಾ ಲಕ್ಷ್ಮಣಸಿಂಗನೂ, ಭೀಮಸಿಂಗ, ಗುಲಾಬಸಿಂಗ ಬಾದಲಸಿಂಗರೂ ಅನ್ಯಕ್ಷತ್ರಿಯವೀರನರರೆಲ್ಲರೂ ಕೇಸರೀಬಣ್ಣದ ಉಡಿಗೆತೊಡಿಗೆಗಳನ್ನುಟ್ಟುಬಂದು ನಿಂತಿದ್ದರು. ಬಳಿಕ ಸ್ತ್ರೀಸಮುದಾಯವು ಬಂದು ನಿಂತಿತು. ಸರ್ವರ ಮುಂಭಾಗದಲ್ಲಿ ರಾಣಿಯಾದ ಪದ್ಮಿನಿಯು ಇದ್ದಳು. ರಾತ್ರಿಯಕಾಲದಲ್ಲಿ ಪ್ರಜ್ವಲಿಸಲ್ಪಟ್ಟ ಅಗ್ನಿಯು ಗುಹೆಯ ಮಧ್ಯದಲ್ಲಿ ತನ್ನ ಭಯಂಕರ ಸ್ವರೂಪವನ್ನು ಪ್ರಕಟಿಸುತ್ತಿತ್ತು. ಕೆಲವರು ಕ್ಷತ್ರಿಯಕುಲಲಲನೆಯರ ನಯನಗಳಿಂದ ತಮ್ಮ ಪತಿ ಪುತ್ರ ಸಹೋದರಾದಿಗಳ ಭಾವಿವಿಯೋಗದುಃಖದ ದೆಸೆಯಿಂದ ಅಶ್ರುಪಾತವಾಗುತ್ತಿತ್ತು.

ಅವರ ರೀತಿಯನ್ನು ನೋಡಿ ರಾಣನು,—“ಎಲೌ, ವೀರನಾರಿಯರೇ! ನಿಮ್ಮ ಅಂತಃಕರಣವನ್ನು ಕಲ್ಲಿಗಿಂತಲೂ ಕಠಿಣವಾಗಿ ಮಾಡಿ ಅಶ್ರುಪತನವನ್ನು ನಿಲ್ಲಿಸಿರಿ. ನಿಮ್ಮ ಅಶ್ರುಪಾತವು ನಮ್ಮ ಮಾರ್ಗಕ್ಕೆ ವಿಘ್ನವನ್ನುಂಟುಮಾಡೀತು! ಈ ವಿಷಯದಲ್ಲಿ ವಿಚಾರಮಾಡಿರಿ. ಈ ಅಂತ್ಯಕಾಲದಲ್ಲಿ ನಿಮ್ಮ ನಿಮ್ಮ ಪ್ರಿಯಮಾನವರಿಗೆ ಗಾಢಾಲಿಂಗನವನ್ನು ಕೊಡಿರಿ! ಮತ್ತು ಆಶೀರ್ವದಿಸಿರಿ; ನಿಮ್ಮ ಪಾತಿವ್ರತ್ಯವನ್ನು ರಕ್ಷಿಸಿಕೊಳ್ಳುವುದು ಆದ್ಯಕರ್ತವ್ಯವೆಂಬುದನ್ನು ನೆನೆದು ಅಗ್ನಿಪ್ರವೇಶ ಮಾಡಿರಿ ಇದು ಹೊರತು ಇನ್ನಾವ ಉಪಾಯವೂ ಉಳಿಯಲಿಲ್ಲ.'' ಎಂದನು.

ರಾಣನ ಮಾತನ್ನು ಕೇಳಿದೊಡನೆಯೇ ರೋದಿಸುವ ಸುದತಿಯರು ತಮ್ಮ ಅಶ್ರುವನ್ನೊರಸಿಕೊಂಡರು. ತಮ್ಮ ಬಾಲರನ್ನು ಮುದ್ದಿಸುತ್ತಾ ಮಾತೃವಾತ್ಸಲ್ಯದಿಂದ ಆನಂದವನ್ನು ಅನುಭವಿಸುವರಾದರು.

ಚಪಲ ಬಾಲಕನೊಬ್ಬನು ತನ್ನ ತಾಯಿಯನ್ನು ಕುರಿತು,—“ಅಮ್ಮಾ! ನನಗೆ ನನ್ನ ಧನುರ್ಬಾಣಗಳನ್ನೂ ಡಾಲುಕತ್ತಿಗಳನ್ನೂ ಬೇಗ ಕೊಡು. ನಾನು ತಂದೆಯೊಡನೆ ರಣರಂಗಕ್ಕೆ ಹೋಗುವೆನು. ಕ್ಷತ್ರಿಯ ಬಾಲಕನು ಪರಾಧೀನತೆಯನ್ನೆಂದಿಗೂ ಸ್ವೀಕರಿಸುವುದಿಲ್ಲ. ವೈರಿಯೊಡನೆ ಕಾದಿ ನಮ್ಮ ಪ್ರಾಣಗಳನ್ನು ಕೊಡುವುದೇ ನಮ್ಮ ಕರ್ತವ್ಯವಾಗಿದೆ ಜನನೀ! ಈಗ ಏನುಮಾಡುತ್ತೀಯೆ? ನಿನ್ನ ಹೃದಯವು ಹೇಗೆ ವಜ್ರದಂತೆ ಕಠಿಣವಾಯಿತು? ಮಾತೆ! ನನ್ನ ವಿನಂತಿಯನ್ನು ಅನಾದರ ಮಾಡಬೇಡ.'' ಎಂದನು.

ಈ ಚಪಲಬಾಲಕನ ನುಡಿಯನ್ನು ಕೇಳಿ ಮತ್ತೊಬ್ಬ ಬಾಲಕನು ರಣ ರಂಗಕ್ಕೆ ಹೋಗುವೆನೆಂದು ಹಟಹಿಡಿದು ಕುಳಿತನು. ಈ ಕೌತುಕವನ್ನು ನೋಡಿ ಕ್ಷತ್ರಿಯವೀರರು ಆಶ್ಚರ್ಯ ಚಕಿತರಾದರು. ಮಾತೆಯು ತನ್ನ ಸುತನನ್ನು ಕುರಿತು ವಾತ್ಸಲ್ಯದಿಂದ.—"ಬಾಲರೇ! ನಮ್ಮ ಹೃದಯವು ವಜ್ರದಂತೆ ಕಠಿಣವಾಯಿ ತೆಂದು ನೀವು ಹೇಳಿದಿರಷ್ಟೆ? ಆದ್ದರಿಂದ ನಾನು ನಿಮಗೆ ರಣರಂಗಕ್ಕೆ ಹೋಗಲು ಹೇಗೆ ಅಪ್ಪಣೆಕೊಡಲಿ? ಶತೃಗಳ ಶಸ್ತ್ರಗಳು ತೀಕ್ಷ್ಣವಾಗಿರುತ್ತವೆ. ಆ ಶಸ್ತ್ರ ದಿಂದ ನಿಮ್ಮ ಶರೀರವು ಛೇದಿಸಲ್ಪಟ್ಟರೆ ನಾವು ಹೇಗೆ ನೋಡಬೇಕು? ಇದ ಕ್ಕಾಗಿ ಯುದ್ಧಕ್ಕೆ ಹೋಗುವೆವೆಂದು ಹಟಹಿಡಿಯಬೇಡಿ. ನಿಮ್ಮನ್ನು ನಾವು ಎತ್ತಿ ಕೊಂಡು ಹೋಗಿ ನಿಮ್ಮೊಡನೆ ಪ್ರಾಣಬಿಡುವೆವು. ನೀವು ನಮ್ಮೊಡನೆಯೇ ಇದ್ದರೆ ನಮಗೆ ಸಮಾಧಾನವಾದೀತು ಅಗ್ನಿಯ ಪ್ರಚಂಡ ಜ್ವಾಲೆಯು ಯಾ ವಾಗ ನಮ್ಮ ದೇಹವನ್ನು ಭಸ್ಮ ಮಾಡುವದೋ ಆಗ ನಾವು ನಿಮ್ಮ ಮುಖಗ ಳನ್ನು ಚುಂಬಿಸುತ್ತಾ ಪ್ರಾಣಬಿಡುವೆವು." ಎಂದಳು.

ಇದಕ್ಕೆ ಪ್ರತ್ಯುತ್ತರವಾಗಿ ಬಾಲಕನು,—"ಜನನೀ! ಚಿಕ್ಕಬಾಲಕನು ನಿನ್ನ ಬಾಹುಪಾಶದಲ್ಲಿರುವನಷ್ಟೆ? ಅವನೊಡನೆ ನೀನು ಅಗ್ನಿಪ್ರವೇಶವನ್ನು ಮಾಡು. ಆ ಸಹವಾಸವನ್ನು ಆನಂದವೆಂದು ತಿಳಿ. ಆದರೆ ನಮಗೆ ಅಗ್ನಿಯಪ್ರವೇ ಶವು ಅನುಚಿತವಾದದ್ದು. ನಾವು ಕ್ಷತ್ರಿಯ ಧರ್ಮದ ದೀಕ್ಷೆಹೊಂದಿದ್ದೇವೆ. ಶಸ್ತ್ರಾಸ್ತ್ರಗಳ ಅಭ್ಯಾಸ ಮಾಡಿದ್ದೇವೆ. ಇದಕ್ಕಾಗಿ ಸಮರಾಂಗಣದಲ್ಲಿ ಪ್ರಾಣ ತ್ಯಾಗ ಮಾಡುವದೇ ನಮ್ಮ ಧರ್ಮವಾಗಿದೆ. ಕ್ಷತ್ರಿಯರಿಗೆ ಸಮರ ಭೂಮಿ ಯಲ್ಲಿ ಮರಣ ಒಂದಲ್ಲದೆ ಗತಿಯಿಲ್ಲ. ಎಂಬುವದನ್ನು ನೀನೇ ನಮಗೆ ಹೇಳುತ್ತಿ ರಲಿಲ್ಲವೇ?" ಎಂದನು.

"ಬಾಲನೇ! ನೀನು ಯುದ್ಧರಂಗಕ್ಕೆ ಹೋಗಬೇಡವೆನ್ನುವದಿಲ್ಲ. ಆದರೆ ನನ್ನ ಅಂತಃಕರಣವೇ ಆ ಶಬ್ದವನ್ನುಚ್ಚರಿಸುವದಕ್ಕೆ ಅಡ್ಡಿ ಮಾಡುತ್ತಿದೆ. ನಿಮ್ಮ ನಿಶ್ಚಯವು ಹಾಗಿದ್ದರೆ, ಬಾಲರೇ! ಈ ಶಸ್ತ್ರಗಳನ್ನು ತೆಗೆದುಕೊಳ್ಳಿ. ರಣಭೂ ಮಿಗೆ ಹೋಗಿರಿ. ನಿಮಗೆ ನಿಮ್ಮ ಮಾತೆಯರ ಪೂರ್ಣಾಶೀರ್ವಾದವಿದೆ! ಶತ್ರು ವಿಗೆ ಹೆದರಿ ಓಡಿಹೋಗದಿರಿ! ಪ್ರಾಣಾಂತ್ಯದಲ್ಲಿಯೂ ರಣಭೂಮಿಗೆ ಬೆನ್ನು ತೋರಿಸಬೇಡಿರಿ! ಈಶ್ವರನು ನಿಮ್ಮನ್ನು ರಕ್ಷಿಸಲಿ!" ಎಂದು ಆ ಮಾತೆಯು ಆಶೀರ್ವದಿಸಿದಳು.

"ಜನನಿಯರೇ! ನೀವು ಸ್ವಲ್ಪವೂ ಚಿಂತಿಸದಿರಿ. ನಾವು ನಿಮ್ಮ ಸ್ತನ್ಯಪಾ ನಮಾಡಿದ್ದೇವೆ. ಆ ದುಗ್ಧದ ಉಪಯೋಗವನ್ನು ಮಾಡುವೆವು. ರಣರಂಗಕ್ಕೆ ಹೋಗಿ ವೈರಿಗಳ ಶಿರಗಳನ್ನು ಹಾರಿಸಿ ಹಾಹಾಕಾರವನ್ನುಂಟುಮಾಡುವೆವು." ಎಂದು ಹೇಳಿ ಆ ಕುವರರು ಹೊರಟು ಹೋದರು. ಕ್ಷತ್ರಿಯ ವೀರರೆಲ್ಲರೂ ಜಿಜ್ಞಾಸರಾಗಿ ನಿಂತಿದ್ದರು.

ಆ ಬಾಲನ ಜನಕನು ಅವನ ಹತ್ತಿರ ಬಂದು ಅವನಂ ತಡೆದು ಪ್ರೇಮದಿಂದ,—“ಬಾಲನೇ! ಸ್ವಲ್ಪ ಧೈರ್ಯವನ್ನು ಹಿಡಿ. ರಣಭೂಮಿಗೆ ನಾವೂ ಹೋಗತಕ್ಕವರಾಗಿರುತ್ತೇವೆ. ನಾವೇ ಮುಂದೆ ಹೋಗುವೆವು. ಯಾವಾಗ ನಾವು ವೈರಿಯ ಶಸ್ತ್ರಗಳಿಂದ ಗಾಯ ಹೊಂದುವೆವೋ ಆಗ ನೀವು ಶತೃಗಳ ಮೇಲೆ ಬಿದ್ದು ನಿಮ್ಮ ಹಗೆಯನ್ನು ತೀರಿಸಿಕೊಳ್ಳಿರಿ.” ಎಂದನು

ಈರೀತಿಯಾಗಿ ಎಲ್ಲವೂ ನಡೆಯುವುದಕ್ಕೆ ವಿಲಂಬವಾದ್ದರಿಂದ ಗುಲಾಬಸಿಂಗನು ಲಲನೆಯರನ್ನು ಕುರಿತು —“ಕ್ಷತ್ರಿಯವೀರಲಲನೆಯರೇ! ಧೈರ್ಯಹೊಂದಿರಿ. ವೀರನಾರಿಯರಿಗೆ ಯೋಗ್ಯವಾದ ಕರ್ತವ್ಯವನ್ನು ಮಾಡಿರಿ. ಸಂಕಟಕಾಲದಲ್ಲಿ ಹೀಗೆ ನಿರುತ್ಸಾಹಿಗಳಾಗಿ ಹೆಚ್ಚು ಸಂಕಟವನ್ನುಂಟುಮಾಡಿಕೊಳ್ಳಬಿರಿ! ಕೇಳಿರಿ!! ದುರ್ಗದ ಹೊರಭಾಗದಲ್ಲಿ ಯವನರ ಗರ್ಜನೆಯು ಕೇಳಿಬರುತ್ತಿದೆ. ಮತ್ತೆ ಕೆಲವರು ನಮ್ಮನ್ನು ದೂಷಿಸುತ್ತಿದ್ದಾರೆ. ಹೆಚ್ಚುಕಾಲ ಈರೀತಿ ದುರುತ್ತರವನ್ನು ಹೇಳಿಸಿಕೊಳ್ಳಲು ನಾವು ಆಸ್ಪದ ಕೊಡುವುದು ನಮಗುಚಿತವಲ್ಲ. ನೀವು ನಿಮ್ಮ ನಿಮ್ಮ ಪ್ರಿಯತಮರನ್ನಾಲಿಂಗಿಸಿ ತತ್ಪರರಾಗಿರಿ. ಹಾಗಾದರೆ, ನಾವೂ ರಣಭೂಮಿಗೆ ಹೋಗುವೆವು.” ಎಂದು ತನ್ನ ಕತ್ತಿಯನ್ನು ಒರೆಯಿಂದ ಹೊರಕ್ಕೆ ತೆಗೆದನು.

ಗುಲಾಬಸಿಂಗನ ಪತ್ನಿಯಾದ ಕಮಲಿನಿಯು ಅಂತ್ಯಕಾಲವನ್ನು ತಿಳಿದು ಲಜ್ಜೆಯನ್ನು ಬಿಟ್ಟು ಗುಲಾಬಸಿಂಗನ ಹತ್ತಿರ ಬಂದು ಅವನ ಹೆಗಲಿನಮೇಲೆ ತನ್ನ ತಲೆಯನ್ನಿಟ್ಟು ಪ್ರೇಮಾಶ್ರುವನ್ನು ಸುರಿಸುತ್ತಾ,—“ನಾಥರೇ! ಒಂದುಕ್ಷಣ ನಿಲ್ಲಿರಿ! ನಿಮ್ಮ ಸುಖಕರವಾದ ಸಹವಾಸವನ್ನು ನನಗೊಂದುಬಾರಿ ಕೊಡುವರಾಗಿರಿ! ನಿಮ್ಮ ಮುಖದರ್ಶನದಿಂದುಂಟಾಗುವ ಆನಂದವು ನನಗೆ ಅತ್ಯಂತ ಸುಖಪ್ರಾಪ್ತವಾದೀತು! ತಮ್ಮ ಮುಂದೆಯೇ ನಾನು ಹೋಗುವೆನು. ಮತ್ತೆ ತಮ್ಮ ದಾರಿಯನ್ನು ನೋಡುತ್ತಿರುವೆನು. ಹೃದಯೇಶ್ವರರೇ! ನಿಲ್ಲಿ. ನೀವು ಆನಂದದಿಂದ ಯುದ್ಧಭೂಮಿಗೆ ನಡೆಯಿರಿ. ತಮಗೆ ಜಯವಾಗಲಿ! ಜಯಜಗದಂಬೆ!” ಎಂದು ಹೇಳಿ. ಕಮಲಿನಿಯು ತನ್ನ ಪತಿಯನ್ನು ದೃಢವಾಗಿ ಆಲಿಂಗಿಸಿ ಸ್ನೇಹಭರಿತ ದೃಷ್ಟಿಯಿಂದ ಅವನ ಮುಖವನ್ನು ನಿರೀಕ್ಷಿಸುತ್ತಿದ್ದಳು.

ಬಹಳ ಹೊತ್ತಾಯಿತೆಂದು ತಿಳಿದು ವೀರನಾರಿಯಾದ ಪದ್ಮಿನಿಯು ಸ್ತ್ರೀಯರನ್ನು ಕುರಿತು,—“ನನ್ನ ಶೂರರಾದ ಆರ್ಯಭಗಿನಿಯರೇ! ಈ ಕಾಲದಲ್ಲಿ ಶೋಕಬದ್ಧರಾಗಬೇಡಿರಿ. ನೀವೆಲ್ಲರೂ ರಾಜಪುತ್ರ ಸ್ತ್ರೀಯರಾಗಿದ್ದೀರಿ ವೀರನಾರಿಯರಾಗಿದ್ದೀರಿ. ಬಲವಾಗಿ ಕಾದುವವರ ಜನನನಿಯರಾಗಿದ್ದೀರಿ! ನಿಮಗೆ ಅನಾರ್ಯರಂತೆ ಮೋಹವೆಂದಿಗೂ ಉಂಟಾಗುವದಿಲ್ಲ. ನಮ್ಮ ಸೌಭಾಗ್ಯವು ವೈರಿಗಳಿಂದ ಹರಣವಾಗುವದಕ್ಕೆ ಪೂರ್ವವೇ ಈ ಚಿತಿಯಲ್ಲಿ ಭಸ್ಮವಾಗಬೇಕು ನಡೆಯಿರಿ; ವಿಲಂಬ ಮಾಡದಿರಿ!” ಎಂದು ಹೇಳಿ ಪದ್ಮಿನಿಯು ಘೃತಪಾತ್ರೆಯಿಂದ ಘೃತವನ್ನು ತನ್ನ ಕೈಯಿಂದಲೇ ತೆಗೆದು

ಕೊಂಡು ಅಗ್ನಿನಾರಾಯಣನ ಮೇಲೆ ಹಾಕಿದಳು. ಅಗ್ನಿಯು ವಿಶೇಷವಾಗಿ ಪ್ರದೀಪ್ತವಾಯಿತು. ಕೂಡಲೇ ಒಬ್ಬ ಸ್ತ್ರೀಯು ಭಯಭೀತಳಾಗಿ ಹಿಂದಿರುಗ ಲಾರಂಭಿಸಿದಳು. ಅವಳ ಕೈಯನ್ನು ಹಿಡಿದು ಪದ್ಮಿನಿಯು—"ಭಗಿನಿಯೇ! ಹಿಂದಿರುಗುವೆಯಾ? ರಾಜಪುತ್ರಕುಲಕ್ಕೆ ಕಲಂಕವನ್ನುಂಟುಮಾಡುವ ವಿಚಾರ ಮಾಡುವಿಯಾ? ಮೃತ್ಯು ವಿನಹಾ ಬೇರೆ ಉಪಾಯವು ನಮಗಿಲ್ಲ. ನಡೆ." ನಾನೂ ನಿನ್ನೊಡನೆ ಬರುವೆನು. ಎಂದು ಅವಳನ್ನು ಕರೆದುಕೊಂಡು ಚಿತಾಪ್ರಜ್ವಲಿತವಾದ ಗುಹೆಯ ಬಾಗಲಿಗೆ ಹೋಗಿ ಉಚ್ಚಸ್ವರದಿಂದ—"ಜಯ ಜಯ ಮಹಾಕಾಳೀ! ಜಯ ಜಗದಂಬೆ!" ಎಂದು ಹೇಳುತ್ತಾ ಒಳಕ್ಕೆ ಪ್ರವೇಶಿಸಲಾರಂಭಿಸಿದಳು. ಈ ರೀತಿಯಾಗಿ ಎಲ್ಲವೂ ನಡೆಯುವದಕ್ಕೆ ಆ ದಿನ ಒಂದು ಪ್ರಹರವು ಕಳೆದುಹೋಯಿತು. ಪದ್ಮಿನಿಯ ಧೈರ್ಯವನ್ನು ನೋಡಿ ಇತರರು ನಾರಿಯರ ಹೃದಯದಲ್ಲೂ ಆವೇಶಸಂಚಾರವಾಗಿ, "ಜಯ ಮಹಾಕಾಳಿ!" ಎನ್ನುತ್ತ ಆ ಕಾಲದಲ್ಲಿ ಚಿತ್ತೂರಿನ ನಾರಿಯರೆಲ್ಲರೂ ಅಗ್ನಿಯಲ್ಲಿ ಬಿದ್ದು ಭಸ್ಮೀಭೂತರಾದರು. ಅಗ್ನಿ ಜ್ವಾಲೆಯು ರಾಜಪುತ್ರರಮಣಿಯರ ಗುಣವನ್ನು ಹಾಡುತ್ತಾ ಗಗನಮಂಡಲಕ್ಕೆ ಪ್ರವೇಶಿಸಲಾರಂಭಿಸಿತು! ಸ್ವರಾಜನಿಷ್ಠೆ, ಸ್ವಧರ್ಮಶ್ರದ್ಧೆ, ಮಾತೃಭೂಮಿಯ ಅಭಿಮಾನಗಳಿಗಾಗಿ ಉಂಟಾದ ಈ ರೀತಿಯನ್ನು ನೋಡಿ ಯಾರ ಹೃದಯವು ವಿದೀರ್ಣವಾಗದು? ಗುಹೆಯ ಮಧ್ಯದ ಚಿತಿಯಲ್ಲಿ ತಮ್ಮ ಮಾತೆ, ಭಗಿನಿ, ಪತ್ನಿ, ಮಕ್ಕಳು ಇವರು ಭಸ್ಮವಾಗುವುದನ್ನು ನೋಡಿ ಶೂರರಾದ ರಾಜಪುತ್ರರ ಹೃದಯದಲ್ಲಿ ಕ್ಷಣಿಕವಾದ ಸಂಸಾರ ಮೋಹವು ಸಂಚರಿಸಿತು. ಅವರ ನೇತ್ರಗಳಿಂದ ಅಶ್ರುವು ಪ್ರವಹಿಸಿತು. ಸಂಸಾರವು ಶೂನ್ಯವಾಗಿ ಕಾಣಿಸಿತು. ಎಲ್ಲಾ ಕಡೆಗಳಲ್ಲಿಯೂ ಅಂಧಕಾರದ ಭೀಷಣಛಾಯೆಯು ದೃಗ್ಗೋಚರವಾಯಿತು. ಅವರಿಗೆ ಭ್ರಮೆಯುಂಟಾಯಿತು. ಅವರು ಎಂತಹ ದುಃಖಸಾಗರಮಗ್ನರಾಗಿದ್ದರೆಂದರೆ, ಅವರಿಗೆ ತಾವು ಹೇಗೆ ಬದುಕಿರುವೆವೆಂಬ ಎಚ್ಚರಿಕೆಯೂ ಇಲ್ಲವಾಗಿತ್ತು! ಹೀಗೆ ಶೋಕದಿಂದ ಬಹು ಹೊತ್ತು ಹೋದಮೇಲೆ ಅವರ ಆ ಮೋಹನಿದ್ರೆಯು ಲೋಪಿಸಿತು. ಭೀಮಸಿಂಗನು ಈ ಕೆಳಗಿನ ಉದ್ಗಾರವನ್ನು ತೆಗೆದನು.

"ಈಗ ನಮ್ಮ ಸಂಸಾರ ರೂಪಿಯಾದ ಮಾಯೆಯು ನಾಶವಾಯಿತು. ಇದರಿಂದ ರಣಮಧ್ಯದಲ್ಲಿ ನಮಗೆ ವಿಜಯ ಪ್ರಾಪ್ತಿಯಾದರೂ ನಾವು ಬದುಕಿರುವುದು ನಿಷ್ಪ್ರಯೋಜನವುಳ್ಳದ್ದು. ಆದ್ದರಿಂದ ವೀರ ನರರೇ! ನಡೆಯಿರಿ. ಜಯ ಅಥವಾ ಅಪಜಯವೆಂಬ ವಿಚಾರವನ್ನು ಮನಸ್ಸಿನಲ್ಲಿಟ್ಟುಕೊಳ್ಳಬೇಡಿರಿ; ಈಗ ನಮಗೆ ಸ್ವರ್ಗದಲ್ಲಿ ವಿಜಯವುಂಟಾಗಿಯೇ ಆಗುವದು."

ಮಹಾರಾಣಾ ಲಕ್ಷ್ಮಣಸಿಂಹನು ನಿಟ್ಟುಸಿರನ್ನು ಬಿಟ್ಟು ಎಲ್ಲರನ್ನೂ ಕುರಿತು, "ನನ್ನ ಇಚ್ಛೆಯೂ ಇದೇನೇ!" ಎಂದು ಹೇಳಿದನು.

ತತ್‌ಕ್ಷಣವೇ ರಣವಾದ್ಯಕಿತ್ಕರಂಭಿಸಿತು, ರಾಜಪುತ್ರರೆಲ್ಲರೂ ರಣಭೂಮಿಗೆ ಹೊರಟರು. ವಾದ್ಯಗಳು ಬಾರಿಸಲ್ಪಡುತ್ತಿದ್ದವು ಭಟ್ಟಂಗಿಗಳೂ ಚಾರಣರೂ ಶೌರ್ಯ ವರ್ಧಕಗಳಾದ ಕವನಗಳನ್ನು ಮಾಡಿ ಹೇಳುತ್ತಿದ್ದರು. ವೀರಶ್ರೀಯಿಂದ ಉನ್ಮತ್ತರಾದ ಕ್ಷತ್ರಿಯ ವೀರರು ದುರ್ಗದ್ವಾರಕ್ಕೆ ಬಂದು ಸೇರಿದರು ದ್ವಾರವನ್ನು ತೆರೆಯುವದಕ್ಕೆ ಸಿದ್ಧರಾಗುತ್ತಿದ್ದರು. ಇಷ್ಟರಲ್ಲಿ ಲಕ್ಷ್ಮಣಸಿಂಹನು,— "ವಾದ್ಯ ಧ್ವನಿಗಳನ್ನು ನಿಲ್ಲಿಸಿರಿ!" ಎಂದನು. ಕೂಡಲೆ, ವಾದ್ಯಗಳ ಶಬ್ದವಿಲ್ಲದೆ ನಿಶ್ಶಬ್ದವಾಯಿತು ಪುನಃ ರಾಣನು,—"ವೀರರೇ! ನಿಲ್ಲಿರಿ ಈಗಲೂ ಅತ್ಯಂತಾವಶ್ಯಕವಾದ ಕಾರ್ಯವೊಂದು ಉಳಿದಿದೆ. ತಮ್ಮೆಲ್ಲರ ಅನುಮತಿಯಾದರೆ ಅದನ್ನು ಮಾಡಬೇಕಾಗಿ ಯೋಚಿಸಿದ್ದೇನೆ." ಎಂದನು. ಆಗ ಸರ್ವರೂ ತಮ್ಮ ಇಚ್ಛೆಗೆ ನಾವು ಅಧೀನರಾಗಿದ್ದೇವೆಂದು ಸಮ್ಮತಿಕೊಟ್ಟರು.

ಸರ್ವರ ಅನುಮತಿಯಾದೊಡನೆಯೇ ಮಹಾರಾಣನು ಹೇಳಿದ್ದೇನಂದರೆ:— "ನನ್ನ ಜ್ಯೇಷ್ಠಪುತ್ರನಾದ ಅರಿಸಿಂಹನ ಮಗ ಹಮ್ಮೀರನನ್ನೂ ನನ್ನ ಎರಡನೆಯ ಕುವರನಾದ ಅಜಯಸಿಂಹನನ್ನೂ ಇಲ್ಲಿಗೆ ಕರೆದುಕೊಂಡು ಬನ್ನಿ." ಎಂದನು. ಕೂಡಲೇ ಅಜಯ ಹಮೀರರು ರಾಣನ ಹತ್ತಿರಕ್ಕೆ ಬಂದು,—"ತಂದೆಯವರೇ ಏನಪ್ಪಣೆ? ಎಂದು ಕೇಳಿದರು.

ಲಕ್ಷ್ಮಣಸಿಂಹ:—ನನ್ನಾಜ್ಞೆಯನ್ನು ಮೀರುವುದಿಲ್ಲವೋ?

ಅಜಯಸಿಂಹ:—"ಎಂದಿಗೂ ಇಲ್ಲ." ಪಿತ್ರಾಜ್ಞೋಲ್ಲಂಘನೆಯು ಆಜ್ಞಾಧಾರಕರಾದ ಪುತ್ರರಿಂದ ಎಂದಿಗೂ ಆಗುವುದಿಲ್ಲ. ಆದರೆ, ಈಗ ತಾವು ನಮಗೆ ಯುದ್ಧಕ್ಕೆ ಹೋಗಬೇಕಾಗಿ ಆಜ್ಞಾಪಿಸಬಹುದೆಂದು ತಿಳಿಯುತ್ತೇನೆ. ಹಾಗಿದ್ದರೆ, ನಾನು ಕ್ಷಣಕಾಲವೂ ವಿಲಂಬ ಮಾಡದೆ ರಣರಂಗಕ್ಕೆ ಹೋಗಲು ಸಿದ್ಧನಾಗಿದ್ದೇನೆ. ತಮ್ಮ ಅಪ್ಪಣೆಯು ಶಿರಸಾಮಾನ್ಯವಾದುದಾಗಿದೆ.

ಮಹಾರಾಣಾ:—ಧನ್ಯ ಪುತ್ರನೇ! ಧನ್ಯ!! ಕ್ಷತ್ರಿಯ ರಾಜಪುತ್ರರ ಮುಖದಿಂದ ಇಂತಹ ಉದ್ಗಾರವೇ ಹೊರಡತಕ್ಕದ್ದು! ಆದರೆ, ಜಯಸಿಂಹ! ನನ್ನ ವಿಚಾರವು ನಿನ್ನನ್ನು ರಣಭೂಮಿಗೆ ಕರೆದುಕೊಂಡು ಹೋಗುವದಲ್ಲ; ಆದರೆ, ನೀನು ರಣಭೂಮಿಯನ್ನು ಬಿಟ್ಟು ಇಲ್ಲಿಂದ ಎಲ್ಲಿಗಾದರೂ ಹೊರಡಬೇಕು. ನಿನ್ನ ಪ್ರಾಣರಕ್ಷಣೆ ಮಾಡಿಕೊಳ್ಳಬೇಕು. ಇದೇ ನಾನು ನಿನಗೆ ಕೊಡುವ ಆಜ್ಞೆಯಾಗಿದೆ!

ಪಿತ್ರಾಜ್ಞೆಯನ್ನು ಕೇಳಿದೊಡನೆಯೇ ಅಜಯಸಿಂಹನು ಆಶ್ಚರ್ಯ ಚಕಿತನಾಗಿ,— "ಅಪ್ಪಾಜಿಯವರೇ! ತಾವು ನನ್ನನ್ನು ರಣಭೀರುವೆಂದು ತಿಳಿದಿರಾ? ಮೊದಲು ಯುದ್ಧಕ್ಕೆ ಹೋಗುವಂತೆ ಮನಸ್ಸನ್ನು ಹುಟ್ಟಿಸಿ ಈಗ ಅಡ್ಡಿಮಾಡುತ್ತಿರುವಿರಿ! ಯೋಗ್ಯರೀತಿಯಿಂದ ನೋಡಿದರೆ, ಇದು ನನಗೆ ಅಪಮಾನಕರವಾಗಿದೆ. ಈ ಜಗತ್ತಿನಲ್ಲಿ ನಾನು ನಗೆಗೀಡಾಗಬೇಕೆಂದು ತಮ್ಮಿಚ್ಛೆಯಿದೆಯೋ? ಹಾಗಿದ್ದರೆ ಉಪಾಯವಿಲ್ಲ." ಎಂದು ವಿನ್ನವಿಸಿದನು.

ರಾಣ :— ಅಜಯಸಿಂಹ! ನೀನು ನನ್ನಾಜ್ಞೆಯನ್ನು ಕೇಳಿ ಸಂತಪ್ತನಾದೀಯೆ; ಎಂದು ತಿಳಿದೇ ನಾನು ನಿನ್ನನ್ನು ಮೊದಲು,—"ನನ್ನಾಜ್ಞೆಯನ್ನು ಮೀರು ವುದಿಲ್ಲವೆ?" ಎಂದು ಕೇಳಿದನು. ನಿನ್ನ ಶೌರ್ಯ ವಿಷಯದಲ್ಲಿ ನನಗೆ ಪೂರ್ಣವಾದನಂಬಿಕೆ ಇದೆ ಆದರೆ, ನೀನು ರಣಭೂಮಿಯನ್ನು ತ್ಯಾಗ ಮಾಡುವದಕ್ಕೆ ಒಂದು ಅಂತಿಮಹೇತುವಿದೆ.

ಅಜಯಸಿಂಹ!—(ಆತುರದಿಂದ) ಆ ಹೇತುವಾವುದು.

ರಾಣನು'—"ಚೆನ್ನಾಗಿ ಲಕ್ಷ್ಯವಿಟ್ಟು ಕೇಳು. ಈಗ ನಾವು ಯುದ್ಧಕ್ಕೆ ಹೋಗುವೆವು. ನಮ್ಮ ನಾಶವಾದಬಳಿಕ ನಮ್ಮ ಈ ಮಾತೃಭೂಮಿಯು ಯವನರ ಅಧಿಕಾರ ರೂಪವಾದ ಕಾರಾಗೃಹದಲ್ಲಿ ಬಿದ್ದೀತು. ಮೇವಾಡದ ಸ್ವಾತಂತ್ರ್ಯ ಸೂರ್ಯನು ಮೇಘಾಚ್ಛಾದಿತನಾದಾನು! ಈ ಮೇವಾಡಕ್ಕೆ ಭೂಷಣವಾದ ಚಿತ್ತೂರು ನಗರವು ಈವರೆಗೆ ಸ್ವತಂತ್ರವಾಗಿಯೂ, ವೀರಕ್ಷತ್ರಿಯರ ನಿವಾಸಸ್ಥಾ ನವಾಗಿಯೂ ಇತ್ತು ಯಾವ ಸ್ಥಳದಲ್ಲಿ ನಾವು ಬಾಲ್ಯದಿಂದ ದೊಡ್ಡವರಾ ದೆವೋ; ಯಾವಸ್ಥಳದಲ್ಲಿ ವೀರಮಾತೆಯ ಸ್ತನ್ಯಪಾನಮಾಡಿ ವೀರಪುರುಷರ ಶೌರ್ಯವೃತ್ತಾಂತವನ್ನು ಕೇಳಿ ವೀರನರಾದೆವೋ; ಆ ಮಾತೃಭೂಮಿಯು ಸ್ವಲ್ಪ ಕಾಲದಲ್ಲಿಯೇ ಯವನರ ಕೈವಶವಾಗುವದು. ಈ ವಿಚಾರದಿಂದ ನನ್ನ ಅಂತಃಕ ರಣವು ನೀಳಾಗುತ್ತಿದೆ; ಆದರೆದೂರದೃಷ್ಟಿಯಿಂದ ನಾನೊಂದು ವಿಷಯವನ್ನು ನಿಶ್ಚಯಮಾಡಿರುವೆನು! ಅದರಿಂದ ನನಗೆ ಶಾಂತಿಯುಂಟಾದೀತು. ಆ ವಿಚಾ ರವೇನೆಂದರೆ'—ನಮ್ಮ ರಾಜಕುಲದಲ್ಲಿ ಯಾವನಾದರೊಬ್ಬ ಪುರುಷನು ಜೀವಿ ಸಿದ್ದರೆ, ಆತನು ಯಾವದಾದರೊಂದು ಕಾಲದಲ್ಲಿ ಈ ಹಗೆಯನ್ನ ತೀರಿಸಿಕೊಂ ಡಾನು. ಚಿತ್ತೂರಿನ ಸ್ವಾತಂತ್ರ್ಯವು ಪುನಃ ಸ್ಥಾಪನೆಯಾದೀತು. ಈ ಹೇತು ವನ್ನು ಅಂತಃಕರಣದಲ್ಲಿಟ್ಟೇ ಸ್ವವಂಶ ರಕ್ಷಣೆಗಾಗಿಯೇ ನಾನು ನಿನ್ನ ಜೇಷ್ಠ ಭ್ರಾತೃವಾದ ಅರಿಸಿಂಹನ ಪುತ್ರನಾದ ಹಮ್ಮೀರನನ್ನು ನಿನ್ನ ಸ್ವಾಧೀನಮಾಡು ತ್ತೇನೆ. ನನ್ನ ಮನೋದೇವತೆಯು ಈ ಹಮ್ಮೀರನಿಂದ ಚಿತ್ತೂರಿನ ಉದ್ಧಾರವಾ ದೀತೆಂದು ಹೇಳುವದು ಈ ಬಾಲಕನೊಡನೆ ಹೊರಟು ಯಾವದಾದರೊಂದು ಅಜ್ಞಾತಸ್ಥಳದಲ್ಲಿರು ನೀನು ಮಾತೃಭೂಮಿಯ ಪುತ್ರನಾದ್ದರಿಂದ ಅವಳ ಉದ್ಧಾ ರಾರ್ಥವಾಗಿ ಯಾವ ಉಪಾಯ ಮಾಡಬೇಕೆಂಬ ಚಿಂತೆಯಲ್ಲಿ ಆಯಸ್ಸನ್ನು ಕಳೆ. ಪ್ರತಿಯೊಬ್ಬ ಆರ್ಯನೂ ತನ್ನ ವಂಶರಕ್ಷಣೆಯನ್ನು ಮಾಡಬೇಕೆಂದು ನಮ್ಮ ಧರ್ಮಶಾಸ್ತ್ರದಲ್ಲಿ ಹೇಳಿದೆ. ಆದ್ದರಿಂದ ಯಾರು ನಿರ್ವಂಶರಾಗುತ್ತಾರೋ ಮತ್ತು ಯಾರ ಅನಂತರದಲ್ಲಿ ಶ್ರಾದ್ಧಕರ್ತೃವಿರುವುದಿಲ್ಲವೋ ಅವರ ಪಿತೃಗಳಿಗೆ ದುರ್ಗತಿ ಯುಂಟಾಗುವುದು. ನೀನು ತಿಳಿವಳಿಕೆಯುಳ್ಳ ಜಾಣನಾಗಿದ್ದೀಯೆ. ನಿನಗೆ ಹೆಚ್ಚಾಗಿ ಹೇಳಬೇಕಾಗಿಲ್ಲ. ಯುದ್ಧಮುಖದಲ್ಲಿ ಮರಣವುಂಟಾದರೆ ಯಾವ ಕೀರ್ತಿ ದೊರೆಯುವುದೋ ಅದಕ್ಕಿಂತಲೂ ಅತಿಶಯವಾದ ಕೀರ್ತಿಯೂ ಗೌರ ವವೂ ರಾಜವಂಶವನ್ನು ರಕ್ಷಿಸಿ, ಆ ವಂಶೀಯನನ್ನು ಸಿಂಹಾಸನದಲ್ಲಿ ಕುಳ್ಳಿರಿಸಿ

ರಾಜತಿಲಕನನ್ನಾಗಿ ಮಾಡುವುದರಿಂದ ನಿನಗೆ ಉಂಟಾದೀತು! ನೀನು ಮುಂದೆ ರಾಜ್ಯಲೋಭಿಯಾಗಬೇಡ. ಇಷ್ಟೇ ನಾನು ಹೇಳತಕ್ಕದ್ದಾಗಿದೆ. ಹಮ್ಮೀರ ನನ್ನೇ ರಾಜನನ್ನಾಗಿ ಮಾಡು. ಏಕೆಂದರೆ,—ಅವನು ರಾಜಪುತ್ರನಾಗಿಯೂ, ಮೇವಾಡದ ಸಿಂಹಾಸನಾಧಿಕಾರಿಯಾಗಿಯೂ ಇರುತ್ತಾನೆ. ಹೋಗು. ಪರಮಾತ್ಮನು ನಿನ್ನನ್ನು ರಕ್ಷಿಸಲಿ!" ಎಂದು ಹೇಳಿದನು. ಈರೀತಿ ಹೇಳುವಾಗ ಅವನ ನೇತ್ರಗಳಿಂದ ಅಶ್ರುವರ್ಷವಾಗುತ್ತಿತ್ತು.

ಅಜಯಸಿಂಹನು,—"ಪೂಜ್ಯರಾದ ಅಪ್ಪಾಜಿಯವರೇ! ತಾವು ಈ ಮಹಾಕಾರ್ಯವನ್ನು ನನ್ನಮೇಲೆ ಬಿಟ್ಟು ನನ್ನ ಕೀರ್ತಿಯನ್ನು ವೃದ್ಧಿಮಾಡಿದ್ದೀರಿ. ನಾನು ಈ ಬಾಲಕನಲ್ಲಿ ನನ್ನ ಪ್ರಾಣಕ್ಕಿಂತಲೂ ಹೆಚ್ಚಾಗಿ ಪ್ರೀತಿಯನ್ನು ತೋರಿಸೇನು! ಅವನಿಗೆ ಯುದ್ಧವಿದ್ಯೆಯ ಶಿಕ್ಷಣೆಯನ್ನು ಕೊಟ್ಟು ನನ್ನ ಕೈಯಿಂದಲೇ,—ನಾನು ಜೀವಿಸಿದ್ದರೆ—ಅವನನ್ನು ಸಿಂಹಾಸನದಲ್ಲಿ ಕೂರಿಸುವೆನು. ತಾವು ನನ್ನಲ್ಲಿ ವಿಶ್ವಾಸವಿಡಿ. ನಾನೆಂದಿಗೂ ರಾಜ್ಯಾಪಹಾರ ಮಾಡುವುದಿಲ್ಲ. ನೀವು ಸ್ವಲ್ಪವೂ ಚಿಂತಿಸದಿರಿ.

ಮಹಾರಾಣ:—ನನಗೆ ನಿನ್ನಲ್ಲಿ ವಿಶ್ವಾಸವಿದೆ. ಏಕಲಿಂಗಸ್ವಾಮಿಯು ನಿನ್ನ ಮನೋರಥವನ್ನು ಪೂರ್ಣಮಾಡಲೆಂಬುದೇ ನಾನು ಮಾಡುವ ಆಶೀರ್ವಾದವಾಗಿದೆ. ಈಗ ನೀನು ಹೋಗು. ನನ್ನ ಆಜ್ಞೆಯನ್ನು ಪಾಲಿಸು."

* ಅಜಯಸಿಂಹನು ಏನನ್ನೂ ಹೇಳದೆ ದುರ್ಗದ ಗುಪ್ತಮಾರ್ಗದಿಂದ ಹಮ್ಮೀರನೊಡನೆ ರಾಜಸ್ಥಾನದಲ್ಲಿರುವ ಮೇವಾಡದ ಪ್ರಸಿದ್ಧವಾದ 'ಕೇಲವಾಡ' ವೆಂಬ ಪ್ರಾಂತ್ಯಕ್ಕೆ ಪ್ರಯಾಣ ಮಾಡಿದನು.

ಅಜಯಸಿಂಹ ಹಮ್ಮೀರರು ಸುರಕ್ಷಿತವಾಗಿ ಹೊರಟುಹೋದಮೇಲೆ ರಾಜಪುತ್ರರು ಚಿತ್ತೂರು ದುರ್ಗದ ದ್ವಾರವನ್ನು ತೆರೆದು ರಣಘರ್ಜನೆ ಮಾಡುತ್ತಾ ಆ ಕೋಟೆಯ ಹೊರಗೆ ಬಂದರು. ಆಕಾಶದಲ್ಲಿ ಮಿಂಚು ಬೀಳುವಂತೆ ಯವನ ಸೇನೆಯಮೇಲೆ ಬಿದ್ದು ಅಗಣಿತ ಯವನ ಸೇನೆಯನ್ನು ಸಂಹರಿಸಿದರು. ಅತುಲ ಶೌರ್ಯವನ್ನು ತೋರಿಸಿ, ರಣರಂಗದಲ್ಲಿ ಬೀಳಲಾರಂಭಿಸಿದರು! ಸಾಯಂಕಾಲದವರೆಗೆ ಈ ಮುತ್ತಿಗೆಯಲ್ಲಿ ಕಾದಿದ ರಾಜಪುತ್ರರೊಡನೆ ಚಿತ್ತೂರಿನ ಸ್ವಾತಂತ್ರ್ಯವೂ ಅಂತ್ಯವಾಯಿತು. ಚಿತ್ತೂರಿನ ದ್ವಾರಗಳು ಎಲ್ಲಾ ಕಡೆಗಳಲ್ಲೂ ತಡೆಯಿಲ್ಲದಂತಾದುವು. ಕಿಲ್ಲೆಯು ಮಾತ್ರ ಸ್ಥಿರವಾಗಿತ್ತು. ಆದರೆ ಅದರ ಭೋಕ್ತೃವೂ ರಕ್ಷಕನೂ ಇಲ್ಲವಾಯಿತು. ಶರೀರಗಳುಮಾತ್ರ ಬಿದ್ದಿದ್ದವು. ಪರಮಾತ್ಮನು ಪ್ರಮಾಣಮಾಡಿದ್ದನು. ಕ್ಷತ್ರಿಯರು ಅಗಣಿತವಾದ ವೈರಿ ಸೇನೆಯನ್ನು ಆಹುತಿ ತೆಗೆದುಕೊಂಡು ಚಕ್ರವರ್ತಿಯು ಪ್ರಾಣವನ್ನು ಬಿಟ್ಟರು.

---

* ಈ ಅಜಯಸಿಂಹನ ಮಗ [illegible] ಭೋಸ್ಲೆ [illegible] ವಂಶದ [illegible].

ಆದರೆ ದುಃಖವಾರ್ತೆ ಏನಂದರೆ,—ಗಾಯಹೊಂದಿದವರನ್ನು ಶುಶ್ರೂಷೆಮಾಡುವವರೂ, ಮೃತರಾದವರ ಶರೀರಗಳನ್ನು ದಹನ ಮಾಡತಕ್ಕವರೂ ಯಾರೂ ಅಲ್ಲಿರಲಿಲ್ಲ ! ಧರ್ಮ ಯುದ್ಧದ ಗಂಧವನ್ನೇ ತಿಳಿಯದ ಯವನ ಯೋಧರು ಕ್ಷತ್ರಿಯರ ಶವಗಳನ್ನು ದುರ್ದಶೆಯುಳ್ಳವುಗಳನ್ನಾಗಿ ಮಾಡುತ್ತಿದ್ದರು. ಅಲ್ಲಾವುದೀನನಿಗೆ ಈ ವಿಜಯದಿಂದ ಅತ್ಯಾನಂದವಾಯಿತು. ಪದ್ಮಿನಿಯ ಇಚ್ಛೆಯನ್ನು ಅಂತಃಕರಣದಲ್ಲಿಟ್ಟುಕೊಂಡು ಅವನು ಹಿಗ್ಗಿದನು ಅವನು ತನ್ನ ದಳವಾಯಿಯಾದ ಅಸಫ್‌ಖಾನನನ್ನು ಕರೆದುಕೊಂಡು ರಣರಂಗದಿಂದ ತಮ್ಮ ಸೈನಿಕರನ್ನು ಹಿಂದೆ ಬರಬೇಕೆಂದು ಆಜ್ಞಾಪಿಸಿದನು. ಗಾಯಪಟ್ಟವರಿಗೆ ಉಪಚಾರವನ್ನೂ ಸತ್ತವರನ್ನು ಅಲ್ಲಿಂದ ತೆಗೆದುಹಾಕುವ ವ್ಯವಸ್ಥೆಯನ್ನೂ ಕೂಟಿದಮಟ್ಟಿಗೆ ಬೇಗನೆ ಮಾಡಿಸಬೇಕೆಂದೂ ಆಜ್ಞಾಪಿಸಿದನು. ಏಕೆಂದರೆ, ತಾನು ಚಿತ್ತೂರು ದುರ್ಗದೊಳಕ್ಕೆ ಉತ್ಸವದಿಂದ ಹೋಗಬೇಕೆಂದು ಯೋಚಿಸಿದ್ದನು.

ಸುಲ್ತಾನನು,—“ಅಸಫಖಾನನೇ ! ಈ ಯುದ್ಧದಲ್ಲಿ ನೀನೂ ಇತರ ಸೇನಾಪತಿಗಳೂ ಬಹು ಸಾಹಸವನ್ನು ತೋರಿಸಿದ್ದೀರಿ. ಇದಕ್ಕಾಗಿ ನಾನು, ಸಂತೋಷಿಸಿದೆನು. ಪದ್ಮಿನಿಯನ್ನು ನನ್ನ ಜೀಬಿ (ರಾಣಿ) ಯನ್ನಾಗಿ ಮಾಡಿತೆ ಇತರ ರಾಜಪುತ್ರ ರಮಣಿಯರಲ್ಲಿ ನಿಮ್ಮ ಕೈಗೆ ಸಿಕ್ಕಿದವರನ್ನು ನಿಮ್ಮಿಚ್ಛೆಯಂತೆ ನಿಮ್ಮ ನಿಮ್ಮ ರಾಣಿವಾಸಗಳಲ್ಲಿಟ್ಟುಕೊಂಡು ರಾಣೀವಾಸಗಳನ್ನು ದೇದೀಪಮಾನಗಳಾಗಿ ಮಾಡಿರಿ. ಇದಕ್ಕಾಗಿ ನಾನು ಅಪ್ಪಣೆ ಕೊಟ್ಟಿದ್ದೇನೆ. ನನ್ನದ್ದಿಯೇನೂ ಇಲ್ಲ. ಹಾಗೆಯೇ ಲೂಟಿಯಲ್ಲಿ ಯಾವ ವಸ್ತುಗಳು ಸಿಕ್ಕುವವೋ ಅವೆಲ್ಲವೂ ನಿಮ್ಮ ಮತ್ತು ಸಿಪಾಯಿಗಳದಾಗಿವೆ ನನ್ನಾಜ್ಞೆಯನ್ನು ಸರ್ವರಿಗೂ ತಿಳಿಸಬೇಕು.” ಎಂದು ಆಜ್ಞಾಪಿಸಿ ; ತನ್ನ ಡೇರೆಯೊಳಕ್ಕೆ ಹೋಗಿ ಸಂಭ್ರಮದಿಂದ ಸುಗಂಧದ್ರವ್ಯಗಳನ್ನು ತನ್ನಂಗಕ್ಕೆ ಲೇಪಿಸಿಕೊಂಡು ಉತ್ತಮವಸ್ತ್ರಗಳನ್ನು ಧರಿಸಿದನು. ರಾತ್ರಿಯಾಯಿತು ಚಿತ್ತೂರೊಳಕ್ಕೆ ಹೋಗಲು ನಿಶ್ಚೈಸಿದನು. ಸೂರ್ಯೋದಯವಾಗುವವರೆಗೂ ತಡೆಯಲಿಲ್ಲ. ಏಕೆಂದರೆ, ಪದ್ಮಿನಿಯ ಪ್ರಾಪ್ತಿಗಾಗಿ ಶುದ್ಧ ಹುಚ್ಚನಾಗಿದ್ದನು ಕಾಮಾತುರರ ಸ್ಥಿತಿಯು ಎಂತಹುದಾಗಿರುತ್ತದೆ. ? ಇಂತಹರ ಅಂತಃಕರಣದಲ್ಲಿ ಭಯ, ಲಜ್ಜೆ, ಸಾರಾಸಾರವಿಚಾರಗಳು ಲೋಪಿಸಿರುತ್ತವೆ. ಸಾವಿರಾರು ಜನರು ಸತ್ತುಹೋಗಿರುವುದು ಅವನಿಗೆ ಸ್ವಲ್ಪವೂ ತಿಳಿದಿರಲಿಲ್ಲ. ಅವನು ಪದ್ಮಿನಿಯ ಧ್ಯಾನದಲ್ಲಿ ಲೀನನಾಗಿದ್ದನು. ಕೊನೆಗೆ ಮಧ್ಯರಾತ್ರಿಯ ಕಾಲದಲ್ಲಿ ಮುನ್ನೂರು ನಾನೂರು ಸೈನಿಕರೊಡನೆ ಸುಲ್ತಾನನು ಚಿತ್ತೂರು ದುರ್ಗದೊಳಕ್ಕೆ ಹೋಗುವದಕ್ಕೋಸ್ಕರ ಗುಡಾರದಿಂದ ಹೊರಟನು ರಾತ್ರಿಯಲ್ಲಿ ಅಂಧಕಾರವಾದ್ದರಿಂದ ಸಾವಿರಾರು ದೀವಟಿಗೆಗಳನ್ನು ತೆಗೆಸಿಕೊಂಡು ಬಂದನು. ಬೀದಿಗಳ ಮಧ್ಯದಲ್ಲಿ ಗಾಯಹೊಂದಿದವರೂ ಮೃತಸೈನಿಕರೂ ದೃಗ್ಗೋಚರರಾದರು. ನರಿಗಳ ಕೂಗುವಿಕೆಯು ಕೇಳುತ್ತಿತ್ತು. ಅನೇಕ ಹಿಂಸ್ರಕ ಪಶುಗಳ ಕೂಗುವಿಕೆಗೆ ಆರಂಭವಾಗಿತ್ತು ಆದರೆ, [illegible]

ನಾದ ಸುಲ್ತಾನನಿಗೆ ಈ ವಿಷಯದಲ್ಲಿ ಎಚ್ಚರವೇ ಇರಲಿಲ್ಲ. ಅವನು ದುರ್ಗಾಭಿಮುಖನಾಗಿ ಹೋಗುತ್ತಿದ್ದನು. ಚಿತ್ತೂರು ದ್ವಾರವು ತಡೆಯಿಲ್ಲದ್ದಾಗಿತ್ತು. ಇದರಿಂದ ಸುಲ್ತಾನನು ಅತ್ಯಾನಂದದಿಂದ ಕೋಟೆಯೊಳಕ್ಕೆ ಪ್ರವೇಶಿಸಿದನು.

ಪ್ರಕರಣ 36.

“ಹಾ ! ಏನಾಯಿತು ?”

ಚಿತ್ತೂರು ಭಸ್ಮೀಭೂತವಾಯಿತು.

“Remember me as you pass by,
As you are now so once was I.,
As I am now so you should be,
Prepare yourself to follow me!”

An Epitaph.

ಸು ಸುಲ್ತಾನ್ ಅಲ್ಲಾವುದೀನನು ಪದ್ಮಿನಿಗೋಸ್ಕರ ಮಧ್ಯರಾತ್ರಿಯಲ್ಲಿ ಚಿತ್ತೂರನ್ನು ಪ್ರವೇಶಿಸುವಂತಾಯಿತು. ದುರ್ಗದ ಮಧ್ಯಭಾಗಕ್ಕೆ ಅವನು ಹೇಗೆಹೇಗೆ ಹೋಗುತಿದ್ದನೋ ಹಾಗೆ ಹಾಗೆ ಆಶೆಯು ನಿರಾಶೆಯ ಸ್ವರೂಪವನ್ನು ತಳೆವಂತಾಯಿತು. ಯಾವ ದುರ್ಗಮಾರ್ಗವು ಒಂದುಕಾಲದಲ್ಲಿ ಅಂದರೆ,—ಪದ್ಮಿನೀದೇವಿಯ ಪ್ರತಿಬಿಂಬ ದರ್ಶನಾಕಾಂಕ್ಷೆಯಿಂದ ಪ್ರವೇಶಿಸುತಿದ್ದ ಕಾಲದಲ್ಲಿ,—ಆನಂದದಾಯಕವಾಗಿ ಕಾಣುತಿತ್ತೋ ಅದೇ ದುರ್ಗಮಾರ್ಗವು ಇಂದು ಸ್ಮಶಾನಭೂಮಿಯಂತೆ ಕಾಣಲಾರಂಭವಾಯಿತು! ಸುಲ್ತಾನನ ಪಾಪದೃಷ್ಟಿ ಸೋಕಿದ ಮಾತ್ರದಿಂದಲೇ ಚಿತ್ತೂರುದುರ್ಗದ ಸೌಂದರ್ಯವು ಭಸ್ಮೀಭೂತವಾಯಿತೆಂದು ಬೋಧೆಯು ಅವನ ಅನುಚರರಿಗಾಯಿತು. ಅನೇಕ ವೀರಪುತ್ರರನ್ನು ಪಡೆದು ವೀರಮಾತೆಯೆಂದೆನಿಸಿಕೊಂಡು, ವಂದಿಮಾಗಧಾದಿಗಳ * ಶೋಕಗಾನದಿಂದ ತೃಪ್ತಳಾಗುತ್ತ, ತನ್ನ ಪುತ್ರಿಯರ ಪಾತಿವ್ರತ್ಯವು

* “ನೀವು ಹೇಗೆ ಮುಂಪೆ ಮುಂದೆ ಹೋಗುವಿರೋ, ಹಾಗೆ ಹಾಗೆ ನನ್ನನ್ನು ಸ್ಮರಿಸಿಕೊಳ್ಳುತ್ತ ಹೋಗಿರಿ. ನೀವು ಈಗ ಹೇಗಿರುವಿರೋ ಹಾಗೆಯೇ ನಾನೂ ಒಂದು ಕಾಲದಲ್ಲಿದ್ದೆನು. ಈಗ ನಾನು ಹೇಗಿರುವೆನೋ ಹಾಗೆಯೇ ನೀವೂ ಒಂದಲ್ಲ ಒಂದುಕಾಲದಲ್ಲಿ ಆಗುವಿರಿ. ಆದುದರಿಂದ ನನ್ನನ್ನು ಅನುಸರಿಸಲು ತತ್ಪರರಾಗಿರಿ.” ಸ್ಮರಣಲೇಖ.

ಹಿಮೆಯಿಂದ ದರ್ಪಿತಳಾಗುತ್ತ, ಸಂತೋಷದಿಂದ ಇದ್ದ ಚಿತ್ತೂರು ಜನನಿಯು ಇಂದು ಬಹುದುಃಖದಿಂದ ಅಳುವಂತಾಯಿತು. ಯಾವ ಭೂಮಿಯಲ್ಲಿ ವೀರಾದಿ ವೀರರು ತಮ್ಮ ಆಯುಧಗಳಿಂದ ಶತ್ರುಗಳ ಶಿರವನ್ನು ಚಂಡಾಡುತಿದ್ದರೋ, ಆ ಭೂಮಿಯಲ್ಲಿಯೇ ಅವರ ಪ್ರೇತಗಳನ್ನೇ ನಾಯಿನರಿಗಳು ತಿತ್ತು ತಿನ್ನುಂತಾಯಿತು.

ಎಲ್ಲಾ ಅಂಗಡಿಗಳೂ ಮುಚ್ಚಿವೆ. ಎಲ್ಲಾ ಗೃಹಗಳೂ ಶೂನ್ಯ. ಎಲ್ಲಾ ರಸ್ತೆಗಳಲ್ಲಿಯೂ ಪ್ರೇತ. ಎಲ್ಲೆಲ್ಲಿಯೂ ರಕ್ತ. ಎಲ್ಲೆಲ್ಲಿಯೂ ನೀರವ. ದೇವಾಲಯಗಳ ಬಾಗಿಲುಗಳು ಹಾಕಿವೆ. ಅವುಗಳಲ್ಲಿ ಪ್ರಾಣತ್ಯಾಗ ಮಾಡಿಕೊಳ್ಳಲಾರದ ಕೆಲವು ವೃದ್ಧರು ಬಾಲರು ಮಾತ್ರ ಇರುವರು. ಇಷ್ಟಾದರೂ ಆ ಭೀಮಪುರುಷನಾದ ಸುಲ್ತಾನನ ಮನಸ್ಸಿನಲ್ಲಿ ಮಾತ್ರ ಪದ್ಮಿನಿಯ ಭ್ರಾಂತಿಯು ಮಾಯವಾಗಿರಲಿಲ್ಲ. ಅವನು ಹೇಳಿಕೊಂಡನು. “ಇಷ್ಟು ಜನಗಳು ಸತ್ತರೂ ಪದ್ಮಿನಿಯೊಬ್ಬಳು ದೊರೆತರೆ, ಸಾರ್ಥಕವೇಸರಿ. ಅವಳೆಲ್ಲಿ ಹೋದಾಳು ! ಅರಮನೆಯಲ್ಲಿಯೇ ಇರಬೇಕು !”

ಹಾ ! ಏನುಭ್ರಾಂತಿ? ಪಾತಿವ್ರತ್ಯವೇ ಪರಮಧರ್ಮವೆಂದು ತಿಳಿಯುವ ವೀರಕ್ಷತ್ರಿಯರಮಣಿಗೆ ಐಹಿಕಸಾಧನಗಳು ಅತಿ ಹೇಯಗಳೆಂಬುದನ್ನು ಆ ಪಾತಕಿ ಬಲ್ಲನೇನು ? ಕಾಮಾತುರನಿಗೆ ಮುಂದಿನ ಬುದ್ಧಿಯೆಲ್ಲಿ? ಮಂದಬುದ್ಧಿಯೇ ಅವನಿಗೆ ಶಾಶ್ವತಧನ !

ಯಾವ ಅರಮನೆಯಲ್ಲಿ ಪದ್ಮಿನಿಯ ಮುಖಚಂದ್ರನನ್ನು ನೋಡಿದ್ದನೋ ಆ ಅರಮನೆಗೆ ಹೋದನು. ಅದು ನಿರ್ಜನಪ್ರದೇಶವಾದ ಅರಣ್ಯದಂತೆ ಕಾಣಿಸಿತು. ದೀಪದ ಪ್ರಕಾಶವಿಲ್ಲ ; ಸ್ವಾಭಾವಿಕ ಸೌಂದರ್ಯವಿಲ್ಲ ; ಹೇಳುವರಿಲ್ಲ ; ಕೇಳುವರಿಲ್ಲ ; ಮಾನವಿಲ್ಲ ; ಮರ್ಯಾದೆಯಿಲ್ಲ ; ಏನೂ ಇಲ್ಲ. ಆದರೆ, ಯಾವುದೋ ಒಂದುವಿಧವಾದ ಭಯ. ಸುಲ್ತಾನನಿಗೆ ಭಯ, ವಿಸ್ಮಯ, ಖೇದಾದಿಗಳು ಒಮ್ಮೆಲೇ ಹುಟ್ಟಿದುವು. ಬುದ್ಧಿಯು ಭ್ರಮಿಸಿತು. ಅವನು ಕೂಗಿಕೊಂಡನು “ಪದ್ಮಿನಿ ! ಪದ್ಮಿನಿ ! ಈಗ ನೀನು ಎಲ್ಲಿರುವೆ? ಈ ನಿನ್ನ ಪ್ರಿಯದಾಸನಿಗೆ ಪ್ರತ್ಯುತ್ತರವನ್ನು ಕೊಡುವುದಿಲ್ಲವೇ ? ಹಾ ! ಪದ್ಮಿನಿ ? ! ನಾನು ನಿನಗೋಸ್ಕರ ಸಾವಿರಾರು ಪ್ರಾಣಿಗಳನ್ನು ರಣಾಂಗಣದಲ್ಲಿ ಆಹುತಿಕೊಟ್ಟೆನು ಹೀಗಿದ್ದರೂ ಏಕೆ ನನ್ನನ್ನು ತಿರಸ್ಕಾರಭಾವದಿಂದ ನೋಡುವೆ? ಇನ್ನು ತಿರಸ್ಕಾರವು ಬೇಡ. ಪದ್ಮಿನಿ ? ವಿಚಾರಮಾಡು. ಯಾರಲ್ಲಿ ಭಿಕ್ಷುಕನನ್ನಾಗಿಯೂ ಮಾಡಲು ಶಕ್ತಿಯಿರುವುದೋ, ಯಾರಲ್ಲಿ ಊರನ್ನು ಕಾಡಾಗಿಯೂ, ಕಾಡನ್ನು ಊರಾಗಿಯೂ ಮಾಡಲು ಸಾಮರ್ಥ್ಯವಿದೆಯೋ, ಯಾವನ ಆಜ್ಞೆಯಿಲ್ಲದೆ ಒಂದು ಪ್ರಾಣಿಯಾದರೂ ಚಲಿಸದೋ, ಯಾವನು ಭಾರತವರ್ಷದ ಅಲೀಶಾನ್ ಸುಲ್ತಾನ್ ಪಾದಷಹನೋ ಅಂತಹ ನಾನು ನಿನ್ನಲ್ಲಿ ಭಿಕ್ಷುಕನಾಗಿರುತ್ತೇನೆ. ಕೃಪೆ ಮಾಡು.

ಆಲಿಂಗನವನ್ನು ಕೊಟ್ಟು ಕೃತಾರ್ಥನನ್ನಾಗಿ ಮಾಡು. ಪದ್ಮಿನಿ, ಪದ್ಮಿನಿ'' ಎಂದು ಕೂಗಿಕೊಂಡನು.

"ಹೇ, ಕಂಗಾಲಿಯಾದ ಸುಲ್ತಾನನೆ! ಏನು ಬೊಗಳುವಿ? ನಿನಗೆ ಈ ಜನ್ಮದಲ್ಲಿ ಪದ್ಮಿನಿಯ ದರ್ಶನವು ಕೂಡ ಇನ್ನು ದುರ್ಲಭ. ತೃಷ್ಣಾತುರನಾದ ನಿನಗೆ ಸಾವಿರಾರು ಮಂದಿಯನ್ನು ನಾಶ ಮಾಡಿದ ಪಾಪವು ತಪ್ಪದೆ ಬಿಡದು. ನಿನ್ನಂತಹ ಪಾಪಿಯೇ ಲಕ್ಷಕನನ್ನು ಭಿಕ್ಷುಕನನ್ನಾಗಿಯೂ, ಭಿಕ್ಷುಕನನ್ನು ಲಕ್ಷಕನನ್ನಾಗಿಯೂ ಮಾಡಬಲ್ಲೆಯಾದರೆ ಆ ಪುಣ್ಯಸ್ವರೂಪನಾದ ಪರಮಾತ್ಮನೇನು ಮಾಡಬಲ್ಲನೆಂಬುದನ್ನು ಸ್ವಲ್ಪ ವಿಚಾರಮಾಡು! ನಿಶ್ಶಕ್ತ, ಜೀವನ್ಮೃತ; ಛೀ! ಮುಂದೆ ಹೋಗು; ಊರು ಮಧ್ಯದಲ್ಲಿ ಒಂದು ಗುಹೆಯಿರುವುದು. ಗುಹೆಯಲ್ಲಿ ಅಗ್ನಿನಾರಾಯಣನು ಪ್ರಜ್ವಲಿಸುತ್ತಿರುವನು ಆ ನಾರಾಯಣನಿಗೆ ನೀನು ಈಗ ಪದ್ಮಿನಿಗಾಗಿ ಆಹುತಿಯಾದರೆ ಮುಂದಣ ಜನ್ಮದಲ್ಲಿಯಾದರೂ ಪದ್ಮಿನಿಯ ದರ್ಶನವಾದೀತು! ಪಾಪಿ, ನಿನಗೆ ಇದನ್ನು ಹೇಳಬೇಕೆಂದೇ ನಾನು ಇದುವರೆಗೆ ಜೀವಿಸಿದ್ದೆನು. ಇನ್ನು ಪ್ರಾಣಗಳನ್ನು ಬಿಡುತ್ತೇನೆ.'' ಎಂದು ಯಾವುದೋ ಒಂದು ವ್ಯಕ್ತಿಯು ಹೇಳಿದಂತೆ ಕೇಳಿತು. ಮುಂದೆ ನಡೆದು ನೋಡುವುದರೊಳಗಾಗಿ ಆ ವ್ಯಕ್ತಿಯು ತನ್ನ ಹೇಳಿಕೆಯಂತೆ ಪ್ರಾಣಗಳನ್ನು ವಿಸರ್ಜಿಸಿ ಬಿಟ್ಟಿದ್ದುದು.

ಗುಹೆಯ ಕಡೆಗೆ ಹೊರಟನು. ಗುಹಾಮಧ್ಯದಲ್ಲಿ ಯಜ್ಞನಾರಾಯಣನು ತನ್ನ ಸಂಪೂರ್ಣ ಪ್ರಭೆಯನ್ನು ಪ್ರಕಾಶಗೊಳಿಸುತ್ತಲಿದ್ದನು. ಅನೇಕ ನಾರಿಯರ ದೇಹಗಳು ಸುಟ್ಟು ಬೂದಿಯಾಗಿದ್ದುವು ಮತ್ತೆ ಕೆಲವರ ದೇಹದಲ್ಲಿ ಅರ್ಧಭಾಗವು ಸುಟ್ಟು ಉಳಿದ ಅರ್ಧವು ಕಂದಿಹೋಗಿತ್ತು; ಅಂತು ಚಿತ್ತೂರು ಸ್ತ್ರೀಯರ ಪೈಕಿ ಒಬ್ಬರ ಪ್ರಾಣವಾದರೂ ಇರಲಿಲ್ಲ. ಮಹಾರಾಣನಾದ ಲಕ್ಷ್ಮಣಸಿಂಗನು ಮಾಡಿದ ಸ್ತ್ರೀಯಾಗವಿಧಿಯು ಮುಗಿದುಹೋಗಿತ್ತು.

ವಾಚಕವರ! ಆ ಯಾಗವು ನಡೆದ ದಿನವನ್ನೂ, ಸ್ಥಳವನ್ನೂ ಪರಮ ಪವಿತ್ರವೆಂದು ಅನೇಕ ಕ್ಷತ್ರಿಯರು ತಿಳಿದು ಈಗಲೂ ಪೂಜ್ಯಬುದ್ಧಿಯಿಟ್ಟಿರುವರು. ಆ ದಿನವನ್ನು ಪುಣ್ಯದಿನದಂತೆಯೂ, ಆ ಸ್ಥಳವನ್ನು ದೇವಾಲಯದಂತೆಯೂ ತಿಳಿದಿರುತ್ತಾರೆ. ಆ ಗುಹೆಯ ಬಾಗಿಲನ್ನು ಒಂದೇ ಹಾಕಿದರು ಅಂದಿನಿಂದ ಅದನ್ನು ತೆಗೆದು ಯಾರೂ ಒಳಗೆ ಹೋಗಿ, ಏನಿದೆ ಎಂಬುದನ್ನು ನೋಡಿಲ್ಲ. ಹಾಗೂ ತೆಗೆದು ಒಳಗೆ ಹೋದರೆ, ಸರ್ಪಗಳು ಬಂದು ಸುತ್ತಿಕೊಳ್ಳುವುವಂತೆ. ರಾಜಾಸ್ಥಾನದ ಸುಪ್ರಸಿದ್ಧ ಇತಿಹಾಸಲೇಖಕಾಗ್ರಣ್ಯರಾದ "ಟಾಡ" ರೆಂಬುವರು ಈ ವಿಚಾರವಾಗಿ ಹೇಳುವುದೇನೆಂದರೆ:—

"ನಾನು ಸ್ವತಃ ಆ ಗುಹಾದ್ವಾರದವರೆಗೆ ಹೋಗಿದ್ದೆ; ಆದರೆ ಅದರ ಒಳಕ್ಕೆ ಹೋಗಲು ನನಗೆ ಧೈರ್ಯವಾಗಲಿಲ್ಲ. ಸರ್ಪಭೀತಿಯಿಂದಲ್ಲ. ಆ ಗುಹಾಮಧ್ಯವು ಸರ್ಪವೇ ಮೊದಲಾದ ವಿಷಜಂತುಗಳ ನಿವಾಸಸ್ಥಾನವಾಗಿದೆಯೆಂಬ ಚಿಹ್ನೆಯು ಕಾಣುತ್ತಿದೆ; ಅಲ್ಲಿನ ವಾಯುವು ಅಶುದ್ಧವಾಗಿದೆ. ಇಂತಹ ಸ್ಥಿತಿ

ಯಲ್ಲಿ ಒಳಗೆ ಹೋದರೆ, ಬದುಕಿಬರುವೆವೆಂಬ ಆಶೆಯು ನಿರರ್ಥಕವೇ ಸರಿ. ಗುಹೆಯಲ್ಲಿ ಕಗ್ಗತ್ತಲೆಯು ಕವಿದಿದೆ; ನೂರಾರು ವರ್ಷಗಳಿಂದ ಮನುಷ್ಯರ ದರ್ಶನವು ಸಹಾ ಇಲ್ಲದೆ ಇದೆ. ಆದುದರಿಂದ ಮೇಲಿನ ಆಖ್ಯಾನಕ್ಕೆ ಸರಿಯಾಗಿ ನಾನು ಬರೆದಿರುತ್ತೇನೆ.''

ಅಲ್ಲಾವುದೀನನನಿಗೆ ರಾಜಪುತ್ರರ ಜೋಹರ್ ಪದ್ಧತಿಯು ತಿಳಿಯದೆಂದಲ್ಲ; ಅವನು ರಣಥಂಬೋರದ ಮುತ್ತಿಗೆಯಲ್ಲೊಂದುಬಾರಿ ನೋಡಿದ್ದನು; ಆದರೆ, ಕಾಮಾಂಧನಾಗಿದ್ದ ಕಾರಣ ಎಲ್ಲವೂ ಮರೆತುಹೋಗಿತ್ತು. ಈಗ ಆ ಗುಹಾಮಧ್ಯದಲ್ಲಿ ಧಗಧಗಿಸುತ್ತಿದ್ದ ಚಿತೆಯನ್ನು ನೋಡಿ ಜ್ಞಾನೋದಯವಾಯಿತು. ಎಲ್ಲವೂ ಮನಸ್ಸಿಗೆ ಹೊಳೆಯಿತು. ಕೊಲೆಪಾತಕರಲ್ಲಿ ಅಗ್ರಗಣ್ಯನೂ, ಪಿತೃಘಾತಕನೂ ಆದ ಆ ಪ್ರಾಣಿಯ ಕಣ್ಣಿನಲ್ಲಿಯೂ ಧಾರಾಕಾರವಾಗಿ ನೀರು ಹರಿಯಲಾರಂಭವಾಯಿತು! ಕೂಡಲೆ, ಭ್ರಮಿಷ್ಟನಂತಾಗಿ, ಕೂಗಿಕೊಂಡನು :-

"ಹಾ, ಪದ್ಮಿನಿ! ಈ ಅಗ್ನಿಯಲ್ಲಿ ನೀನು ಜೀವಸಹಿತವಾಗಿ ಸುಟ್ಟುಹೋದೆಯಾ? ನನ್ನಿಂದ ಚಿತ್ತೂರಿನ ಸ್ತ್ರೀಯರೆಲ್ಲರೂ ಭಸ್ಮವಾಗಿ ಹೋದರೆ? ಪುರುಷರೆಲ್ಲರೂ ರಣರಂಗದಲ್ಲಿ ನುಡಿದರೆ? ರಾಜಪುತ್ರ ಪುರುಷರೆ! ನೀವೇ ಧೀರರು. ಸ್ತ್ರೀಯರೇ! ನೀವೇ ಪತಿವ್ರತಾಶಿರೋಮಣಿಗಳು! ಪದ್ಮಿನಿಯಂತ ಧೀರಪತಿವ್ರತಾಶಿರೋಮಣಿಗೂ, ಗುಲಾಬಸಿಂಹ, ಲಕ್ಷ್ಮಣಸಿಂಹ, ಭೀಮಸಿಂಹರಂತಹ ವೀರಪುರುಷರಿಗೂ ಮತ್ತಾವುದು ಜನ್ಮಸ್ಥಾನವಾದೀತು? ಹಾ, ಪದ್ಮಿನಿ! ನಿನ್ನ ಮರಣದಿಂದ ನನ್ನ ಕಾರ್ಯಗಳೂ, ನನ್ನ ಸಾಹಸವೂ, ನನ್ನ ಆಶೆಯೂ ಭಸ್ಮೀಭೂತ! ಹಾ, ಪದ್ಮಿನಿ!'' ಎಂದುಕೊಂಡನು.

ಸುಲ್ತಾನನು ಎಲ್ಲ ಸೈನಿಕರನ್ನೂ ದುರ್ಗದೊಳಕ್ಕೆ ಕರೆಯಿಸಿದನು ಚಿತ್ತೂರನ್ನು ಲೂಟಿಮಾಡಿ, ಊರಿಗೆ ಬೆಂಕಿಹಾಕುವಂತೆ ಆಜ್ಞೆಮಾಡಿದನು. ಸೈನಿಕರು ಏನನ್ನು ಲೂಟಿಮಾಡಬೇಕು? ಅಲ್ಲಿ ಏನಿತ್ತು? ರಾಜಪುತ್ರರು ಮೃತರಾಗುವುದಕ್ಕೆ ಮುಂಚಿತವಾಗಿಯೇ ತಮ್ಮ ಲಕ್ಷಾಂತರ ರೂಪಾಯಿ ಬೆಲೆಯ ವಸ್ತುಗಳನ್ನೂ, ತಮ್ಮ ದೇವಾಲಯಗಳ ಬಾಗಿಲುಗಳನ್ನು ಒಡೆದು ಒಳಗೆ ನುಗ್ಗಿ ಅದರಲ್ಲಿದ್ದ ವೃದ್ಧರನ್ನೂ ಶಿಶುಗಳನ್ನೂ ಹಿಂಸಿಸಿದರು; ಆದರೇನುಫಲ? ಅವರೂ ಮೃತರಾದರು. ಯಾವ ದೇವಾಲಯವು ಪೂಜಾದಿಗಳಿಂದ ರಾರಾಜಿಸುತ್ತಿತ್ತೋ ಅದು ಇಂದು ವಧ್ಯಸ್ಥಾನವಾಗಿ ಪರಿಣಮಿಸಿತು. ದೇವಮೂರ್ತಿಗಳು ಯವನರ ಕೈಗೆ ಸಿಕ್ಕಿ ತಮ್ಮ ಭೋಗಕಾಲವನ್ನು ಕೊನೆಕಂಡವು. ಊರಿನ ನಾಲ್ಕು ಕಡೆಯಲ್ಲಿಯೂ ಬೆಂಕಿ ಹಾಕಿದರು. ಊರು ಬೆಂಕಿಯಿಂದ ಉರಿಯಲಾರಂಭವಾಯಿತು. ಅಗ್ನಿಯ ಜ್ವಾಲೆಯು ಗಗನಾಂಗಣಕ್ಕೆ ವ್ಯಾಪಿಸಿ ಮೇಘವು ಕರಗುವಂತೆ ತೋರಿತು. ಸೂರ್ಯೋದಯಕ್ಕೆ ಮುಂಚಿತವಾಗಿಯೇ ಚಿತ್ತೂರು ಊರಾಗಿರಲಿಲ್ಲ. ಭಸ್ಮ ತುಂಬಿದ ತಿಪ್ಪೆಯಂತಾಯಿತು. ಯಾವ ಚಿತ್ತೂರು ಒಂದು ದಿನಕ್ಕೆ ಮುಂಚೆ ರಾಜಧಾನಿಯಾಗಿ ಕ್ಷತ್ರಿಯ ವೀರಪುಂಗವರಿಂದಲೂ,

ಪತಿಪ್ರತಾಶಿರೋಮಣಿಯರಿಂದಲೂ ವಿರಾಜಮಾನವಾಗಿತ್ತೋ ಆ ಚಿತ್ತೂರು ಈಗ ಏನಾಯಿತು ? " ದೈವೀವಿಚಿತ್ರಾಗತಿಃ " ಎಂಬುದಕ್ಕೆ ಹೆಚ್ಚಿನ ನಿದರ್ಶನ ವೇಕೆ ?

ಆದರೆ, ಅಲ್ಲಾವುದೀನನು ಭೀಮಸಿಂಹ, ಪದ್ಮಿನಿಯರ ಸ್ಮರಣೆಯಿರಲೆಂದೋ-ತನ್ನ ನೀಚಕೃತ್ಯದಿಂದ ಚಿತ್ತೂರಿಗೆ ಈ ದುಸ್ಥಿತಿಯು ಪ್ರಾಪ್ತವಾಯಿತೆಂಬ ಗುರುತು ಇರಲೆಂದೋ-ಏನೋ-ಭೀಮಸಿಂಗನ ಅರಮನೆಯನ್ನೂ, ಪದ್ಮಿನಿಯ ಅಂತಃಪುರವನ್ನೂ ಅಗ್ನಿಗೆ ಆಹುತಿಮಾಡಲು ಆಜ್ಞೆ ಕೊಡಲಿಲ್ಲ.

ಸುಲ್ತಾನನು ಅಲ್ಲಿಂದ ಹೊರಟನು. ಆಗ ಅವನಿಗೆ ಸಂತೋಷವಾಯಿತೋ, ದುಃಖವಾಯಿತೋ ಅವನಿಗೇ ಗೊತ್ತು. ಆ ವಿಚಾರವಾಗಿ ನಿಶ್ಚಯಾಂಶವು ತಿಳಿಯದಿದ್ದರೂ ಕೆಲವರು ದುಃಖವಾಯ್ತೆಂದೇ ಹೇಳುವರು. ಎಷ್ಟೇ ಕಲ್ಲೆದೆಯವನಾದರೂ ಮಾನವಪ್ರಾಣಿಯಲ್ಲವೆ ? ಎಲ್ಲಿಲ್ಲೂ ರುಂಡವಿಲ್ಲದ ಮುಂಡಗಳೂ, ಮುಂಡವಿಲ್ಲದ ರುಂಡಗಳೂ, ಕೈಕಾಲುಗಳಿಲ್ಲದ ದೇಹಗಳೂ ಇದ್ದುವು. ಹೀಗೆ ನಾನಾತೆರನಾದ ಪ್ರೇತಗಳು ಬಿದ್ದಿದ್ದುವು. ಕೆಲವೆಡೆ ಕೊಳೆತು ನಾರುವ ದೇಹಗಳೂ, ದೇಹಭಾಗಗಳೂ ಬಿದ್ದಿದ್ದುವು. ಆತ್ಮಹತ್ಯ ಮಾಡಿಕೊಂಡು ಮೃತರಾದ ಕೆಲವರ ದೇಹಗಳಲ್ಲಿ ಅವರಿಗೆ ಸಹಾಯಮಾಡಿದ ಆಯುಧಗಳು ಹಾಗೆಯೇ ಇದ್ದುವು. ಈ ಸ್ಥಿತಿಯನ್ನು ನೋಡಿದ ಯಾವ ಮನುಷ್ಯನಿಗೆತಾನೇ ದುಃಖವಾಗದು ?

ಎಲ್ಲ ದೇಹಗಳನ್ನೂ, ದೇಹಭಾಗಗಳನ್ನೂ ಒಂದೆಡೆಯಲ್ಲಿ ಹಾಕಿ ಅಗ್ನಿಸಂಸ್ಕಾರ ಮಾಡುವಂತೆಯೂ, ಸಂಸ್ಕಾರದಿಂದ ಕೆಟ್ಟ ವಾಯುವು ಶುದ್ಧವಾಗುವ ಪರ್ಯಂತ ಅಗ್ನಿಯನ್ನು ಆರಿಸದಂತೆಯೂ ಆಜ್ಞೆಯಾಯಿತು. ಚಿತ್ತೂರು ದುರ್ಗದ ಚಿತ್ತೂರು ರಾಜ್ಯಭಾರದ ಆಡಳಿತಗಳನ್ನು ನೋಡಿಕೊಳ್ಳಲು " ಮೂಲದೇವ " ನೆಂಬ ರಾಜಪುತ್ರ ಸರದಾರನೂ ಅವನ ಸಹಾಯಕ್ಕೆ ಸ್ವಲ್ಪ ಸೇನೆಯೂ ಅಲ್ಲಿರುವಂತೆ ಏರ್ಪಾಡಾಯಿತು. ಅಲ್ಲಾವುದೀನನು ಹತಾಶನಾಗಿ ಕಣ್ಣೀರು ಸುರಿಸುತ್ತ ಚಿತ್ತೂರನ್ನು ಬಿಟ್ಟು ಹೋಗುವಂತೆಯೂ ಆಯಿತು !

* * * * *

ಪಾಠಕವರ !

ಇನ್ನೇನಾಯಿತೆಂದು ನಾವು ಹೇಳುವ ? ಎಲ್ಲವನ್ನೂ ಹೇಳಿ ಆಯಿತು ! ತಮ್ಮ ಸ್ಮೃತಿಪಥದಲ್ಲಿರಲೆಂದು ಒಂದು ಮಾತನ್ನು ಮಾತ್ರ ಹೇಳಿ ವಿರಾಮ ಹೊಂದುವೆವು.

ಸುಲ್ತಾನನ ಭಯಂಕರವಾಗಿಯೂ, ಅನಿರ್ವಚನೀಯವಾಗಿಯೂ ಇದ್ದ ರಾಜ್ಯತೃಷ್ಣೆ, ಧನತೃಷ್ಣೆ, ಅಧಿಕಾರತೃಷ್ಣೆ, ಎಲ್ಲಕ್ಕಿಂತಲೂ ಬಲವಾಗಿದ್ದ ಅಧ

ಮೂಢಮವಾದ ಪರದಾರೋಪಭೋಗತೃಷ್ಣೆಗಳಿಂದ ಅಸದಳವಾದ ಅನರ್ಥವಾಯಿತು. ಇಂಥಾ ತೃಷ್ಣೆಗಳಿಂದಲೇ ಮತ್ತೆಷ್ಟೋ ಅನರ್ಥಗಳಾಗಿವೆ; ಆಗುತ್ತಲೂ ಇವೆ. ಅನೇಕ ರಾಜಾಧಿರಾಜರುಗಳೇ ಈ ಪ್ರಪಂಚದಲ್ಲಿ ಅಚಲವಾದ ದುಃಖ ಪರ್ವತವನ್ನೆಬ್ಬಿಸಿ ಹೋಗಿದಾರೆ; ಹೋಗುವುದರಲ್ಲಿದಾರೆ. ಲಕ್ಷಾಂತರ, ಕೋಟ್ಯಂತರ ಜನರನ್ನೂ, ಅಗಣಿತ ಅಸಂಖ್ಯಾಕ ದ್ರವ್ಯವನ್ನೂ ಬಲಿಗೊಟ್ಟಿರುತ್ತಾರೆ: ಕೊಡುತ್ತಾರೆ. ಅತ್ಯಂತ ಸದಸದ್ವಿಚಾರಿಯಾದ ಮಾನವನೂ ಈ ತೃಷ್ಣಾಭರದಿಂದ ಅತ್ಯಂತ ನಿಂದ್ಯಕೃತ್ಯವನ್ನಾಚರಿಸಲು ಹಿಂಜರಿಯುವುದಿಲ್ಲ. ತೃಷ್ಣಾರೂಪಿ ಆ ರಾಕ್ಷಸಿಗೆ ಏನಾದರೂ ಕ್ಷುಧಾಶಾಂತಿಯಿಲ್ಲ. ನಿಂದ್ಯವಾದ ಇಂತಹ ತೃಷ್ಣೆಯಿಂದಲೇ ಪ್ರಪಂಚದಲ್ಲಿ ಎಷ್ಟೋ ಅನರ್ಥಗಳು ತುಂಬಿ ತುಳುಕುತ್ತಿವೆ. ಆದುದರಿಂದಲೇ ರಾಜಋಷಿಯಾದ ಭರ್ತೃಹರಿಯು ಕೂಡ,—

"ತೃಷ್ಣಾನಜೀರ್ಣಾ, ವಯಮೇವಜೀರ್ಣಾಃ" ಎಂದು ಕೀರ್ತಿಸಿರುತ್ತಾನೆ.

ಆದುದರಿಂದ ತೃಷ್ಣಾರಾಕ್ಷಸಿಯ ಸಹವಾಸವು ಪ್ರಾಪ್ತವಾದರೆ, ಅವಳು ಧನ, ಯೌವನ, ಪ್ರಾಣ, ಮಾನಗಳನ್ನು ನಾಶಮಾಡದೆ ಬಿಡಳು. ಆದುದರಿಂದಲೇ ಬುದ್ಧಿವಂತರಾದವರು ಅವಳ ವಶರಾಗದೆ, ದೂರಪಾಗಿ ಅಟ್ಟಲು ಪ್ರಯತ್ನಿಸುತ್ತ ಕೆಳಗಣ ಭಗವದ್ವಾಕ್ಯವನ್ನು ಅಡಿಗಡಿಗೂ ಸ್ಮರಿಸುತ್ತಿರಬಹುದಲ್ಲವೆ?

"ಧ್ಯಾಯತೋ ವಿಷಯಾನ್ಪುಂಸಃ ಸಂಗಸ್ತೇಷೂಪಜಾಯತೇ |
ಸಂಗಾತ್ಸಂಜಾಯತೇಕಾಮಃ ಕಾಮಾತ್ಕ್ರೋಧೋಭಿಜಾಯತೇ ||
ಕ್ರೋಧಾದ್ಭವತಿ ಸಂಮೋಹಃ ಸಂಮೋಹಾತ್ ಸ್ಮೃತಿವಿಭ್ರಮಃ |
ಸ್ಮೃತಿವಿಭ್ರಂಶಾದ್ಬುದ್ಧಿನಾಶೋ ಬುದ್ಧಿನಾಶಾತ್ಪ್ರಣಶ್ಯತಿ ||"

"ಕರ್ಮಯೋಗಶಾಸ್ತ್ರ"

(ಭಗವದ್ಗೀತಾ)

ಸಂಪೂರ್ಣಂ.

ಪ್ರಕಟನೆ

1. ಈ "ಪದ್ಮಿನಿ" ಯು ಮೈಸೂರು ಯ
B.A. ಪರೀಕ್ಷೆಗೆ (1920–21) ನೇ ಸಾಲಿಗೂ, ಕಲ್ಕತ್ತಾ
ಸಾಹಿತ್ಯಸಂಘ ಪರಿಷತ್ತಿನ ಕಾದಂಬರೀ ಭಾಗದ ಪರೀಕ್ಷೆಗೂ
ವಾಗಿದೆ.

ಮತ್ತು

ಮೈಸೂರು ಟ್ರಾವಲಿಂಗ್ ಲೈಬ್ರೆರಿಗೂ ಸಹ ಅಂಗೀಕೃತವ

2. "ಶಾಲೀವಾಹನ ಚರಿತ್ರೆ" ಎಂಬ ಚಿಕ್ಕ
ರಚಿಸಿ ಮುದ್ರಿಸಿರುವೆನು. ಇದರ ಬೆಲೆ 0—2—6 ಮಾತ್ರ.

ಈ ಎರಡು ಪುಸ್ತಕಗಳನ್ನು ಒಟ್ಟಾಗಿಯಾಗಲೀ ಆಯಾ
ಆಗಲಿ ತರಿಸಿಕೊಳ್ಳುವವರಿಗೆ 12 ಕ್ಕೆ ಒಂದು ಬಹುಮಾನವಾಗಿ

ಪುಸ್ತಕಗಳು ಸಿಕ್ಕುವ ಸ್ಥಳ:—

ಕೆ. ಲಕ್ಷ್ಮೀನಾರಾಯಣಭಟ್ಟ,
ಹೆಡ್ಮಾಸ್ಟರ್, ಅರಗ ರ